www.pravasiprapancha.com
ಪ್ರವಾಸಿ ಪ್ರಪಂಚ ಅಂದ್ರೆ, ಬರೀ ಪತ್ರಿಕೆ ಅಷ್ಟೇ ಅಲ್ಲ!
ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ
ಸಮಗ್ರ ವೆಬ್‌ಸೈಟ್
ವಿಸಿಟ್ ಮಾಡಿ

₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಬುಧವಾರ 25.06.2025** **ಸಂಪುಟ:** 10 **ಸಂಚಿಕೆ:** 162 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬೆನ್ ಡಕೆಟ್ ಶತಕದಾಟ ಇಂಗ್ಲೆಂಡ್‌ಗೆ ಗೆಲುವು

ಬೆನ್ ಡಕೆಟ್ ಅವರ 149 ರನ್‌ಗಳ ನೆರವಿನಿಂದ ಇಂಗ್ಲೆಂಡ್ ತಂಡವು ಭಾರತದ ವಿರುದ್ಧ ಮೊದಲ ಟೆಸ್ಟ್ ಕ್ರಿಕೆಟ್‌ನಲ್ಲಿ 5 ವಿಕೆಟ್‌ಗಳ ಗೆಲುವು ಪಡೆಯಿತು.

ಬಾಂಬ್ ಹಾಕಿ ವಿರಾಮ ಘೋಷಿಸಿದ ದೊಡ್ಡಣ್ಣ | ಅಮೆರಿಕ ಸೇನಾ ನೆಲೆಗಳ ಮೇಲೆ ಇರಾನ್ ದಾಳಿ ಬೆನ್ನಿಗೇ ವಿರಾಮ ಜಾರಿ | 12 ದಿನಗಳ ಯುದ್ಧ ಅಂತ್ಯ

ಕೊನೆಗೂ ಕದನ ವಿರಾಮ

ವಾಷಿಂಗ್ಟನ್: ಇಸ್ರೇಲ್‌ಗೆ ಬೆಂಬಲವಾಗಿ ನಿಂತು ಇರಾನ್ ಮೇಲೆ ಬಾಂಬ್ ಹಾಕಿದ್ದ ವಿಶ್ವದ ದೊಡ್ಡಣ್ಣ ಅಮೆರಿಕವೇ ಇಸ್ರೇಲ್-ಇರಾನ್ ನಡುವಿನ ಕದನಕ್ಕೆ ವಿರಾಮ ಘೋಷಿಸಿದ್ದು, ಆ ಮೂಲಕ ಮಧ್ಯಪ್ರಾಚ್ಯವನ್ನು ಬೆಚ್ಚಿಬೀಳಿಸಿದ 12 ದಿನಗಳ ಯುದ್ಧ ಕೊನೆ ಗೊಂಡಿದೆ.

ಪರಮಾಣು ಕೇಂದ್ರಗಳ ಮೇಲೆ ದಾಳಿಗೆ ಪ್ರತೀಕಾರ ವಾಗಿ ಕತಾರ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ಸೋಮವಾರ ಇರಾನ್ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ 'ಉಭಯ ರಾಷ್ಟ್ರಗಳ ನಡುವೆ ಕದನ ವಿರಾಮ ಏರ್ಪಟ್ಟಿದೆ' ಎಂದು ಟ್ರಂಪ್ ಘೋಷಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಟ್ರುತ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್ ಅವರು, 'ಇಸ್ರೇಲ್ ಮತ್ತು ಇರಾನ್ ರಾಷ್ಟ್ರಗಳ ನಡುವೆ ಸಂಪೂರ್ಣ ಕದನ ವಿರಾಮ ಒಪ್ಪಂದವಾಗಿದೆ. ಎರಡೂ ದೇಶಗಳು ಕದನ ವಿರಾಮಕ್ಕೆ ಒಪ್ಪಿಕೊಂಡಿವೆ. ಎಲ್ಲರಿಗೂ ಅಭಿನಂದನೆಗಳು. ಇಸ್ರೇಲ್ ಮತ್ತು ಇರಾನ್ ತಮ್ಮ ಅಂತಿಮ ಕಾರ್ಯಾಚರಣೆಗಳನ್ನು ಮುಗಿಸಿದ ನಂತರ, ಸುಮಾರು 6 ಗಂಟೆಗಳಲ್ಲಿ ಕದನ ವಿರಾಮ ಪ್ರಾರಂಭವಾಗುತ್ತದೆ. 12 ಗಂಟೆಗಳ ಕಾಲ ಇದು ನಡೆಯುತ್ತದೆ. ನಂತರ ಯುದ್ಧವು ಮುಕ್ತಾಯ ವಾಗುತ್ತದೆ. ಇರಾನ್ ಮೊದಲು ಕದನ ವಿರಾಮವನ್ನು ಪ್ರಾರಂಭಿಸುತ್ತದೆ. 12 ಗಂಟೆಗಳ ನಂತರ ಇಸ್ರೇಲ್ ಕದನ ವಿರಾಮವನ್ನು ಪ್ರಾರಂಭಿಸುತ್ತದೆ. 24 ಗಂಟೆಗಳ ನಂತರ, 12 ದಿನಗಳ ಯುದ್ಧವು ಅಧಿಕೃತವಾಗಿ ಕೊನೆಗೊಳ್ಳುತ್ತದೆ. ಜಗತ್ತು ಇದನ್ನು ಸ್ವಾಗತಿಸುತ್ತದೆ. ಪ್ರತಿ ಕದನ ವಿರಾಮದ ಸಮಯದಲ್ಲಿ, ಎರಡೂ ಕಡೆಯ ವರು ಶಾಂತವಾಗಿ ಮತ್ತು ಗೌರವದಿಂದ ಇರುತ್ತಾರೆ' ಎಂದು ತಿಳಿಸಿದ್ದಾರೆ.

ಕದನ ವಿರಾಮ ಘೋಷಣೆಗೂ ಮುನ್ನ ದಾಳಿ: ಮಂಗಳವಾರ ಮುಂಜಾನೆ ಇಸ್ರೇಲ್ ಗುರಿಯಾಗಿಸಿ ಇರಾನ್ ನಡೆಸಿದ ಅಂತಿಮ ಕ್ಷಿಪಣಿ ದಾಳಿಯಲ್ಲಿ ನಾಲ್ವರು ಸಾವನ್ನಪ್ಪಿದ್ದರೆ, ಇಸ್ರೇಲ್ ಬೆಳಗಾಗುವ ಮುನ್ನಾವೇ ಇರಾನ್‌ನಾದ್ಯಂತ ಅನೇಕ ಕಟ್ಟಡಗಳನ್ನು ಗುರಿಯಾಗಿಸಿ ವೈಮಾನಿಕ ದಾಳಿ ನಡೆಸಿತ್ತು. ಈ ದಾಳಿಯಲ್ಲಿ ಆಸ್ಪತ್ರೆಯ ಕಟ್ಟಡವೊಂದಕ್ಕೆ ತೀವ್ರ ಹಾನಿಯಾಗಿದ್ದು, 9 ಮಂದಿ ಸಾವನ್ನಪ್ಪಿದ್ದಾರೆ. ನಂತರ ಉಭಯ ರಾಷ್ಟ್ರಗಳು ಕದನ ವಿರಾಮ ಒಪ್ಪಂದವನ್ನು ಒಪ್ಪಿಕೊಂಡಿವೆ ಎಂದು ವರದಿಯಾಗಿತ್ತು. ಇದಾದ ಕೆಲವೇ ಗಂಟೆಗಳಲ್ಲಿ 'ಇರಾನ್‌ನಿಂದ ಇಸ್ರೇಲ್ ಕಡೆಗೆ ಕ್ಷಿಪಣಿ ಉಡಾವಣೆಯನ್ನು ಪತ್ತೆಹಚ್ಚಲಾಗಿದೆ.

ಯುದ್ಧ ವಿರಾಮ ಘೋಷಣೆಯ ಬೆನ್ನಲ್ಲೇ ಇರಾನ್ ಅದನ್ನು ಉಲ್ಲಂಘಿಸಿದೆ ಎಂದು ಇಸ್ರೇಲ್ ಆರೋಪಿಸಿದ್ದು, ಮರು ಯುದ್ಧಕ್ಕೆ ಮುಂದಾಗಿದೆ. 'ಇಸ್ರೇಲ್ ಜತೆಗಿನ ಕದನ ವಿರಾಮ ಉಲ್ಲಂಘನೆಗೆ ಇರಾನ್‌ಗೆ ಬಲವಾಗಿ ಪ್ರತಿಕ್ರಿಯಿಸಿ' ಎಂದು ಇಸ್ರೇಲ್ ಸೇನೆಗೆ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಮಂಗಳವಾರ ಆದೇಶಿಸಿದ್ದಾರೆ. ಇರಾನ್‌ನ ಕದನ ವಿರಾಮ ಉಲ್ಲಂಘನೆಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇಸ್ರೇಲ್ ಭರವಸೆ ನೀಡುತ್ತಿದ್ದಂತೆ, ಇರಾನ್ ಸೇನೆ ಇಸ್ರೇಲ್ ಮೇಲೆ ಕ್ಷಿಪಣಿಗಳನ್ನು ಹಾರಿಸಿರುವುದನ್ನು ನಿರಾಕರಿಸಿದೆ.

ಇರಾನ್ ದಾಳಿಯಿಂದಾಗಿ ಇಸ್ರೇಲ್‌ನಲ್ಲಿ ಹಾನಿಗೊಳಗಾದ ಕಟ್ಟಡ.

ಟ್ರಂಪ್ ಅವರ ಸಮನ್ವಯದೊಂದಿಗೆ ಇಸ್ರೇಲ್ ಇರಾನ್‌ನೊಂದಿಗೆ ದ್ವಿಪಕ್ಷೀಯ ಕದನ ವಿರಾಮಕ್ಕೆ ಒಪ್ಪಿಕೊಂಡಿದೆ. ಇರಾನ್‌ನ ಮಿಲಿಟರಿ ನಾಯಕತ್ವ ಮತ್ತು ಹಲವಾರು ಸರಕಾರಿ ತಾಣಗಳನ್ನು ಇಸ್ರೇಲ್ ಹಾನಿಗೊಳಿಸಿದೆ. ಟೆಹರಾನ್‌ನ ವಾಯುಪ್ರದೇಶದ ಮೇಲೆ ನಿಯಂತ್ರಣ ಸಾಧಿಸಿದೆ. ಕದನ ವಿರಾಮದ ಯಾವುದೇ ಉಲ್ಲಂಘನೆಗೆ ಇಸ್ರೇಲ್ ಬಲವಾಗಿ ಪ್ರತಿಕ್ರಿಯಿಸಲಿದೆ.

ಬೆಂಜಮಿನ್ ನೆತನ್ಯಾಹು
ಇಸ್ರೇಲ್ ಪ್ರಧಾನಿ

ಇಸ್ರೇಲ್ ಮತ್ತು ಇರಾನ್ ಉಭಯ ದೇಶಗಳು ಈ ಯುದ್ಧವನ್ನು ಕೊನೆಗೊಳಿಸಲು ಧೈರ್ಯ ಮತ್ತು ಬುದ್ಧಿವಂತಿಕೆ ತೋರಿಸಿವೆ. ದೇವರು ಇಸ್ರೇಲ್ ಅನ್ನು ಆಶೀರ್ವದಿಸಲಿ, ದೇವರು ಇರಾನ್ ಅನ್ನು ಆಶೀರ್ವದಿಸಲಿ, ದೇವರು ಮಧ್ಯಪ್ರಾಚ್ಯವನ್ನು ಆಶೀರ್ವದಿಸಲಿ, ದೇವರು ಅಮೆರಿಕವನ್ನು ಆಶೀರ್ವದಿಸಲಿ, ದೇವರು ಇಡೀ ಜಗತ್ತನ್ನು ಆಶೀರ್ವದಿಸಲಿ.

ಡೊನಾಲ್ಡ್ ಟ್ರಂಪ್
ಅಮೆರಿಕ ಅಧ್ಯಕ್ಷ



ಇಸ್ರೇಲ್ ಜತೆಗೆ ಯಾವುದೇ ಕದನ ವಿರಾಮ ಏರ್ಪಟ್ಟಿಲ್ಲ. ಇಸ್ರೇಲ್ ದಾಳಿ ನಿಲ್ಲಿಸಿದ ಕೂಡಲೇ ನಾವು ನಿಲ್ಲಿಸುತ್ತೇವೆ. ಯುದ್ಧ ಪ್ರಾರಂಭಿಸಿದ್ದು ಇಸ್ರೇಲ್, ನಾವಲ್ಲ. ಇರಾನ್ ವಿರುದ್ಧದ ಆಕ್ರಮಣವನ್ನು ಇಸ್ರೇಲ್ ಆಡಳಿತ ನಿಲ್ಲಿಸಿದರೆ ಬೆಳಗ್ಗೆ 4 ಗಂಟೆಯ ನಂತರ ನಮ್ಮ ಕಾರ್ಯಾಚರಣೆ ಮುಂದುವರಿಸುವ ಉದ್ದೇಶ ಇಲ್ಲ.

ಅಬ್ಬಾಸ್ ಅರಾಗ್ಚಿ
ಇರಾನ್ ವಿದೇಶಾಂಗ ಸಚಿವ

ಏರ್ ಇಂಡಿಯಾ ಹಾರಾಟ ಆರಂಭ

ಮಧ್ಯಪ್ರಾಚ್ಯ ಮಂಗಳವಾರದಿಂದ ಹಂತ ಹಂತವಾಗಿ ವಿಮಾನ ಹಾರಾಟವನ್ನು ಆರಂಭಿಸಲಾಗುವುದು ಎಂದು ಏರ್ ಇಂಡಿಯಾ ಹೇಳಿದೆ. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉದ್ವಿಗ್ನತೆ ಹೆಚ್ಚಿದ ಕಾರಣ ವಿಮಾನ ಹಾರಾಟವನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದ ಒಂದು ದಿನದ ನಂತರ ಈ ಪ್ರಕಟಣೆ ಹೊರಡಿಸಿದೆ. ಮಂಗಳವಾರ ಮಸ್ಕತ್, ರಿಯಾದ್, ಜೆಡ್ಡಾ ಸೇರಿ ವಿವಿಧ ನಗರಗಳಿಗೆ ವಿಮಾನ ಸಂಚಾರ ಪ್ರಾರಂಭಿಸಿರುವುದಾಗಿ ಹೇಳಿದೆ.

2,295 ಭಾರತೀಯರ ಸ್ಥಳಾಂತರ

ಇಸ್ರೇಲ್‌ನಲ್ಲಿ ಸಿಲುಕಿದ್ದ 443 ಭಾರತೀಯ ನಾಗರಿಕರನ್ನೊಳಗೊಂಡ 2ನೇ ಬ್ಯಾಚ್ ಅನ್ನು ಸ್ಥಳಾಂತರಿಸಲಾಗಿದೆ. ಇವರನ್ನು 175 ಮತ್ತು 268 ಜನರುಳ್ಳ 2 ತಂಡಗಳನ್ನಾಗಿ ವಿಭಾಗಿಸಲಾಗಿದ್ದು, ಜೋರ್ಡಾನ್ ಮತ್ತು ಈಜಿಪ್ಟ್‌ಗಳಿಗೆ ಸ್ಥಳಾಂತರಿಸಲಾಗಿದೆ. ಈ ಮೂಲಕ ಕಳೆದೆರಡು ದಿನಗಳಲ್ಲಿ 603 ಭಾರತೀಯರನ್ನು ಇಸ್ರೇಲ್‌ನಿಂದ ಸ್ಥಳಾಂತರಿಸಿದಂತಾಗಿದೆ. ಇರಾನ್ ಮತ್ತು ಇಸ್ರೇಲ್‌ನಿಂದ ಈವರೆಗೂ 2295 ಭಾರತೀಯರನ್ನು ಸ್ಥಳಾಂತರ ಮಾಡಲಾಗಿದೆ.

ಬಿಕ್ಕಟ್ಟು ಶಮನಕ್ಕೆ ಭಾರತ ಸಿದ್ಧ

ಹೊಸದಿಲ್ಲಿ: ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕ ಪಶ್ಚಿಮ ಏಷ್ಯಾದ ಬಿಕ್ಕಟ್ಟು ಶಮನಕ್ಕೆ ಭಾರತವು ತನ್ನ ಪಾತ್ರ ನಿರ್ವಹಿಸಲು ಸಿದ್ಧವಿದೆ ಎಂದು ಭಾರತ ಮಂಗಳವಾರ ಹೇಳಿದೆ ಇರಾನ್ -ಇಸ್ರೇಲ್ ನಡುವಿನ ಕದನ ವಿರಾಮದ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ ಹೇಳಿಕೆ ನೀಡಿದ ಬೆನ್ನಲ್ಲೇ ಭಾರತದ ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿದೆ. ಈ ಪ್ರದೇಶದಲ್ಲಿನ ಸಂಘರ್ಷಗಳನ್ನು ಪರಿಹರಿಸಲು ಮಾತುಕತೆ ಮತ್ತು ರಾಜತಾಂತ್ರಿಕತೆ ಸೂತ್ರವಾಗಿದೆಯೇ ಹೊರತು ಪರ್ಯಾಯ ಆಯ್ಕೆಯಿಲ್ಲ ಎಂದು ಪುನರುಚ್ಚರಿಸಲು ಬಯಸುತ್ತೇವೆ. ಈ ಪ್ರಯತ್ನಕ್ಕೆ ಸಹಾಯ ಮಾಡಲು ಭಾರತ ಸಿದ್ಧವಿದೆ. ಅಲ್ಲದೆ ಶಾಂತಿ ಮತ್ತು ಸ್ಥಿರತೆಯನ್ನು ಸ್ಥಾಪಿಸಲು ಎಲ್ಲಾ ದೇಶಗಳು ಒಟ್ಟಾಗಿ ಕೆಲಸ ಮಾಡಲಿವೆ ಎನ್ನುವ ಭರವಸೆಯಿದೆ ಎಂದು ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯದ 7 ಪ್ರಮುಖ ಮಸೂದೆಗಳಿಗೆ ಅಂಗೀಕಾರ ಕೋರಿದ ಸಿದ್ದರಾಮಯ್ಯ

ಬಿಲ್ ಪಾಸ್‌ಗೆ ಸಿಎಂ ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ದೆಹಲಿ

ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿಗಳ ಮುಂದಿರುವ ವಿಧೇಯಕಗಳಿಗೆ ಸಹಿ ಹಾಕುವಂತೆ ಮನವಿ ಮಾಡುವ ಜತೆಜತೆಗೆ ಸರಕಾರ-ರಾಜಭವನ ನಡುವಿನ ಸಂಘರ್ಷದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಮಂಗಳವಾರ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯಪಾಲರಿಂದ ರಾಷ್ಟ್ರಪತಿಗಳಿಗೆ ರವಾನೆಯಾಗಿರುವ ಏಳು ವಿಧೇಯಕಗಳಿಗೆ ಶೀಘ್ರವೇ ಸಹಿ ಹಾಕುವಂತೆ ಮನವಿ ಮಾಡಿದರು. ರಾಜ್ಯಸರಕಾರ ವಿಧಾನಮಂಡಲದಲ್ಲಿ ಅಂಗೀಕರಿಸಿ ರಾಜಭವನಕ್ಕೆ ಕಳುಹಿಸಿದ ಬಹುತೇಕ ವಿಧೇಯಕಗಳು ನನೆಗುದಿಗೆ ಬೀಳುತ್ತಿವೆ. → 4

ಖರ್ಗೆ ಸುರ್ಜೇವಾಲ ಜತೆ ಚರ್ಚೆ → 4

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದರು.

ಪಿಎಂ ಭೇಟಿಗೆ ಸಿಗದ ಸಮಯ

ಪ್ರಧಾನಿ ಮೋದಿ ಅವರನ್ನು ಸಿದ್ದರಾಮಯ್ಯ ಅವರು ಭೇಟಿಯಾಗಲಿದ್ದಾರೆ ಎನ್ನಲಾಗಿತ್ತು. ಆದರೆ ಪಿಎಂ ಕಚೇರಿಯಿಂದ ಯಾವುದೇ ಸಕಾರಾತ್ಮಕ ಸ್ಪಂದನೆ ಬಾರದಿರುವುದರಿಂದ, ಬುಧವಾರ ಮೋದಿ ಅವರನ್ನು ಭೇಟಿಯಾಗುವುದಿಲ್ಲ ಎಂದು ತಿಳಿದುಬಂದಿದೆ.

- ರಾಷ್ಟ್ರಪತಿಗಳ ಮುಂದಿರುವ ಬಿಲ್‌ಗಳಿಗೆ ಸಹಿ ಹಾಕಲು ಮನವಿ
- ರಾಜ್ಯ ರಾಜಕೀಯಕ್ಕೆ ಸಂಬಂಧಿಸಿ ಸುರ್ಜೇವಾಲ ಜತೆ ಚರ್ಚೆ
- ದೆಹಲಿಯಲ್ಲಿ ಮ್ಯಾರಥಾನ್ ಸಭೆಗಳನ್ನು ಮಾಡಿದ ಸಿಎಂ

ಲಂಚ ಪಡೆದಿದ್ದೇನೆ ಎಂಬ ಆರೋಪ ಸಾಬೀತಾದರೆ ರಾಜೀನಾಮೆ ನೀಡುವೆ

ಸಿಬಿಐ ತನಿಖೆಗೆ ಸಿದ್ಧ: ಜಮೀರ್

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿರುವ ವಸತಿ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ವಸತಿ ಸಚಿವ ಜಮೀರ್ ಅಹ್ಮದ್ ಕೊನೆಗೂ ಮೌನ ಮುರಿದಿದ್ದು, ನಾನು ಲಂಚ ಪಡೆದಿರುವುದು ಸಾಬೀತುಪಡಿಸಿದರೆ ರಾಜೀನಾಮೆ ನೀಡಲು ಸಿದ್ಧ ಎಂದು ಸವಾಲು ಹಾಕಿದ್ದಾರೆ.

ಈ ನಡುವೆಯೇ ಕಾಂಗ್ರೆಸ್ ಶಾಸಕರು ಅನುದಾನ ಕೊರತೆ ಹಾಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ತಮ್ಮ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ. → 4

ಮುಗಿಯದ ಗೊಂದಲ

ಈ ಎಲ್ಲ ಪ್ರಹಸನದ ನಡುವೆಯೂ ಅನುದಾನ ತಾರತಮ್ಯಕ್ಕೆ ಹಾಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಮಂಗಳವಾರವೂ ಕೆಲ ಶಾಸಕರು ಆಕ್ರೋಶ ಹೊರಹಾಕಿದ್ದಾರೆ. ಶಾಸಕ ಬಿ.ಆರ್.ಪಾಟೀಲ್ ಮಾತನಾಡಿ, ವಿವಿಧ ಜಿಲ್ಲೆಗಳಿಂದ ಜನರು ಕರೆ ಮಾಡಿ ದೂರು ನೀಡುತ್ತಿದ್ದಾರೆ. ಹಂಪಿ ವಿವಿಗೆ ಬಂದಿದ್ದ ವೇಳೆಯೂ ವಸತಿ ನಿಗಮದ ಅಕ್ರಮದ ಕುರಿತು ಫೋನ್‌ನಲ್ಲಿ ಮಾತನಾಡುತ್ತಿದ್ದಾರೆ. ಸರಕಾರ ನಮ್ಮ ನಡುವಿನದ್ದು, ಗಂಡ ಹೆಂಡತಿ ಜಗಳ. ಬುಧವಾರ ಸಿಎಂ, ಡಿಸಿಎಂ ಭೇಟಿಗೆ ಹೋಗುತ್ತೇನೆ, ಮಾಧ್ಯಮಗಳ ಮುಂದೆ ಹೇಳಿದ್ದನ್ನೇ ಸಿಎಂ ಮುಂದೆ ಹೇಳುತ್ತೇನೆ ಎಂದರು.

ಶಾಸಕ ಬಿ.ಆರ್.ಪಾಟೀಲ್, ಸಚಿವ ಜಮೀರ್ ವಿರುದ್ಧ ನೇರವಾಗಿ ಆರೋಪ ಮಾಡಿಲ್ಲ. ಸಚಿವರ ಕಚೇರಿಯಲ್ಲಿ ಲಂಚ ಕೇಳಿದರೆ ಅದರ ಬಗ್ಗೆ ತನಿಖೆಯಾಗಬೇಕು. ಆದರೆ ಈ ಕಾರಣಕ್ಕೆ ಜಮೀರ್ ರಾಜೀನಾಮೆ ಪಡೆಯುವುದು ಸರಿಯಲ್ಲ. ಶಾಸಕರ ಸಂಕಷ್ಟಗಳು ನಮಗೆ ಅರ್ಥವಾಗುತ್ತವೆ. ಶಾಸಕರಲ್ಲಿ ಸಣ್ಣಪುಟ್ಟ ಅತೃಪ್ತಿ, ಅಸಮಾಧಾನಗಳಿವೆ. ಆದರೆ ಅದು ತೀವ್ರ ಸ್ವರೂಪದಲ್ಲಿಲ್ಲ.

-ಬಸವರಾಜ ರಾಯರಡ್ಡಿ ಸಿಎಂ ಆರ್ಥಿಕ ಸಲಹೆಗಾರ

ಇಂದು ಶುಭಾಂಶು ಅಂತರಿಕ್ಷಯಾನ

ಬೆಂಗಳೂರು: ಭಾರತದ ಬಾಹ್ಯಾಕಾಶ ಯಾನದಲ್ಲಿ ಒಂದು ದೊಡ್ಡ ಮತ್ತು ಐತಿಹಾಸಿಕ ದಿನ ಕೊನೆಗೂ ಹತ್ತಿರ ಬಂದಿದ್ದು, ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಬುಧವಾರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಲಿದ್ದಾರೆ. ತಾಂತ್ರಿಕ ತೊಂದರೆಗಳ ಕಾರಣಕ್ಕೆ ಈಗಾಗಲೇ ಹಲವು ಬಾರಿ ಮುಂದೂಡಲ್ಪಟ್ಟಿದ್ದ ಆಕ್ಸಿಯಮ್-4 ಬಾಹ್ಯಾಕಾಶ ಕಾರ್ಯಾಚರಣೆಯನ್ನು ಎಲ್ಲ ತಾಂತ್ರಿಕ ದೋಷಗಳನ್ನು ನಿವಾರಣೆ ಮಾಡಿದ ಬಳಿಕ ಕಾರ್ಯಾಚರಣೆಗೆ ಸಿದ್ಧಪಡಿಸಲಾಗಿದ್ದು, ಬುಧವಾರ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು. ಆ್ಯಕ್ಸಿಯಂ-4 ಮಿಷನ್ ಜೂನ್ 25 ರಂದು ಬೆಳಗಿನ ಜಾವ 2:31ಕ್ಕೆ ಫ್ಲೋರಿಡಾದಲ್ಲಿರುವ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ ಫಾಲ್ಕನ್ 9 ರಾಕೆಟ್ ಹಾರಾಟ ನಡೆಸಲಿದೆ ಎಂದು ಎಂದು ನಾಸಾ ಪ್ರಕಟಣೆಯಲ್ಲಿ ತಿಳಿಸಿದೆ.

ಹೆಬ್ಬಾಳ-ಸಿಲ್ಕ್ ಬೋರ್ಡ್ ಸುರಂಗ ರಸ್ತೆಗೆ 2 ದಿನಗಳಲ್ಲಿ ಟೆಂಡರ್

120 ಅಡಿ ಆಳದಲ್ಲಿ ಸುರಂಗ ಮಾರ್ಗ

ಬೆಂಗಳೂರು: ನಗರದ ಸೆಂಟ್ರಲ್ ಸಿಲ್ಕ್ ಬೋರ್ಡ್ ಮತ್ತು ಹೆಬ್ಬಾಳ ನಡುವಿನ 16.68 ಕಿ.ಮೀ ಸುರಂಗ ಮಾರ್ಗವನ್ನು ನೆಲದಿಂದ 120 ಅಡಿ ಕೆಳಗೆ ನಿರ್ಮಿಸಲಾಗುತ್ತಿದ್ದು, ಒಂದೆರಡು ದಿನಗಳಲ್ಲಿ ಟೆಂಡರ್ ಕರೆಯಲಾಗುವುದು ಎಂದು ಬಿ-ಸ್ಮೈಲ್ ನಿರ್ದೇಶಕ ಬಿ.ಎಸ್.ಪ್ರಹ್ಲಾದ್ ತಿಳಿಸಿದರು.

ಈ ಕಾಮಗಾರಿಗಾಗಿ ಸುಧಾರಿತ ಸುರಂಗ ಬೋರಿಂಗ್ ಯಂತ್ರಗಳನ್ನು ಬಳಸಲಾಗುವುದು. ರಸ್ತೆಯ ಟೋಲ್ ಅನ್ನು ಪ್ರತಿ ಕಿ.ಮೀ ಗೆ 19 ರು. ಎಂದು ನಿಗದಿಪಡಿಸಲಾಗಿದೆ. ಯೋಜನಾ ವೆಚ್ಚದಿಂದಾಗಿ ಟೋಲ್ ಬದಲಾಗ ಬಹುದು. ಕಾಮಗಾರಿ ನಾಲ್ಕು ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಆದರೆ ಎಲ್ಲವೂ ಭೌಗೋಳಿಕ ಅಂಶಗಳನ್ನು ಅವಲಂಬಿ ಸಿರುತ್ತದೆ. ಮನೆಗಳು ಮತ್ತು ಇತರ ಕಟ್ಟಡಗಳು ಸುರಕ್ಷಿತವಾಗಿರುತ್ತವೆ ಎಂದು ಹೇಳಿದರು.

ಸುರಂಗ ಮಾರ್ಗದಿಂದ ಅಂತರ್ಜಲ ಪೂರೈಕೆ ಮತ್ತು ಬೋರ್ ವೆಲ್ ಪಾಯಿಂಟ್‌ಗಳ ಮೇಲೆ ಪರಿಣಾಮ ಬೀರುವ ಬಗ್ಗೆ, ಸರಕಾರವು ಮಾಲೀಕರಿಗೆ ಬೋರ್‌ವೆಲ್‌ಗಳನ್ನು ಕೊರೆಸಲು ಅನುಮತಿ ನೀಡಿದೆ. ಅದೂ ಸರಕಾರಕ್ಕೆ ಸೇರಿರುವುದರಿಂದ ಅವರಿಗೆ ಅದರ ಮೇಲೆ ಹಕ್ಕಿದೆ ಎಂದು ಅರ್ಥವಲ್ಲ. ಕೆಲವು ಬೋರ್ ವೆಲ್ ಪಾಯಿಂಟ್‌ಗಳು ಪರಿಣಾಮ ಬೀರ ಬಹುದು ಎಂದರು.

ಎರಡು ಪ್ಯಾಕೇಜ್‌ಗಳಲ್ಲಿ ಟೆಂಡರ್‌ಗಳನ್ನು ಕರೆಯಲಾಗುವುದು, ಸಂಬಂಧಿತ ದಾಖಲೆಗಳು ಈಗಾಗಲೇ ಹಣಕಾಸು ಇಲಾಖೆಗೆ ಕಳುಹಿಸಲಾಗಿದೆ. ಸರಕಾರ ಜೂನ್ 9 ರಂದು ಅನುಮೋದನೆ ನೀಡಿ ಇನ್ನು ಕೆಲವೇ ದಿನಗಳಲ್ಲಿ ಟೆಂಡರ್ ಆರಂಭವಾಗಲಿದೆ. ಯೋಜನೆಯ ವೆಚ್ಚವು 42,000 ಕೋಟಿ ರು ಎಂದು ಅಂದಾಜಿಸಲಾಗಿದೆ, ಇದರಲ್ಲಿ ಭೂಸ್ವಾಧೀನಕ್ಕೆ 800 ಕೋಟಿ ರು.ಗಳು ಸೇರಿವೆ.

-ಬಿ.ಎಸ್.ಪ್ರಹ್ಲಾದ್,
ಬಿ-ಸ್ಮೈಲ್ ನಿರ್ದೇಶಕ

ಸೊಂಪಾದ ಪುಟಗಳು



ಭೂಲೋಕದ ದೇವತೆಗಳೋ, ಯಮನ ಸೋದರರೋ?
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ತುರ್ತು ಪರಿಸ್ಥಿತಿಯಲ್ಲಿ ಹೇಗಿತ್ತು ಪತ್ರಿಕಾ ಪ್ರಪಂಚ?
ಸಿಂಹಾವಲೋಕನ
ದು.ಗು.ಲಕ್ಷ್ಮಣ 7

ದಾರಿದೀಪೋಕ್ತಿ



ಈ ದಿನ ಎಂಥದ್ದು ಅಂದರೆ ನೀವು ಬಯಸಿದ ನಾಳೆಗಳನ್ನು ಕಟ್ಟುವ ಅಮಿತ ಅವಕಾಶವನ್ನು ತೆರೆದಿಡುವ ಅಪೂರ್ವ ಅವಕಾಶ. ಈ ದಿನ ನೀವು ಏನನ್ನೂ ಮಾಡದಿದ್ದರೆ, ನಾಳೆಯಲ್ಲಿ ಯಾವ ವಿಶೇಷಗಳೂ ಇರುವುದಿಲ್ಲ. ಆ ಕಾರಣದಿಂದ ಇಂದಿನ ದಿನವನ್ನು ಸಾರ್ಥಕವಾಗಿ ಕಳೆಯಬೇಕು.

ವಕ್ರತುಂಡೋಕ್ತಿ

ಇತ್ತೀಚಿನ ದಿನಗಳಲ್ಲಿ ನೀವು ಯಾವ ಒಳ್ಳೆಯ ಕೆಲಸವನ್ನೂ ಮಾಡದೇ ನಿಷ್ಪ್ರಯೋಜಕವಾಗಿ ದಿನಗಳನ್ನು ಕಳೆಯುತ್ತಿದ್ದೇನೆ ಎಂದು ಅನಿಸಿ ಬೇಸರ ಮಾಡಿಕೊಳ್ಳುವ ಮುನ್ನ ವಿಶ್ವಸಂಸ್ಥೆ ಏನು ಮಾಡುತ್ತಿದೆಯೆಂದು ಯೋಚಿಸಿ. ನಿಮಗೆ ನಿಮ್ಮ ಸಾಧನೆ ಬಗ್ಗೆ ಹೆಮ್ಮೆಯೆನಿಸುತ್ತದೆ.

ಬ್ಲ್ಯಾಕ್‌ಬಾಕ್ಸ್ ವಿದೇಶಕ್ಕೆ ಕಳಿಸಿಲ್ಲ

ಪುಣೆ: ಜೂನ್ 12ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಪತನಗೊಂಡ ಏರ್ ಇಂಡಿಯಾ ಬೋಯಿಂಗ್ 787-8 ವಿಮಾನದ ಬ್ಲ್ಯಾಕ್ ಬಾಕ್ಸ್ ಗಳನ್ನು ವಿಮಾನ ಅಪಘಾತ ತನಿಖಾ ಸಂಸ್ಥೆಯು (ಎಎಐಬಿ) ಪರಿಶೀಲಿಸುತ್ತಿದೆ ಎಂದು ಕೇಂದ್ರ ನಾಗರಿಕ ವಿಮಾನ ಯಾನ ಸಚಿವ ರಾಮ್ ಮೋಹನ್ ನಾಯ್ಡು ಹೇಳಿದ್ದಾರೆ. ಬ್ಲ್ಯಾಕ್‌ಬಾಕ್ಸ್ ಗಳನ್ನು ವಿಶ್ಲೇಷಣೆಗಾಗಿ ವಿದೇಶಕ್ಕೆ ಕಳುಹಿಸಲಾಗುತ್ತಿದೆ ಎಂಬ ವರದಿ ಗಳನ್ನು ತಳ್ಳಿ ಹಾಕಿದ್ದಾರೆ. ಸದ್ಯ ಬ್ಲ್ಯಾಕ್‌ಬಾಕ್ಸ್‌ಗಳು ಭಾರತದಲ್ಲೇ ಇವೆ ಮತ್ತು ವಿಮಾನ ಅಪಘಾತ ತನಿಖಾ ಸಂಸ್ಥೆಯೇ ತನಿಖೆ ನಡೆಸುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜ್ಯ ಸರ್ಕಾರದ ವಿರುದ್ಧವೇ ಆಕ್ರೋಶ ಹೊರಹಾಕುತ್ತಿರುವ ಶಾಸಕರು

ಸಮಾಚಾರ ಸಣ್ಣದಲ್ಲ

ಉಂಡೆ ಕೊಬ್ಬರಿಗೆ ದಾಖಲೆ ಬೆಲೆ

ತಿಪಟೂರು: ಎ ಪಿ ಎಂ ಸಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ಉಂಡೆ ಕೊಬ್ಬರಿ ಧಾರಣೆ ರೂ 26,000 ಸಾವಿರ ಗಡಿ ದಾಟುವ ಮೂಲಕ ಹೊಸ ದಾಖಲೆ ಬರೆದಿದೆ. ಉಂಡೆ ಕೊಬ್ಬರಿ ಕ್ವಿಂಟಲ್ ಗೆ ಗರಿಷ್ಠ 26,167 ರು.ಗೆ ಮಾರಾಟವಾಗಿದ್ದು, ಮಾದರಿ 25,300 ರು., ಕನಿಷ್ಠ 23 ಸಾವಿರ ರು.ಬೆಲೆ ಸಿಕ್ಕಿದ್ದು, ತಿಪಟೂರು ಎಪಿಎಂಸಿಯಲ್ಲಿ 3,351 ಕ್ವಿಂಟಲ್ (7795 ಚೀಲ) ಆವಕವಾಗಿತ್ತು. ಆದರೆ ರೈತರ ಬಳಿ ಹೆಚ್ಚಿನ ಪ್ರಮಾಣದ ಕೊಬ್ಬರಿ ದಾಸ್ತಾನು ಇಲ್ಲ. ಹಾಗಾಗಿ ಬೆಲೆ ಏರಿಕೆಯ ಲಾಭ ರೈತರಿಗೆ ಸಿಗದಂತಾಗಿದೆ. ಮೇ ಅಂತ್ಯದಲ್ಲಿ ರೂ 20,000 ದಾಟಿದ ಕ್ವಿಂಟಲ್ ಕೊಬ್ಬರಿ ಜೂನ್ ಮೊದಲ ವಾರ 22,000, ಜೂನ್ ಮಧ್ಯದಲ್ಲಿ 24,000 ಏರಿಕೆ ಆಗಿದೆ. ಒಂದೇ ತಿಂಗಳ ಅಂತರದಲ್ಲಿ ಕ್ವಿಂಟಲ್ ಗೆ 5,000 ಹೆಚ್ಚಳವಾಗಿದ್ದು, ಮಾರುಕಟ್ಟೆಯಲ್ಲಿ ಬೇಡಿಕೆಗೆ ತಕ್ಕಂತೆ ಕೊಬ್ಬರಿ ಪೂರೈಕೆಯಾಗುತ್ತಿಲ್ಲ. ರಾಜ್ಯ ಸೇರಿದಂತೆ ಕೇರಳ ತಮಿಳುನಾಡಿನಲ್ಲೂ ಇಳುವರಿ ಕುಸಿದಿರುವುದು ಬೆಲೆ ಹೆಚ್ಚಳಕ್ಕೆ ಕಾರಣ ಎನ್ನುತ್ತಾರೆ ವರ್ತಕರು.

ರಾಜ್ಯ ಮಟ್ಟದ ಆಯ್ಕೆ ಸಮಿತಿಗಳಿಗೆ ನೇಮಕ

ಶಿರಾ: ಬಾಲ ನ್ಯಾಯ ಮಂಡಳಿಗೆ ಸದಸ್ಯರುಗಳನ್ನು ಮತ್ತು ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಆಯ್ಕೆ ಮಾಡಲು ಅನುವಾಗುವಂತೆ ಸರಕಾರ ನಿವೃತ್ತ ನ್ಯಾಯಾಧೀಶರಾದ ಪಿ.ಕೃಷ್ಣ ಭಟ್ ರವರ ಅಧ್ಯಕ್ಷತೆಯಲ್ಲಿ ರಚಿಸಿರುವ 7 ಜನರ ರಾಜ್ಯ ಮಟ್ಟದ ಆಯ್ಕೆ ಸಮಿತಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ತುಮಕೂರು ಜಿಲ್ಲೆ ಸಿರಾ ತಾಲೂಕಿನ ಕಳ್ಳಂಬೆಳ್ಳ ಗ್ರಾಮದ ಡಾ.ತಿಪ್ಪೇಸ್ವಾಮಿ ಕೆ.ಟಿ. ಅವರನ್ನು ಸದಸ್ಯರನ್ನಾಗಿ ಮುಂದಿನ ಮೂರು ವರ್ಷಗಳ ಅವಧಿಗೆ ನೇಮಕ ಮಾಡಿ ಆದೇಶಿಸಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ (1ನೇ ತರಗತಿಯಿಂದ 8ನೇ ತರಗತಿ ವರೆಗೆ) ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಯೋಜನೆಯಡಿ ಪಿಯುಸಿ, ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ, ತಾಂತ್ರಿಕ ವೃತ್ತಿಪರ ಕೋರ್ಸು ವಿದ್ಯಾರ್ಥಿಗಳಿಗೆ ಆನ್‌ಲೈನ್ ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಅರ್ಜಿಗಳನ್ನು ಸೆಪ್ಟೆಂಬರ್ 30 ರೊಗಳಗೆ ಸಲ್ಲಿಸಬಹುದು.ಹೆಚ್ಚಿನ ಮಾಹಿತಿಗಾಗಿ ದೂ : 08156–277049 ಸಂಪರ್ಕಿಸಬಹದು.

ನೇರ ಸಂದರ್ಶನ ಜೂನ್ 27 ರಂದು

ಚಿಕ್ಕಬಳ್ಳಾಪುರ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಗೌರಿಬಿದನೂರಿನ ವೆಂಕಟೇಶ್ವರ ಕೈಗಾರಿಕಾ ಕೇಂದ್ರ, ಇವರ ಸಹಯೋಗದಲ್ಲಿ ಜಿಲ್ಲೆಯ ಉದ್ಯೋಗಾಕಾಂಕ್ಷಿಗಳಿಗಾಗಿ ಜೂನ್ 27 ರಂದು ಜಿಲ್ಲೆಯ ಖಾಸಗಿ ಕಂಪನಿಗಳಲ್ಲಿ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ವೆಂಕಟೇಶ್ವರ ಕೈಗಾರಿಕಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಎಸ್.ಎಸ್.ಎಲ್.ಸಿ ವಿದ್ಯಾರ್ಥಿ ಗಳು ನೇರ ಸಂದರ್ಶನಕ್ಕೆ ಹಾಜರಾಗಬ ಹುದು. ಸ್ನಾತಕೋತ್ತರ ಮತ್ತು ಇಂಜಿನಿಯರಿಂಗ್ ಪದವಿ ಹೊರತುಪಡಿಸಿ ಹಾಜರಾಗುವಾಗ 2 ಸೆಟ್ ಬಯೋಡಾಟ, ಅಂಕಪಟ್ಟಿ, ಆಧಾರ್ ಕಾರ್ಡ್, ಪಾನ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ತರುವುದು ಕಡ್ಡಾಯ. ಹೆಚ್ಚಿನ ಮಾಹಿತಿಗಾಗಿ ಮೊ. ಸಂ: 9148542728 ಸಂಪರ್ಕಿಸಬಹುದೆಂದು ಜಿಲ್ಲಾ ಉದ್ಯೋಗಾಧಿಕಾರಿ ಎಂ.ಪ್ರಸಾದ್ ತಿಳಿಸಿದ್ದಾರೆ.

ಪ್ರಶಸ್ತಿಗೆ ಕ್ರೀಡಾ ಇಲಾಖೆ ಆಹ್ವಾನ

ಚಿಕ್ಕಬಳ್ಳಾಪುರ: ಟೆಂಜಿ ನೋರಜೆ ನಾಟಿ ಅಡ್ವೆಂಚರ್ ಅವಾರ್ಡ್(ಟಿಎನ್‌ಎಎ) ಅರ್ಜಿಗಳನ್ನು ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದಿಂದ ಆಹ್ವಾನಿಸಲಾಗಿರುತ್ತದೆ.2022, 2023, 2024 ನೇ ಸಾಲಿನಲ್ಲಿ ಜಲಸಾಹಸ, ವಾಯು ಸಾಹಸ ಮತ್ತು ಭೂಸಾಹಸ ಕ್ರೀಡೆಗಳಲ್ಲಿ ಸಾಧನೆ ಮಾಡಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಕ್ರೀಡಾಪಟುಗಳು ಈ ಪ್ರಶಸ್ತಿಗೆ ಅರ್ಜಿಸಲ್ಲಿಸಲು ಅರ್ಹರಿದ್ದಾರೆ. ಜೂನ್ 30 ರ ಒಳಗಾಗಿ ಆನ್ ಲೈನ್ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂ: 01123386898 ನ್ನು ಸಂಪರ್ಕಿಸಬಹುದು ಎಂದು ತಿಳಿಸದ್ದಾರೆ.

ಕೆ.ಡಿ.ಪಿ ಸಭೆ | ಇಲಾಖೆಗಳ ಪ್ರಗತಿ ಪರಿಶೀಲನೆ | ಸಚಿವ ಡಾ.ಜಿ.ಪರಮೇಶ್ವರ್ ಗರಂ

ಫಲಿತಾಂಶ ಇಳಿಕೆ, ಶಿಕ್ಷಕರೇ ಹೊಣೆ

ತುಮಕೂರು: ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಮಾಣವನ್ನು ಹೆಚ್ಚಿಸಬೇಕು. ಶಿಕ್ಷಕರ ನಿರ್ಲಕ್ಷ್ಯದಿಂದ ಶೇ.35ರಷ್ಟು ಅಂಕಗಳನ್ನು ಪಡೆಯಲು ವಿದ್ಯಾರ್ಥಿಗಳು ಕಷ್ಟಪಡುತ್ತಿದ್ದಾರೆ. ಮಕ್ಕಳು ಅನುತ್ತೀರ್ಣರಾಗಲು ಶಿಕ್ಷಕರೇ ಕಾರಣ. ಇನ್ನು ವಿಷಯ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಕೆ ನೀಡಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೆ.ಡಿ.ಪಿ ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದರು.

ಮಕ್ಕಳು ಯಾವ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂಬುದನ್ನು ಅರಿತು ಶಿಕ್ಷಕರು ವಿಶೇಷ ತರಗತಿಗಳನ್ನು ನಡೆಸಿ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಮಾಣವನ್ನು ಉತ್ತಮಗೊಳಿಸಬೇಕು ಎಂದು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ತೋಟಗಾರಿಕೆ ಇಲಾಖೆ ಪ್ರಗತಿ ಪರಿಶೀಲಿಸಿದ ಸಚಿವರು ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ರೋಗೋಸ್ ರೋಗ ಹರಡಿರುವುದರಿಂದ ರೈತರಿಗೆ ಸಂಕಷ್ಟ ಎದುರಾಗಿದೆ. ಇದರಿಂದ ತೆಂಗಿನಲ್ಲಿ ಇಳುವರಿ ಕುಸಿದಿದ್ದು, ಕೊಬ್ಬರಿ ಮತ್ತು ಎಳನೀರಿನ ಬೆಲೆ ದುಬಾರಿಯಾಗಿದೆ. ರೋಗೋಸ್‌ನಿಂದ ನಷ್ಟ ಉಂಟಾದ ರೈತರಿಗೆ ಪರಿಹಾರ ಕಲ್ಪಿಸಲು ತೆಂಗು ಅಭಿವೃದ್ಧಿ ಮಂಡಳಿಗೆ ಪ್ರಸ್ತಾವ ಸಲ್ಲಿಸಬೇಕೆಂದು ಸೂಚಿಸಿದರು.

ಜಿಲ್ಲೆಯ ಶಿರಾ, ಮಧುಗಿರಿ ಮತ್ತು ಪಾವಗಡ ತಾಲೂಕಿನಂತಹ ಗಡಿ ಪ್ರದೇಶಗಳಲ್ಲಿ ತಾಯಂದಿರ ಮರಣ ಪ್ರಮಾಣ ಹೆಚ್ಚಳ ಕಂಡುಬಂದಿದೆ. ಇದು ರಾಜ್ಯದ ಸರಾಸರಿ ಮಟ್ಟವನ್ನು ಮೀರಿರುವುದರಿಂದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಂದ್ರ ಶೇಖರ್‌ಗೆ ಸೂಚನೆ ನೀಡಿದಾಗ ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶಾಸಕ ಬಿ. ಸುರೇಶ್ ಗೌಡ ಮಾತನಾಡಿ, ಪೋಕ್ಸೋ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವುದರಿಂದ ಕಾಯ್ದೆ ಕುರಿತು ಯುವಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಸಚಿವರಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಶಾಸಕರಾದ ಜಿ.ಬಿ. ಜ್ಯೋತಿಗಣೇಶ್, ಸುರೇಶ್ ಬಾಬು, ಡಾ.ಹೆಚ್.ಡಿ. ರಂಗನಾಥ್, ಎಸ್.ಆರ್. ಶ್ರೀನಿವಾಸ್, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ. ಪ್ರಭು, ಉಪ ಅರಣ್ಯ ಸಂರಕ್ಷಣಾಧಿಕಾರಿ ಅನುಪಮಾ, ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಅವರು ಜಿಪಂ ಸಭಾಂಗಣದಲ್ಲಿ ನಡೆದ ಕೆ.ಡಿ.ಪಿ ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದರು.

ಹೇಮಾವತಿ ಕೆನಾಲ್: ಜಿಲ್ಲೆ ಹಿತ ಕಾಪಾಡಿ

ಹೇಮಾವತಿ ಕೆನಾಲ್ ಯೋಜನೆಯನ್ನು ಸರಕಾರ ನಿಲ್ಲಿಸಲು ಕ್ರಮ ಕೈಗೊಳ್ಳಬೇಕು. ಸಚಿವರು ಜಿಲ್ಲೆಯ ಹಿತ ಕಾಪಾಡಲು ಮುಂದಾಗಬೇಕು. ಶೀಘ್ರವೇ ಸಭೆ ಕರೆದು ಜಿಲ್ಲೆಯ ಜನತೆಗೆ ನ್ಯಾಯ ಒದಗಿಸಬೇಕೆಂದು ಶಾಸಕರಾದ ಸುರೇಶ್ ಗೌಡ, ಸುರೇಶ್ ಬಾಬು, ಜ್ಯೋತಿ ಗಣೇಶ್ ಸಚಿವರಿಗೆ ಮನವಿ ಮಾಡಿದರು.

ವ್ಯಾಯಾಮದಿಂದ ಆರೋಗ್ಯ ಸಂರಕ್ಷಣೆ ಸಾಧ್ಯ:ಶಾಸಕ

ರಾಮನಗರ: ಆರೋಗ್ಯವಾಗಿದ್ದರೆ ಮಾತ್ರ ಏನನ್ನಾದರೂ ಸಾಧನೆ ಮಾಡಲು ಸಾಧ್ಯ, ಒತ್ತಡದ ಬದುಕಿನಲ್ಲಿ ಜನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ತೋರುತ್ತಿಲ್ಲ, ಪ್ರತಿಯೊಬ್ಬರು ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸಬೇಕು ಎಂದು ಶಾಸಕ ಹೆಚ್. ಎ. ಇಕ್ಬಾಲ್ ಹುಸೇನ್ ಕರೆನೀಡಿದರು.

ರಾಮನಗರ ಜಿಲ್ಲಾ ಕ್ರೀಡಾಂಗಣದಲ್ಲಿ ನೂತನ ಜಿಮ್ ಉದ್ಘಾಟನೆ ಮಾಡಿ ಮಾತನಾಡಿದರು. ಪ್ರತಿದಿನ ವ್ಯಾಯಾಮಕ್ಕಾಗಿಯೇ ಸ್ವಲ್ಪ ಸಮಯ ಮೀಸಲಿಡಬೇಕು, ವ್ಯಾಯಾಮದಿಂದ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ, ನಗರ ಪ್ರದೇಶದಲ್ಲಿ ವ್ಯಾಯಾಮ ಮಾಡಲು ಸೂಕ್ತ ಅವಕಾಶ ಇರಲಿಲ್ಲ, ಜನಸಾಮಾನ್ಯರಿಗೆ ಅತೀ ಅವಶ್ಯ ಇರುವ ಜಿಮ್ ಉದ್ಘಾಟನೆ ಮಾಡಲಾಗಿದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಒತ್ತಡದ ಬದುಕು ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿದೆ. ಅಗಾಗ್ಗೆ ತಪಾಸಣೆ ಮಾಡಿಸಿಕೊಳ್ಳಬೇಕು, ಜಿಮ್ ಯುವ ಜನರಿಗೆ ಮಾತ್ರವಲ್ಲ, ಎಲ್ಲರೂ ಈ ಸಲಕರಣೆಗಳನ್ನು ಬಳಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕೆಂದರು.

ಜಿಲ್ಲಾ ಕೇಂದ್ರದಲ್ಲಿ ಎರಡು ಕಡೆ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲು ಯೋಜಿಸಲಾಗಿದೆ, ಇದಕ್ಕಾಗಿ ಸ್ಥಳವನ್ನು ಗುರುತಿಸಲಾಗಿದೆ, ಜಿಪಂ ನಲ್ಲಿ ಅನುದಾನ ಲಭ್ಯವಿದೆ, ಶೀಘ್ರದಲ್ಲಿ ಅನುಮೋದನೆ ಪಡೆದು ಕಾಮಗಾರಿ ಆರಂಭಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಯಶವಂತ ಗುರುಕರ್, ಎಸ್ಪಿ ಶ್ರೀನಿವಾಸಗೌಡ, ಜಿಪಂ ಸಿಇಒ ಅನ್ಮೋಲ್ ಜೈನ್, ರಾಮನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್, ಮಾಜಿ ಶಾಸಕ ಕೆ. ರಾಜು ಸೇರಿದಂತೆ ಹಲವರಿದ್ದರು.

ರಾಮನಗರ ಜಿಲ್ಲಾ ಕ್ರೀಡಾಂಗಣದಲ್ಲಿ ನೂತನ ಜಿಮ್ ಗೆ ಶಾಸಕ ಇಕ್ಬಾಲ್ ಹುಸೇನ್ ಚಾಲನೆ ನೀಡಿದರು.

ಸರಕಾರ ವಿಧವಾವೇತನ ಹೆಚ್ಚಿಸಬೇಕು

ಗೌರಿಬಿದನೂರು: ವಿಧವೆಯರನ್ನು ಸಹಾ ಮಹಿಳೆಯಾಗಿ ಗುರ್ತಿಸಿ,ಗೌರವಿಸಿ.ಮೂಢನಂಬಿಕೆಗಳನ್ನು ತ್ಯಜಿಸಿ ಎಂದು ಭ್ರಷ್ಟಾಚಾರ ವಿರೋಧಿ ಮತ್ತು ಗ್ರಾಹಕರ ರಕ್ಷಣಾ ದಳದ ರಾಷ್ಟ್ರೀಯ ಅಧ್ಯಕ್ಷರಾದ ಸಂಪಂಗಿ ಶ್ರೀನಿವಾಸ್ ತಿಳಿಸಿದರು.

ನಗರದ ಡಾ.ಹೆಚ್.ಎನ್ ಕಲಾಭವನದಲ್ಲಿ ರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ಮತ್ತು ಗ್ರಾಹಕರ ರಕ್ಷಣಾದಳ ದವರಿಂದ ನಡೆದ 'ವಿಧವೆಯರ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಧವೆಯರು ಎದುರಾಗಿ ಬಂದರೆ ಅಪಶಕುನ ವೆಂದು, ಮುಂಜಾನೆ ಎದ್ದು ವಿಧೆವೆಯರನ್ನು ನೋಡ ಬಾರದೆಂಬ ಮೂಢ ನಂಬಿಕೆಗಳನ್ನು ಬಿಟ್ಟು, ವಿಧೆವೆಯರನ್ನು ಸಹಾ ಮಹಿಳೆಯರಾಗಿ ಗೌರವಿಸಿ. ತಾಲೂಕಿನಲ್ಲಿ ಸುಮಾರು ಇಪ್ಪತೆಂಟು ಸಾವಿರ ವಿಧವೆಯರಿದ್ದಾರೆ.

ರಾಜ್ಯದಲ್ಲಿ ಎಂಟು ನೂರು ರೂ.ವಿಧವಾವೇತನ ನೀಡುತ್ತಿದ್ದಾರೆ.ನೆರೆಯ ಆಂಧ್ರದಲ್ಲಿ ನಾಲ್ಕು ಸಾವಿರ ನೀಡುತ್ತಿದ್ದಾರೆ, ಈ ರಾಜ್ಯದಲ್ಲಿ ಸಹಾ ಹೆಚ್ಚಿಸಬೇಕೆಂದು ಆಗ್ರಹ ವ್ಯಕ್ತಪಡಿಸಿದರು.

'ವಿಧವೆಯರ ದಿನಾಚರಣೆ' ಕಾರ್ಯಕ್ರಮ ನಡೆಯಿತು.

ಪೌರಾಯುಕ್ತೆ ಗೀತ ಅವರು ಮಾತನಾಡಿ ವಿದವೆಯರು ಸಮಾಜದಲ್ಲಿ ಧೈರ್ಯವಾಗಿ ಜೀವಿಸಬೇಕು. ಸರಕಾರಿ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದರು. ಈ ವೇಳೆ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಸಿಆರ್ ನರಸಿಂಹಮೂರ್ತಿ,ಅಸೀಫ್, ಬಾಬು,ರವಿಕುಮಾರರೆಡ್ಡಿ,ಇಂತಿಯಾಜ್,ಮಹಬೂಬ್ ಬಾಷಾ,ಗೀತಮ್ಮ,ಅನಿತಮ್ಮ, ಮುಂತಾದವರು ಭಾಗವಹಿಸಿದ್ದರು.

ಸಿದ್ದಗಂಗಾ ಶ್ರೀಗಳಿಗೆ ಭಕ್ತರಿಂದ ಪಾದ ಪೂಜೆ

ಚಿಕ್ಕಬಳ್ಳಾಪುರ: ಕಷ್ಟಗಳನ್ನು ಎದುರಿಸಿ ಶ್ರಮಪಟ್ಟು ಮೇಲೆ ಬಂದ ಯಲುವಳ್ಳಿ ರಮೇಶ್ ರಾಜಕೀಯ ಹಾಗು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದು ಅವರಲ್ಲಿ ದೈವಭಕ್ತಿ, ಗುರುಭಕ್ತಿ ತುಂಬಿದೆ ಎಂದು ಸಿದ್ದಗಂಗಾ ಮಠದ ಶ್ರೀಸಿದ್ದಲಿಂಗ ಮಹಾಸ್ವಾಮಿ ಹೇಳಿದರು.

ಶ್ರೀಗಳು ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಚಿಕ್ಕಬಳ್ಳಾಪುರಕ್ಕೆ ಆಗಮಿಸಿದ್ದ ವೇಳೆ ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ರಮೇಶ್ ಅವರ ಅಹ್ವಾನದ ಮೇರೆಗೆ ನಿವಾಸಕ್ಕೆ ಬೇಟಿ ನೀಡಿ ಪೂಜೆ ಸ್ವೀಕರಿಸಿದರು. ಶ್ರೀಗಳ ಪಾದ ಪೂಜೆ ಮಾಡಿದ ರಮೇಶ್ ಕುಟುಂಬ ಸಮೇತ ಆಶೀರ್ವಾದ ಪಡೆದು ಶ್ರೀಮಠಕ್ಕೆ ಕಾಣಿಕೆ ಅರ್ಪಿಸಿದರು.

ಅವರ ಸುಪುತ್ರ ಜನಾರ್ದನ್ ತಂದೆ ಜೊತೆಗಿದ್ದು ಸಾಮಾಜಿಕ ಸೇವಾ ಕಾರ್ಯದಲ್ಲೂ ತೊಡಗಿಸಿಕೊಂಡಿದ್ದಾರೆ. ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಅವರು ಸ್ಪರ್ಧಿಸಲು ಬಯಸಿದ್ದು ದೇವರು ಜನರ ಸೇವೆ ಮಾಡುವ ಅವಕಾಶ ನೀಡಲಿ ಎಂದರು.

ಇದೇ ವೇಳೆ ಮಾತನಾಡಿದ ಎನ್ ರಮೇಶ್ ರಾಜ್ಯದಲ್ಲಿ ಅನ್ನದಾಸೋಹ, ಅಕ್ಷರ ದಾಸೋಹ ಕಾರ್ಯಕ್ರಮಗಳನ್ನ ಅತಿ ಹೆಚ್ಚು ಸಿದ್ದಗಂಗಾ ಮಠ ಹಾಗು ಆದಿಚುಂಚನಗಿರಿ ಚುಂಚನಗಿರಿ ಮಹಾಸಂಸ್ಥಾನ ಮಾಡುತ್ತಿದೆ. ಶ್ರೀಗಳ ಪಾದ ಪೂಜೆ ಮಾಡಲು ಮಠಕ್ಕೆ ಒಂದಿಷ್ಟು ಕಾಣಿಕೆ ನೀಡಲು ಬಯಸಿದ್ದೆ. ಅದು ಈಗ ಕೂಡಿ ಬಂದಿದೆ ಎಂದರು. ಈ ವೇಳೆ ಪುತ್ರ ಜನಾರ್ದನ್, ರಮೇಶ್ ಪತ್ನಿ, ಕುಟುಂಬ ಹಾಜರಿದ್ದರು.

ಶ್ರೀಸಿದ್ದಲಿಂಗಶ್ರೀಗಳ ಪಾದಪೂಜೆ ನಡೆಯಿತು.

'ಪ್ರವಾಸಿ ಪ್ರಪಂಚ'ಕ್ಕೆ ಹಾರೈಕೆ

ತಿಪಟೂರು: ವರನಟ ಡಾ.ರಾಜಕುಮಾರ್ ಅವರ ಆಪ್ತಮಿತ್ರರೂ, ಡಾ. ರಾಜ್ ಜತೆ ಉತ್ತಮ ಒಡನಾಟ ಹೊಂದಿದ್ದ ತಿಪಟೂರು ನಗರದ ನಿವಾಸಿಗಳಾದ ರಾಮಸ್ವಾಮಿ ಅವರಿಗೆ ವಿಶ್ವವಾಣಿ ಸಮೂಹದ 'ಪ್ರವಾಸಿ ಪ್ರಪಂಚ' ವಾರ ಪತ್ರಿಕೆ ನೀಡಲಾಯಿತು. ಅವರು ಪ್ರವಾಸಿ ಪ್ರಪಂಚ ಪತ್ರಿಕೆ ಸ್ವೀಕರಿಸಿ ವಿಶ್ವವಾಣಿ ಬಳಗಕ್ಕೆ ಶುಭ ಹಾರೈಸಿದರು.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಮಲ್ಲಾನಹಳ್ಳಿ ಜೀವನ ಮಾರ್ಗ ಚಾರಿಟೇಬಲ್ ಟ್ರಸ್ಟ್‌ನಿಂದ ಮಹಿಳೆಯರಿಗೆ ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಣೆ ಮಾಡಲಾಯಿತು. ಈ ವೇಳೆ ಜೀವನ ಮಾರ್ಗ ಟ್ರಸ್ಟ್ ಅಧ್ಯಕ್ಷ ಕಂಡಪ್ಪ, ಶಿಕ್ಷಕರಾದ ವಿಶ್ವನಾಥರೆಡ್ಡಿ, ಶ್ರೀರಾಮರೆಡ್ಡಿ, ಗ್ರಾಪಂ ಸದಸ್ಯರಾದ ಚೌಡರೆಡ್ಡಿ, ಮುಖಂಡರಾದ ಮಂಜುನಾಥ್ ರೆಡ್ಡಿ, ಆಂಜನೇಯರೆಡ್ಡಿ ಸೇರಿ ಇತರರಿದ್ದರು.

ಪ್ರತಿಭಾ ಪುರಸ್ಕಾರ ಜು.6ಕ್ಕೆ

ಚಿಕ್ಕನಾಯಕನಹಳ್ಳಿ : ಪಟ್ಟಣದ ತೀನಂಶ್ರೀ ಭವನದಲ್ಲಿ ಜುಲೈ 6 ರಂದು ಸರ್ಪ ಒಕ್ಕಲಿಗ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಡಿಡಿಪಿಐ ರಾಜ್‌ಕುಮಾರ್ ತಿಳಿಸಿದರು. ಸರ್ಪ ಒಕ್ಕಲಿಗರ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಸಮಿತಿ ಸಹಯೋಗ ನೀಡಿದ್ದು ಕಾರ್ಯಕ್ರಮದ ಅಂತಿಮ ಹಂತದ ಸಿದ್ದತೆಗಳು ಪೂರ್ಣಗೊಂಡಿದೆ ಎಂದು ಸುದ್ದಿಗೋಷ್ಠಿ ನಡೆಸಿ ಮಾಹಿತಿ ಹಂಚಿಕೊಂಡರು. ಅಂದು ಬೆಳಗ್ಗೆ 10.30 ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸರ್ಪ ಒಕ್ಕಲಿಗ ಮುಖಂಡ ಸಖರಾಯಪಟ್ಟಣದ ಸೋನಾಲ್‌ಗೌಡ, ವಿಧಾನಪರಿಷತ್ ಸದಸ್ಯ ಭೋಜೇಗೌಡ, ತಿಪಟೂರಿನ ಕೆ.ಟಿ.ಶಾಂತಕುಮಾರ್ ಅವರು ಭಾಗವಹಿಸಲಿದ್ದಾರೆ.ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಮಕ್ಕಳನ್ನು ಸನ್ಮಾನಿಸಲಾಗುವುದು ಎಂದರು.

ಜಿಲ್ಲಾ ಭೋವಿ ನಿಗಮದಲ್ಲೂ ಹಗರಣ:ಡಾ.ಕೆ.ಸುಧಾಕರ್

ಚಿಕ್ಕಬಳ್ಳಾಪುರ: ದೇಶ ಕಂಡಂತೆ ರಾಜ್ಯದ ವಾಲ್ಮಿಕಿ ನಿಗಮದಲ್ಲಿ ದೊಡ್ಡ ಭ್ರಷ್ಟಾಚಾರವಾಗಿ ಜೈಲು ,ಕೋರ್ಟ್ ಎಲ್ಲಾ ಆಗಿದೆ. ಆದರೆ ವಾಲ್ಮಿಕಿ ನಿಗಮದಂತೆ ಭೋವಿ ನಿಗಮದಲ್ಲೂ ದೊಡ್ಡ ಹಗರಣವಾಗಿದೆ ಎಂದು ಸಂಸದ ಡಾ.ಕೆ.ಸುಧಾಕರ್ ರಾಜ್ಯ ಸರ್ಕಾರದ ವಿರುದ್ದ ಆರೋಪಿಸಿದರು.

ನಗರ ಹೊರವಲಯದ ಜಿಲ್ಲಾಡಳಿತ ಭವನದಲ್ಲಿರುವ ಸಂಸದರ ಕಚೇರಿಯಲ್ಲಿ ಜನತಾ ದರ್ಶನ ಕಾರ್ಯಕ್ರಮ ನಡೆಸಿ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ನಂತರ ಮಾತನಾಡಿದರು.

ಕಳೆದ ಮೂರು ವರ್ಷಗಳ ಹಿಂದೆ 2021,2022, 2023 ನೇ ಸಾಲಿನಲ್ಲಿ ಆಯ್ಕೆಯಾಗಿದ್ದ ಗಂಗಾ ಕಲ್ಯಾಣ ಫಲಾನುಭವಿಗಳ ಆಯ್ಕೆ ರದ್ದು ಮಾಡಿ, ಹೊಸದಾಗಿ ಫಲಾನುಭವಿಗಳ ಆಯ್ಕೆ ಮಾಡುತ್ತಾರಂತೆ. ಈ ಹಿಂದಿನ ಸರಕಾರ ಮೂರು ವರ್ಷಗಳಲ್ಲಿ ಆಯ್ಕೆ ಮಾಡಿರುವ ಫಲಾನುಭವಿಗಳ ಗತಿಯೇನು ಎಂದು ಪ್ರಶ್ನಿಸಿದರು.

ಪರಿಶಿಷ್ಟರಾದ ಅವರು ನಮ್ಮ ಜಮೀನಿನಲ್ಲಿ ಬೋರ್ ವೆಲ್ ಕೊರೆಸುತ್ತಾರೆ. ನಾವು ನೀರಾವರಿ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಸಬಲರಾಗಬಹುದು ಎಂದು ಕನಸು ಕಂಡಿದ್ದರ ಕನಸು ಕನಸಾಗಿಯೇ ಉಳಿಯ ಬೇಕೆ. ನಮ್ಮ ಕಾಲದಲ್ಲಿ ಸರಿಯಾಗಿ ಮಾರ್ಗಸೂಚಿ ಅನುಸರಿಸಿ, ನಿಯಮಗಳನ್ನು ಪಾಲಿಸಿ ಪಕ್ಷಾತೀತವಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದೆವು.ಅವರಿಗೆ ನೀವು ಬೋರ್ ವೆಲ್ ಕೊರೆಸಬೇಕು. ಅದು ಬಿಟ್ಟು ನೀವು ಹೊಸದಾಗಿ ಆಯ್ಕೆ ಮಾಡುತ್ತೀವಿ ಎಂದರೆ ಇದು ತುಘಲಕ್ ಸರಕಾರ. ಈ ತರಹದ ನಡವಳಿಕೆಗಳನ್ನು ಬದಲಾಯಿಸಿಕೊಳ್ಳ ಬೇಕು. ನಾವು ಆಯ್ಕೆ ಮಾಡಿದ ಫಲಾನುಭವಿಗಳಿಗೆ ಬೋರ್ ವೆಲ್ ಕೊರೆಸಬೇಕು ಎಂದು ಆಗ್ರಹಿಸಿದರು.

ಸಂಸದ ಡಾ.ಕೆ.ಸುಧಾಕರ್ ಸಾರ್ವಜನಿಕರ ಅಹವಾಲು ಸಭೆಯಲ್ಲಿ ಜನರಿಂದ ಅರ್ಜಿ ಸ್ವೀಕರಿಸಿದರು.

ಮನಿ ಇಲ್ಲ ಅಂದ್ರೆ ಮನೆಯಿಲ್ಲ, ಹಣ ಇಲ್ಲ ಅಂದ್ರೆ ಕೆಲಸವಿಲ್ಲ.ಇದು ರಾಜ್ಯ ಸರಕಾರದ ಹೊಸ ಘೋಷ ವ್ಯಾಕ್ಯ. ಕಾಂಗ್ರೆಸ್ ಶಾಸಕರೇ ಸರಕಾರದ ವೈಖರಿ ಬಗ್ಗೆ ಟೀಕೆ ಮಾಡುತಿದ್ದಾರೆ. ಸಿಎಂ ಅವರ ಆರ್ಥಿಕ ಸಲಹೆಗಾರರು, ರಾಜಕೀಯ ಕಾರ್ಯದರ್ಶಿಗಳೇ ಹೇಳಿದ್ದಾರೆ.

ಕೂಡಲೇ ಸಿಎಂ ಈ ಬಗ್ಗೆ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಿ. ಜನರಿಗೆ ಈ ಬಗ್ಗೆ ಅರ್ಥವಾಗಲಿ, ಆಗ ಜನರೇ ಸ್ವಯಂಪ್ರೇರಿತವಾಗಿ ಪ್ರತಿಭಟನೆಗೆ ಇಳಿಯುತ್ತಾರೆ ಎಂದು ಹರಿಹಾಯ್ದರು.

ಜಿಲ್ಲೆಯಲ್ಲಿ ಎರಡು ವರ್ಷಗಳಿಂದ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದಕ್ಕೆ ಸ್ಪಷ್ಟ ಉದಾಹರಣೆಯಾಗಿ ಬಾಗೆಪಲ್ಲಿ ಸಹಾಯಕ ಕೃಷಿ ನಿರ್ದೇಶಕ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ 2 ಲಕ್ಷ ಲಂಚ ಸ್ವೀಕರಿಸುವಾಗ ಲೋಕಾಯುಕ್ತಕ್ಕೆ ಸಿಕ್ಕಿ ಬಿದ್ದಿರುವ ಘಟನೆಯೇ ಸಾಕ್ಷಿ. ಅದೇ ರೀತಿ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಕಚೇರಿಯಲ್ಲಿ ಅಧ್ಯಕ್ಷರಿಗೆ ಒಂದು ಎಕರೆ ಭೂಪರಿವರ್ತನೆಗೆ 25 ಲಕ್ಷ ಲಂಚ ನೀಡಬೇಕಾಗಿದೆ. ಇದೇ ರೀತಿ ಜಿಲ್ಲೆಯ ಎಲ್ಲಾ ಕಚೇರಿಗಳಲ್ಲೂ ಭ್ರಷ್ಟಾಚಾರ ತಾಂಡವ ವಾಡುತ್ತಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರು ತಾವು ಶುದ್ದ ಹಸ್ತರು ಎಂದು ಹೇಳುತ್ತಾರೆ. ಆದರೆ ಅವರು ಇತ್ತ ಗಮನಹರಿಸಲಿ ಎಂದು ಆರೋಪಿಸಿದರು.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಬರುತ್ತಿರುವ ಅಹವಾಲುಗಳಲ್ಲಿ ಶೇ 90 ರಷ್ಟು ಅಹವಾಲುಗಳನ್ನು ತಾಲೂಕು ಮಟ್ಟದ ಅಧಿಕಾರಿಗಳು ಪರಿಹರಿಸಬೇಕಾದ ಸಮಸ್ಯೆಗಳೇ ಆಗಿವೆ. ಇನ್ನು ಉಳಿದವನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಪರಿಹರಿಸುವಂಥವು. ಜಮೀನು ಹದ್ದು ಬಸ್ತು, ಅಳತೆ, ಸೂರಿಲ್ಲದವರಿಗೆ ಸೂರು ಸೇರಿದಂತೆ ಜನತೆಯ ಮೂಲ ಭೂತ ಸೌಕರ್ಯಗಳಿಗೆ ಸಂಬಂಧಿಸಿವೆ ಎಂದು ತಿಳಿಸಿದರು.

ಕೋಮುಲ್ ಚುನಾವಣೆ ಇಂದು ಕಾಂಗ್ರೆಸ್-ದಳಕ್ಕೆ ಬಂಡಾಯ ಬಿಸಿ

ಕೋಲಾರ: ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅನುಮತಿ ಮೇರೆಗೆ ಸ್ಪರ್ಧೆ ಮಾಡಿದ್ದೇನೆಂದು ಕೋಲಾರ ಹಾಲು ಒಕ್ಕೂಟದ ಕೋಲಾರ-ವೇಮಗಲ್ ಕ್ಷೇತ್ರದ ಜೆಡಿಎಸ್ -ಬಿಜೆಪಿ ಮೈತ್ರಿ ಅಭ್ಯರ್ಥಿ ಜನ್ನಘಟ್ಟ ಟಿ.ವಿ. ಕೃಷ್ಣಪ್ಪ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಹಾಲು ಒಕ್ಕೂಟದ ಚುನಾವಣೆಗೆ ಸ್ಪರ್ಧೆ ಮಾಡುವುದಾಗಿ ಸ್ವಾಮಿಗಳ ಬಳಿ ಹೇಳಿದಾಗ ನನ್ನ ಬಳಿ ಯಾರೂ ಬಂದಿಲ್ಲ. ನಾನು ಯಾರಿಗೂ ಹೇಳಿಲ್ಲ. ಅವರು ಏನಾದರೂ ಮಾಡಿಕೊಳ್ಳಲಿ, ನೀನು ಚುನಾ ವಣೆಗೆ ನಿಲ್ಲು ಎಂದು ನನಗೆ ಹೇಳಿದ್ದಾರೆ. ಹೀಗಾಗಿ ಕೋಲಾರ ಕಾಂಗ್ರೆಸ್ ಹೈಕಮಾಂಡ್ ಆಗಿರುವ ರಮೇಶ್ ಕುಮಾರ್ ಅವರ ಒಪ್ಪಿಗೆ ನನಗೆ ಇದೆ ಎಂದರು. ಎಂಎಲ್‌ಸಿ ಅನಿಲ್ ಕುಮಾರ್ ಅವರ ಬಳಿ ಹೋಗಿದ್ದಾಗ ಕೋಮುಲ್ ಎಲೆಕ್ಷನ್‌ಗೆ ನಿಲ್ಲುವುದಾಗಿ ಹೇಳಿದೆ. ಈ ಬಗ್ಗೆ ರಮೇಶ್ ಕುಮಾರ್ ಜತೆಗೆ ಚರ್ಚೆ ಮಾಡಿ ಅಂತಿಮ ನಿರ್ಧಾರ ಮಾಡುವುದಾಗಿ ಹೇಳಿದರು. ಇದೀಗ ನಾನು ನಾಮಪತ್ರ ಹಾಕಿದ ಮೇಲೆ ನಾಮಿನಿ ಮಾಡ್ತೀವಿ ಅಂತ ಹೇಳುತ್ತಿದ್ದು ಇದಕ್ಕೆ ನಾನು ಸೊಪ್ಪು ಹಾಕಲ್ಲ ಎಂದರು.

ಕೋಮುಲ್ ಕಣದಲ್ಲಿ 29 ಅಭ್ಯರ್ಥಿಗಳು

ಕೋಲಾರ ಹಾಲು ಒಕ್ಕೂಟದ ಚುನಾವಣೆ ಬುಧವಾರ ನಡೆಯುತ್ತಿದ್ದು ಬಂಗಾರಪೇಟೆ ಶಾಸಕ ಎಸ್ನೆನ್ ನಾರಾಯಣಸ್ವಾಮಿ ಸೇರಿದಂತೆ 29 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕೆಜಿಎಫ್‌ನಲ್ಲಿ ಜಯಸಿಂಹಕೃಷ್ಣಪ್ಪ ವಿರುದ್ಧ ಲಕ್ಷ್ಮಪ್ಪ ಸ್ಪರ್ಧೆ ಮಾಡಿದ್ದಾರೆ. ಕೋಲಾರ ಉತ್ತರ ಮಹಿಳಾ ಕ್ಷೇತ್ರದಲ್ಲಿ ರೇಣುಕಾ ಅವರನ್ನು ಕಾಂಗ್ರೆಸ್ ಬೆಂಬಲಿಸಿದ್ದರೆ ಮಹಾಲಕ್ಷ್ಮಿ ಅವರನ್ನು ಸಚಿವ ಕೆ.ಎಚ್.ಮುನಿಯಪ್ಪ ನಿಲ್ಲಿಸಿದ್ದಾರೆ. ಕೋಲಾರ ದಕ್ಷಿಣ ಮಹಿಳಾ ಕ್ಷೇತ್ರದಲ್ಲಿ ಶಾಸಕ ನಂಜೇಗೌಡರ ಅಭ್ಯರ್ಥಿಯಾಗಿ ಕಾಂತಮ್ಮ ಸ್ಪರ್ಧೆ ಮಾಡಿದ್ದು ಶಾಸಕ ನಾರಾಯಣಸ್ವಾಮಿ ಅವರು ಪ್ರತಿಭಾರನ್ನು ಬೆಂಬಲಿಸಿದ್ದಾರೆ. ಮುಳಬಾಗಿಲಿನಲ್ಲಿ ಜೆಡಿಎಸ್ ಅಭ್ಯರ್ಥಿ ಕಾಡೇನಹಳ್ಳೀ ನಾಗರಾಜ್ ವಿರುದ್ಧ ಆಪ್ತ ಸ್ನೇಹಿತ ಕಲ್ಲುಪಲ್ಲಿ ಪ್ರಕಾಶ್ ತೊಡೆತಟ್ಟಿದ್ದಾರೆ.

IN THE COURT OF THE CIVIL JUDGE AND J.M.F.C. AT KORATAGERE
C.Mis No: 163/2025
PETITIONERS:-
1.Venkatamma W/o Late **Chikkathimmaiah**, 85 years,
2.**Chikkellamma** W/o Late Naganna, a/a 83 years, Both are r/o Kadilapura, Koratagere Taluk.
V/s
RESPONDENT:-
The Tahasildar, The Registar of Birth & death, Koratagere taluk.
PUBLIC NOTIFICATION
Whereas the petitioners have filed the above petition to obtain the death certificate of the petitioner's Aunty by name Lakshmamma W/o Venkataravanappa @ Motappaiah died on 10-12-1981 at Kadilapura, Holavanahalli Hobli, Koratagere Taluk. It is hereby notify that whoever has interest or objection to obtain the death certificate of the petitioners Aunty may appear in person or through your advocate on:- 2-8-2025 in the above case. Failing which the matter will be herd written mined in your absence.
By the Order of Court
SHIRASTEDAR
THE CIVIL JUDGE AND J.M.F.C. COURT AT KORATAGERE
Advocate for petitioner,
Narasimharaju, Koratagere.

IN THE COURT OF THE CIVIL JUDGE AND J.M.F.C. AT KORATAGERE
C.Mis No: 162/2025
PETITIONERS:-
1.Venkatamma W/o Late **Chikkathimmaiah**, 85 years,
2.**Chikkellamma** W/o Late Naganna, a/a 83 years, Both are r/o Kadilapura, Koratagere Taluk.
V/s
RESPONDENT:-
The Tahasildar, The Registar of Birth & death, Koratagere taluk.
PUBLIC NOTIFICATION
Whereas the petitioners have filed the above petition to obtain the death certificate of the petitioner's mother by name Kenjigamma W/o Venkataravanappa @ Motappaiah died on 05- 10-1940 at Kadilapura, Holavanahalli Hobli, Koratagere Taluk. It is hereby notify that whoever has interest or objection to obtain the death certificate of the petitioners Mother, may appear in person or through your advocate on:- 2-8-2025 in the above case. Failing which the matter will be herd written mined in your absence.
By the Order of Court
SHIRASTEDAR
THE CIVIL JUDGE AND J.M.F.C. COURT AT KORATAGERE
Advocate for petitioner,
Narasimharaju, Koratagere.

ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ : ಆರೋಪ

ತುಮಕೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಹಗರಣವೇ ಇನ್ನೂ ತಣ್ಣಗಾಗಿಲ್ಲ. ಆದರೆ ಜಿಲ್ಲೆಯಲ್ಲಿ ಮತ್ತೊಂದು ಹಗರಣ ಬಯಲಿಗೆ ಬಂದಿದೆ. ಜಿಲ್ಲೆಯ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲೂ ಭ್ರಷ್ಟಾಚಾರ ನಡೆದಿದ್ದು ಹಗರಣವನ್ನು ಫಲಾನುಭವಿಗಳು ಸಾಕ್ಷಿ ಸಮೇತ ಬಿಚ್ಚಿಟ್ಟಿದ್ದಾರೆ. ಪಾವಗಡ ತಾಲೂಕಿನ 6 ಹಾಗೂ ಶಿರಾ ತಾಲೂಕಿನ 6 ಮಂದಿ ಬಡ ಫಲಾನುಭವಿಗಳ 24 ಲಕ್ಷ ಸಬ್ಸಿಡಿ ಜೊತೆಗೆ ಸಾಲದ ಹಣವನ್ನೂ ನುಂಗಿ ನೀರು ಕುಡಿದಿದ್ದಾರೆ ಎಂದು ತಾಲೂಕು ಅಭಿವೃದ್ಧಿ ಅಧಿಕಾರಿ(ಹೊರಗುತ್ತಿಗೆ ನೌಕರ) ನಾಗೇಂದ್ರ ಹಾಗೂ ಇವರಿಗೆ ಸಾಥ್ ನೀಡಿರುವ ಅಂದಿನ ಜಿಲ್ಲಾ ವ್ಯವಸ್ಥಾಪಕ ಶ್ರೀಧರ್ ವಿರುದ್ಧ ಆರೋಪ ಕೇಳಿಬಂದಿದೆ. ಪ್ರಕರಣವೇನು ? ಅಧಿಕಾರಿಗಳು ಬ್ರೋಕರ್‌ಗಳ ಮೂಲಕ ಫಲಾನುಭವಿಗಳ ದಾಖಲೆಗಳನ್ನು ಪಡೆದು 2019–20 ರಲ್ಲಿ ಫಲಾನುಭವಿಗಳ ಹೆಸರಲ್ಲಿ ನಕಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಗಳಲ್ಲಿ ಫಲಾನುಭವಿಗಳ ನಕಲಿ ಫೋನ್ ನಂ, ನಕಲಿ ಸಹಿ ಮಾಡಿದ್ದಾರೆ. 12 ಜನರಿಗೆ ಸಾಲ ಮಂಜೂರು ಮಾಡಿದ್ದು 12 ಜನರ ಒಟ್ಟು 24 ಲಕ್ಷ ರೂ. ಬ್ಯಾಂಕ್ ಆಫ್ ಮಹಾರಾಷ್ಟ್ರ ಕೋಲಾರ ಶಾಖೆಗೆ ವರ್ಗಾವಣೆಯಾಗಿದೆ. ಆದರೆ ಸಾಲ ಮಂಜೂರಾಗಿಲ್ಲ ಅಂದುಕೊಂಡು ಫಲಾನುಭವಿಗಳು ಮತ್ತೆ ಅರ್ಜಿ ಸಲ್ಲಿಸಲು ಬಂದಾಗ ಹಗರಣ ಬೆಳಕಿಗೆ ಬಂದಿದೆ. ಫಲಾನುಭವಿಗಳ ಹೆಸರಲ್ಲಿ ನಕಲಿ ಖಾತೆ ತೆರೆದು ಹಣ ನುಂಗಿ ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ. ಭ್ರಷ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಅಪರಾಧಗಳ ತಡೆಗೆ ಇಲಾಖೆ ಜತೆ ಕೈ ಜೋಡಿಸಿ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ನಡೆಯುವ ಅಪರಾಧ ಕೃತ್ಯಗಳನ್ನು ನಿಯಂತ್ರಿಸಲು ಪೊಲೀಸ್ ಇಲಾಖೆಯೊಟ್ಟಿಗೆ ಆಟೋಚಾಲಕರು ಕೂಡ ಕೈಜೋಡಿಸಿದಲ್ಲಿ ನೆರವಾಗಲಿದೆ.ಆಟೋಚಾಲಕರು ಸಂಚಾರಿ ನಿಯಮಗಳನ್ನು ಪಾಲಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಆಟೋ ಚಾಲಕರ ಮತ್ತು ಮಾಲಿಕರ ಸಂಘದ ವತಿಯಿಂದ ನಡೆದ ಸೌಲಭ್ಯಗಳ ವಿತರಣೆ ಹಾಗೂ ಆಟೋಚಾಲಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯ ಆಟೋಚಾಲಕರು ಸಂಚಾರಿನಿಯಮಗಳನ್ನು ಪಾಲಿಸುತ್ತಾ ವಾಹನ ನಿಲ್ದಾಣಗಳನ್ನು ಕೂಡ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದ್ದಕ್ಕೆ ಇಲಾಖೆ ವತಿಯಿಂದ ಅಭಿನಂದಿಸುತ್ತೇನೆ ಎಂದರು.

ಆಟೋ ಚಾಲಕರ ಸಂಘದಿಂದ ಚಾಲಕರಿಗೆ ಗುರುತಿನ ಚೀಟಿ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆ.ಚಾಲಕರ ಹಿಂಭಾಗದ ಸೀಟಿನಲ್ಲಿ ಚಾಲಕರ ಪೋಟೋ ಮಾಹಿತಿಯುಳ್ಳ ಕಾರ್ಡನ್ನು ಪ್ರಯಾಣಿಕರಿಗೆ ಕಾಣುವಂತೆ ಹಾಕಬೇಕು ಎಂದರು.

ನಿಮ್ಮಂತೆ ಮಕ್ಕಳನ್ನೂ ಆಟೋ ಡ್ರೈವರ್‌ಗಳಾಗಿ ಮಾಡುವ ಬದಲು ಉತ್ತಮ ಶಿಕ್ಷಣ ನೀಡಿ ಉಜ್ವಲ ಭವಿಷ್ಯ ರೂಪಿಸಿ.ಉನ್ನತ ಹುದ್ದೆಗಳನ್ನು ಅಲಂಕರಿಸುವಸಂತೆ ನೋಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಕೆ.ವಿ. ಮತ್ತು ಪಂಚಗಿರಿ ಶಿಕ್ಷಣ ದತ್ತಿಗಳ ಅಧ್ಯಕ್ಷ ಕೆ.ವಿ.ನವೀನ್‌ಕಿರಣ್ ಮಾತನಾಡಿ, ನಿಮ್ಮ ವಾಹನಗಳಿಗೆ ವಿಮೆಯಿರಲೇಬೇಕು.ನೀವು ವಾಹನ ಚಾಲನಾ ಪರವಾನಗಿ ಪಡೆಯಲೇಬೇಕು. ನಿಮ್ಮ ಸಂಘದೊಟ್ಟಿಗೆ ಸದಾ ನಾನಿರುತ್ತೇನೆ ಎಂದು ಅಭಯ ನೀಡಿದರು. ಕಾರ್ಯಕ್ರಮದಲ್ಲಿ ಗುರುತಿನ ಚೀಟಿ, ವಿಮಾ ಸೌಲಭ್ಯ,ಪ್ರತಿಭಾ ಪುರಸ್ಕಾರ ಮಾಡಲಾಯಿತು.

ಡಾ.ಮಧುಕರ್,ಆಟೋ ಚಾಲಕರ ಜಂಟಿ ಕ್ರಿಯಾ ಸಮಿತಿ ರಾಜ್ಯಾಧ್ಯಕ್ಷ ಕೆ.ವಿ.ಸುರೇಶ್‌ಕುಮಾರ್,ಜಿಲ್ಲಾ ಕಾರ್ಮಿಕ ಅಧಿಕಾರಿ ಶಬಾನ ಅಜ್ಮಿ , ಸಮಾಜ ಸೇವಕ ಹೋಟೆಲ್ ರಾಮಣ್ಣ, ಹಿರಿಯ ಆಟೋ ಮೆಕ್ಯಾನಿಕ್ ನಜೀರ್, ಜಿಲ್ಲಾ ಆಟೋ ಚಾಲಕರ ಸಂಘದ ಜಿಲ್ಲಾಧ್ಯಕ್ಷ ಎನ್.ಬಾಲಕೃಷ್ಣ,ಗೌರವಾಧ್ಯಕ್ಷ ಡಾಂಬು ಶ್ರೀನಿವಾಸ್, ತಾಲೂಕು ಅಧ್ಯಕ್ಷ ಕೃಷ್ಣಪ್ಪ,ಉಪಾಧ್ಯಕ್ಷ ಲಕ್ಷ್ಮಿನಾರಾಯಣ,ಎಂ.ಮುನಿರಾಜು,ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಕಲೀಲ್ ಇದ್ದರು.

ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ಮಾತನಾಡಿದರು.

ಸಮಾಚಾರ ಸಣ್ಣದಲ್ಲ

ದೇವರಬಸವಪ್ಪ ವಿವಿಧ ಪೂಜಾ ಕಾರ್ಯ

ಮದ್ದೂರು: ಪಟ್ಟಣದ ಚನ್ನೇಗೌಡ ಬಡಾವಣೆಯ ಶ್ರೀ ಮಹದೇಶ್ವರಸ್ವಾಮಿ ಹಾಗೂ ನಂದಿ ನಾಗಲಿಂಗೇಶ್ವರ ದೇವಾಲಯದ ದೇವರಬಸವಪ್ಪ ಅನಾರೋಗ್ಯದಿಂದ ಮೃತ ಪಟ್ಟಿದ್ದ ಹಿನ್ನೆಲೆಯಲ್ಲಿ ಶ್ರೀ ಮಹದೇಶ್ವರಸ್ವಾಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿವಿಧ ಪೂಜಾ ಕಾರ್ಯಕ್ರಮಗಳನ್ನು ಆಯೋಜಿಸಿರುವುದಾಗಿ ಅಧ್ಯಕ್ಷ ಸತೀಶ್ ತಿಳಿಸಿದ್ದಾರೆ. ಜೂನ್ 23ರ ಸೋಮವಾರದಂದು ದೇವಾಲಯದ ಆವರಣದಲ್ಲಿ ಹೋಮ, ಹವನ, ಅಲಂಕಾರ, ಅಭಿಷೇಕ ಇನ್ನಿತರ ಪೂಜಾ ಕಾರ್ಯಕ್ರಮಗಳು ನೆರವೇರಿದ್ದು ಅಪಾರ ಸಂಖ್ಯೆಯ ಭಕ್ತಾದಿಗಳು ಪೂಜಾ ವಿಧಿ ವಿಧಾನದಲ್ಲಿ ಪಾಲ್ಗೊಂಡು ಧನ್ಯತೆ ಮೆರೆದರು. ಜೂನ್ 24ರ ಮಂಗಳವಾರದಂದು ಬೆಳಿಗ್ಗೆ 7 ಗಂಟೆಗೆ ಶ್ರೀ ಬಸವೇಶ್ವರ ಸ್ವಾಮಿ ಅವರಿಗೆ ಮತ್ತು ಮಹದೇಶ್ವರ ವಿಗ್ರಹ ಮೂರ್ತಿಗೆ ರುದ್ರಾಭಿಷೇಕ, ಮಹಾಮಂಗಳಾರತಿ ನೆರವೇರಿದ ಬಳಿಕ ಮೃತ ಬಸವಪ್ಪನಿಗೆ 10.30 ರಿಂದ 12 ಗಂಟೆಯೊಳಗೆ ಹಾಲುತುಪ್ಪ ಮತ್ತು ವಿವಿಧ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ. ಕಳೆದ ಹಲವು ವರ್ಷಗಳಿಂದಲೂ ದೇವಾಲಯದಲ್ಲಿ ಭಕ್ತರ ಬೇಡಿಕೆಗಳನ್ನು ಈಡೇರಿಸುವ ಜತೆಗೆ ಸುತ್ತಮುತ್ತಲಿನ ಗ್ರಾಮಗಳ ಗೃಹಪ್ರವೇಶ, ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ತನ್ನದೇ ಆದ ಹಿರಿಮೆಯನ್ನು ಬಸವಪ್ಪ ಹೊಂದಿತ್ತು. ಮೃತ ಬಸವಪ್ಪನನ್ನು ತಾಲೂಕಿನ ವೈದ್ಯನಾಥಪುರ ಹೆಬ್ಬಾಗಿಲಿನ ರಸ್ತೆಯಲ್ಲಿ ಶಾಸ್ತ್ರೋಕ್ತವಾಗಿ ಅಂತ್ಯಕ್ರಿಯೆ ನಡೆಸಲಾಗಿತ್ತು.

ಗ್ರಾಪಂ ಅಧ್ಯಕ್ಷರಾಗಿ ನಾಗರತ್ನಮ್ಮ ಆಯ್ಕೆ

ತಿ.ನರಸೀಪುರ: ತಾಲೂಕಿನ ಕಿರಗಸೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ನಾಗರತ್ನಮ್ಮ ಅವಿರೋಧವಾಗಿ ಆಯ್ಕೆಯಾದರು. ನಿಕಟಪೂರ್ವ ಅಧ್ಯಕ್ಷ ಸಿ.ನಿಂಗರಾಜು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಿಗದಿಯಾಗಿತ್ತು. ಪರಿಶಿಷ್ಟ ಜಾತಿಯ ಸಾಮಾನ್ಯ ವರ್ಗಕ್ಕೆ ಮೀಸಲಿದ್ದ ಅಧ್ಯಕ್ಷಗಾದಿಗೆ ನಾಗರತ್ನಮ್ಮ ಮಾತ್ರ ತಮ್ಮ ಉಮೇದುವಾರಿಕೆ ಸಲ್ಲಿಸಿದ ಕಾರಣ ಅಧ್ಯಕ್ಷರಾಗಿ ಆಯ್ಕೆಗೊಂಡರು. ಚುನಾವಣಾಧಿಕಾರಿಯಾಗಿ ನೀರಾವರಿ ಇಲಾಖೆಯ ಎಇಇ ಎಸ್.ಮಂಜುನಾಥ್ ಅವರು ಕಾರ್ಯ ನಿರ್ವಹಿಸಿದರು. ಉಪಾಧ್ಯಕ್ಷೆ ಚಿನ್ನತಾಯಮ್ಮ, ಮಾಜಿ ಅಧ್ಯಕ್ಷ ಸಿ.ನಿಂಗರಾಜು, ಚಂದ್ರಮ್ಮ, ನಾಗರಾಜು, ಜ್ಯೋತಿ, ಗಿರಿಜಮ್ಮ, ಎಂ.ಮಹೇಶ್, ರಾಜೇಶ್ವರಿ, ಮಂಗಳಮ್ಮ, ಪಿ.ನಾಗರಾಜು, ಸರೋಜಮ್ಮ, ಮಹದೇವ ಸ್ವಾಮಿ, ಆರ್. ಗಿರೀಶ್, ಕಾಮಿನಿ ಚುನಾವಣೆ ಪ್ರಕ್ರಿಯೆ ಯಲ್ಲಿ ಭಾಗವಹಿಸಿದರು. ನೂತನ ಅಧ್ಯಕ್ಷೆ ನಾಗರತ್ನಮ್ಮ ಮಾತನಾಡಿದರು. ಮುಖಂಡರಾದ ತಿ. ನರಸೀಪುರ ಪ್ಯಾಕ್ಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಮುಖಂಡರಾದ ಮನ್ನೆಹುಂಡಿ ಪರ ಶಿವ, ಗುತ್ತಿಗೆದಾರ ಮಂಟೇಲಿಂಗಪ್ಪ, ಡಿ.ಆರ್. ಮೂರ್ತಿ, ಹುಣಸೂರು ರವಿ, ಪ್ರಕಾಶ್, ಡಣಾಯಕನಪುರ ಸೋಮಣ್ಣ, ಕಿರಗಸೂರು ರಾಜೀವ್, ಆರ್.ಮಹದೇವ್, ವೆಂಕಟೇಶ್, ಏಳುಮಲೈ ಮಂಜು, ಮನ್ನೆಹುಂಡಿ ಮಹೇಶ್, ಆರ್.ಮಲ್ಲೇಶ್, ಶಿವರುದ್ರೇಗೌಡ, ಕೃಷ್ಣ ಗಾಂಧಿ ಇದ್ದರು.

ಕೆಂಪೇಗೌಡ ಜಯಂತಿ ಜೂನ್ 27ರಂದು

ಚಾಮರಾಜನಗರ: ನವಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಇದೇ ತಿಂಗಳ 27ರಂದು ನಗರದಲ್ಲಿ ಅದ್ದೂರಿಯಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಕೇಂದ್ರದಲ್ಲಿ ಶ್ರೀ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಚರಿಸುವ ಸಂಬಂಧ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರ ಅಧ್ಯಕ್ಷತೆಯಲ್ಲಿ ಸಮುದಾಯದ ಮುಖಂಡರು, ಪ್ರತಿನಿಧಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಸಹಕಾರ ಸಂಘದಿಂದ ವಾಹನ ಸಾಲ ವಿತರಣೆ

ಚಾಮರಾಜನಗರ: ತಾಲೂಕಿನ ಪುಣಜನೂರು ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ದ್ವಿಚಕ್ರ ವಾಹನ ಸಾಲ ವಿತರಿಸಲಾಯಿತು. ಸಂಘದ ಕಚೇರಿಯಲ್ಲಿ ಆರ್. ಮಣಿನಾಯಕ್ ಫಲಾನುಭವಿಗಳಾದ ಮೂಕನಪಾಳ್ಯ ಸಾಗರನಾಯಕ್ , ಪುಣಜನೂರು ಮಲ್ಲಪ್ಪ ಅವರಿಗೆ ತಲಾ 1.50 ಲಕ್ಷ ರೂ.ವೆಚ್ಚದ ದ್ವಿಚಕ್ರ ವಾಹನಗಳನ್ನು ಸಾಲದ ರೂಪದಲ್ಲಿ ವಿತರಿಸಿ ಮಾತನಾಡಿದ ಅವರು, ಕೃಷಿ ಸಾಲದ ಜೊತೆಗೆ ವಾಹನ ಸಾಲವನ್ನು ಸಂಘದ ವತಿಯಿಂದ ವಿತರಿಸಲಾಗುತ್ತಿದೆ. ಫಲಾನುಭವಿಗಳು ಸಕಾಲದಲ್ಲಿ ಸಾಲ ಮರು ಪಾವತಿಸುವ ಮೂಲಕ ಸಂಘದ ಅಭಿವೃದ್ಧಿ, ಸಂಘದ ಇತರ ಸದಸ್ಯರಿಗೂ ನಿಮ್ಮಂತೆಯೇ ಸಾಲಸೌಲಭ್ಯ ನೀಡಲು ಸಹಕರಿಸಬೇಕು ಎಂದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಉಮಾಶಂಕರ್, ನಿರ್ದೇಶಕರಾದ ಮುತ್ತು ನಾಯಕ್ ಗುರುನಾಯಕ್, ಹೆಚ್.ಮೂರ್ತಿ, ಪಿ.ಗಣೇಶ್ ನಾಯಕ್, ನಾಗಭೂಷನ್, ಜಯಭಾಯಿ, ಭಾಗ್ಯಮ್ಮ, ಮೋಹನ್ ನಾಯಕ್, ಬಂಗಾರಶೆಟ್ಟಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್. ಜಯಶಂಕರ ಸ್ವಾಮಿ, ಕ್ಯಾಷಿಯರ್ ಮಾದೇಶ್, ಕಿರಿಯ ಸಹಾಯಕ ಚಂದ್ರುನಾಯಕ್, ಪಿಗ್ನಿ ಏಜೆಂಟ್ ಚಂದ್ರು, ಹಾಜರಿದ್ದರು.

{ ಎಚ್.ವಿಶ್ವನಾಥ್ } ಎಂಎಲ್‌ಸಿ

ರಾಜ್ಯದ ಯುವ ಶಕ್ತಿಯನ್ನು ಸಿದ್ದರಾಮಯ್ಯ ಹಾಳು ಮಾಡುತ್ತಿದ್ದಾರೆ. ಮದ್ಯದ ಬೆಲೆ ಏರಿಕೆ ಮಾಡಿದ ಮಾತ್ರಕ್ಕೆ ಕುಡಿಯುವವರು ಕಡಿಮೆಯಾಗಿಲ್ಲ. ಯುವಕರು ಗಾಂಜಾ ಅಫೀಮು ಮೊರೆ ಹೋಗುತ್ತಿದ್ದಾರೆ. ಈ ಚಟ ಯುವಕರನ್ನು ಬಲಿ ತೆಗೆದುಕೊಳ್ಳುತ್ತಿದೆ. ಸಿಗರೇಟು ಸೇದುತ್ತಿದ್ದವರು ಗಾಂಜಾ ಹೊಡೆಯುತ್ತಿದ್ದಾರೆ. ಎಣ್ಣೆ ರೇಟ್ ಜಾಸ್ತಿ ಮಾಡಿದ್ದು ಕುಡಿಯೋರು ಕಡಿಮೆ ಆಗಲಿ ಅಂತ ನಿಜ. ಆದರೆ ರಾಜ್ಯದಲ್ಲಿ ಆಗ್ತಾ ಇರೋದೇನು ..?



121.80 ಅಡಿಗೆ ತಲುಪಿದ ನೀರಿನ ಮಟ್ಟ | ನದಿಗೆ 5 ಸಾವಿರ ಕ್ಯೂಸೆಕ್ ಬಿಡುಗಡೆ

ಭಾಗಶಃ ತುಂಬಿದ ಕೆಆರ್‌ಎಸ್

ಶ್ರೀರಂಗಪಟ್ಟಣ: ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕವಾಗಿ ಸುರಿಯುತ್ತಿರುವ ಮಳೆಯಿಂದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೆ.ಆರ್.ಎಸ್. ಅಣೆಕಟ್ಟೆ ಭಾಗಶಃ ಭರ್ತಿಯಾಗಿದ್ದು, ಒಳ ಹರಿವು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದ್ದು ಡ್ಯಾಂನಿಂದ ನದಿಗೆ ಸೋಮವಾರ ಸಂಜೆಯಿಂದ ನೀರು ಬಿಡಲಾಗಿದೆ.

ಕೆ.ಆರ್.ಸಾಗರ ಅಣೆಕಟ್ಟೆ ನೀರಿನ ಮಟ್ಟ 121.80 ಅಡಿಗೆ ತಲುಪಿದ್ದು, 13,856 ಸಾವಿರ ಕ್ಯುಸೆಕ್ ಒಳಹರಿವು ಇದ್ದು, ಹೆಚ್ಚಿನ ಒಳಹರಿವು ಬರುವ ಸೂಚನೆಯಲ್ಲಿ ಕೃಷ್ಣರಾಜಸಾಗರ ಅಣೆಕಟ್ಟೆಯಿಂದ 2 ಗೇಟುಗಳ ಮೂಲಕ 5 ಸಾವಿರ ಕ್ಯುಸೆಕ್ ನೀರನ್ನು ನದಿ ಹರಿಸಲಾಗಿದೆ.

ಕಾವೇರಿ ಜಲಾಯನ ಪ್ರದೇಶಗಳಲ್ಲಿ ಮಳೆಯಾಗುತ್ತಿರುವ ಕಾರಣ ಅಣೆಕಟ್ಟೆಯ ಭದ್ರತಾ ದೃಷ್ಟಿಯಿಂದ ಕೆ.ಆರ್.ಸಾಗರ ಅಣೆಕಟ್ಟೆಯ ಒಳಹರಿವಿನ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದ್ದು ಸುರಕ್ಷತೆ ದೃಷ್ಟಿಯಿಂದ ಅಣೆಕಟ್ಟೆಯಿಂದ 5 ಸಾವಿರ ಕ್ಯುಸೆಕ್ ನೀರು ಹೊರ ಬಿಡಲಾಗಿದೆ.

ಪ್ರಸ್ತುತ ಅಣೆಕಟ್ಟೆಯಿಂದ ನದಿಗೆ ಮತ್ತು ನಾಲೆಗಳಿಗೆ ಸೇರಿ ಹೊರಹರಿವು 6000 ಸಾವಿರ ಕ್ಯುಸೆಕ್ ಇದ್ದು, 43.298 ಟಿ.ಎಂ.ಸಿ ನೀರಿನ ಸಂಗ್ರಹವಿದೆ. ಕಳೆದ ವರ್ಷ ಇದೇ ದಿನ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 87.62 ಅಡಿ, ಒಳಹರಿವು 1214 ಕ್ಯುಸೆಕ್, ಹೊರಹರಿವು 983 ಕ್ಯೂಸೆಕ್ ದಾಖಲಾಗಿತ್ತು.

ಕೆ.ಆರ್.ಎಸ್. ಅಣೆಕಟ್ಟೆಯಿಂದ ಕಾವೇರಿ ನದಿಗೆ ನೀರು ಬಿಟ್ಟಿರುವುದು.

ನದಿಪಾತ್ರದ ಜನತೆಗೆ ಸೂಚನೆ

ನದಿಗೆ ನೀರು ಬಿಟ್ಟಿರುವ ಹಿನ್ನಲೆಯಲ್ಲಿ ನದಿಪಾತ್ರದ ಜನತೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚನೆ ನೀಡಿದ್ದು, ತಮ್ಮ ಬೆಲೆ ಬಾಳುವ ವಸ್ತುಗಳು ಹಾಗೂ ಜಾನುವಾರುಗಳನ್ನು ರಕ್ಷಿಸಿಕೊಳ್ಳುವಂತೆ ಶ್ರೀರಂಗಪಟ್ಟಣ ತಾಲೂಕು ಆಡಳಿತ ರೈತರಿಗೆ, ನದಿ ಪಾತ್ರದ ಗ್ರಾಮಗಳ ಗ್ರಾಮಸ್ಥರಿಗೆ ಸೂಚನೆ ನೀಡಿದೆ.

ಒಳ ಮೀಸಲು ಸಮೀಕ್ಷಾ ವರದಿ ತ್ವರಿತವಾಗಿ ಸಲ್ಲಿಸಿ

ಚಾಮರಾಜನಗರ: ಒಳಮೀಸಲಾತಿ ಸಮೀಕ್ಷಾ ವರದಿಯನ್ನು ಆಯೋಗವು ತ್ವರಿತ ಸರಕಾರಕ್ಕೆ ಸಲ್ಲಿಸಿ ತಕ್ಷಣವೇ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಜಿಲ್ಲಾ ಡಾ.ಬಾಬು ಜಗಜೀವನರಾಂ ಸಂಘಗಳ ಒಕ್ಕೂಟ ಅಧ್ಯಕ್ಷ ಎಂ.ಶಿವಮೂರ್ತಿ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಕಳೆದ 30 ವರ್ಷಗಳಿಂದ ಒಳಮೀಸಲಾತಿಗಾಗಿ ನಡೆದ ಹೋರಾಟವನ್ನು ಪರಿಗಣಿಸಿ ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿತ್ತು. ಅಲ್ಲದೆ ಸೂಕ್ತ ದತ್ತಾಂಶಗಳ ಸಹಾಯದಿಂದ ಒಳಮೀಸಲಾತಿ ಜಾರಿ ಮಾಡುವಂತೆಯೂ ತೀರ್ಪಿನಲ್ಲಿ ಉಲ್ಲೇಖಿಸಿತು ಎಂದರು.

ನ್ಯಾಯಮೂರ್ತಿ ನಾಗಮೋಹನದಾಸ್ ರವರ ಏಕ ಸದಸ್ಯ ಆಯೋಗವನ್ನು ನೇಮಿಸಿ 2 ತಿಂಗಳ ಕಾಲಾವಕಾಶ ನೀಡಿತ್ತು. ಸದರಿ, ಆಯೋಗವು 2025 ಮೇ 5 ರಂದು ಹೊಸ ತಂತ್ರಾಜ್ಞಾನ ಸಹಾಯದಿಂದ ಜಿ.ಪಿ.ಎಸ್. ಬಳಸಿ ವೈಜ್ಞಾನಿಕವಾಗಿ ಕೆಲಸ ಆರಂಭಿಸಿದ ಆಯೋಗವು ಈಗಾಗಲೇ 3 ಬಾರಿ ಅವಧಿಯನ್ನು ವಿಸ್ತರಣೆ ಮಾಡಿದೆ ಎಂದರು.

2011 ರ ಜನಗಣತಿಯ ಆಧಾರದಲ್ಲಿ ಆಯಾಯಾ ಜಿಲ್ಲೆಗಳಲ್ಲಿ ಜನಗಣತಿಯನ್ನು ನಡೆಸಿದೆ. ಸಮೀಕ್ಷೆಯಲ್ಲಿ ಕೆಲವು ಜಿಲ್ಲೆಗಳಲ್ಲಿ ನೂರರಷ್ಟು ಮಾಹಿತಿಯನ್ನು ಒದಗಿಸಿದ್ದಾರೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ನೂರರಷ್ಟು ಸಮೀಕ್ಷೆಯನ್ನು ನಡೆಸಲು ಸಾಧ್ಯವಾಗಿಲ್ಲ. ಶೇಕಡ ರಾಜ್ಯದಲ್ಲಿ 91-92 ರಷ್ಟು ಸಮೀಕ್ಷೆ ಮುಗಿದಿದೆ ಎಂದು ಹೇಳುತ್ತಿದೆ. ಇದುವರೆಗೆ 1,06,28.325 ಜನರು ಸಮೀಕ್ಷೆಯಲ್ಲಿ ಭಾಗಿಯಾಗಿದ್ದಾರೆ. ಆದರೆ ಬೆಂಗಳೂರಿನ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸುಮಾರು ಶೇಕಡ 50 ರಷ್ಟು ಜನರು ಮಾತ್ರ ಸಮೀಕ್ಷೆಯಲ್ಲಿ ಭಾಗಿಯಾಗಿದ್ದು, ಇನ್ನೂ ಉಳಿದದವರು ಸಮೀಕ್ಷೆಯಲ್ಲಿ ಪಾಲುಗೊಳ್ಳುತ್ತಿದ್ದಾರೆ. ಆಯೋಗದ ವರದಿಯನ್ನು ತ್ವರಿತವಾಗಿ ಸರ್ಕಾರಕ್ಕೆ ಸಲ್ಲಿಸಿ ಒಳ ಮೀಸಲಾತಿಯನ್ನು ಜಾರಿ ಮಾಡಬೇಕೆಂದು ಶಿವಮೂರ್ತಿ ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ರಾಜಶೇಖರ ಬಸವನಪುರ, ಬಾಲರಾಜು, ಸಂಘದ ಅಧ್ಯಕ್ಷ ಕೆಸ್ತೂರು ಮರಪ್ಪ ಇದ್ದರು.

ಡೆಂಘೀ ತಡೆಗೆ ಸೊಳ್ಳೆಗಳ ಲಾರ್ವಾ ಸರ್ವೇ

ಮಂಡ್ಯ: ಸೊಳ್ಳೆಗಳ ಕಡಿತದಿಂದ ಹರಡುವ ಡೆಂಗ್ಯೂ, ಮಲೇರಿಯಾ, ಚಿಕನ್ ಗುನ್ಯಾದ ಸಾಂಕ್ರಾಮಿಕತೆ ತಡೆಗಟ್ಟಲು ಲಾರ್ವಾ ಸರ್ವೇ ತಂಡದಿಂದ ಲಾರ್ವಾ ಸರ್ವೇ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಡಿಸಿ ಕಚೇರಿಯಲ್ಲಿ ನಡೆದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈಡೀಸ್ ಲಾರ್ವಾ ಸಮೀಕ್ಷೆಯಲ್ಲಿ ಕಂಡು ಬಂದಲ್ಲಿ ತಕ್ಷಣ ಅವುಗಳ ಉತ್ಪತ್ತಿಯಾಗದಂತೆ ತಡೆಗಟ್ಟಲಾಗುವುದು. ಕಟ್ಟಡ ನಿರ್ಮಿಸುವ ಪ್ರದೇಶಗಳಲ್ಲಿ, ಗ್ಯಾರೇಜ್ ಗಳಲ್ಲಿ, ದನ - ಕರು ಸಾಕಾಣಿಕೆ ಪ್ರದೇಶ, ಗುಜರಿ, ಎಳನೀರು ಮಾರುವ ಸ್ಥಳ, ನೀರಿನ ತೊಟ್ಟಿಗಳು ಹಾಗೂ ನೀರು ನಿಲುಗಡೆಯಾಗುವ ಪ್ರದೇಶಗಳಲ್ಲಿ ಡೆಂಗಿ ಜ್ವರವನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಲಾರ್ವಾ ಸರ್ವೇ ನಡೆಸಲು ಸಾರ್ವಜನಿಕರು ಸಹಕರಿಸದಿದ್ದಲ್ಲಿ ಹಾಗೂ ಸರ್ವೇಯ ನಂತರ ತಮ್ಮ ಸುತ್ತ ಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆಯನ್ನು ಕಾಪಡದಿದ್ದಲ್ಲಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ 2025 ರ ಜನವರಿ ಮಾಹೆಯಿಂದ ಇಲ್ಲಿಯವರೆಗೆ 17 ಡೆಂಗ್ಯೂ ಪ್ರಕರಣಗಳು, 4 ಚಿಕನ್ ಗುನ್ಯಾ ಪ್ರಕರಣಗಳು ವರದಿಯಾಗಿರುತ್ತದೆ. ಮುನ್ನಚ್ಚರಿಕೆ ವಹಿಸುವಂತೆ ಸಲಹೆ

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿದರು.

ನೀಡಿದರು. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಡಿಪೋಗಳಲ್ಲಿ ನಿರುಪಯುಕ್ತ ಟೈರ್ ಗಳು ಹಾಗೂ ಹಳೆ ಯಂತ್ರೋಪಕರಣಗಳಿದ್ದಲ್ಲಿ ತೆರವುಗೊಳಿಸಿ ಎಂದು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಡಿಎಚ್‌ಒ ಡಾ.ಕೆ.ಮೋಹನ್, ಮಲೇರಿಯಾ ನಿಯಂತ್ರಣ ಅಧಿಕಾರಿ ಡಾ.ಕಾಂತರಾಜು, ನಿವೃತ್ತ ಡಿ.ಹೆಚ್.ಒ ಡಾ.ಮರಿಗೌಡ, ಏಡ್ಸ್ ನಿಯಂತ್ರಣ ಅಧಿಕಾರಿ ಡಾ.ಆಶಾಲತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾಮೂರ್ತಿ, ಕಾರ್ಯಪಾಲಕ ಅಭಿಯಂತರ ಹರ್ಷ ಉಪಸ್ಥಿತರಿದ್ದರು.

ಸಾಮಾಜಿಕ ಸೇವೆಗೆ ರೋಟರಿ ಸದಾ ಮುಂದು

ಪಿರಿಯಾಪಟ್ಟಣ: ರೋಟರಿ ಸಂಸ್ಥೆಯು ಜಗತ್ತಿನಾದ್ಯಂತ ನೊಂದವರ ಪರ ನಿಲ್ಲುವ ಮೂಲಕ ಸೇವಾ ಕಾರ್ಯದಲ್ಲಿ ಸದಾ ಮುಂದಿದೆ ಎಂದು ರೋಟರಿ ಸಂಸ್ಥೆ ಜಿಲ್ಲಾ ಗೌರ್ನರ್ ವಿಕ್ರಂ ದತ್ ತಿಳಿಸಿದರು.

ಪಟ್ಟಣದ ರೋಟರಿ ಭವನದಲ್ಲಿ ನವೀಕರಣಗೊಂಡ ಹಾಗೂ ಎರಡನೆ ಅಂತಸ್ತಿನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು.

ರೋಟರಿ ಸಂಸ್ಥೆಯು ಅನೇಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ, ಅದು ಶಿಕ್ಷಣ, ಆರೋಗ್ಯ, ಪರಿಸರ, ವಿಪತ್ತು ನಿರ್ವಹಣೆ, ಬಡತನ ನಿರ್ಮೂಲನೆ, ಮತ್ತಿತರ ಸೇವೆಗಳ ಒಳಗೊಂಡಿದೆ. ರೋಟರಿ ಸಂಸ್ಥೆಯು ಲಕ್ಷಾಂತರ ಜನರ ಜೀವನದಲ್ಲಿ ಸಕಾರಾತ್ಮಕ ಪರಿಣಾಮ ಬೀರಿದೆ. ಪೋಲಿಯೋ ನಿರ್ಮೂಲನೆಗಾಗಿ ರೋಟರಿ ಸಂಸ್ಥೆ ನಡೆಸಿದ ಅಭಿಯಾನ ಜಾಗತಿಕವಾಗಿ ಗಮನ ಸೆಳೆದಿದೆ ಎಂದರು.

ರೋಟರಿಯ ಕಾರ್ಯಕ್ಕೆ ಸಹಕಾರ ನೀಡಿದವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ರೋಟರಿ ಕ್ಲಬ್ ಅಧ್ಯಕ್ಷ ಎಂ.ಎಂ. ರಾಜೇಗೌಡ ಮಾತನಾಡಿ ದಾನಿಗಳು, ಉದ್ಯಮಿಗಳು ಹಾಗೂ ಸಂಸ್ಥೆಯ ಸದಸ್ಯರ ಸಹಕಾರದಿಂದ ರೋಟರಿ ಭವನದ ಮುಂದುವರಿದ ಭಾಗವಾಗಿ ಎರಡನೆ ಮಹಡಿ ಕಟ್ಟಡ ಹಾಗೂ ಭವನವನ್ನು ನವೀಕರಿಸಲಾಗಿದೆ ಈ ಮಹತ್ ಕಾರ್ಯಕ್ಕೆ ಸಹಕಾರ ನೀಡಿದವರಿಗೆ ಸನ್ಮಾನಿಸಿ ಗೌರವಿಸುವ ಕೆಲಸವನ್ನು ಮುಂದೆ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ನಿತೀಶ್ ಬಾಳಿಗ, ಅಸಿಸ್ಟೆಂಟ್ ಗೌರ್ನರ್ ಆನಂದ್, ಜಿಲ್ಲಾ ಪದಾಧಿಕಾರಿ ಶಿವಪ್ರಸಾದ್, ಜಡ್.ಎಲ್. ತಿರುಮಲಾಪಕರ ರಾಜೇಗೌಡ, ಸಂಸ್ಥೆಯ ಪದಾಧಿಕಾರಿಗಳಾದ ಡಾ.ಪ್ರಕಾಶ್ ಬಾಬು ರಾವ್, ಜಗನ್ ಗೌಡ, ಚೇತನ್, ಎಂ.ಪಿ.ರಾಜು, ಬಸವೇಗೌಡ, ಸತ್ಯನಾರಾಯಣ್, ಚಂದ್ರು, ವಿನಯ್ ಶೇಖರ್, ರವಿಶಂಕರ್, ಅಪೂರ್ವ ಮೋಹನ್ ಉಪಸ್ಥಿತರಿದ್ದರು.

ಗುತ್ತಿಗೆದಾರರ ಸಂಘದಲ್ಲಿ ಸಂವಿಧಾನ ಪೀಠಿಕೆ ಅನಾವರಣ

ಚಾಮರಾಜನಗರ: ಸಂವಿಧಾನ ಪೀಠಿಕೆಯು ಸಂವಿಧಾನದ ಒಂದು ಪರಿಚಯಾತ್ಮಕ ಭಾಗವಾಗಿದೆ. ಇದು ಸಂವಿಧಾನದ ಮೂಲಭೂತ ತತ್ವಗಳು ಮತ್ತು ಆದರ್ಶಗಳನ್ನು ತಿಳಿಸುತ್ತದೆ ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್ ಹೇಳಿದರು.

ನಗರದ ಕೆಇಬಿ ಕಚೇರಿಯ ಸಮೀಪದಲ್ಲಿರುವ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸಂಘದ ಜಿಲ್ಲಾ ಸಮಿತಿ ಕಚೇರಿಯಲ್ಲಿ ಅಳವಡಿಸಿರುವ ಸಂವಿಧಾನ ಪೀಠಿಕೆ ಅನಾವರಣಗೊಳಿಸಿ ಮಾತನಾಡಿದರು. ರಾಜ್ಯದಲ್ಲಿ ಚಾಮರಾಜನಗರ ಜಿಲ್ಲಾ ಸಮಿತಿ ಸಂವಿಧಾನ ಪೀಠಿಕೆಯನ್ನು ಮೊಟ್ಟಮೊದಲ ಬಾರಿಗೆ ಅಳವಡಿಸಿರುವುದು ತುಂಬಾ ಖುಷಿ ತಂದಿದ್ದು, ರಾಜ್ಯ ಸಮಿತಿ ಕಚೇರಿ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲಾ ಸಮಿತಿ ಕಚೇರಿಯಲ್ಲೂ ಅಳವಡಿಸಲಾಗುವುದು ಎಂದರು.

ಸರಕಾರದ ಅನುಮತಿ ಪಡೆದು ಇಲಾಖೆಯ ಅಧಿಕಾರಿಗಳು. ಗ್ರಾಹಕರೊಂದಿಗೆ ಕೆಲಸ ಮಾಡುತ್ತೇವೆ. ಇಲಾಖೆಯ ನೌಕರರು ನಮ್ಮ ಸಂಬಂಧ ಸಹೋದರರ



ಚಾಮರಾಜನಗರದ ವಿದ್ಯುತ್ ಗುತ್ತಿಗೆದಾರರ ಸಂಘದ ಜಿಲ್ಲಾ ಕಚೇರಿಯಲ್ಲಿ ಸಂವಿಧಾನ ಪೀಠಿಕೆಯನ್ನು ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್ ಅನಾವರಣಗೊಳಿಸಿದರು.

ರೀತಿಯಲ್ಲಿರಬೇಕು. ವಿಶೇಷವಾಗಿ ಚಾಮುಂಡೇಶ್ವರಿ ಕಂಪನಿ ಗುತ್ತಿಗೆದಾರರಿಗೆ ಕೆಲಸ ಕೊಟ್ಟಿದೆ. ಅಧಿಕಾರಿಗಳ ಜೊತೆ ಉತ್ತಮ ನಂಟು ಇಟ್ಟುಕೊಳ್ಳಬೇಕು ಎಂದರು.

ಚೆಸ್ಕಾಂ ಕಾರ್ಯಪಾಲಕ ಅಭಿಯಂತರಾದ ಪ್ರದೀಪ್ ಕುಮಾರ್, ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧ್ಯಕ್ಷ ಜಿ.ಎಂ.ಸುರೇಶ್ ಮಾತನಾಡಿದರು. ಎಇಇ ಮಹೇಶ್, ಸುರೇಶ್, ಧ್ರುಪದ್, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಮಹಮ್ಮದ್ ತಸ್ಮಿನ್, ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾನುಪ್ರಕಾಶ್ .ಎಸ್., ಉಪಾಧ್ಯಕ್ಷರಾದ ಅನ್ಸರ್‌ಅಲಿಖಾನ್, ನಾಗೇಂದ್ರ, ಜಿಲ್ಲಾ ಖಜಾಂಚಿ ಎಂ. ಎನ್. ಸಂಪತ್‌ಕುಮಾರ್ ಇದ್ದರು.

ದೋಣಿ ದರ ಹೆಚ್ಚಳಕ್ಕೆ ಮನವಿ

ಚಾಮರಾಜನಗರ: ಹೊಗೆನಕಲ್ ಫಾಲ್ಸ್ ಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗುವ ದೋಣಿ ದರ ಹೆಚ್ಚಿಸುವಂತೆ ಒತ್ತಾಯಿಸಿ ತೆಪ್ಪ ನಡೆಸುವವರ ಸಂಘದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮೂಲಕ

ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಹೊಗೆನಕಲ್ ಫಾಲ್ಸ್ ಒಳಗಡೆ ಪ್ರವಾಸಿಗರನ್ನು ದೋಣಿಯಲ್ಲಿ ಕರೆದುಕೊಂಡು ಹೋಗಿ ಫಾಲ್ಸ್ ತೋರಿಸಿ ಕರೆದುಕೊಂಡು ಬರಲು ಒಂದು ದೋಣಿಗೆ ನಿಗದಿಪಡಿಸಿರುವ 800 ರೂ.ಮೊತ್ತದಲ್ಲಿ ಪರಿಸರ ಸಮಿತಿಗೆ ರೂ 150 ರೂ. ಮತ್ತು ನಿರ್ವಹಣಾ ಶುಲ್ಕ 50 ರೂ. ಒಟ್ಟು 200 ರೂ. ಕಳೆದು ಒಂದು ತೆಪ್ಪಕ್ಕೆ ನಮಗೆ ದೊರೆಯುವುದು 600 ರೂ.

ಮಾತ್ರ. ಇದರಲ್ಲಿ ಸರಾಸರಿ ಕೂಲಿ ದೊರೆಯುವುದಿಲ್ಲ. ಇದೇ ಪಕ್ಕದ ತಮಿಳುನಾಡು ಕಡೆ ಒಂದು ತೆಪ್ಪದ ಪ್ರವೇಶ ಶುಲ್ಕ ರೂ 1500.ರೂ.ನಿಗದಿಯಾಗಿದೆ. ನಮಗೂ 1200 ರೂ. ಮೊತ್ತವನ್ನು ನಿಗದಿ ಮಾಡುವಂತೆ ಸಂಘದ ಅಧ್ಯಕ್ಷ ರತ್ನವೇಲು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಕೆ.ಪಳನಿಸ್ವಾಮಿ, ಉಪಾಧ್ಯಕ್ಷ ಪೆರುಮಾಳ್, ಖಜಾಂಚಿ ಮುರುಗನ್, ಸಹ ಕಾರ್ಯದರ್ಶಿ ಎಂ.ಪೆರುಮಾಳ್, ಪಳನಿಸ್ವಾಮಿ ಹಾಜರಿದ್ದರು.

ಸಚಿವರಿಂದ ಜನಸ್ಪಂದನ

ಕೆ.ಆರ್.ಪೇಟೆ: ಸಾರ್ವಜನಿಕರ ಎಲ್ಲಾ ಸಮಸ್ಯೆ ಪರಿಹರಿಸಲು ಜಿಲ್ಲಾಡಳಿತದಿಂದ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಕೆ.ಆರ್.ಪೇಟೆಯಲ್ಲಿ ಆಯೋಜಿಸಲಾಗಿದ್ದ ಜನಸ್ಪಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಅಭಿವೃದ್ಧಿ ಕೆಲಸಗಳು ನಿರಂತರ ಮಾಡಬೇಕು. ಜಿಲ್ಲೆಯಲ್ಲಿ ಮೈ ಶುಗರ್ ಸಕ್ಕರೆ ಕಾರ್ಖಾನೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಹಾಗೂ ಹೊಸ ಕೃಷಿ ವಿಶ್ವವಿದ್ಯಾನಿಲಯವನ್ನು ಸಹ ಪ್ರಾರಂಭಿಸಲಾಗುತ್ತಿದೆ ಎಂದರು. ಕಳೆದ ಎರಡು ವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚಿನ ಕಂದಾಯ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಇ ಖಾತೆ, ಇ ಸ್ವತ್ತು, ಬಿ ಸ್ವತು ಗಳ ನಿಯಮಾವಳಿಗಳನ್ನು ಸಳಿಕರಣಗೊಳಿಸಲು ಚಿಂತನೆ ನಡೆಸಿದೆ ಶೀಘ್ರದಲ್ಲಿ ಸಾರ್ವಜನಿಕರ ಸಮಸ್ಯೆಯನ್ನು ಪರಿಹರಿಸಲು ಹೊಸ ನಿಯಮಾವಳಿಗಳನ್ನು ಜಾರಿಗೆ ತರಲಾಗುವುದು ಎಂದರು.

ಶಾಸಕ ಎಚ್.ಟಿ. ಮಂಜು ಮಾತನಾಡಿ, ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಸಚಿವರು ಲೋಕಾರ್ಪಣೆ ಮಾಡಿದ್ದಾರೆಂದು ಸಂತಸ ವ್ಯಕ್ತಪಡಿಸಿದರು. 'ಎಸ್.ಎಸ್. ಎಲ್.ಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ 3 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಂದಾಯ ಇಲಾಖೆ ವತಿಯಿಂದ ಫಲಾನುಭವಿಗಳಿಗೆ ಪೌತಿ ಖಾತೆ ಪತ್ರ, ದರಖಾಸ್ತು ಪತ್ರ ವಿತರಿಸಲಾಯಿತು. ಮೈಷುಗರ್ ಅಧ್ಯಕ್ಷ ಸಿ.ಡಿ ಗಂಗಾಧರ್, ಜಿಲ್ಲಾಧಿಕಾರಿ ಡಾ ಕುಮಾರ, ಜಿಪಂ ಸಿಇಒ ಕೆ ಆರ್ ನಂದಿನಿ, ಎಎಸ್‌ಪಿ ತಿಮ್ಮಯ್ಯ, ಮಾಜಿ ಶಾಸಕರಾದ ಚಂದ್ರಶೇಖರ್, ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ ಎಲ್ ದೇವರಾಜು ಆರ್‌ಟಿಒ ಅಧಿಕಾರಿ ಮಲ್ಲಿಕಾರ್ಜುನ್, ಪುರಸಭೆ ಅಧ್ಯಕ್ಷೆ ಪಂಕಜ ಪ್ರಕಾಶ್, ಉಪವಿಭಾಗಾಧಿಕಾರಿ ಶ್ರೀನಿವಾಸ್ ಇದ್ದರು.

ಅಂಬೇಡ್ಕರ್ ಭವನ ಕಾಮಗಾರಿಗೆ ಗುದ್ದಲಿ ಪೂಜೆ

ಮದ್ದೂರು: ಪ್ರತಿಭಟನೆ ಪ್ರತಿಯೊಬ್ಬರ ಹಕ್ಕಾಗಿದ್ದು ಅಭಿವೃದ್ಧಿ ವಿಚಾರದಲ್ಲಿ ಪರ ವಿರೋಧ ಚರ್ಚೆಗಳು ಸರ್ವಸಾಮಾನ್ಯವಾಗಿದೆ ಎಂದು ಶಾಸಕ ಕೆ.ಎಂ.ಉದಯ ತಿಳಿಸಿದರು.

ತಾಲೂಕಿನ ಅರುವನಹಳ್ಳಿ ಗ್ರಾಮದಲ್ಲಿ 35 ಲಕ್ಷ ರೂ ವೆಚ್ಚದಲ್ಲಿ ಅಂಗನವಾಡಿ ಕೇಂದ್ರ ಮತ್ತು ಅಂಬೇಡ್ಕರ್ ಭವನ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

ತಾಲೂಕಿನ ಚಾಮನಹಳ್ಳಿ ಗೆಜ್ಜಲಗೆರೆ ಸೋಮನಹಳ್ಳಿ ಹಾಗೂ ಗೊರವನಹಳ್ಳಿ ಗ್ರಾಮ ಪಂಚಾಯಿತಿ ಗಳನ್ನು ನಗರಸಭೆಯನ್ನಾಗಿಸುವ ಸಂಬಂಧ ಕೆಲ ಸಾರ್ವಜನಿಕರು ಪ್ರತಿಭಟನೆ ನಡೆಸಲು ಮುಂದಾಗಿರುವ ಜೊತೆಗೆ ಆಕ್ಷೇಪಣಾ ಪತ್ರ ಸಲ್ಲಿಸಲು ಮುಂದಾಗಿರುವ ಬಗ್ಗೆ ಪ್ರತಿಕ್ರಿಯಿಸಿ, 50 ಮಂದಿ ಬೇಡವೆಂದರೆ ಐದು ಸಾವಿರ ಮಂದಿ ಬೇಕು ಎನ್ನುವ ಜನರಿದ್ದಾರೆ. ಈ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು,

ಶಾಸಕರಾದವರು ಸಂಬಂಧಿಸಿದ ಸಚಿವರು ಅಧಿಕಾರಿಗಳನ್ನು ಸಂಪರ್ಕಿಸಿ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಲು ಮುಂದಾಗ ಬೇಕೆ ಹೊರತು ಕೇವಲ ಪತ್ರ ವ್ಯವಹಾರ ನಡೆಸಿದರೆ

ಅರುವನಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಶಾಸಕ ಕೆಎಂ ಉದಯ್ ಗುದ್ದಲಿ ಪೂಜೆ ನೆರವೇರಿಸಿದರು.

ಆಗುತ್ತದೆಯೇ ಎಂದು ಪ್ರಶ್ನಿಸಿದರು.

ತಾಲೂಕಿನ ಕೆಲ ಗ್ರಾಮಗಳಲ್ಲಿ ಅಪೂರ್ಣಗೊಂಡಿರುವ ಅಂಬೇಡ್ಕರ್ ಭವನ ಕಾಮಗಾರಿಗಳನ್ನು ಪೂರ್ಣಗೊಳಿಸಲು ಈಗಾಗಲೇ ಅಗತ್ಯ ಕ್ರಮ ವಹಿಸಿದ್ದು ಹಾಗೂ ಮೂಲ ಸೌಲಭ್ಯ ಕಲ್ಪಿಸಲಾಗುವುದು. ಅಗತ್ಯವಿರುವ ಗ್ರಾಮಗಳಲ್ಲಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಿ ಸ್ಥಳೀಯರು ಮದುವೆ ಸಭೆ ಸಮಾರಂಭಗಳು ನಡೆಸಲು ಹೆಚ್ಚಿನ ಸೌಲಭ್ಯ ಒದಗಿಸುತ್ತಿರುವುದಾಗಿ ಹೇಳಿದರು. ಈ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮನ್ ಮುಲ್ ನಿರ್ದೇಶಕ ಹರೀಶ್ ಬಾಬು, ಗ್ರಾ ಪಂ ಅಧ್ಯಕ್ಷ ಕೆಂಪರಾಜು, ಸದಸ್ಯ ಜಯರಾಮು, ಮುಖಂಡರಾದ ಅರುವನಳ್ಳಿ ಸಿದ್ದರಾಜು, ನಾಗರಾಜು, ಕರಿ ಸಿದ್ದರಾಜು, ಅರೆತಿಪ್ಪೂರು ಮನು, ಸಂತೋ?, ಗಿರೀಶ್, ಅನಂತರಾಜು, ಕೀರ್ತಿರಾಜ್, ಸುರೇಶ್ ಇದ್ದರು.

ಕೊಡವಲ್ಯಾಂಡ್ ರಕ್ಷಣೆ ಕೊಡವರ ಹೊಣೆ

ಪೊನ್ನಂಪೇಟೆಯಲ್ಲಿ ಆರನೇ ಜನಜಾಗೃತಿ ಮಾನವ ಸರಪಳಿ

ಮಡಿಕೇರಿ: ಪುಣ್ಯಭೂಮಿ ಕೊಡವಲ್ಯಾಂಡ್ ನ ರಕ್ಷಣೆ ಆದಿಮಸಂಜಾತ ಏಕ- ಜನಾಂಗೀಯ ಕೊಡವ ಸಮುದಾಯದ ಹೊಣೆಯಾಗಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರತಿಪಾದಿಸಿದ್ದಾರೆ.

ಸಿಎನ್‌ಸಿ ವತಿಯಿಂದ ಪೊನ್ನಂಪೇಟೆಯಲ್ಲಿ ನಡೆದ 6ನೇ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ರಾಷ್ಟ್ರೀಯ ಜನಗಣತಿಯೊಂದಿಗೆ ಜಾತಿವಾರು ಸಮೀಕ್ಷೆಗೆ ಆದಿಮ ಸಂಜಾತ ಕೊಡವರಿಗೆ ಪ್ರತ್ಯೇಕ ಕೋಡ್ ಮತ್ತು ಕಲಂ ಅಳವಡಿಸಬೇಕು. ಹೀಗೆ ಮಾಡುವುದರಿಂದ ಮಾತ್ರ ಕೊಡವರ ಹಾಗೂ ಕೊಡವಲ್ಯಾಂಡ್‌ನ ರಕ್ಷಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು. ಕೊಡವಲ್ಯಾಂಡ್ ನ್ನು ಸಂರಕ್ಷಿಸಲು ಸಮಸ್ತ ಕೊಡವರು ಜಾಗೃತರಾಗಬೇಕು ಮತ್ತು ಸಂವಿಧಾನದತ್ತವಾದ ಹಕ್ಕುಗಳ ಪರ ಸಂಘಟಿತರಾಗಬೇಕು. ಕೊಡವರಿಗೆ ಪ್ರತ್ಯೇಕ ಕೋಡ್ ಮತ್ತು ಕಲಮ್ ಅಳವಡಿಸಬೇಕು. ಲೋಕಸಭಾ ಮತ್ತು ವಿಧಾನಸಭಾ

ಸಿಎನ್‌ಸಿ ವತಿಯಿಂದ ಪೊನ್ನಂಪೇಟೆಯಲ್ಲಿ ನಡೆದ 6ನೇ ಜನಜಾಗೃತಿ ಮಾನವ ಸರಪಳಿ .

ಕ್ಷೇತ್ರ ಪುನರ್ ವಿಂಗಡಣೆಗೆ ಮಾನದಂಡವಾಗಲಿದೆ. ಇದನ್ನು ಕೊಡವರು ಸೂಕ್ಷ್ಮವಾಗಿ ಅವಲೋಕಿಸಬೇಕು ಮತ್ತು ಈ ಬೇಡಿಕೆಗೆ ಒತ್ತು ನೀಡಬೇಕೆಂದು ಕರೆ ನೀಡಿದರು.

ಪ್ರತಿ ಗ್ರಾಮಗಳಲ್ಲಿ ಇಂದು ಹತ್ತು-ಹದಿನೈದು ರೆಸಾರ್ಟ್‌ಗಳು ಎಗ್ಗಿಲ್ಲದೆ ತಲೆ ಎತ್ತಿವೆ. ಜಿಲ್ಲಾಡಳಿತ ನಿರಂತರವಾಗಿ ಈ ಪ್ರದೇಶವನ್ನು ನಗರೀಕರಣ ಮಾಡಲು ಹೊರಗಿನ ಹೂಡಿಕೆದಾರರನ್ನು ಆಕರ್ಷಿಸುವ ಕೆಲಸ ಮಾಡಿದೆ ಎಂದು ಆರೋಪಿಸಿದರು.

ಚೇಂದೀರ ಶೀಲಾ, ರೇಖಾ ನಾಚಪ್ಪ, ಮತ್ರಂಡ ರಾಣಿ ರಾಜೇಂದ್ರ, ಕಿಗ್ಗತ್ತನಾಡು ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷರಾದ ಕಾಟಿಮಾಡ ಜಿಮ್ಮಿ ಅಣ್ಣಯ್ಯ, ಬೊಟ್ಟಂಗಡ ಗಿರೀಶ್, ಅಪ್ಪೆಯಂಗಡ ಮಾಲೆ, ಅಜ್ಜಿಕುಟ್ಟಿರ ಲೋಕೇಶ್, ಕಿರಿಯಮಾಡ ಶೆರಿನ್, ಕಾಂಡೇರ ಸುರೇಶ್, ಚೊಟ್ಟೆಯಂಡಮಾಡ ಉದಯ, ಮಾಣಿರ ಸಂಪತ್, ಆಲೆಮಾಡ ರೋಷನ್, ಚೇಂದಿರ ಅಪ್ಪಯ್ಯ, ಚೆಕ್ಕೇರ ರಾಜೇಶ್, ಮುದ್ದಿಯಾಡ ಕಿರಣ್, ಚೆಕ್ಕೇರ ರಾಜೇಶ್, ಮುಕ್ಕಾಟಿರ ಅರುಣ್, ಗಂಡಂಗಡ ಉಮೇಶ್, ಮತ್ರಂಡ ರಾಜೇಂದ್ರ, ಮತ್ರಂಡ ಜಯ, ನೆರೆಯಂಡ ಸುಬ್ರಮಣಿ, ಪಾಲ್ಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಏಕಾಏಕಿ ಹೊತ್ತಿ ಉರಿದ ಕಾರು

ರಾಯಚೂರು: ನಡುರಸ್ತೆಯಲ್ಲಿ ಏಕಾಏಕಿ ಬೆಂಕಿ ಹೊತ್ತಿಕೊಂಡು ಕಾರು ಸುಟ್ಟು ಕರಕಲಾಗಿರುವ ಘಟನೆ ರಾಯಚೂರಿನ ದೇವದುರ್ಗ ತಾಲೂಕಿನ ಗಬ್ಬೂರಿನಲ್ಲಿ ನಡೆದಿದೆ. ಕಾರು ಚಾಲಕ ದಯಾನಂದ್ ಪಾಟೀಲ್ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹಿರೆಬೂದೂರಿನಿಂದ ರಾಯಚೂರಿಗೆ ಡಸ್ಟರ್ ಕಾರಿನಲ್ಲಿ ಹೊರಟಿದ್ದರು. ಈ ವೇಳೆ ಬೆಂಕಿ ಹೊತ್ತಿಕೊಂಡಿದ್ದು, ಕಾರಿನಲ್ಲಿ ಯಾರೂ ಇಲ್ಲದ ಹಿನ್ನೆಲೆ ಭಾರೀ ಅನಾಹುತವೊಂದು ತಪ್ಪಿದೆ. ಮಾರ್ಗಮಧ್ಯೆ ಗಬ್ಬೂರಿನಲ್ಲಿ ಎಳೆನೀರು ಕುಡಿಯಲು ಕಾರಿನಿಂದ ಇಳಿದಿದ್ದರು. ಈ ವೇಳೆ ನೋಡನೋಡುತ್ತಲೇ ಎಂಜಿನ್‌ನಿಂದ ದಟ್ಟ ಹೊಗೆ ಆವರಿಸಿ, ಬಳಿಕ ಬೆಂಕಿ ಹೊತ್ತಿಕೊಂಡಿದೆ. ಬೆಂಕಿಯಿಂದಾಗಿ ಹೆದ್ದಾರಿಯಲ್ಲಿ ದಟ್ಟ ಹೊಗೆ ಆವರಿಸಿತ್ತು. ಕೂಡಲೇ ಅಗ್ನಿಶಾಮಕ ದಳ ಸ್ಥಳಕ್ಕೆ ದೌಡಾಯಿಸಿ, ಬೆಂಕಿ ನಂದಿಸಿದ್ದಾರೆ. ಗಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಮಹಾದೇವಪ್ಪ ಕಡೇಚೂರ್ ವಿಧಿವಶ

ಕಲಬುರಗಿ: ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟಗಾರ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಬಿಜೆಪಿಯ ಹಿರಿಯ ಮುಖಂಡರಾದ ಮಹಾದೇವಪ್ಪ ಕಡೇಚೂರ್ ಮಂಗಳವಾರ ಮುಂಜಾನೆ ಕಲಬುರಗಿಯ ಜಗತ್ ನ ಸ್ವಗೃಹದಲ್ಲಿ ವಿಧಿವಶರಾಗಿದ್ದಾರೆ. 95 ವರ್ಷದ ಮಹಾದೇವಪ್ಪ ಕಡೇಚೂರ್ ಅವರು ಕೆಲದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮಂಗಳವಾರ ಬೆಳಗ್ಗೆ ಅಸುನಿಗಿದ್ದಾರೆ. ಐದು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಪುತ್ರಿಯನ್ನು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಸಾಯಂಕಾಲ 5 ಗಂಟೆಗೆ ಕಲಬುರಗಿ ನಗರದ ವೀರೇಶ್ ನಗರದ ಸ್ವಂತ ಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

45 ಕಡೆಗಳಲ್ಲಿ ಏಕಕಾಲಕ್ಕೆ ಲೋಕಾಯುಕ್ತ ಅಧಿಕಾರಿಗಳ ದಾಳಿ | ಅಪಾರ ಪ್ರಮಾಣ ಆಸ್ತಿ ಪತ್ತೆ | ಆಯಾ ಜಿಲ್ಲಾ ಠಾಣೆಗಳಲ್ಲಿ ಕೇಸ್ ದಾಖಲು

ಎಂಟು ಭ್ರಷ್ಟ ಸರಕಾರಿ ಅಧಿಕಾರಿಗಳಿಗೆ ಲೋಕಾ ಶಾಕ್

ಬೆಂಗಳೂರು: ಆದಾಯಕ್ಕಿಂತ ಮೀರಿ ಆಸ್ತಿ ಸಂಪಾದನೆ ಆರೋಪದಡಿ ರಾಜ್ಯದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 8 ಮಂದಿ ಸರಕಾರಿ ಅಧಿಕಾರಿ ಮನೆ-ಕಚೇರಿ ಹಾಗೂ ಸಂಬಂಧಿಕರ ಮನೆಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಅಪಾರ ಪ್ರಮಾಣ ಆಸ್ತಿ ಪತ್ತೆ ಹಚ್ಚಿದ್ದಾರೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕಲಬುರಗಿ, ಧಾರವಾಡ, ಹಾಸನ, ಗದಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 8 ಮಂದಿ ಸರಕಾರಿ ಅಧಿಕಾರಿಗಳ ಮನೆ ಸೇರಿದಂತೆ 45 ಕಡೆಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿ ಜಮೀನು, ಚಿನ್ನಾಭರಣ, ನಗದು ಸೇರಿದಂತೆ ಒಟ್ಟು 34.90 ಕೋಟಿ ಲಕ್ಷ ಮೌಲ್ಯದ ಅಸಮತೋಲನ ಆಸ್ತಿ ಪತ್ತೆ ಹಚ್ಚಿದ್ದಾರೆ. ದಾಳಿಗೊಳಗಾದ ಎಂಟು ಮಂದಿ ವಿರುದ್ಧ ಆಯಾ ಜಿಲ್ಲಾ ಠಾಣೆಗಳಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯಿದೆಯಡಿ ಪ್ರಕರಣ ದಾಖಲಿಸಲಾಗಿದೆ.

8 ಮಂದಿ ಸರಕಾರಿ ಅಧಿಕಾರಿ ಮನೆ-ಕಚೇರಿ ಹಾಗೂ ಸಂಬಂಧಿಕರ ಮನೆಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು.

ಬೆಂಗಳೂರಿನ ಗೋವಿಂದರಾಜ ನಗರ ಬಿಬಿಎಂಪಿ ಅಧಿಕಾರಿ ಕೆ.ಎಸ್.ಪ್ರಕಾಶ್‌ಗೆ ಸಂಬಂಧಿಸಿದ 6 ಕಡೆಗಳಲ್ಲಿ ಶೋಧ ಕಾರ್ಯ, 3 ನಿವೇಶನಗಳು, 2 ವಾಸದ ಮನೆ, 1 ಎಕರೆ ಕೃಷಿ ಜಮೀನು, 42 ಸಾವಿರ ನಗದು ಪತ್ತೆ, 43 ಲಕ್ಷದ ಮೌಲ್ಯದ ಚಿನ್ನಾಭರಣ, 15.70 ಬೆಲೆಯ ವಾಹನಗಳು, 88.20 ಲಕ್ಷ ಬೆಲೆಬಾಳುವ ವಸ್ತುಗಳು ಪತ್ತೆ ಒಟ್ಟು 5,70 ಕೋಟಿ ಆಸ್ತಿ ಪತ್ತೆ ಮಾಡಲಾಗಿದೆ. ಆನೇಕಲ್‌ನ ಪುರಸಭೆ ಮುಖ್ಯಾಧಿಕಾರಿ ಕೆ.ಜಿ.ಅಮರನಾಥ್ ಸೇರಿದ ಒಟ್ಟು ಮೂರು ಕಡೆಗಳಲ್ಲಿ ದಾಳಿ ನಡೆಸಲಾಗಿದ್ದು, ಆರೋಪಿತ ಅಧಿಕಾರಿಯಿಂದ 2 ನಿವೇಶನಗಳು, 1 ವಾಸದ ಮನೆ, 14.75 ಲಕ್ಷ ನಗದು, 40 ಲಕ್ಷದ ಮೌಲ್ಯದ ಚಿನ್ನ, 38 ಲಕ್ಷ ಮೌಲ್ಯದ ವಾಹನಗಳು, 12 ಲಕ್ಷದ ಬೆಲೆಯ ಇತರೆ ವಸ್ತುಗಳು ಸೇರಿದಂತೆ ಒಟ್ಟು 3.85 ಕೋಟಿ ಆಸ್ತಿ ಪತ್ತೆಯಾಗಿದೆ.

ಕಲಬುರಗಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ.ಇ ಮಲ್ಲಿಕಾರ್ಜುನ ಅಲ್ಲಿಪುರುಗೆ ಸೇರಿದ ಒಟ್ಟು 4 ಕಡೆಗಳಲ್ಲಿ ದಾಳಿ ಮಾಡಲಾಗಿದ್ದು, ಆರೋಪಿತನ ಬಳಿ 1 ನಿವೇಶನ, 3 ವಾಸದ ಮನೆಗಳು, 4 ಎಕರೆ ಕೃಷಿ ಜಮೀನು, 2.80 ಲಕ್ಷ ರು.ನಗದು, ಬ್ಯಾಂಕ್ ಖಾತೆಯಲ್ಲಿ 64.75 ಲಕ್ಷ ಪತ್ತೆ, 1 ಕೋಟಿ ಮೌಲ್ಯದ ಚಿನ್ನಾಭರಣ, 35 ಲಕ್ಷ ಮೌಲ್ಯದ ವಾಹನಗಳು, 40 ಲಕ್ಷ ಬೆಲೆಬಾಳುವ ಇತರೆ ಗೃಹೋಪಯೋಗಿ ವಸ್ತುಗಳು ಸೇರಿದಂತೆ ಒಟ್ಟು 6.32 ಕೋಟಿ ಆಸ್ತಿ ಪತ್ತೆ ಹಚ್ಚಲಾಗಿದೆ.

ಕಲಬುರಗಿ ಜಿಪಂ ಸಣ್ಣೂರು ಗ್ರಾಮ ಪಂಚಾಯಿತಿಯ ಪಿಡಿಒ ರಾಮಚಂದ್ರ ಮಸರಕಲ್ ಅವರ 4 ಸ್ಥಳಗಳಲ್ಲಿ ದಾಳಿ ನಡೆಸಲಾಗಿದ್ದು, ರಾಮಚಂದ್ರ ಬಳಿ 3 ನಿವೇಶನಗಳು, 3 ವಾಸದ ಮನೆಗಳು, 35 ಎಕರೆ ಕೃಷಿ ಜಮೀನು, 1 ಲಕ್ಷ ನಗದು, 8.50 ಲಕ್ಷ ಮೌಲ್ಯದ ಚಿನ್ನ, 18 ಲಕ್ಷ ಮೌಲ್ಯದ ವಾಹನಗಳು, 20.95 ಲಕ್ಷ ಮೌಲ್ಯದ ಗೃಹಪಯೋಗಿ ವಸ್ತುಗಳು ಸೇರಿ ಒಟ್ಟು 2.18 ಕೋಟಿ ಆಸ್ತಿ ಇರುವುದು ಬೆಳಕಿಗೆ ಬಂದಿದೆ.

ಧಾರವಾಡದ ಕರ್ನಾಟಕ ನೀರಾವರಿ ನಿಗಮ ನಿಯಮಿತ ಮಲಪ್ರಭಾ ಯೋಜನಾ ವಲಯದ ಮುಖ್ಯ ಅಭಿಯಂತರ ಅಶೋಕ್ ಲಕ್ಷ್ಮಪ್ಪ ವಸನಾಡ್ ಆರೋಪಿತ ಅಧಿಕಾರಿಗೆ ಸೇರಿದ 8 ಕಡೆಗಳಲ್ಲಿ ಶೋಧಕಾರ್ಯ ನಡೆದಿದ್ದು, ಈ ವೇಳೆ 7 ನಿವೇಶನಗಳು, 3 ವಾಸದ ಮನೆಗಳು, 19.03 ಎಕರೆ ಕೃಷಿ ಜಮೀನು, 1.61 ಲಕ್ಷ ನಗದು, 1.74 ಲಕ್ಷ ಬ್ಯಾಂಕ್ ಬ್ಯಾಲೆನ್ಸ್, 96.67 ಲಕ್ಷದ ಚಿನ್ನ, 13.40 ಲಕ್ಷ ಮೌಲ್ಯದ ವಾಹನಗಳು, ಸೇರಿದಂತೆ ಒಟ್ಟು 6.11 ಕೋಟಿ ಮೌಲ್ಯದ ಆಸ್ತಿ ಹೊಂದಿರುವುದು ತಿಳಿದು ಬಂದಿದೆ.

ದಾಳಿ ವೇಳೆ ಕೋಟ್ಯಂತರ ರು. ಪತ್ತೆ

ಚಿಕ್ಕಮಗಳೂರಿನ ನಗರಸಭೆ ಕಾರ್ಯಾಲಯದ ಲೆಕ್ಕಾಧೀಕ್ಷಕಿ ಡಿ.ಬಿ.ಲತಾಮಣಿ ಎಂಬ ಆರೋಪಿಗೆ ಸೇರಿದ 6 ನಿವೇಶನಗಳು, 2 ವಾಸದ ಮನೆಗಳು, 10 ಗುಂಟೆ ಕೃಷಿ ಜಮೀನು, 1.98 ಲಕ್ಷ ನಗದು, 75 ಲಕ್ಷ ಮೌಲ್ಯದ ಮೌಲ್ಯದ ನಿಶ್ಚಿತ ಠೇವಣಿ (ಎಫ್ ಡಿ) 22 ಲಕ್ಷ ಮೌಲ್ಯದ ಚಿನ್ನ, 10 ಲಕ್ಷ ಮೌಲ್ಯದ ವಾಹನಗಳು, 20 ಲಕ್ಷ ಬೆಲೆಯ ಇತರೆ ವಸ್ತುಗಳು ಸೇರಿದಂತೆ ಒಟ್ಟು 2.89 ಕೋಟಿ ಆಸ್ತಿ ಮತ್ತು ಗದಗ ಟೌನ್ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಡಿ.ಬಿ.ಪಾಟೀಲ್‌ಗೆ ಸೇರಿದ ಒಟ್ಟು 8 ಕಡೆಗಳಲ್ಲಿ ದಾಳಿ, 4 ನಿವೇಶನಗಳು, 1 ವಾಸದ ಮನೆ, 4.89 ಲಕ್ಷ ನಗದು, 27 ಲಕ್ಷದ ಮೌಲ್ಯದ ಚಿನ್ನಾಭರಣ, 10 ಲಕ್ಷದ ಮೌಲ್ಯದ ವಾಹನ, 7 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು ಸೇರಿದಂತೆ ಒಟ್ಟು 1.48 ಕೋಟಿ ಆಸ್ತಿ ಪತ್ತೆಯಾಗಿದೆ. ಶಿವಮೊಗ್ಗದ ಕೆ.ಎಸ್.ಎ.ಎಚ್‌ಯು ಎಡಿಆರ್ ಕೋ ಆರ್ಡಿನೇಟರ್ ಡಾ.ಪ್ರದೀಪ್ ಎಂಬ ಆರೋಪಿತ ಸರಕಾರಿ ನೌಕರನಿಗೆ ಸೇರಿದ 6 ಕಡೆಗಳಲ್ಲಿ ದಾಳಿ, ಈ ವೇಳೆ 5 ನಿವೇಶನಗಳು, 1 ವಾಸದ ಮನೆ, 16.7 ಎಕರೆ ಕೃಷಿ ಜಮೀನು, 10 ಸಾವಿರ ನಗರು, 34.75 ಲಕ್ಷದ ಚಿನ್ನ 30 ಲಕ್ಷ ಮೌಲ್ಯದ ವಾಹನಗಳು, 25 ಸಾವಿರ ರು.ವಿದೇಶಿ ಕರೆನ್ಸಿಗಳು, 15.50 ಲಕ್ಷ ಮೌಲ್ಯದ ಮೇಕೆ ಹಾಗೂ ಹಸುಗಳು, 50 ಲಕ್ಷದ ಮೌಲ್ಯದ ಫಾರ್ಮ್ ಹೌಸ್, 29.75 ಲಕ್ಷ ರು. ಬ್ಯಾಂಕ್ ಬ್ಯಾಲೆನ್ಸ್, 28.75 ಲಕ್ಷ ಮೌಲ್ಯದ ಬೆಲೆಬಾಳುವ ವಸ್ತುಗಳು ಸೇರಿ 6.34 ಕೋಟಿ ಆಸ್ತಿ ಪತ್ತೆಯಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಸಮವಸ್ತ್ರ ಇಲ್ಲದಿದ್ದಕ್ಕೆ ಆತ್ಮಹತ್ಯೆ

ಚಿಕ್ಕಮಗಳೂರು: ಶಾಲೆಯ ಸಮವಸ್ತ್ರವಿಲ್ಲವೆಂದು ಮನನೊಂದು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತರೀಕೆರೆ ತಾಲೂಕಿನ ಲಿಂಗದಹಳ್ಳಿ ಸಮೀಪದ ಸಹ್ಯಾದ್ರಿಪುರದಲ್ಲಿ ನಡೆದಿದೆ.

ಸಹ್ಯಾದ್ರಿಪುರದ ನಂದಿತಾ (13) ಆತ್ಮಹತ್ಯೆ ಮಾಡಿಕೊಂಡಿರುವ 8ನೇ ತರಗತಿ ವಿದ್ಯಾರ್ಥಿನಿ. ಸಮವಸ್ತ್ರ ಧರಿಸದ ಬಗ್ಗೆ ವಿದ್ಯಾರ್ಥಿನಿಯನ್ನು ಶಾಲೆಯಲ್ಲಿ ಶಿಕ್ಷಕರು ಪ್ರಶ್ನಿಸಿದ್ದರು ಎನ್ನಲಾಗಿದೆ. ಆ ಬಳಿಕ ಮನೆಗೆ ಬಂದು ಪೋಷಕರ ಬಳಿ ಸಮವಸ್ತ್ರ ಬಗ್ಗೆ ವಿಚಾರಿಸಿದ್ದಕ್ಕೆ 2 ದಿನದಲ್ಲಿ ಸಮವಸ್ತ್ರ ದೊರಕಲಿದೆ ಎಂದು ವಿದ್ಯಾರ್ಥಿನಿ ತಂದೆ ಉತ್ತರಿಸಿದ್ದರು. ಆದರೂ ಸಮವಸ್ತ್ರ ಇಲ್ಲವೆಂದು ಮನನೊಂದು ವಿಷ ಸೇವಿಸಿದ್ದಳು. ಕೂಡಲೇ ಆಸ್ಪತ್ರೆಗೆ ದಾಖಲಿಸಿದರೂ ವಿದ್ಯಾರ್ಥಿನಿ ನಂದಿತಾ ಮೃತಪಟ್ಟಿದ್ದಾಳೆ. ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಗಳಿಗೆ ಒತ್ತಡ ಹೇರಿಲ್ಲ: ಬಿಇಒ

2 ದಿನಗಳ ಹಿಂದಷ್ಟೇ ಸಮವಸ್ತ್ರಗಳ ಶಾಲೆಗಳಿಗೆ ನೀಡಲಾಗಿದೆ. ವಿದ್ಯಾರ್ಥಿಗಳು ಸಮವಸ್ತ್ರ ಹೊಲಿಸಿಕೊಳ್ಳಲು ತಡವಾಗುವುದರಿಂದ ಜುಲೈವರೆಗೂ ಮಕ್ಕಳ ಮೇಲೆ ಯಾವುದೇ ರೀತಿಯ ಒತ್ತಡ ಹೇರುವುದಿಲ್ಲ. ಯಾವ ಕಾರಣಕ್ಕಾಗಿ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿದು ಬಂದಿಲ್ಲ ಎಂದು ಬೀರೂರು ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರುದ್ರಪ್ಪ ತಿಳಿಸಿದ್ದಾರೆ.

ರೀಲ್ಸ್ ಬೇಡ ಎಂದಿದ್ದಕ್ಕೆ ಯುವತಿ ಆತ್ಮಹತ್ಯೆ

ತುಮಕೂರು: ರೀಲ್ಸ್ ಮಾಡಿ ಸ್ಟೇಟಸ್‌ಗೆ ಹಾಕಿರುವುದಕ್ಕೆ ಪ್ರಿಯಕರ ಆಕ್ಷೇಪ ವ್ಯಕ್ತಪಡಿಸಿದನೆಂದು ಪ್ರೇಯಸಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ತುಮಕೂರು ಸಮೀಪದ ಹೊಸಹಳ್ಳಿಯಲ್ಲಿ ನಡೆದಿದೆ. ಇದೇ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆ ನಡೆದಿದೆ ಎನ್ನಲಾಗಿದ್ದು, ಮನನೊಂದು ಯುವತಿ ಚೈತನ್ಯ (22) ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿಸಲಾಗಿದೆ. ತಾಯಿ ಜತೆ ಹೊಸಹಳ್ಳಿಯಲ್ಲಿ ವಾಸವಿದ್ದ ಚೈತನ್ಯ ಫೈನಲ್ ಇಯರ್ ಡಿಗ್ರಿಯಲ್ಲಿ ವ್ಯಾಸಂಗ ಮಾಡುತಿದ್ದಳು. ಮೇಕಪ್ ಆರ್ಟಿಸ್ಟ್ ಕೂಡ ಆಗಿದ್ದ ಚೈತನ್ಯ ಅದೇ ಊರಿನ ಯುವಕ ವಿಜಯ್ ಎಂಬಾತನ ಜತೆ ಪ್ರೀತಿಯಲ್ಲಿದ್ದಳು ಎನ್ನಲಾಗಿದೆ. ಸೋಮವಾರ ಚೈತನ್ಯ ರೀಲ್ಸ್‌ವೊಂದನ್ನು ಸ್ಟೇಟಸ್‌ನಲ್ಲಿ ಅಪ್ಲೋಡ್ ಮಾಡಿದ್ದಳು. ರಾತ್ರಿ ಚೈತನ್ಯ ಮನೆ ಬಳಿಗೆ ಬಂದಿದ್ದ ಯುವಕ ಚೈನತ್ಯ ಜತೆ ಗಲಾಟೆ ಮಾಡಿದ್ದ. ಇದೇ ವಿಚಾರಕ್ಕೆ ಯುವತಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ವಿಜಯ್‌ನನ್ನು ತುಮಕೂರು ಗ್ರಾಮಾಂತರ ಪೊಲೀಸರು ಬಂಧಿಸಿದ್ದು, ವಿಚಾರಣೆ ನಡೆಸುತ್ತಿದ್ದಾರೆ.

Norican Group
Shaping Industry
ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯುಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055.
ಫೋನ್: +91 80 22496701, ಫ್ಯಾಕ್ಸ್: 080-22496750
ಇ-ಮೇಲ್: investor.relations@noricangroup.com www.disagroup.com
CIN No: L85110KA1984PLC006116

ಪ್ರಕಟಣೆ
(ಡೀಸಾ ಇಂಡಿಯಾ ಲಿಮಿಟೆಡ್‌ನ ಸದಸ್ಯರ ಗಮನಕ್ಕೆ)

2024-25ರ ಹಣಕಾಸು ವರ್ಷದ ವಾರ್ಷಿಕ ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ಸದಸ್ಯರಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ನೋಟಿಸ್‌ಗಳು ಮತ್ತು ಇತರ ಶಾಸನಬದ್ಧ ಸಂವಹನಗಳನ್ನು ಕಳುಹಿಸಲು ಅನುವಾಗುವಂತೆ ಮತ್ತು ಕಂಪನಿಗಳ ಕಾಯ್ದೆ-2013ರ ಅನ್ವಯವಾಗುವ ನಿಬಂಧನೆಗಳ ಅನುಸಾರ ಮತ್ತು ಅದರಡಿಯಲ್ಲಿ ರೂಪಿಸಿರುವ ಕಾನೂನುಗಳ ಅನ್ವಯ ಹಾಗೂ ಸೆಬಿ (ಲಿಸ್ಟಿಂಗ್ ಅಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಶರ್ ರಿಕ್ವಯರ್‌ಮೆಂಟ್ಸ್) ನಿಬಂಧನೆಗಳು-2015ರ ಅನ್ವಯ ಮತ್ತು ಕಾಲಕಾಲಕ್ಕೆ ಆಗಿರುವ ತಿದ್ದುಪಡಿಗಳ ಅನ್ವಯ ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (''ಎಂಸಿಎ'') ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (''ಸೆಬಿ'') ಹೊರಡಿಸಿರುವ ಅನ್ವಯವಾಗುವ ಸುತ್ತೋಲೆಗಳ ಅನುಸಾರ, ಡೀಸಾ ಇಂಡಿಯಾ ಲಿಮಿಟೆಡ್ (''ದ ಕಂಪನಿ'')ಯ ಸದಸ್ಯರ ಪೈಕಿ ಇದುವರೆಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿದೇ ಇದ್ದಲ್ಲಿ ಅದನ್ನು ಈ ಕೆಳಗಿನಂದೆ ನೋಂದಣಿ ಮಾಡಿಕೊಳ್ಳಲು ಈ ಮೂಲಕ ಮನವಿ ಮಾಡುತ್ತಿದ್ದೇವೆ.

1. ಭೌತಿಕ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ, ಸದಸ್ಯರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ), ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ನಂ. 30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003 ಗೆ ಬರೆದು, ಸರಿಯಾಗಿ ಭರ್ತಿ ಮಾಡಿದ ಫಾರ್ಮ್ ಐಎಸ್‌ಆರ್-1 ಹಾಗೂ ಇತರ ಸೂಕ್ತ ದಾಖಲೆಗಳ ಜತೆ ಸಲ್ಲಿಸಿ, ತಮ್ಮ ಇಮೇಲ್ ಐಡಿಯನ್ನು ನವೀಕರಿಸಬಹುದು/ನೋಂದಣಿ ಮಾಡಬಹುದು. ಫಾರ್ಮ್ ಐಎಸ್‌ಆರ್-1 ನ ನಮೂನೆಯು ಕಂಪನಿಯ ವೆಬ್‌ಸೈಟ್ https://www.disagroup.com/en-in/investor-relations/investor-grievances ನಲ್ಲಿ ಲಭ್ಯವಿದೆ.
2. ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿರುವ ಈಕ್ವಿಟಿ ಷೇರುಗಳಿಗೆ ಸಂಬಂಧಿಸಿದಂತೆ, ಸದಸ್ಯರು ತಮ್ಮ ಡಿಮ್ಯಾಟ್ ಖಾತೆಗಳನ್ನು ನಿರ್ವಹಿಸುವ ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಮೂಲಕ ಸಂಬಂಧಪಟ್ಟ ಡೆಪಾಸಿಟರಿಗಳ ಬಳಿ ತಮ್ಮ ಇಮೇಲ್ ಐಡಿಯನ್ನು ನವೀಕರಿಸಬಹುದು/ನೋಂದಣಿ ಮಾಡಬಹುದು.
3. ಷೇರುದಾರರ ಸೂಚನೆಗಳು ಮತ್ತು ವಾರ್ಷಿಕ ವರದಿಯನ್ನು ಸ್ವೀಕರಿಸುವ ಸೀಮಿತ ಉದ್ದೇಶಕ್ಕಾಗಿ, ಸದಸ್ಯರು investor.relations@noricangroup.com ಗೆ ಬರೆಯಬಹುದು.

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಶ್ರೀತಿ ಎಂ ಎಸ್
ಸಂಸ್ಥೆ ಕಾರ್ಯದರ್ಶಿ
ಸ್ಥಳ : ಬೆಂಗಳೂರು
ದಿನಾಂಕ: ಜೂನ್ 24, 2025

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂಖ್ಯೆ: 11:ಕಾಇಂ:ಲೋಇ:ಹಾವಿಹಾ:ಸ.ಇಂ-3:2025-26
ದಿನಾಂಕಃ 24.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ವಿಶೇಷ ಉಪವಿಭಾಗ, ಹಾಸನ ವ್ಯಾಪ್ತಿಯ ಒಟ್ಟು 01 ಸಂಖ್ಯೆ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಕಾಮಗಾರಿ ಮೊತ್ತ ರೂ.163.60 ಲಕ್ಷ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ: 05.07.2025 16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ..

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/255/ಕೆಎಸ್‌ಎಂಸಿಎ/2025-26

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಚಿಕ್ಕಮಗಳೂರು-577101
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
Ph: 08262-295347 E-mail: directorcims2020@gmail.com
ಸಂಖ್ಯೆ: ಸಿಮ್ಸ್/ಸರಬ/ಟೆಂಡರ್/ಪತ್ರಿಕಾ ಪ್ರಕಟಣೆ/02/2024-25 ದಿ:20.06.2025

ಮರು ಇ-ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಂಸ್ಥೆಯ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯ ಕೀಲು ಮತ್ತು ಮೂಳೆ ರೋಗ ವಿಭಾಗಕ್ಕೆ ಅವಶ್ಯವಿರುವ Physiotherapy Equipments ಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಕಾಲ್-2 ಮರು ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.100.00 ಲಕ್ಷಗಳು ಟೆಂಡರ್ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು,

ಸಹಿ/- ಡೀನ್ ಹಾಗೂ ನಿರ್ದೇಶಕರು ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಚಿಕ್ಕಮಗಳೂರು

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25-26/36/473

ನಗರಸಭೆ ಕಾರ್ಯಾಲಯ ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂರವಾಣಿ : 080-27722735,
Email : itstaffnelamangala@gmail.com
ಸಂಖ್ಯೆ:ನಸನೆ:ಕಕಾ/ಟೆಂಪ್ರ/ವಿವ 03/2025-26 ದಿನಾಂಕ : 24.06.2025

ಟೆಂಡರ್ ಪ್ರಕಟಣೆ

2025-26 ನೇ ಸಾಲಿನ ಎಸ್.ಎಫ್.ಸಿ ನಿಧಿ ಶೇಕಡ 24.10 ರ ಪರಿಶಿಷ್ಟ ಜಾತಿ/ಪಂಗಡಗಳ ಉಪಯೋಜನೆ, ಶೇಕಡ 7.25 ರ ಮತ್ತು ಶೇಕಡ 5 ರ (ಕ್ಯಾಪಿಟಲ್ ಅಸೆಟ್) ಯೋಜನೆಗಳಡಿ ಕೆಳಗೆ ವಿವರಿಸಿರುವ ವಿವಿಧ ಸಾಮಗ್ರಿಗಳ ಖರೀದಿಗಾಗಿ ಜೆಮ್ ಪೋರ್ಟಲ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್‌ನಲ್ಲಿ ಬಾಗವಹಿಸಲು ಆಸಕ್ತಿಯಿರುವ ಜೆಮ್ ಪೋರ್ಟಲ್‌ನ ನೊಂದಾಯಿತ ಸರಬರಾಜುದಾರರು ಟೆಂಡರ್ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ www.gem.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ.

ವಿವರ ಕೆಳಕಂಡಂತಿದೆ

ಕ್ರ ಸಂ	ಟೆಂಡರ್ ಕರೆದಿರುವ ಸಾಮಗ್ರಿ ವಿವರ	ಕಾಯ್ದಿರಿಸಿರುವ ಮೊತ್ತ ರೂಗಳಲ್ಲಿ
1	ಇತರೆ ಹಿಂದುಳಿದ ಜಾತಿಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ನೀಡುವುದು. (ಎಸ್.ಎಫ್.ಸಿ ಶೇಕಡ 7.25 ರ ಕ್ಯಾಪಿಟಲ್ ಅಸೆಟ್)	1,08,750.00
2	ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಅವಶ್ಯಕ ಸಾಮಗ್ರಿಗಳನ್ನು ನೀಡುವುದು. (ಎಸ್.ಎಫ್.ಸಿ ಶೇಕಡ 5 ರ ಕ್ಯಾಪಿಟಲ್ ಅಸೆಟ್)	62,500.00
3	ಇತರೆ ಹಿಂದುಳಿದ ಜಾತಿಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ನಿಲಯಗಳಿಗೆ ಟೂ ಟಯರ್ ಕಾಟ್‌ಗಳನ್ನು ನೀಡುವುದು. (ಎರಡುಅಂತಸ್ತಿನಮಂಚಗಳು) (ಕ್ಯಾಪಿಟಲ್ ಅಸೆಟ್)	4,93,750.00
4	ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ನೀಡುವುದು. (ಎಸ್.ಎಫ್.ಸಿ ಶೇಕಡ 24.10 ರ ಪರಿಶಿಷ್ಟ ಜಾತಿ ಉಪಯೋಜನೆ)	3,84,000.00
5	ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ನೀಡುವುದು. (ಎಸ್.ಎಫ್.ಸಿ ಶೇಕಡ 24.10 ರ ಪರಿಶಿಷ್ಟ ಪಂಗಡದ ಉಪಯೋಜನೆ)	1,60,000.00

ಸಹಿ/- ಅಧ್ಯಕ್ಷರು ನಗರಸಭೆ, ನೆಲಮಂಗಲ. ಸಹಿ/- ಉಪಾಧ್ಯಕ್ಷರು ನಗರಸಭೆ, ನೆಲಮಂಗಲ. ಸಹಿ/- ಸ್ಥಾಯಿಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ. ಸಹಿ/- ಪೌರಾಯುಕ್ತರು ನಗರಸಭೆ, ನೆಲಮಂಗಲ.
ವಾ.ಸಾ.ಸಂ.ಇ/ವಾಪ್ರ/1440/ಎಸ್‌ಎಸ್‌ಸಿ/2025-26

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-2 ರವರ ಕಚೇರಿ, 1ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052.
ಸಂಖ್ಯೆ: ಉಪ್ರವ್ಯ-2/ಬೆಂಘತ್ಯಾನಿನಿ/ಟೆಂಡರ್/10/25-26 ದಿನಾಂಕ: 24.06.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

1. ಉಪ ಪ್ರಧಾನ ವ್ಯವಸ್ಥಾಪಕರು-2, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ ಇವರು ವ್ಯವಸ್ಥಾಪಕ ನಿರ್ದೇಶಕರು, ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಬಿಡ್ಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್ಡರುದಾರರು ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು. ಬಿಡ್ಡರುದಾರರು ಈ ಕಾಮಗಾರಿಯ ಕಾರ್ಯಾದೇಶವನ್ನು ಪಡೆದುಕೊಳ್ಳಲು ಬಿಡ್ಡರುಗಳ ಷರತ್ತುಗಳು 3ರಲ್ಲಿನ ಸೂಚನೆಗಳಲ್ಲಿ ಉಲ್ಲೇಖಿಸಿರುವಂತೆ ಕನಿಷ್ಟ ಅರ್ಹತಾ ಮಾನದಂಡಗಳನ್ನು ಅನುಸರಿಸುವುದು.
2. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
3. ಇತರೆ ಮಾಹಿತಿಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ನೋಡಿಕೊಳ್ಳಬಹುದು.

ಕಾಮಗಾರಿಗಳ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ದಾಖಲೆಗಳ ಮೊತ್ತ	ಗುತ್ತಿಗೆ ಮುಕ್ತಾಯ ಅವಧಿ
ಘನ ತ್ಯಾಜ್ಯ ನಿರ್ವಹಣೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಬಿನ್ನಿ ಮಿಲ್ ಮತ್ತು ಬೆಲ್ಲಹಳ್ಳಿ) ಪ್ಯಾಕೇಜ್-1	576.63 (ಜಿಎಸ್‌ಟಿ ಹೊರತುಪಡಿಸಿ)	ರೂ. 1,00,000/- ಗಳನ್ನು ಆನ್‌ಲೈನ್/ಎನ್‌ಇಎಫ್‌ಟಿ /ಓಟಿಸಿಯ ಅಡಿಯಲ್ಲಿ ವಿದ್ಯುನ್ಮಾನ ಮೂಲಕ ಪಾವತಿ ಮತ್ತು ಉಳಿಕೆ ರೂ. 7,64,945/- ಗಳನ್ನು ರಾಷ್ಟ್ರೀಕೃತ/ ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ /ಎಫ್‌ಡಿಆರ್ ಮೂಲಕ ಪಾವತಿಸುವುದು	ಕೆಪಿಪಿ ಪೋರ್ಟಲ್ ಪ್ರಕಾರ	6 ತಿಂಗಳು (ಮುಂಗಾರು ಅವಧಿ ಸೇರಿದಂತೆ)
ಘನ ತ್ಯಾಜ್ಯ ನಿರ್ವಹಣೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಬಾಣಸವಾಡಿ ಮತ್ತು ಕೋರಮಂಗಲ) ಪ್ಯಾಕೇಜ್-2	494.25 (ಜಿಎಸ್‌ಟಿ ಹೊರತುಪಡಿಸಿ)	ರೂ. 1,00,000/- ಗಳನ್ನು ಆನ್‌ಲೈನ್/ಎನ್‌ಇಎಫ್‌ಟಿ /ಓಟಿಸಿಯ ಅಡಿಯಲ್ಲಿ ವಿದ್ಯುನ್ಮಾನ ಮೂಲಕ ಪಾವತಿ ಮತ್ತು ಉಳಿಕೆ ರೂ. 6,41,375/- ಗಳನ್ನು ರಾಷ್ಟ್ರೀಕೃತ/ ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ /ಎಫ್‌ಡಿಆರ್ ಮೂಲಕ ಪಾವತಿಸುವುದು	ಕೆಪಿಪಿ ಪೋರ್ಟಲ್ ಪ್ರಕಾರ	6 ತಿಂಗಳು (ಮುಂಗಾರು ಅವಧಿ ಸೇರಿದಂತೆ)

ಟೆಂಡರ್ ವೇಳಾಪಟ್ಟಿ: 1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: 01.07.2025ರ ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)ರವರ ಕಚೇರಿ, ಬೆಂಘತ್ಯಾನಿನಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052 ಇಲ್ಲಿ ನಡೆಸಲಾಗುವುದು. 2) ಬಿಡ್‌ಗಳನ್ನು ದಿನಾಂಕ 14.07.2025ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸುವುದು. 3) ಬಿಡ್ಡನ್ನು ದಿನಾಂಕ: 15.07.2025ರ ಸಂಜೆ 4:30 ಗಂಟೆಯ ನಂತರ ತೆರೆಯಲಾಗುವುದು.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-2,
ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು

ಡಿಐಪಿಆರ್/ಸಿಪಿ/1435/ಸಿಸಿಎಲ್/2025-26

ಸ್ನಾನ ಮಾಡುತ್ತಿರುವಾಗಲೇ ಹತ್ಯೆಗೈದ ದುಷ್ಕರ್ಮಿಗಳು

ಬಾತ್‌ರೂಮ್‌ನಲ್ಲೇ ಬಾವನ ಕೊಲೆ

ಚಿತ್ರದುರ್ಗ: ಬಾತ್‌ರೂಮ್‌ನಲ್ಲೇ ಬಾವನನ್ನು ಬಾಮೈದ ಕೊಚ್ಚಿ ಬರ್ಬರವಾಗಿ ಹತ್ಯೆಗೈದಿರುವ ಘಟನೆ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕಿನ ಹುಣುವಿನಡು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಾಜೇಂದ್ರ ಶ್ರೀನಿವಾಸ್ (30) ಹತ್ಯೆಗೀಡಾದ ದುರ್ದೈವಿ. ಬಾತ್‌ರೂಮ್‌ನಲ್ಲಿ ಸ್ನಾನ ಮಾಡುವ ವೇಳೆ ಮನೆಗೆ ನುಗ್ಗಿರುವ ಮೂವರು ಮಾರಕಾಸ್ತ್ರಗಳಿಂದ ರಾಜೇಂದ್ರನನ್ನು ಕೊಚ್ಚಿ ಕೊಲೆಗೈದಿದ್ದಾರೆ ಎಂದು ಆರೋಪಿಸಿ ಮೃತ ರಾಜೇಂದ್ರ, ಶ್ರೀನಿವಾಸನ ತಾಯಿ ಸುಜಾತಾ ಹೊಸದುರ್ಗ ಠಾಣೆಗೆ ದೂರು ಸಲ್ಲಿಸಿದ್ದಾರೆ. ಕೆಲ ತಿಂಗಳ ಹಿಂದೆ ರಾಜೇಂದ್ರ, ಕಿರಣಾ ಎಂಬಾಕೆ ಜತೆ ಮದುವೆಯಾಗಿದ್ದ. ಈ ವಿಚಾರದಲ್ಲಿ ಆಗಾಗ ಗಲಾಟೆ ನಡೆಯುತ್ತಿತ್ತು. ಆದರೆ ಮಂಗಳವಾರ ಮನೆಯಲ್ಲಿ ಯಾರೂ ಇಲ್ಲದ ವೇಳೆ ರಾಜೇಂದ್ರನ ಮೇಲೆ ದಾಳಿ ನಡೆಸಿದ ಕಿರಣಾಳ ಸಹೋದರ ಸಾಗರ್ ಸೇರಿ ಇನ್ನಿಬ್ಬರು ಕೊಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಕಿರಣಾ ಈ ಮೊದಲು ಬೇರೊಬ್ಬನ ಜೊತೆ ಮದುವೆ ಆಗಿದ್ದು, ಬಳಿಕ ಕಿರಣಾ ಹಾಗೂ ರಾಜೇಂದ್ರ ಮದುವೆಯಾಗಿದ್ದ ಹಿನ್ನೆಲೆ ಸಾಗರ್ ದ್ವೇಷ ಸಾಧಿಸುತ್ತಿದ್ದ. ಈ ಕೊಲೆಗೆ ಕಿರಣಾಳ ಸೋದರಮಾವ ಕೃಷ್ಣಮೂರ್ತಿ ಕೂಡ ಪ್ರಚೋದಿಸಿದ್ದು, ಸಾಗರ್ ಹಾಗೂ ಇಬ್ಬರು ಅಪರಿಚಿತರಿಂದ ಕೃತ್ಯ ನಡೆದಿದೆ ಎಂಬ ಆರೋಪ ಕೇಳಿಬಂದಿದೆ. ಈ ಆರೋಪಿಗಳನ್ನು ಬಂಧಿಸಿ ರಾಜೇಂದ್ರ, ಶ್ರೀನಿವಾಸನ ಸಾವಿಗೆ ನ್ಯಾಯ ಒದಗಿಸುವಂತೆ ಮೃತನ ತಾಯಿ ಒತ್ತಾಯಿಸಿದ್ದಾರೆ.

ಹೃದಯಾಘಾತದಿಂದ ವಿದ್ಯಾರ್ಥಿನಿ ಸಾವು

ಬೆಳಗಾವಿ: ಶಾಲೆಯಲ್ಲಿ ಆಟವಾಡುತ್ತಿದ್ದ ಸಂದರ್ಭ ಹೃದಯಾಘಾತಕ್ಕೊಳಗಾಗಿ ವಿದ್ಯಾರ್ಥಿನಿ ಸಾವನ್ನಪ್ಪಿದ ಘಟನೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಚಮಕೇರಿ ಗ್ರಾಮದಲ್ಲಿ ನಡೆದಿದೆ. ಅಥಣಿ ತಾಲೂಕಿನ ಬೇಡರಹಟ್ಟಿ

ಗ್ರಾಮದ ರೇಣುಕಾ ಸಂಜಯ್ ಬಂಡಗಾರ (15) ಮೃತ ವಿದ್ಯಾರ್ಥಿನಿ. ಚಮಕೇರಿ ಗ್ರಾಮದ ಖಾಸಗಿ ಶಾಲೆಯಲ್ಲಿ 9 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ರೇಣುಕಾ ಆಟವಾಡುತ್ತಿದ್ದ ವೇಳೆ ಹೃದಯಾ ಘಾತಕ್ಕೆ ಒಳಗಾಗಿದ್ದಾಳೆ. ಹೃದಯಾಘಾತದ ವಿಷಯ ತಿಳಿಯುತ್ತಿದ್ದಂತೆಯೇ ಶಾಲೆಯ ಶಿಕ್ಷಕರು ಹಾಗೂ ಪೋಷಕರು ಹೆಚ್ಚಿನ ಚಿಕಿತ್ಸೆಗೆಂದು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಅಥಣಿ ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿಯೇ ವಿದ್ಯಾರ್ಥಿನಿ ಕೊನೆಯುಸಿರೆಳೆದಿದ್ದಾಳೆ. ಮಗಳನ್ನು ಕಳೆದುಕೊಂಡ ಪೋಷಕರ ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಅಥಣಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಸಿಬಿಐ ತನಿಖೆಗೆ ಸಿದ್ಧ: ಜಮೀರ್ ಅಹ್ಮದ್

← ಮೊದಲಪುಟದಿಂದ

ಬಿ.ಆರ್.ಪಾಟೀಲ್ ಆಡಿಯೊ ವೈರಲ್: ಆದಾಗಿನಿಂದ ಮೌನವಾಗಿದ್ದ ಜಮೀರ್ ಅಹ್ಮದ್ ಮಂಗಳವಾರ ಸುದ್ದಿಗೋಷ್ಠಿ ನಡೆಸಿ, ನಾನು ಯಾವುದೇ ಲಂಚ ಪಡೆದಿಲ್ಲ. ಪಡೆದಿರುವುದಕ್ಕೆ ಸಾಕ್ಷ್ಯ ನೀಡಿದರೆ ಕೂಡಲೇ ರಾಜೀನಾಮೆ ನೀಡುತ್ತೇನೆ. ಈ ಪ್ರಕರಣವನ್ನು ಸಿಬಿಐನಿಂದ ತನಿಖೆಯಾಗಲಿ. ಈ ಸಂಬಂಧ ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯಲಿ. ಬಿ.ಆರ್.ಪಾಟೀಲ್ ಅವರು ಯಾರು ಲಂಚ ಪಡೆದಿದ್ದಾರೆ ಎನ್ನುವುದನ್ನು ಹೇಳಿದರೆ ಕ್ರಮ ವಹಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ನಾನು ಲಂಚ ಪಡೆದಿಲ್ಲ, ಪಡೆದಿದ್ದರೆ ಅದನ್ನು ಬಿಜೆಪಿಯವರು ಸಾಬೀತು ಮಾಡಲಿ. ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ. ನಾನು ಬಂದ ಮೇಲೆ ಮನೆ ಹಂಚಿಕೆ ಮಾಡುತ್ತಿದ್ದೇನೆ, ಬಿಜೆಪಿಯವರು ಇವತ್ತು ಮಾತನಾಡುತ್ತಿದ್ದಾರೆ. ಬಡವರ ಮೇಲೆ ಬಿಜೆಪಿಗರಿಗೆ ಕಾಳಜಿ ಇಲ್ಲ. ಯಾರು ದುಡ್ಡು ಪಡೆದು ಮನೆ ಕೊಟ್ಟಿದ್ದಾರೆ ಅಂತ ಹೇಳಬೇಕು. ಈ ಬಗ್ಗೆ ತನಿಖೆಯಾಗಬೇಕು. ಸಿಎಂ ಅವರಿಗೆ ಪತ್ರ ಬರೆಯಲಿ. ಸಿಬಿಐ ತನಿಖೆಯಾಗಲಿ ಎಂದು ಒತ್ತಾಯಿಸಿದರು.

ಅಧಿಕಾರಿಗಳಿಗೆ ಮನ್ನಣೆ ನೀಡಲಾಗುತ್ತಿದ್ದು, ಶಾಸಕರನ್ನು ಕಡೆಗಣಿಸಲಾಗುತ್ತಿದೆ. ಸಿಎಂ, ಡಿಸಿಎಂ, ಸಚಿವರುಗಳಿಗೆ ಮನವಿ ಕೊಟ್ಟರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಹೀಗಾಗಿ ಯಾವ ಪುರುಷಾರ್ಥಕ್ಕೆ ನಾನು ಶಾಸಕನಾಗಿರಬೇಕು? ಇಂತಹ ಹೊಲಸು ವ್ಯವಸ್ಥೆಯಲ್ಲಿ ಶಾಸಕರಾಗಿದ್ದವರು ಏನು ಮಾಡಬೇಕು? ರಾಜೀನಾಮೆ ನೀಡುವುದು ಒಳ್ಳೆಯದು ಎಂದು ನಾನು ನೊಂದು ಹೇಳಿದ್ದೆ.
-ರಾಜು ಕಾಗೆ ಶಾಸಕ

ನಾನು ಯಾರ ಬಳಿಯೂ ನಾವು ದುಡ್ಡು ಪಡೆದು ಮನೆ ಕೊಟ್ಟಿಲ್ಲ. ರಾಮನಗರಕ್ಕೆ ಕೂಡ ಮನೆ ಕೊಟ್ಟಿದ್ದೇವೆ. ಎಲ್ಲರಿಗೂ ಮನೆ ಕೊಟ್ಟಿದ್ದೇವೆ. ದುಡ್ಡು ಪಡೆದು ಮನೆ ಕೊಟ್ಟರೆ ಹುಳ ಬಿದ್ದು ಸಾಯುತ್ತೇವೆ. ಬಡವರ ಹಣ ಪಡೆದರೆ ನಮ್ಮ ಮಕ್ಕಳಿಗೆ ಒಳ್ಳೆಯದಾಗುತ್ತಾ? ಯಾರು ಹಣ ಪಡೆದಿದ್ದಾರೆ ಎಂದು ಪಾಟೀಲ್ ಹೇಳಲಿ. ಅವರ ಮೇಲೆ ಕ್ರಮ ತೆಗೆದುಕೊಳ್ಳೋಣ.
-ಜಮೀರ್ ಅಹ್ಮದ್ ವಸತಿ ಸಚಿವ

ಬಿಲ್ ಪಾಸ್‌ಗೆ ಸಿಎಂ ಮನವಿ

← ಮೊದಲಪುಟದಿಂದ

ಇನ್ನೂ ಕೆಲವು ವಿಧೇಯಕಗಳು ರಾಷ್ಟ್ರಪತಿ ಭವನಕ್ಕೆ ತಲುಪಿವೆ. ಅವುಗಳಿಗೆ ಕೂಡಲೇ ಅಂಕಿತ ಹಾಕಬೇಕು ಎಂದು ಮನವಿ ಮಾಡಿದ್ದಾರೆ. ಇತ್ತೀಚೆಗೆ ತಮಿಳುನಾಡು ಸರಕಾರ ಮತ್ತು ಅಲ್ಲಿನ ರಾಜ್ಯಪಾಲರ ನಡುವಿನ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದ್ದು, ಒಕ್ಕೂಟ ವ್ಯವಸ್ಥೆಯನ್ನು ಗೌರವಿಸಬೇಕು. ತಾರತಮ್ಯ ಮಾಡಬಾರದು ಎಂದು ಸೂಚಿಸಿದೆ. ಇದನ್ನು ಸಿದ್ದರಾಮಯ್ಯ ರಾಷ್ಟ್ರಪತಿಯವರ ಗಮನಕ್ಕೆ ತಂದಿದ್ದಾರೆ ಎಂದು ತಿಳಿದುಬಂದಿದೆ.

ಮಕ್ಕಳ ಮುಕ್ತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ತಿದ್ದುಪಡಿ ಕಾಯಿದೆ-2015, ಕರ್ನಾಟಕ ಅದಿರು ಹಕ್ಕು ಮತ್ತು ಅದಿರಿಗೆ ಸಂಬಂಧಪಟ್ಟ ಭೂಮಿ ತಿದ್ದುಪಡಿ ಕಾಯಿದೆ-2024, ಕರ್ನಾಟಕ ನೋಂದಣಿ ತಿದುಪಡಿ ಮಸೂದೆ-2024, ಕರ್ನಾಟಕ ನೋಟರಿ ತಿದ್ದುಪಡಿ ಮಸೂದೆ-2025, ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ತಿದ್ದುಪಡಿ ಮಸೂದೆ-2025, ಕರ್ನಾಟಕ ಹಿಂದೂ ಕಾರ್ಮಿಕರ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿ ತಿದ್ದುಪಡಿ ಮಸೂದೆ-2024 ರಾಷ್ಟ್ರಪತಿಗಳ ಅಂಕಿತಕ್ಕೆ ಬಾಕಿ ಉಳಿದಿದ್ದು, ಇವುಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚೆ ನಡೆಸಿದ್ದಾರೆ.

ಅನ್ಯಾಯವಾಗದಂತೆ ಅನುದಾನ ಹಂಚಿ: ಸಂಜೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ, 15ನೇ ಹಣಕಾಸು ಆಯೋಗವು ತನ್ನ ಶಿಫಾರಸ್ಸಿನಲ್ಲಿ ಕರ್ನಾಟಕದ ತೆರಿಗೆ ಪಾಲನ್ನು ಶೇ.4.713 ರಿಂದ ಶೇ.3.647 ಕ್ಕೆ ಇಳಿಕೆ ಮಾಡಿದ್ದರಿಂದ, ತೆರಿಗೆ ಪಾಲು 14ನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ 15ನೇ ಹಣಕಾಸು ಆಯೋಗದ ಅವಧಿಯಲ್ಲಿ ಶೇ.23ರಷ್ಟು ಕಡಿಮೆಯಾಗಿರುವುದರ ಕುರಿತು ವಿವರಿಸಿದರು. 15ನೇ ಹಣಕಾಸು ಆಯೋಗದ ಅವಧಿಯಲ್ಲಿ ಒಟ್ಟು 80,000 ಕೋಟಿ ನಷ್ಟವಾಗಿದೆ. ಆದ್ದರಿಂದ 16ನೇ ಹಣಕಾಸು ಆಯೋಗದಲ್ಲಿ ಇದನ್ನು ಸರಿಪಡಿಸಬೇಕು ಎಂದು ಮನವಿ ಮಾಡಿದರು.

ಮಲ್ಲಿಕಾರ್ಜುನ ಖರ್ಗೆ, ಸುರ್ಜೇವಾಲ ಜತೆ ಚರ್ಚೆ

ರಾಹುಲ್ ಗಾಂಧಿ ಅವರು ವಿದೇಶದಿಂದ ವಾಪಸಾಗದಿರುವುದರಿಂದ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಸಿದ್ದರಾಮಯ್ಯ ಅವರು ಪ್ರತ್ಯೇಕವಾಗಿ ಚರ್ಚೆ ನಡೆಸಿದ್ದಾರೆ. ಈ ವೇಳೆ ಪ್ರಮುಖವಾಗಿ ಬಿ.ಆರ್.ಪಾಟೀಲ್ ಆರೋಪಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಿದ್ದು, ಶಾಸಕರ ಅಸಮಾಧಾನವನ್ನು ಸರಿಪಡಿಸುವ ಬಗ್ಗೆ ಕ್ರಮವಹಿಸುವಂತೆ ಸುರ್ಜೇವಾಲ ಅವರು ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಇದರೊಂದಿಗೆ ವಿಧಾನಪರಿಷತ್ ನಾಮನಿರ್ದೇಶನದ ಹೆಸರುಗಳನ್ನು ಅಂತಿಮಗೊಳಿಸುವ ಸಂಬಂಧ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ಮಾರಕಾಸ್ತ್ರಗಳಿಂದ ಗುತ್ತಿಗೆದಾರನ ಕೊಲೆ

ಹಾವೇರಿ: ಜಿಲ್ಲೆಯ ಶಿಗ್ಗಾವಿ ಪಟ್ಟಣದಲ್ಲಿ ಶಿವು ಕುನ್ನೂರು ಎಂಬುವವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಮಂಗಳವಾರ ಮಧ್ಯಾಹ್ನ ಕೊಲೆ ಮಾಡ ಲಾಗಿದೆ. ಮೃತ ಶಿವು ಅವರು ಗುತ್ತಿಗೆದಾರರೆಂದು ಗೊತ್ತಾಗಿದೆ. ಶಿಗ್ಗಾವಿ ಪಟ್ಟಣದ ದ್ವಿಚಕ್ರ ವಾಹನದ ಮಳಿಗೆಯೊಂದರ ಎದುರೇ ಶಿವು ಮೇಲೆ ದಾಳಿ ಮಾಡಿದ್ದ ಆರೋಪಿ ಗಳು, ಕೊಲೆ ಮಾಡಿ ಪರಾರಿಯಾಗಿ ದ್ದಾರೆ. ತೀವ್ರ ಗಾಯಗೊಂಡು ಶಿವು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಸ್ಥಳೀಯರ ಮಾಹಿತಿ ಮೇರೆಗೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಕೊಲೆ ಮಾಡಿದ್ದು ಯಾರು? ಕಾರಣವೇನು? ಎಂಬುದರ ಬಗ್ಗೆ ತನಿಖೆ ಮುಂದುವ ರಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಅರಮನೆ ಅಕ್ರಮಗಳ ಬಗ್ಗೆ ತನಿಖೆ ಆಗಲಿ



ಮೈಸೂರು: ವಿಶ್ವ ವಿಖ್ಯಾತ ಮೈಸೂರಿನ ಅಂಬವಿಲಾಸ ಅರಮನೆಯಲ್ಲಿ ಹಲವಾರು ವರ್ಷಗಳಿಂದ ಅಕ್ರಮ ಗಳು ನಡೆಯುತ್ತಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆಗ್ರಹಿಸಿ ದ್ದಾರೆ. ಸುದ್ದಿಗಾರರೊಂದಿಗೆ ಮಾತ ನಾಡಿ, ಮೈಸೂರು ಎಂದರೆ ಅರಮನೆಗೆ ಪ್ರಖ್ಯಾತವಾಗಿದೆ. ಇಂತಹ ಅರಮನೆಗೆ ದೇಶ-ವಿದೇಶಗಳಿಂದ ಪ್ರತಿವರ್ಷ ಲಕ್ಷಾಂತರ ಜನ ಆಗಮಿಸುತ್ತಾರೆ. ಆದರೆ ಈ ಅರಮನೆಯಲ್ಲಿ ಹಲವು ವರ್ಷಗಳಿಂದ ಬೋಗಸ್ ಟಿಕೆಟ್, ಪಾರ್ಕಿಂಗ್ ಶುಲ್ಕ ಸೇರಿದಂತೆ ಹಲವಾರು ರೀತಿಯ ಅವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಯಾರೂ ಏನು ಮಾಡದ ಸ್ಥಿತಿಯಲ್ಲಿ ಇದ್ದಾರೆ ಎಂದು ಆರೋಪಿಸಿದ್ದಾರೆ. ಅರಮನೆಗೆ ರಾಜ್ಯ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿದ್ದು, ಮೈಸೂರಿನ ಜಿಲ್ಲಾಧಿಕಾರಿ ಎಕ್ಸಿಕ್ಯೂಟಿವ್ ಪ್ರೆಸಿಡೆಂಟ್ ಆಗಿದ್ದಾರೆ. ಅರಮನೆ ಆಡಳಿತ ಮಂಡಳಿಗೆ ಒಬ್ಬರು ಉಪ ನಿರ್ದೇಶಕರಿದ್ದು, ಇದರ ಜತೆಗೆ 31 ಜನ ಸರಕಾರಿ ನೌಕರರು ಇದ್ದಾರೆ. ಆದರೆ ಇಲ್ಲಿನ ಅಕ್ರಮಗಳ ಬಗ್ಗೆ ಯಾರೂ ಕೇಳುವವರು ಇಲ್ಲದಂತಾಗಿದೆ. ಕೂಡಲೇ ಅರಮನೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು ಎಂದು ಎಚ್. ವಿಶ್ವನಾಥ್ ಒತ್ತಾಯಿಸಿದ್ದಾರೆ.

ಜಮೀರ್ ಅಹಮದ್ ರಾಜೀನಾಮೆಗೆ ಒತ್ತಾಯ

ಹುಬ್ಬಳ್ಳಿ: ರಾಜ್ಯ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಇದನ್ನು ಕಾಂಗ್ರೆಸ್ ಶಾಸಕರೇ ಬಹಿರಂಗಪಡಿಸುತ್ತಿದ್ದಾರೆ. ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಜಮೀರ್ ಅಹ್ಮದ್ ಅವರು ರಾಜೀನಾಮೆ ಪಡೆಯಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಇಡೀ ದೇಶದಲ್ಲಿ ಅತ್ಯಂತ ಭ್ರಷ್ಟಾಚಾರಿ ಸರಕಾರ ಕರ್ನಾಟಕದಲ್ಲಿ ಕಾಂಗ್ರೆಸ್ ಎನ್ನುವುದು ಸಾಬೀತಾಗಿದೆ. ಶಾಸಕ ಬಿ.ಆರ್.ಪಾಟೀಲ ಅವರು ವಸತಿ ಇಲಾಖೆಯಲ್ಲಿ ಲಂಚವಿಲ್ಲದೆ ಮನೆ ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಶಾಸಕ ಭರಮಗೌಡ ಕಾಗೆ ಅವರ ಆರೋಪ ಇದಕ್ಕೆ ಪುಷ್ಠಿ ನೀಡಿದಂತಿದೆ. ಕೂಡಲೇ ವಸತಿ ಸಚಿವರು ರಾಜೀನಾಮೆ ಕೊಡಬೇಕು. ಇಲ್ಲವೇ ಮುಖ್ಯಮಂತ್ರಿಗಳು ರಾಜೀನಾಮೆ ಪಡೆಯಬೇಕು ಎಂದರು.

ವಿಶ್ವವಾಣಿ ಕ್ಲಬ್ ಹೌಸ್
25.06.2025
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಗೌರಮ್ಮನ ವಚನಗಳು
vishwavani.news

ಟ್ವೀಟೂ-ಖಾರಾ

ದಿನೇಶ್ ಗುಂಡೂರಾವ್, ಸಚಿವ

ಕಾಂಗ್ರೆಸ್ ಶಾಸಕರು ಬಿಜೆಪಿಗೆ ಬರಲಿದ್ದು ಸರಕಾರ ಪತನವಾಗಲಿದೆ ಎಂದು ಜಗದೀಶ್ ಶೆಟ್ಟರ್ ಹೇಳಿದ್ದಾರೆ. ಶೆಟ್ಟರ್ ಹೇಳಿಕೆ ಭ್ರಮೆಯ ಅಂತಿಮ ಪರಮಾವಧಿ ಎನ್ನುವುದಕ್ಕಿಂತಲೂ ತಿರುಕನ ಕನಸು ಎಂದು ಹೇಳಬಹುದು. ಶೆಟ್ಟರ್ ತಿರುಕನ ಕನಸು ಕಂಡರೆ ನಾವು ಅದಕ್ಯಾಕೆ ಮಣ್ಣೆರಚಬೇಕು.? ಅವರು ಕನಸು ಕಾಣಲಿ. 138 ಸದಸ್ಯ ಬಲದ ಕಾಂಗ್ರೆಸ್ ಸರಕಾರ ಬೀಳಲಿದೆ ಎಂಬ ಶೆಟ್ಟರ್ ಅವರ ಕಲ್ಪನೆಯೇ ಆಶ್ಚರ್ಯ ಹಾಗೂ ಅಚ್ಚರಿಯ ಮೂಟೆ. ಆದರೆ ಶೆಟ್ಟರ್‌ವರ ಕಲ್ಪನೆ ವಾಸ್ತವವಾಗುವುದಿಲ್ಲ ಎಂಬುದು ಕಟು ಸತ್ಯ. ನಮ್ಮ ಸರಕಾರ ಸುಭದ್ರವಾಗಿದ್ದು ಮುಂದೆಯೂ ಸುಭದ್ರ ಆಡಳಿತ ನೀಡಲಿದೆ. ಬಿಜೆಪಿಯ ತಟ್ಟೆಯಲ್ಲಿ ಹೆಗ್ಗಣ ಬಿದ್ದು ಕೊಳೆಯುತ್ತಿದೆ. ಆದರೆ ಶೆಟ್ಟರ್ ಅಂತವರಿಗೆ ತಮ್ಮ ತಟ್ಟೆಯಲ್ಲಿ ಕೊಳೆಯುತ್ತಿರುವ ಹೆಗ್ಗಣಕ್ಕಿಂತ ಇನ್ನೊಬ್ಬರ ತಟ್ಟೆಯಲ್ಲಿ ಬಿದ್ದಿರುವ ನೊಣದ ಬಗ್ಗೆಯೇ ಚಿಂತೆ ಹೆಚ್ಚಿದೆ.

ಚಂದ್ರಪ್ಪ

ಅವರು ಕನಸು ಕಾಣಲಿ, ಆದರೆ ನೀವುಗಳು ಅಧಿಕಾರದ ಮದದಲ್ಲಿ ಮೈ ಮರೆಯಬಾರದು.

ಏಳು ಬಿಲ್‌ಗಳಿಗೆ ಸಹಿ ಹಾಕಲು ಸಿಎಂ ಮನವಿ | ವಿತ್ತ ಸಚಿವೆ ನಿರ್ಮಲಾ ಭೇಟಿಯಾದ ಸಿದ್ದು

ರಾಷ್ಟ್ರಪತಿ ಅಂಕಿತಕ್ಕೆ ಮನವಿ

ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಿಎಂ ಸಿದ್ದರಾಮಯ್ಯ ಭೇಟಿಯಾಗಿ ಕರ್ನಾಟಕಕ್ಕೆ ಅನುದಾನ ಒದಗಿಸಲು ಮನವಿ ಮಾಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ರಾಜ್ಯ ಶಾಸಕಾಂಗವು ಅಂಗೀಕರಿಸಿದ ಏಳು ಪ್ರಮುಖ ಮಸೂದೆಗಳಿಗೆ ಅನುಮೋದನೆ ನೀಡುವಂತೆ ಕೋರಿದರು.

ರಾಷ್ಟ್ರಪತಿಗಳ ಮುಂದೆ ಮಂಡಿಸಲಾದ ಪ್ರಮುಖ ಮಸೂದೆಗಳಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ಮಸೂದೆ, 2015 ಸೇರಿದ್ದು, ಇದು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಆರ್‌ಟಿಇ ಚೌಕಟ್ಟನ್ನು ಮಾರ್ಪಡಿಸಲು ಪ್ರಯತ್ನಿಸುತ್ತದೆ. ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ಮಸೂದೆ, 2024 ತನ್ನ ಖನಿಜ ಸಂಪನ್ಮೂಲಗಳಿಂದ ರಾಜ್ಯದ ಆದಾಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಸರಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ರೂಪಿಸಲಾಗಿ ರುವ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ ಕಾಯ್ದೆ 2025 ಮಸೂದೆಗೆ ಅನುಮೋದನೆ ಮನವಿ ಮಾಡಲಾಗಿದ್ದು, ಈ ಬಗ್ಗೆ ಪರಿಶೀಲಿಸುವ ಭರವಸೆಯನ್ನು ನೀಡಿದ್ದಾರೆ.

ಮಂಗಳವಾರ ಸಂಜೆ ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ 16ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗದಂತೆ ಕ್ರಮವಹಿಸಲು ಮನವಿ ಮಾಡಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 15ನೇ ಹಣಕಾಸು ಆಯೋಗವು ತನ್ನ ಶಿಫಾರಸ್ಸಿನಲ್ಲಿ ಕರ್ನಾಟಕದ ತೆರಿಗೆ ಪಾಲನ್ನು ಶೇ.4.713 ರಿಂದ ಶೇ.3.647ಕ್ಕೆ ಇಳಿಕೆ ಮಾಡಿದ್ದರಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. 15ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶಿಫಾರಸ್ಸು ಮಾಡಿದ್ದ 11,495 ಕೋಟಿಗಳ ವಿಶೇಷ ಅನುದಾನವು ಸಿಗದ ಕಾರಣ, ಒಟ್ಟಾರೆಯಾಗಿ 15ನೇ ಹಣಕಾಸು ಆಯೋಗದ ಅವಧಿಯಲ್ಲಿ ಒಟ್ಟು 80,000 ಕೋಟಿಗಳು ರಾಜ್ಯಕ್ಕೆ ನಷ್ಟವಾಗಿರುವುದನ್ನು ವಿವರಿಸಲಾಗಿದೆ ಎಂದು ಹೇಳಿದರು.

ರಾಜ್ಯಕ್ಕೆ ಹೆಚ್ಚುವರಿ ಅನುದಾನ ಒದಗಿಸಲು ಮನವಿ

15 ನೇ ಹಣಕಾಸು ಆಯೋಗವು ಆದಾಯ-ದೂರ ಮಾನದಂಡಕ್ಕೆ ಶೇ.45 ರಷ್ಟು ಅಂಕವನ್ನು ನೀಡಿತ್ತು. ರಾಜ್ಯಕ್ಕೆ ಇದರಿಂದ ಉಂಟಾದ ನಷ್ಟವನ್ನು ತಪ್ಪಿಸುವ ಸಲುವಾಗಿ ಆದಾಯ-ದೂರ ಮಾನದಂಡದ ಅಂಕವನ್ನು ಶೇ.20 ರಷ್ಟು ಕಡಿಮೆ ಮಾಡಿ, ದೇಶದ ಆರ್ಥಿಕ ಪ್ರಗತಿಗೆ ರಾಜ್ಯಗಳು ನೀಡುವ ಕೊಡುಗೆಯನ್ನು ಪರಿಗಣಿಸಬೇಕು ಎಂದು ಹೇಳಲಾ ಗಿದೆ. ಇದರೊಂದಿಗೆ ಬೆಂಗಳೂರು, ಕಲ್ಯಾಣ ಕರ್ನಾಟಕ ಮತ್ತು ಮಲೆನಾಡು ಪ್ರದೇಶದ ಅಭಿವೃದ್ಧಿ ಸವಾಲುಗಳನ್ನು ಎದುರಿಸಲು ಅನುದಾನ ನೀಡುವಂತೆ ಮನವಿ ಮಾಡಲಾಗಿದೆ. ಸಭೆಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯದ ಬಗ್ಗೆ ಮಾಹಿತಿ ನೀಡಿದ್ದೇವೆ. ಸಚಿವರು, ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವ ಕೆಲಸವನ್ನು ಮಾಡುವ ಭರವಸೆ ಯನ್ನು ನೀಡಿದ್ದಾರೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಷ್ಟ್ರಪತಿ ಭವನದಲ್ಲಿ ಬಾಲಿವುಡ್ ನಟ ಅಮೀರ್ ಖಾನ್ ಅವರನ್ನು ಭೇಟಿಯಾದ ಸಿಎಂ ಸಿದ್ದರಾಮಯ್ಯ.

- **16ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗದಂತೆ ಕ್ರಮವಹಿಸಲು ಸಿಎಂ ಮನವಿ**
- **ಕಲ್ಯಾಣ ಕರ್ನಾಟಕ, ಮಲೆನಾಡು ಪ್ರದೇಶದ ಅಭಿವೃದ್ಧಿ ಸವಾಲುಗಳನ್ನು ಎದುರಿಸಲು ಅನುದಾನಕ್ಕೆ ಮನವಿ**

ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮೀಜಿಗಳಿಂದ ಚಾತುರ್ಮಾಸ್ಯ ಆಮಂತ್ರಣ ಬಿಡುಗಡೆ

ಮನೆಮಾತು ಮರಳಿ ನೆನಪಿಸಲು ಭಾಷಾ ಚಾತುರ್ಮಾಸ್ಯ

ವಿಶ್ವಾವಸು ಸಂವತ್ಸರದ ಚಾತುರ್ಮಾಸ್ಯ ಆಮಂತ್ರಣ ಪತ್ರಿಕೆಯನ್ನು ಶಂಕರಾಚಾರ್ಯ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಬಿಡುಗಡೆ ಮಾಡಿದರು.

ಗೋಕರ್ಣ: ಮರೆತುಹೋದ ಮನೆಮಾತನ್ನು ಮರಳಿ ನೆನಪಿಸುವ ಉದ್ದೇಶದಿಂದ ಈ ಬಾರಿಯ ಚಾತುರ್ಮಾಸ್ಯವನ್ನು ಸ್ವಭಾಷಾ ಚಾತುರ್ಮಾಸ್ಯ ಎಂಬ ಅಭಿದಾನದೊಂದಿಗೆ ಆಚರಿಸಲಾಗುತ್ತಿದೆ ಎಂದು ಶ್ರೀ ಶಂಕರಾಚಾರ್ಯ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮೀಜಿ ನುಡಿದರು. ವಿಶ್ವಾವಸು ಸಂವತ್ಸರದ ಚಾತುರ್ಮಾಸ್ಯ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಿ ಪರಮಪೂಜ್ಯರು ಆಶೀರ್ವಚನ ನೀಡಿದರು. ನಾವು ನಮ್ಮ ಭಾಷೆಯನ್ನು ಮಾತನಾಡುವುದು ದೇಶ, ಸಂಸ್ಕೃತಿ, ಭಾಷೆ, ಪರಂಪರೆಗೆ ಸಲ್ಲಿಸುವ ಅತಿದೊಡ್ಡ ಸೇವೆ. ಇದು ಜೀವನಕ್ಕೆ ಸ್ವಾರಸ್ಯವನ್ನೂ ತರುತ್ತದೆ ಎಂದರು.

ಶುದ್ಧವಾದ ಮಾತೃಭಾಷೆಯನ್ನು ಮಾತನಾಡುವ ಪ್ರಯತ್ನ ಸ್ವಭಾಷಾ ಚಾತುರ್ಮಾಸ್ಯದ ತಿರುಳು. ಮರೆತ ಪದಗಳನ್ನು ನೆನಪಿಸಿಕೊಳ್ಳೋಣ. ಪರಕೀಯತೆ ನಮ್ಮ ನಾಲಿಗೆಯಲ್ಲೇ ಇದೆ. ನಮ್ಮ ನಾಲಿಗೆ ಕೆಡಿಸಿಕೊಳ್ಳದಿರೋಣ. ಸಂಸ್ಕಾರದಿಂದ ಶಬ್ದ, ಶಬ್ದದಿಂದ ವಾಕ್ಯ, ಅದು ಭಾಷೆಯ ಮೂಲ. ಆದ್ದರಿಂದ ಪ್ರತಿ ಪದವೂ ತನ್ನೊಂದಿಗೆ ಆ ಭಾಷೆಯ ಸಂಸ್ಕಾರವನ್ನು ತರುತ್ತದೆ. ಈ ಬಗ್ಗೆ ಎಚ್ಚರ ಅಗತ್ಯ ಎಂದು ಪ್ರತಿಪಾದಿಸಿದರು.

ಇದೇ ಮೊಟ್ಟಮೊದಲ ಬಾರಿಗೆ ಇಂಥ ಸೂತ್ರ ಇಟ್ಟುಕೊಂಡು ಚಾತುರ್ಮಾಸ್ಯ ಆಚರಿಸಲಾಗುತ್ತಿದೆ. ಚಾತುರ್ಮಾಸ್ಯ ಧರ್ಮಕ್ಕೆ ಸೀಮಿತ ಎಂದು ವಾದಿಸುವವರಿದ್ದಾರೆ. ಭಾಷೆಯನ್ನು ಉಳಿಸುವುದು ಕೂಡಾ ಧರ್ಮದ ಒಂದು ಅಂಗ. ಉರಿಯುವುದು ಬೆಂಕಿಯ ಧರ್ಮ, ಹರಿಯುವುದು ನೀರಿನ ಧರ್ಮ. ಅಂತೆಯೇ ನಮ್ಮ ಭಾಷೆ ಮಾತನಾಡುವುದು ನಮ್ಮ ಧರ್ಮ ಎಂದು ವಿಶ್ಲೇಷಿಸಿದರು.

ಶ್ರೀಮಠದ ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ವಿತ್ತಾಧ್ಯಕ್ಷ ಜಿ.ಎಲ್.ಗಣೇಶ್, ಚಾತುರ್ಮಾಸ್ಯ ಸಮಿತಿ ಸಂಚಾಲಕ ಮಂಜುನಾಥ ಸುವರ್ಣಗದ್ದೆ, ಹವ್ಯಕ ಮಹಾಮಂಡಲ ಅಧ್ಯಕ್ಷ ಮೋಹನ್ ಭಾಸ್ಕರ ಹೆಗಡೆ, ಮಹಾಮಂಡಲ ಉಪಾಧ್ಯಕ್ಷ ಜಿ.ಜಿ.ಹೆಗಡೆ ತಲೆಕೇರಿ, ಯುಎಸ್ವಿ ಭಟ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಮಾಜ ಬದಲಾವಣೆ ಕಾರ್ಯ ಆರಂಭ ಆಗಲಿ

ಈ ಸಮಾಜವನ್ನು ಬದಲಾಯಿಸುವ ಕಾರ್ಯ ಇಂದಿನಿಂದಲೇ ಆರಂಭವಾಗಲಿ. ಮನೆಗಳಲ್ಲಿ ಕನ್ನಡ ಅಭ್ಯಸಿಸೋಣ. ಮರೆತು ಹೋದ ಹಳೆ ಪದಗಳ ಮರು ಅನ್ವೇಷಣೆ ನಡೆಯಲಿದೆ. ಮತ್ತೆ ಕೆಲ ಪದಗಳನ್ನು ಸೃಷ್ಟಿ ಮಾಡುವ ಪ್ರಮೇಯವೂ ಬರುತ್ತದೆ. ನಮ್ಮ ಮಾತೃಭಾಷೆಯ ಹಲವು ಪದಗಳು ಮರೆತು ಹೋಗಿವೆ. ಕನ್ನಡ ಮಾತನಾಡುವ ಪ್ರಯತ್ನ ಇಂದಿನಿಂದಲೇ ಆರಂಭವಾಗಲಿ. ಕನ್ನಡ ಮಾತನಾಡಬೇಕಾದಲ್ಲಿ ಕನ್ನಡವನ್ನೇ ಮಾತನಾಡೋಣ ಎಂದು ಶ್ರೀ ಶಂಕರಾಚಾರ್ಯ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಹೇಳಿದರು.

ಬೆಳಗಾವಿಯಲ್ಲಿ ಮಳೆ: ಶಾಲಾ ಕಾಲೇಜುಗಳಿಗೆ ಇಂದು ರಜೆ

ಬೆಳಗಾವಿ: ಬೆಳಗಾವಿ ನಗರ ಸೇರಿದಂತೆ ಖಾನಾಪುರ ಘಟ್ಟ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ. ನಿರಂತರ ಮಳೆ ಹಿನ್ನಲೆಯಲ್ಲಿ ಜೂನ್ 25 ರಂದು ಆಯ್ದ ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಬೆಳಗಾವಿ ನಗರ ಪ್ರದೇಶದಲ್ಲಿ ನಿರಂತರ ಮಳೆ ಸುರಿತುತ್ತಿರುವ ಹಿನ್ನಲೆಯಲ್ಲಿ ನಗರದ ಪ್ರಮುಖ ರಸ್ತೆಗಳು ನದಿಯಂತಾಗಿವೆ. ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು ಚರಂಡಿ ನೀರು ಮನೆಗಳಿಗೆ ನುಗ್ಗುವ ಪರಿಸ್ಥಿತಿ ನಿರ್ಮಾಣವಾಗಿದೆ. ವ್ಯಾಪಕ ಮಳೆ ಹಿನ್ನೆಲೆಯಲ್ಲಿ ಜೂನ್ 25 ರಂದು ಬೆಳಗಾವಿ ಮತ್ತು ಖಾನಾಪುರ ತಾಲೂಕಿನ ಅಂಗನವಾಡಿ ಕೇಂದ್ರಗಳು, ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ರಜೆ ಘೋಷಿಸಿ ಆದೇಶ ಹೊರಡಿಸಿದ್ದಾರೆ.

ಪ್ರವಾಸಿ ಪ್ರಪಂಚ ಅಂದ್ರೆ
ಬರೀ ಪತ್ರಿಕೆ ಅಷ್ಟೇ ಅಲ್ಲ!
ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ
ಸಮಗ್ರ ವೆಬ್‌ಸೈಟ್
pravasiprapancha
.com

ಭಾರೀ ಮಳೆಗೆ ರಾಷ್ಟ್ರೀಯ ಹೆದ್ದಾರಿ ತಡೆಗೋಡೆ ಕುಸಿತ

ಸಕಲೇಶಪುರ: ತಾಲ್ಲೂಕಿನಾದ್ಯಂತ ಮಂಗಳವಾರ ಇಡೀ ದಿನ ಧಾರಾಕಾರ ಮಳೆ ಸುರಿದ ಪರಿಣಾಮ ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಮುಂಜಾನೆ 3 ಗಂಟೆಯಿಂದಲೇ ಬಿಡುವಿಲ್ಲದಂತೆ ಒಂದೇ ಸಮನೆ ಮಳೆ ಸುರಿಯುತ್ತಿದ್ದರಿಂದ ಶಾಲಾ, ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಯಿತು. ಮಾರನಹಳ್ಳಿಯಿಂದ ಆನೇಮಹಲ್ವರೆಗೆ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿಯಿಂದಾಗಿ ತಡೆಗೋಡೆಗಳು ಅಲ್ಲಲ್ಲಿ ಕುಸಿದಿದ್ದು, ಯಾವುದೇ ಕ್ಷಣದಲ್ಲಿ ಗುಡ್ಡ ಕುಸಿಯುವ ಸಾಧ್ಯತೆಗಳು ಕಂಡು ಬಂದಿದೆ.

ಆನೇಮಹಲ್ ಬಳಿ ಭಾರೀ ಎತ್ತರದ ಗುಡ್ಡವನ್ನು 90 ಡಿಗ್ರಿಯಲ್ಲಿ ಕತ್ತರಿಸಿರುವುದರಿಂದ 15 ದಿನಗಳ ಹಿಂದೆ ಕುಸಿದಿತ್ತು. ಅದೇ ಸ್ಥಳದಲ್ಲಿ ಇನ್ನೂ ಕುಸಿಯುವ ಸಾಧ್ಯತೆ ಇರುವುದರಿಂದ ಗುತ್ತಿಗೆದಾರ ಕಂಪನಿ ಸಿಬ್ಬಂದಿ ಪ್ಲಾಸ್ಟಿಕ್ ಹೊದಿಗೆ ಹೊದಿಸುತ್ತಿದ್ದದ್ದು ಕಂಡು ಬಂತು.

ಪಶ್ಚಿಮಘಟ್ಟದ ಅಂಚಿನಲ್ಲಿರುವ ಅತ್ತಿಹಳ್ಳಿ, ಬಿಸಿಲೆ, ಕಾಗಿನಹರೆ, ದೇವಾಲದಕೆರೆ, ಕುಮಾರಳ್ಳಿ ಮಾರನಹಳ್ಳಿ ಸೇರಿದಂತೆ ಹೆತ್ತೂರು, ಹಾನುಬಾಳು ಹೋಬಳಿ ವ್ಯಾಪ್ತಿಯಲ್ಲಿ ಸುಮಾರು 20ಸೆಂ.ಮೀ. ಮಳೆ ದಾಖಲಾಗಿದೆ.

ಪಟ್ಟಣ ಸುತ್ತಮುತ್ತಲಿನ ಪ್ರದೇಶದಲ್ಲಿಯೂ ಸಹ ಭಾರೀ ಮಳೆಯಾಗಿದ್ದು, ಅಲ್ಲಲ್ಲಿ ಮರಗಳು ರಸ್ತೆಯ ಮೇಲೆ ಹಾಗೂ ವಿದ್ಯುತ್ ತಂತಿಯ ಮೇಲೆ ಬಿದ್ದು ಗ್ರಾಮೀಣ ಪ್ರದೇಶಗಳ ಹಲವು ಕಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

ಎಚ್.ಡಿ.ಕುಮಾರಸ್ವಾಮಿಗೆ ಎಚ್.ಕೆ.ಪಾಟೀಲ್ ತಿರುಗೇಟು

ನನ್ನ ಪತ್ರಕ್ಕೆ ಕಾಲವೇ ಉತ್ತರಿಸುತ್ತೆ

ಗದಗ: ಅಕ್ರಮ ಗಣಿ ವರದಿ ಇಟ್ಟುಕೊಂಡು ಸಿಎಂ ಸಿದ್ದರಾಮಯ್ಯ ಪೂಜೆ ಮಾಡುತ್ತಾ ಕುಳಿತಿದ್ದಾರಾ ಎಂದು ಪ್ರಶ್ನೆ ಹಾಕುತ್ತಿರುವ ಕುಮಾರಸ್ವಾಮಿಯವರು, ತಮ್ಮ ಆಡಳಿತಾವಧಿಯಲ್ಲಿ ಅವರ ಕೈಯಲ್ಲಿದ್ದ ಅದೇ ವರದಿಗೆ ಏನು ಮಾಡಿದ್ರು? ಎಂದು ಸಚಿವ ಎಚ್.ಕೆ.ಪಾಟೀಲ್ ಕಿಡಿಕಾರಿದ್ದಾರೆ.

ಅಕ್ರಮ ಗಣಿ ಪತ್ರ ಸಂಬಂಧ ಸಂಸದ ಎಚ್.ಡಿ.ಕುಮಾರಸ್ವಾಮಿ ನೀಡಿರುವ ಪ್ರತಿಕ್ರಿಯೆಗೆ ಸುದ್ದಿಗಾರರೊಂದಿಗೆ ಮಾತನಾಡಿ, ನೀವು ವರದಿಗೆ ಅಭಿಷೇಕ ಮಾಡ್ತಾ ಕುಳಿತಿದ್ರಾ? ಕುಮಾರಸ್ವಾಮಿ ಅವರಿಗೆ ಪ್ರಶ್ನೆ ಮಾಡಿದ್ದಾರೆ. ಅಕ್ರಮ ಗಣಿ ವರದಿ ನನ್ನ ಪತ್ರದ ಮುಖ್ಯ ವಿಷಯವಲ್ಲ. ನಾನು ಬರೆದ ಪತ್ರದ ಉದ್ದಕ್ಕೂ ಒಂದು ವಿಚಾರವನ್ನು ಮಾತ್ರ ಜೋರಾಗಿ ಬರೆದಿದ್ದೇನೆ ರಾಜ್ಯದ ಸಂಪತ್ತು ಮರಳಿ ಕನ್ನಡಿಗರಿಗೆ ದೊರಕಬೇಕು. ಅಕ್ರಮ ಗಣಿ ಮೂಲಕ ನಷ್ಟವಾದ ಒಂದೂವರೆ ಲಕ್ಷ ಕೋಟಿ ರೂಪಾಯಿ ಮೌಲ್ಯದ ಸಂಪತ್ತನ್ನು ರಾಜ್ಯಕ್ಕೆ ತರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು. ಎಚ್.ಕೆ. ಪಾಟೀಲ್ ತಮ್ಮ ಪತ್ರದ ಕುರಿತು ಮಾತನಾಡಿ, ನನ್ನ ಪತ್ರ ಕಸದ ಬುಟ್ಟಿಗೆ ಹೋಗುತ್ತದೆಯೋ ಅಥವಾ ಕ್ರಮ ಕೈಗೊಳ್ಳುವ ದಿಕ್ಕಿಗೆ ಹೋಗುತ್ತದೆಯೋ ಕಾಲವೇ ಉತ್ತರಿಸಲಿ. ನಾನು ಯಾರಿಗೆ ಪತ್ರ ಬರೆದಿದ್ದೇನೆ ಅವರು ಅದನ್ನು ನಿರ್ಧರಿಸುತ್ತಾರೆ ಎಂದು ಹೇಳಿದರು.



ಅಕ್ರಮ ಗಣಿಗಾರಿಕೆಯಲ್ಲಿ ರಾಜ್ಯದ ಬೊಕ್ಕಸಕ್ಕೆ ರಾಜ್ಯದಲ್ಲಿ 1.50 ಲಕ್ಷ ಕೋಟಿ. ರು. ನಷ್ಟ ಆಗುತ್ತಿದೆ. ಈ ಸಂಪತ್ತು ಕನ್ನಡಿಗರಿಗೆ ವಾಪಾಸ್ ತರಬೇಕೆನ್ನುವುದು ನನ್ನ ಪತ್ರದ ಉದ್ದೇಶವಾಗಿದೆ. ಕುಮಾರಸ್ವಾಮಿ ಅವರೇ ಕೇಂದ್ರದಲ್ಲಿ ಕಬ್ಬಿಣ ಮತ್ತು ಉಕ್ಕು ಸಚಿವರಾಗಿದ್ದೀರಿ. ಈ ಬಗ್ಗೆ ಗಮನ ಹರಿಸಿ ಲೂಟಿ ಆಗುತ್ತಿರುವ ರಾಜ್ಯದ ಸಂಪತ್ತು ಉಳಿಸಿ.

-**ಎಚ್.ಕೆ.ಪಾಟೀಲ್**, ಕಾನೂನು ಸಚಿವ

ಸಿಎಂ ಬದಲಾವಣೆ ವಿಚಾರ ಡಿಸೆಂಬರ್‌ವರೆಗೂ ಕಾದು ನೋಡಿ

ಲಿಂಗಾಯತರಿಗೆ ಎಂಎಲ್‌ಸಿ ಸ್ಥಾನ ನೀಡಲಿ

ದಾವಣಗೆರೆ: ಈ ಬಾರಿ ಲಿಂಗಾಯತ ಸಮುದಾಯದವರಿಗೆ ವಿಧಾನ ಪರಿಷತ್ ಸ್ಥಾನ ನೀಡ ಬೇಕು. ಈ ಬಾರಿ ಚುನಾವಣೆಯಲ್ಲಿ ಲಿಂಗಾಯತ ಸಮುದಾಯ ಕಾಂಗ್ರೆಸ್ ಪರವಾಗಿ ನಿಂತಿದೆ. ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕೆಂದರೆ ಲಿಂಗಾಯತ ಸಮುದಾಯಕ್ಕೆ ವಿಧಾನ ಪರಿಷತ್ ಸ್ಥಾನ ನೀಡಬೇಕು ಎಂದು ಶಾಸಕ ಬಸವರಾಜು ಶಿವಗಂಗಾ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮೂರು ವಿಧಾನ ಪರಿಷತ್ ಸ್ಥಾನ ನೀಡಲು ಕಾಂಗ್ರೆಸ್ ಸರಕಾರ ಮುಂದಾಗಿದ್ದು ಮೂರರಲ್ಲಿ ಒಂದು ಸ್ಥಾನವನ್ನು ಲಿಂಗಾಯತರಿಗೆ ನೀಡಬೇಕು ಎಂದರು. ಸಿಎಂ ಬದಲಾವಣೆ ವಿಚಾರವಾಗಿ ಡಿಸೆಂಬರ್ ವರೆಗೂ ಕಾದು ನೋಡಿ. ಅಲ್ಲಿಯವರೆಗೂ ಈ ಬಗ್ಗೆ ಮಾತನಾಡುವುದು ಬೇಡ ಎಂದು ಶಿವಗಂಗಾ ಹೇಳಿದರು. ಮಾಜಿ ಸಂಸದ ಅನಂತಕುಮಾರ್ ಹೆಗಡೆ ಗನ್ ಮ್ಯಾನ್ ಹಲ್ಲೆ ಮಾಡಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಬಸವರಾಜು ಶಿವಗಂಗಾ, ವ್ಯಕ್ತಿ ಯಾವ ಸಮುದಾಯವರೆ ಆಗಿರಲಿ. ಅವರ ಮೇಲೆ ಹಲ್ಲೆ ಮಾಡುವುದು ತಪ್ಪು. ಯಾರೇ ಹಲ್ಲೆ ಮಾಡಿದರೂ ಅವರ ಮೇಲೆ ಕ್ರಮ ಆಗಬೇಕು ಎಂದರು.

ಸಿಎಲ್‌ಪಿ ಸಭೆಯಲ್ಲಿ ಯಾರೂ ಮಾತನಾಡಲ್ಲ

ಸ್ವಪಕ್ಷದ ಶಾಸಕರೇ ಸರಕಾರದ ವಿರುದ್ಧವಾಗಿ ಮಾತನಾಡುತ್ತಿರುವುದಕ್ಕೆ ಬಸವರಾಜು ಶಿವಗಂಗಾ ಪ್ರತಿಕ್ರಿಯಿಸಿ, ಪಕ್ಷದ ಕೆಲ ಹಿರಿಯರು ಏನೋ ಮಾತನಾಡಿದ್ದಾರೆ. ಹಾಗೆ ಮಾತನಾಡಬಾರದಿತ್ತು. ತಮಗೆ ವೈಯಕ್ತಿಕವಾಗಿ ಏನೇ ಸಮಸ್ಯೆಯಿದ್ದರೂ ಸಿಎಲ್‌ಪಿ ಸಭೆಯಲ್ಲಿ ಮಾತನಾಡಬೇಕಿತ್ತು. ಸಿಎಲ್‌ಪಿ ಸಭೆಯಲ್ಲಿ ಯಾರೂ ಮಾತನಾಡುವುದಿಲ್ಲ. ಆ ಸಭೆಯಲ್ಲಿ ಯಾರೂ ಕೂಡ ಸಿಂಹ, ಹುಲಿ ಇಟ್ಟುಕೊಂಡು ಕುಳಿತಿರುವುದಿಲ್ಲ. ತಮಗನಿಸಿದ್ದನ್ನು ಮಾತನಾಡಿದರೆ ಆಯಿತು. ಆದರೆ, ಅಲ್ಲಿ ಮಾತನಾಡದೆ ಸುಮ್ಮನೆ ಮಾಧ್ಯಮಗಳ ಮುಂದೆ ಏನೇನೋ ಮಾತನಾಡುತ್ತಾರೆ ಎಂದರು.

- **3 ವಿಧಾನ ಪರಿಷತ್ ಸ್ಥಾನದಲ್ಲಿ ಒಂದು ಸ್ಥಾನವನ್ನು ಲಿಂಗಾಯತರಿಗೆ ನೀಡಲಿ**
- **ಈ ಬಾರಿ ಚುನಾವಣೆಯಲ್ಲಿ ಲಿಂಗಾಯತ ಸಮುದಾಯ ಕಾಂಗ್ರೆಸ್ ಪರವಾಗಿ ನಿಂತಿದೆ.**

ಬಿ.ಆರ್. ಪಾಟೀಲರ ಹೋರಾಟ ಮನೋಭಾವ ಸಿದ್ಧಾಂತಗಳ ಬಗ್ಗೆ ಗೌರವವಿದೆ

ಸಮಸ್ಯೆಗಳಿದ್ದರೆ ಮುಖ್ಯಮಂತ್ರಿ ಬಳಿ ಚರ್ಚಿಸಲಿ

ಕಲಬುರಗಿ: ಶಾಸಕರಾದ ಬಿ.ಆರ್. ಪಾಟೀಲ್ ಅವರು ಹಿರಿಯರು. ಅವರ ಹೋರಾಟ ಮನೋಭಾವ ಹಾಗೂ ಸಿದ್ಧಾಂತಗಳ ಬಗ್ಗೆ ಗೌರವವಿದೆ. ಏನಾದರೂ ಸಮಸ್ಯೆಗಳಿದ್ದರೆ ಸಿಎಂ, ಡಿಸಿಎಂ ಹಾಗೂ ಎಐಸಿಸಿ ಅಧ್ಯಕ್ಷರ ಬಳಿ ಚರ್ಚಿಸಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿ.ಆರ್ ಪಾಟೀಲ್ ಅವರು ಹಿರಿಯರು ಏನಾದರೂ ಸಮಸ್ಯೆ ಇದ್ದರೆ ಸೂಕ್ತವಾದ ವೇದಿಕೆಯಲ್ಲಿ ಹಿರಿಯರೊಂದಿಗೆ ಚರ್ಚಿಸಬೇಕಿತ್ತು. ಹೀಗೆ ಬಹಿರಂಗವಾಗಿ ಹೇಳುವುದರಿಂದ ಸರಕಾರಕ್ಕೆ ಮುಜುಗರವಾಗುತ್ತದೆ ಎಂದರು.

ಫೋನ್ ನಲ್ಲಿ ನಡೆದ ಸಂಭಾಷಣೆಯಲ್ಲಿ ಅಧಿಕಾರಿ ಸ್ಪಷ್ಟವಾಗಿ ಪಾಟೀಲ್ ಅವರ ಆರೋಪಗಳನ್ನು ಅಲ್ಲಗಳೆದು ಅಂತಹ ಯಾವುದಾದರೂ ಲೋಪ ಆಗಿದ್ದಕ್ಕೆ ಆಧಾರ ಕೊಟ್ಟರೆ ಕಾನೂನು ಕ್ರಮ ಜರುಗಿಸುವುದಾಗಿ ಹೇಳಿದ್ದಾರೆ. ಅದನ್ನು ಹಿರಿಯರಾದ ಪಾಟೀಲರು ಸಿಎಂ ಅವರ ಬಳಿ ಚರ್ಚಿಸಬೇಕಿತ್ತು. ಈಗ ಸಿಎಂ ಅವರನ್ನು ಕರೆದಿದ್ದಾರೆ ಅಲ್ಲಿ ಏನು ಚರ್ಚೆ ನಡೆಯುತ್ತದೆಯೋ ನೋಡೋಣ ಎಂದರು. ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ ಎನ್ನುವ ಮಾತನ್ನು ಅಲ್ಲಗಳೆದ ಸಚಿವರು, ಗ್ಯಾರಂಟಿ ಯೋಜನೆಗಳಿಗೆ 50,000 ಕೋಟಿ ರು. ಖರ್ಚು ಮಾಡಲಾಗಿದೆ. ಇದರಿಂದಾಗಿ ಜನರ ಆರ್ಥಿಕ ಸ್ಥಿರತೆ ಉಂಟಾಗಿದೆ. ಕೇಂದ್ರ ಸರಕಾರದ ನೀತಿಗಳಿಂದಾಗಿ ಸಮಸ್ಯೆ ಎದುರಿಸುತ್ತಿದ್ದ ಜನರಿಗೆ ಇದರಿಂದ ಅನುಕೂಲವಾಗಿದೆ. ಆದರೆ, ಕೇಂದ್ರ ಸರಕಾರ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡುವಲ್ಲಿ ತೋರಿಸುತ್ತಿರುವ ಅಸಡ್ಡೆಯಿಂದಾಗಿ ಸಮಸ್ಯೆಯಾಗಿದೆ ಎಂದರು.

ಬಿಜೆಪಿ ನಾಯಕರು ಸಚಿವ ಜಮೀರ್ ಅಹಮದ್ ಖಾನ್ ಅವರ ರಾಜೀನಾಮೆ ಒತ್ತಾಯಿಸಿದ್ದಾರೆ ಎಂದು ಪ್ರಶ್ನಿಸಿದಾಗ, ಮೊದಲು ಬಿಜೆಪಿ ರಾಜ್ಯಾಧ್ಯಕ್ಷರ ರಾಜೀನಾಮೆಗೆ ಅವರದೇ ಪಕ್ಷದ ಕೆಲವರು ಒತ್ತಾಯಿಸುತ್ತಿದ್ದಾರಲ್ಲ ಎಂದು ತಿರುಗೇಟು ನೀಡಿದರು.

ರಾಜಕೀಯದಿಂದ ಕೇಂದ್ರ ಅಮೆರಿಕ ಪ್ರವಾಸ ನಿರಾಕರಿಸಿದೆ

ಅಮೆರಿಕ ಪ್ರವಾಸಕ್ಕೆ ಕೇಂದ್ರ ಅನುಮತಿ ನಿರಾಕರಿಸಿದ್ದು, ರಾಜಕೀಯ ಕಾರಣವಲ್ಲದೇ, ಮತ್ತೇನು.? ಕೇಂದ್ರ ಸರಕಾರದ ಅನುಮತಿ ನಿರಾಕರಣೆಯಿಂದಾಗಿ ರಾಜ್ಯಕ್ಕೆ ಬರಬೇಕಿದ್ದ ನಿರೀಕ್ಷಿತ 15,000 ಕೋಟಿ ರು.ಬಂಡವಾಳ ನಿಂತುಹೋಗಿದ್ದು, ಕನಿಷ್ಠ ಮೂರು ಸಾವಿರ ಜನರಿಗೆ ಉದ್ಯೋಗ ಕೈತಪ್ಪಿದೆ. ಕೇಂದ್ರ ವಿದೇಶಾಂಗ ಸಚಿವರಿಗೆ ಅನುಮತಿ ನಿರಾಕರಣೆಗೆ ವಿವರಣೆ ನೀಡುವಂತೆ ಪತ್ರ ಬರೆಯಲಾಗಿದೆ ಅವರಿಂದ ಇನ್ನೂ ಉತ್ತರ ಬಂದಿಲ್ಲ. ಅವರು ನಮ್ಮ ಯಾವ ಪತ್ರಕ್ಕೆ ಉತ್ತರ ಕೊಟ್ಟಿದ್ದಾರೆ? ಕೇಂದ್ರದಲ್ಲಿರುವುದು ಎನ್‌ಡಿಎ ಸರಕಾರವಲ್ಲ ನೋ ಡಾಟಾ ಅವಲೇಬಲ್ ಸರಕಾರ ಎಂದು ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ರಾಜ್ಯಕ್ಕೆ ಬರಬೇಕಾಗಿದ್ದ ಬಂಡವಾಳವನ್ನು ಕೇಂದ್ರ ಸರಕಾರ ಮಹಾರಾಷ್ಟ್ರ ಗುಜರಾತ್, ಅಸ್ಸಾಂ ರಾಜ್ಯಗಳಿಗೆ ಬಿಡುಗಡೆ ಮಾಡಿದೆ. ಅಸ್ಸಾಂನಲ್ಲಿ ಸೆಮಿಕಂಡಕ್ಟರ್ ಸ್ಥಾಪನೆ ಮಾಡುತ್ತಿದ್ದಾರೆ. ಇಲ್ಲಿ ನಾವು ಕಷ್ಟಪಡಬೇಕು ಅಲ್ಲಿ ಸಬ್ಸಿಡಿ ಎಂದು ಬಂಡವಾಳ ಬಿಡುಗಡೆ ಮಾಡಲಾಗುತ್ತದೆ. ಅವರು ಕಷ್ಟಪಟ್ಟು ಬಂಡವಾಳ ಆಕರ್ಷಿಸಲಿ.

-**ಪ್ರಿಯಾಂಕ್ ಖರ್ಗೆ**, ಸಚಿವ

ಡಿಕೆಶಿ, ಡಿಕೆಸು ಆಶೀರ್ವಾದಿಂದ ನನಗೆ ಅನುದಾನ ಸಿಗ್ತಿದೆ

ಅನುದಾನ ಹಂಚಿಕೆಯಲ್ಲಿ ನನಗೆ ಸಮಾಧಾನವಿದೆ

ರಾಮನಗರ: ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ. ಸುರೇಶ್ ಆಶೀರ್ವಾದ ಇರೋದಕ್ಕೆ ನನಗೆ ಅನುದಾನ ಸಿಗುತ್ತಿದೆ. ನಮಗೆ ತೃಪ್ತಿ ಇದೆ. ಅವರ ಆಶೀರ್ವಾದ ಪಡೆದುಕೊಂಡರೆ ಅನುದಾನ ಸಿಗಬಹುದು ಎಂದು ಶಾಸಕ ಬಾಲಕೃಷ್ಣ ತಿಳಿಸಿದ್ದಾರೆ.

ಸರಕಾರದ ವಿರುದ್ಧ ಕಾಂಗ್ರೆಸ್ ಶಾಸಕರ ಅಸಮಾಧಾನ ವಿಚಾರ ಕುರಿತು ಬಿಡದಿಯಲ್ಲಿ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಹಿರಿಯ ಶಾಸಕರಲ್ಲಿ ಮನವಿ ಮಾಡುತ್ತೇನೆ. ನಿಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು, ಸಿಎಂ ಭೇಟಿ ಮಾಡಿ. ನಿಮ್ಮ ಸಮಸ್ಯೆಗಳ ಬಗ್ಗೆ ಮಾತನಾಡಿ. ಬಜೆಟ್‌ನಲ್ಲಿ ಪ್ರತಿ ಶಾಸಕರಿಗೂ 50 ಕೋಟಿ ಹಣ ಕೊಡಿ ಅಂತ ಸಿಎಂ ಹೇಳಿದ್ದಾರೆ. ಕೆಲವೇ ದಿನಗಳಲ್ಲಿ ಎಲ್ಲಾ ಕ್ಷೇತ್ರಕ್ಕೂ ಅನುದಾನ ಬರುತ್ತೆ. ರಾಜೀನಾಮೆ ಕೊಡ್ತೀನಿ ಅನ್ನೋದು ಕೆಲವರ ವೈಯಕ್ತಿಕ ಅಭಿಪ್ರಾಯ. ಅದನ್ನ ಸೂಕ್ತ ವೇದಿಕೆಯಲ್ಲಿ ವ್ಯಕ್ತಪಡಿಸಬೇಕು ಎಂದರು.

ಕೆಲವೊಂದು ಸಂದರ್ಭಗಳಲ್ಲಿ ಏರುಪೇರು ಆದಾಗ ಮನಸ್ಸಿಗೆ ಬೇಸರ ಆಗುತ್ತೆ. ಬೇಸರ ಆಗುವುದರಿಂದ ಸಮಸ್ಯೆ ಬಗೆಹರಿಯಲ್ಲ. ಸಿಎಂ, ಡಿಸಿಎಂ ಜತೆ ಕೂತು ಮಾತುಕತೆ ಮಾಡಬೇಕು. ರಾಜೀನಾಮೆ ಕೊಟ್ರೆ, ಇನ್ನೊಬ್ಬ ಎಂಎಲ್‌ಎ ಆಗುತ್ತಾನೆ. ರಾಜೀನಾಮೆ ಕೊಟ್ರೆ ಸಮಸ್ಯೆ ಬಗೆಹರಿಯುತ್ತಾ? ಜನ ಆಶೀರ್ವಾದ ಮಾಡಿದ್ದಾರೆ, ನಾವು ಕೆಲಸ ಮಾಡಬೇಕು. ಸಿಎಂ, ಡಿಸಿಎಂ ಭೇಟಿ ಮಾಡಿ ಸಮಸ್ಯೆ ಹೇಳಿಕೊಂಡು ಅನುದಾನ ತರಬೇಕು.

-**ಬಾಲಕೃಷ್ಣ**, ಶಾಸಕ

ವಿಶ್ವವಾಣಿ

ಸಂಪಾದಕೀಯ

ಮತ್ತೆ ಬಾಲ ಬಿಚ್ಚಿದ ಬಿಲಾವಲ್

ಸಿಂಧೂ ನದಿ ಜಲ ಒಪ್ಪಂದದ ಅಡಿಯಲ್ಲಿ ಪಾಕಿಸ್ತಾನಕ್ಕೆ ನ್ಯಾಯಯುತವಾಗಿ ಸಲ್ಲಬೇಕಾದ ನೀರಿನ ಪಾಲನ್ನು ಭಾರತವು ಇನ್ನು ಮುಂದೆಯೂ ನಿರಾಕರಿಸಿದರೆ, ಪಾಕಿಸ್ತಾನವು ಯುದ್ಧಕ್ಕೆ ಸಿದ್ಧವಾಗಬೇಕಾಗುತ್ತದೆ ಎಂದು ಅಬ್ಬರಿಸಿದ್ದಾರೆ ಅಲ್ಲಿನ ಮಾಜಿ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಜರ್ದಾರಿ. ಸದರಿ ಜಲ ಒಪ್ಪಂದದ ಅಡಿಯಲ್ಲಿ ಪಾಕಿಸ್ತಾನಕ್ಕೆ ಭಾರತವು ನೀರನ್ನು ಬಿಡುಗಡೆ ಮಾಡುವುದು ಅಥವಾ ಮಾಡದೇ ಇರುವುದು ಬೇರೆಯದೇ ವಿಚಾರ. ಆದರೆ ನಾವಿಲ್ಲಿ ಗಮನಿಸಬೇಕಾದ್ದು, ಈ ಚರ್ಚಾವಿಷಯವನ್ನಿಟ್ಟುಕೊಂಡು ಬಿಲಾವಲ್ ಅವರು ಮತ್ತೊಮ್ಮೆ ಬಾಲ ಅಲ್ಲಾಡಿಸಿರುವ ಪರಿ! ಮಾತೆತ್ತಿದರೆ 'ಭಾರತದ ಮೇಲೆ ಯುದ್ಧ ಸಾರುತ್ತೇವೆ' ಎಂಬ 'ಸುರ್ ಸುರ್' ಬತ್ತಿಯನ್ನು ಸುಡುವ ಇಂಥವರಿಗೆ, ಕನಿಷ್ಠಪಕ್ಷ ತಮ್ಮದೇ ದೇಶದ ಆರ್ಥಿಕ ಪರಿಸ್ಥಿತಿ, ಸೇನಾ ಸಾಮರ್ಥ್ಯ ಮತ್ತು ಯುದ್ಧೋಪಕರಣಗಳ ಪ್ರಸಕ್ತ ಸ್ಥಿತಿಗತಿಯ ಅರಿವಿದೆಯೇ? ಅಥವಾ ಅಲ್ಲಿನ ರಾಜಕೀಯ ನಾಯಕರಿಗೆ ಭಾರತದ ಮೇಲೆ ಯುದ್ಧಕ್ಕೆ ಮುಂದಾಗಿ ಅದನ್ನು ದಕ್ಕಿಸಿಕೊಳ್ಳುವ ಇಚ್ಛಾಶಕ್ತಿ ಇದೆಯೇ? ವಿನಾಕಾರಣ ಕಾರ್ಗಿಲ್ ಯುದ್ಧಕ್ಕೆ ಕಾರಣರಾದ ಪಾಕಿಗಳು, ಅದರ ಪರಿಣಾಮವಾಗಿ ಭಾರತದಿಂದ ಹಾಕಿಸಿಕೊಂಡ ಬರೆಯನ್ನು ನೆಕ್ಕಿ ಗುಣಪಡಿಸಿಕೊಳ್ಳಲಿಕ್ಕೇ ವರ್ಷಗಳು ಹಿಡಿದವು. ಉಗ್ರರಿಗೆ ಚಿತಾವಣೆ ನೀಡಿ ಭಾರತದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಿದ್ದಕ್ಕೆ ಪ್ರತಿಯಾಗಿ ಭಾರತ ಕೈಗೊಂಡ 'ಸರ್ಜಿಕಲ್ ಸ್ಟ್ರೈಕ್'ನಿಂದಾಗಿ ಪಾಕಿ ಉಗ್ರರ ತರಬೇತಿ ಶಿಬಿರಗಳೇ ಪುಡಿಗಟ್ಟಿದವು. ಇನ್ನು ಪಹಲ್ಗಾಮ್‌ನಲ್ಲಿ ಉಗ್ರರು ಮೆರೆದ ಪೈಶಾಚಿಕ ಕೃತ್ಯಕ್ಕೆ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಮೂಲಕ ಭಾರತವು ನೀಡಿದ ತಪರಾಕಿಯನ್ನು ತಡೆಯಲಾರದೆ ದಮ್ಮಯ್ಯ ಗುಡ್ಡೆ ಹಾಕಿ ಕದನವಿರಾಮವಾಗುವಂತೆ ನೋಡಿಕೊಂಡಿದ್ದೂ ಇದೇ ಪಾಕಿಸ್ತಾನವೇ. ಇಷ್ಟೆಲ್ಲಾ ಕಹಿವಾಸ್ತವಗಳ ಅನಾವರಣವಾಗಿದ್ದರೂ ಬಿಲಾವಲ್ ಭುಟ್ಟೋ ಮಹಾಶಯರು ಅದ್ಯಾವ ಭಂಡಧೈರ್ಯದಲ್ಲಿ ಭಾರತದ ಮೇಲೆ ಯುದ್ಧಕ್ಕೆ ಸನ್ನದ್ಧರಾಗುವ ಮಾತಾಡಿದರೋ ಗೊತ್ತಾಗುತ್ತಿಲ್ಲ. ಕಪಿಚೇಷ್ಟೆಗೂ ಒಂದು ಮಿತಿಯಿದೆ ಎಂಬುದನ್ನು ಬಿಲಾವಲ್‌ರಿಗೆ ತಿಳಿಹೇಳುವವರು ಯಾರು?!

ಸೊಂಪಾದಕೀಯ

ಕೂಲ್ ಕಸ್ಟಮರ್?

ಸಾಮಾನ್ಯವಾಗಿ ಬ್ಯುಸಿನೆಸ್ ಮಾಡುವವರು ನಂಬುವ ತತ್ವ ಅಂದ್ರೆ 'ಕಸ್ಟಮರ್ ಈಸ್ ದ ಕಿಂಗ್'– 'ಗ್ರಾಹಕ ಅಂದ್ರೆ ದೇವರು' ಅಂತ. ಆದರೆ ಕೆಲವು ಗ್ರಾಹಕರು ಮೈಮೇಲೆ ದೆವ್ವ ಬಂದಂತೆ ಆಡಿದಾಗ ಇಂಥ ಮಾತುಗಳಿಗೆ ಬೆಲೆ ಇಲ್ಲ ಅಂತ ಅನ್ನಿಸೋದು ಸಹಜ. ಕೂಲ್ ಆಗಿರುವ ಕಸ್ಟಮರ್‌ಗಳು ಬಂದಾಗ ಅಂಗಡಿ ಮಾಲೀಕರಿಗೆ ಖುಷಿ ಆಗುತ್ತದೆ. ಆದರೆ 'ಕಸ್ಟಮರ್ ಲಾಸ್ಟ್ ಹಿಸ್ ಕೂಲ್' ಅನ್ನುವಂಥ ಘಟನೆಯೊಂದು ಬೆಂಗಳೂರಿನ ವಿಜಯನಗರದ ಎಂಸಿ ಲೇಔಟ್‌ನಲ್ಲಿ ನಡೆದಿದೆ. ಅದು ಕೂಡ ಕೂಲ್ ಆಗಿರುವ ಐಸ್ ಕ್ರೀಂ ಮಾರುವ ಅಂಗಡಿಯಲ್ಲಿ. ತಣ್ಣಗೆ ಕೂತು ಐಸ್ ಕ್ರೀಂ ತಿನ್ನುವ ಅಂಗಡಿಯಲ್ಲಿ ಜಗಳದ ಬಿಸಿ ಏರಿದೆ. ಆದರೆ ತಣ್ಣನೆಯ ಐಸ್ ಕ್ರೀಂ ಮಾರುವ ಅಂಗಡಿಯಲ್ಲಿ ನಡೆದ ಈ ಜಗಳ ತಣ್ಣಗಾಗುವುದರೊಳಗೆ ಸಾಕಷ್ಟು ಅನಾಹುತಗಳು ನಡೆದಿವೆ ಅನ್ನೋದು ವಿಪರ್ಯಾಸ. ಮಧ್ಯರಾತ್ರಿ ಈ ಅಂಗಡಿಗೆ ಬಂದ ಕೆಲವು ಗ್ರಾಹಕರು ಐಸ್ ಕ್ರೀಂ ಕೇಳಿದ್ದಾರೆ. ಆದರೆ ರಾತ್ರಿ 1 ಗಂಟೆ ಆದ್ದರಿಂದ ಇದು ಅಂಗಡಿ ಮುಚ್ಚುವ ಸಮಯ. ಹಾಗಾಗಿ ಐಸ್ ಕ್ರೀಂ ಸರ್ವ್ ಮಾಡೋಕೆ ಆಗಲ್ಲ, ಬೇಕಿದ್ರೆ ಪಾರ್ಸಲ್ ಕೊಡ್ತೀವಿ ಅಂದಿದ್ದಾರೆ ಅಂಗಡಿಯವರು. ಆದರೆ ನಾವು ಇಲ್ಲೇ ದುಂಡು ಟೇಬಲ್‌ನಲ್ಲಿ ಕುಂತು ತಿನ್ನಬೇಕು ಅಂತ ವರಾತ ತೆಗೆದ ಗ್ರಾಹಕರು ನಂತರ ದುಂಡಾವರ್ತಿ ನಡೆಸಿದ್ದಾರೆ. ಅಲ್ಲಿನ ಸಿಬ್ಬಂದಿ ಜತೆ ವಾಗ್ವಾದ ಮಾಡಿ ಅಲ್ಲಿದ್ದ ಕಂಪ್ಯೂಟರ್ ಅನ್ನು ತಳ್ಳಿದ್ದಲ್ಲದೆ ಅಲ್ಲಿದ್ದ ಕೂಲ್ ಐಸ್ ಕ್ರೀಂ ಅಂಗಡಿಯ ಗ್ರಾಹಕರ ಮೇಲೂ ಗರಂ ಆಗಿದ್ದಾರೆ. ಇಲ್ಲಿಂದ ಎದ್ದು ಹೊರಡಿ ಅಂತ ಐಸ್ ಮೆಲ್ಲುತ್ತಿದ್ದ ಗ್ರಾಹಕರನ್ನು ಬಲವಂತವಾಗಿ ಹೊರಗೆ ಕಳಿಸಿದ್ದಾರೆ. ಜತೆಗೆ ಸಿಬ್ಬಂದಿಗೆ ಬೆದರಿಕೆ ಹಾಕಿ ಹಲ್ಲೆ ನಡೆಸಲು ಪ್ರಯತ್ನ ಪಟ್ಟಿದ್ದಾರೆ. ಇದೆಲ್ಲದರ ಪರಿಣಾಮವಾಗಿ ಕೂಲ್ ಆಗಿದ್ದ ಐಸ್ ಕ್ರೀಂ ಅಂಗಡಿ ರಣಾಂಗಣವಾಗಿ ಜಗಳದ ಬಿಸಿ ಜೋರಾಗಿದೆ. ಇದೆಲ್ಲವೂ ಸಿಸಿಟಿವಿಯಲ್ಲಿ ಸೆರೆ ಆಗಿರೋದ್ರಿಂದ ಈಗ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಆದರೆ, ಸಿಸಿಟಿವಿಯಲ್ಲಿ ಸೆರೆ ಆಗಿರುವ ಈ ಪುಂಡರು ಐಸ್ ಕ್ರೀಂ ಅಂಗಡಿಗೆ ಸೆರೆ ಕುಡಿದುಕೊಂಡು ಬಂದು ಈ ರೀತಿ ವರ್ತಿಸಿದ್ದಾರಾ ಅನ್ನೋದರ ಬಗ್ಗೆ ಇನ್ನಷ್ಟೇ ಗೊತ್ತಾಗಬೇಕಿದೆ.

ಸಂಪಾದಕರ ಸದ್ಯಶೋಧನೆ

ಏರ್ ಟ್ರಾಫಿಕ್ ಕಂಟ್ರೋಲ್‌ನ ಮಹತ್ವ

ವಿಮಾನ ನಿಲ್ದಾಣದಲ್ಲಿರುವ ಏರ್ ಟ್ರಾಫಿಕ್ ಕಂಟ್ರೋಲ್ (Air Traffic Control- ATC) ಇಡೀ ವಿಮಾನ ಹಾರಾಟದ ನರಮಂಡಲ ಇದ್ದ ಹಾಗೆ. ಟೇಕಾಫ್, ಲ್ಯಾಂಡಿಂಗ್‌ನಿಂದ ಹಿಡಿದು ವಿಮಾನದ ಪ್ರತಿ ಚಲನವಲನವನ್ನು ನಿಯಂತ್ರಿಸುವುದು ಎಟಿಸಿ. ಇದು ವಿಮಾನಯಾನದಲ್ಲಿ ಅತ್ಯಂತ ಪ್ರಮುಖ ಹಾಗೂ ಜವಾಬ್ದಾರಿಯುತ ವಿಭಾಗ. ಅದರ ಅಣತಿಯಿಲ್ಲದೇ ವಿಮಾನ ಒಂದಂಗುಲ ಕದಲುವುದಿಲ್ಲ. ಇಂಥ ಎಟಿಸಿ ಸಿಬ್ಬಂದಿಯಿಂದಲೂ ತಪ್ಪುಗಳು ಸಂಭವಿಸುವ ಸಾಧ್ಯತೆ ಇದೆಯಾ? ವಿಮಾನಗಳ ಭದ್ರತೆ, ನಿಖರ ದಿಕ್ಕು ನಿರ್ವಹಣೆ, ಸಮಯಪಾಲನೆ ಮತ್ತು ಸುಗಮ ವಾಯುಸಂಚಾರಕ್ಕಾಗಿ ಎಟಿಸಿ ಸಿಬ್ಬಂದಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಾರೆ. ಈ ಕೆಲಸವು ಮಾನವೀಯ ಶ್ರಮ ಹಾಗೂ ತಂತ್ರಜ್ಞಾನ ಎರಡರ ಸಹಾಯದಿಂದ ನಡೆಯುತ್ತದೆ. ನಿಗೂಢವಾಗಿ ನಿಯಂತ್ರಿಸಬೇಕಾದ ಈ ವ್ಯವಸ್ಥೆಯಲ್ಲಿ ಕೆಲವೊಮ್ಮೆ ತಪ್ಪುಗಳು ಸಂಭವಿಸಬಹುದು. ವಿಮಾನಗಳ ಹಾರಾಟವನ್ನು ನಿರ್ವಹಿಸುವ ಎಟಿಸಿಯ ಪ್ರಮುಖ ಕೆಲಸಗಳೆಂದರೆ, ಗಗನದಲ್ಲಿ ವಿಮಾನಗಳ ಮಧ್ಯೆ ದೂರ ಕಾಯ್ದುಕೊಳ್ಳುವುದು, ವಿಮಾನಗಳ ಲ್ಯಾಂಡಿಂಗ್ ಹಾಗೂ ಟೇಕಾಫ್‌ಗೆ ಅನುಮತಿಸುವುದು, ಗಗನಮಾರ್ಗ (air routes) ನಿರ್ವಹಣೆ, ತುರ್ತು ಪರಿಸ್ಥಿತಿಯಲ್ಲಿ ಮಾರ್ಗದರ್ಶನ ನೀಡುವುದು ಹಾಗೂ ವಾತಾವರಣದ ತ್ವರಿತ ಮಾಹಿತಿ ಹಂಚಿಕೆ. ಎಟಿಸಿಯ ಸಿಬ್ಬಂದಿ 3 ಪ್ರಮುಖ ವಿಭಾಗಗಳಲ್ಲಿ ಕೆಲಸ ಮಾಡುತ್ತಾರೆ. ಮೊದಲನೆಯದು, ಟವರ್ ಕಂಟ್ರೋಲ್. ವಿಮಾನ ನಿಲ್ದಾಣದಲ್ಲಿ ಟೇಕಾಫ್, ಲ್ಯಾಂಡಿಂಗ್ ಹಾಗೂ ಭೂಮಿಯ ಮೇಲಿನ ವಿಮಾನದ ಚಲನೆಯ ನಿಯಂತ್ರಣ. ಎರಡನೆಯದು, ವಿಮಾನಗಳು ನಿಲ್ದಾಣದ ಗಗನದಲ್ಲಿ ಪ್ರವೇಶಿಸುವ ಹಂತ (Approach Control)ದಲ್ಲಿ ನಿಯಂತ್ರಣ ಹಾಗೂ ಮೂರನೆಯದು, ವಿಮಾನಗಳು ನಡುಗಗನದಲ್ಲಿ ಹಾರುತ್ತಿರುವಾಗ ಅದರ ಪಥ (Area/En-route Control) ನಿರ್ವಹಣೆ. ಈ ಸಿಬ್ಬಂದಿ 20–30 ವಿಮಾನಗಳ ಸಂಚಾರವನ್ನು ಏಕಕಾಲದಲ್ಲಿ ನಿಯಂತ್ರಿಸುತ್ತಿರುತ್ತಾರೆ. ಪ್ರತಿ ವಿಮಾನಕ್ಕೂ ಬೇರೆಬೇರೆ ಸೂಚನೆಗಳು, ದಿಕ್ಕು, ಎತ್ತರ ಇತ್ಯಾದಿ ನಿಯಮಗಳಿರುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ತಪ್ಪುಗಳ ಮೂಲ ಸಿಬ್ಬಂದಿಯ ದೋಷವೂ ಆಗಿರುವುದುಂಟು. ಎಟಿಸಿ ನಿರ್ವಹಣೆ ಸುಲಭವಲ್ಲ. ಅದು ಸದಾ ಅತ್ಯಂತ ಒತ್ತಡದ ಕೆಲಸ. ನಿರಂತರ ಎಚ್ಚರಿಕೆ, ಗಮನ ಹಾಗೂ ತ್ವರಿತ ನಿರ್ಧಾರ ತೆಗೆದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಕೆಲವೊಮ್ಮೆ ಮಾನವೀಯ ತಪ್ಪುಗಳು ಆಗಬಹುದು. ಉದಾಹರಣೆಗೆ, ಏಕಕಾಲದಲ್ಲಿ 2 ವಿಮಾನಗಳಿಗೆ ಸಮಾನ ಎತ್ತರ ಹಾಗೂ ದಿಕ್ಕಿನ ಸೂಚನೆ ನೀಡುವುದು. ಇದರ ಪರಿಣಾಮವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಎಟಿಸಿ ಸಿಬ್ಬಂದಿ 8 ಗಂಟೆಗಳಷ್ಟು ತೀವ್ರ ಒತ್ತಡದ ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಾರೆ. ಅನಿಯಮಿತ ನಿದ್ರೆ, ವಿಶ್ರಾಂತಿಯ ಕೊರತೆ, ಉದ್ವೇಗ, ವೈಯಕ್ತಿಕ ತಾಪತ್ರಯ, ಚಿಂತೆ ಮುಂತಾದವು ದೋಷಗಳಿಗೆ ಕಾರಣವಾಗಬಹುದು. ಉದಾಹರಣೆಗೆ, 2006ರಲ್ಲಿ ಬ್ರೆಜಿಲ್‌ನಲ್ಲಿ ಸಂಭವಿಸಿದ ವಿಮಾನ ಅಪಘಾತಕ್ಕೆ ಎಟಿಸಿ ಸಿಬ್ಬಂದಿಯ ತಪ್ಪು ಪ್ರಮುಖ ಕಾರಣವಾಗಿತ್ತು. ವಿಮಾನಗಳೊಂದಿಗೆ ಎಟಿಸಿ ನಿಖರ ಸಂಪರ್ಕವನ್ನು ಇಟ್ಟುಕೊಳ್ಳಬೇಕು. ಆದರೆ ಕೆಲವು ಸಮಯದಲ್ಲಿ ರೇಡಿಯೋ ತಂತ್ರಜ್ಞಾನದಲ್ಲಿ ಅಡೆತಡೆಯಾಗಬಹುದು ಅಥವಾ ಪೈಲಟ್ ಮತ್ತು ಎಟಿಸಿ ಸಿಬ್ಬಂದಿ ನಡುವಿನ ಅರ್ಥದ ವ್ಯತ್ಯಾಸದಿಂದ ತಪ್ಪುಗಳು ಸಂಭವಿಸಬಹುದು. ಉದಾಹರಣೆಗೆ, "Descend to 7000 feet' (7000 ಅಡಿಗೆ ಇಳಿಸಿ) ಎನ್ನುವ ಬದಲು "Climb to 7000 feet' (7000 ಅಡಿಗೆ ಮೇಲೇರಿಸಿ) ಎಂದು ತಪ್ಪಾಗಿ ಅರ್ಥೈಸಿದರೆ ಅಪಾಯ ಸಂಭವಿಸಬಹುದು. ರಡಾರ್, ಕಮ್ಯುನಿಕೇಶನ್ ಸಿಸ್ಟಮ್, ಡೇಟಾ ಲಿಂಕ್ ಇತ್ಯಾದಿಯಲ್ಲಿ ತಾಂತ್ರಿಕ ದೋಷಗಳು ಸಂಭವಿಸಿದರೆ ಎಟಿಸಿ ಸಿಬ್ಬಂದಿಗೆ ಸದ್ಯದ ಮಾಹಿತಿ ಲಭ್ಯವಾಗದೆ ತಪ್ಪು ನಿರ್ಧಾರ ತೆಗೆದುಕೊಳ್ಳಬಹುದಾಗಿದೆ. ಹೊಸ ಎಟಿಸಿ ಸಿಬ್ಬಂದಿಗೆ ತಕ್ಷಣವೇ ಎಲ್ಲ ತಾಂತ್ರಿಕತೆ, ಮಾನವ ಸಂವಹನ ಹಾಗೂ ತುರ್ತು ನಿರ್ವಹಣಾ ಶಕ್ತಿಯ ಅಭ್ಯಾಸ ಇಲ್ಲದಿರುವ ಸಾಧ್ಯತೆ ಇದೆ. ಇದರಿಂದ ತ್ವರಿತ ನಿರ್ಧಾರಗಳ ವೇಳೆ ತಪ್ಪುಗಳು ಆಗಬಹುದು. ತಪ್ಪಾದ ಗಗನಮಾರ್ಗ ಸೂಚನೆಯಿಂದ ವಿಮಾನವು ಹೆಚ್ಚಾಗಿ ಇಂಧನ ಬಳಕೆ ಮಾಡಬಹುದು ಅಥವಾ ವಿಳಂಬವಾಗಬಹುದು. ಕೆಲವೊಮ್ಮೆ ತಪ್ಪು ಸಂಯೋಜನೆಯಿಂದಾಗಿ ಎರಡು ವಿಮಾನಗಳು ತುಂಬಾ ಹತ್ತಿರವಾಗುತ್ತವೆ. ಇದನ್ನು near miss ಎನ್ನುತ್ತಾರೆ. ಇದು ಅಪಘಾತದಿಂದ ಮೀರಿ ಉಳಿದ ಸ್ಥಿತಿ. ಎಟಿಸಿ ಸಿಬ್ಬಂದಿ ತಪ್ಪು ಮಾಡಿದರೆ ಒಂದಕ್ಕಿಂತ ಹೆಚ್ಚು ವಿಮಾನಗಳ ಮೇಲೆ ಪರಿಣಾಮ ಬೀರಬಹುದು.

ಭೂಲೋಕದ ದೇವತೆಗಳೋ, ಯಮನ ಸೋದರರೋ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

What I always believe...
First see the patient medicolegally, then medically, then technically, then comes empathy. I suggest to do work honestly and sincerely but never allow the honesty to get in to your head.

Consider ourselves like any other profession. We don't have any extra privilege in our country and in fact we are more vulnerable and are easy targets than anyone else.

Don't get fooled by terminologies like noble profession, God life saver and doing charity and feeling good. Those words were apt in past years, not now. Be honest but accept reality*.

ನಾನು ಸದಾ ಏನನ್ನು ನಂಬುತ್ತೇನೆ ಎಂದರೆ...



ಮೊದಲು ರೋಗಿಯನ್ನು ನ್ಯಾಯ-ವೈದ್ಯಕೀಯ (ಮೆಡಿಕೋ-ಲೀಗಲ್) ದೃಷ್ಟಿಯಿಂದ ನೋಡಿ, ಆನಂತರ ವೈದ್ಯಕೀಯ ದೃಷ್ಟಿಯಿಂದ ಪರೀಕ್ಷಿಸಿ, ಆಮೇಲೆ ತಾಂತ್ರಿಕವಾಗಿ ವಿಶ್ಲೇಷಿಸಿ. ಕೊನೆಯಲ್ಲಿ ಮಾನವೀಯತೆಯಿಂದ ಒಟ್ಟಾರೆಯಾಗಿ ಪರಿಶೀಲಿಸಿ. ಕೆಲಸವನ್ನು ಪ್ರಾಮಾಣಿಕತೆಯಿಂದ ಹಾಗೂ ನಿಷ್ಠೆಯಿಂದ ಮಾಡಿ. ಆದರೆ ಆ ಪ್ರಾಮಾಣಿಕತೆಯೆನ್ನುವುದು ನಿಮ್ಮ ನೆತ್ತಿಗೆ ಏರಬಾರದು.

ನಾವು ನಮ್ಮ ವೃತ್ತಿಯನ್ನು, ಇತರ ವೃತ್ತಿಗಳಂತೆ ಒಂದು ವೃತ್ತಿಯನ್ನಾಗಿ ಪರಿಗಣಿಸಬೇಕು. ಈ ದೇಶದಲ್ಲಿ ವೈದ್ಯರಿಗಾಗಿ ಯಾವುದೇ ವಿಶೇಷ ಅನುಕೂಲತೆಗಳಿಲ್ಲ. ವಾಸ್ತವವಾಗಿ, ನಾವು ಇತರರಿಗಿಂತ ಹೆಚ್ಚು ಅಸುರಕ್ಷಿತರಾಗಿದ್ದೇವೆ ಹಾಗೂ ಆಕ್ರಮಣಕ್ಕೆ ಸುಲಭವಾಗಿ ಗುರಿಯಾಗಬಲ್ಲವರಾಗಿದ್ದೇವೆ.

'ಪವಿತ್ರ ವೃತ್ತಿ', 'ದೇವರಂತೆ ಜೀವ ಉಳಿಸುವವರು', 'ಧರ್ಮ, ಕರುಣೆ' ಇತ್ಯಾದಿ ಪದಗಳಿಗೆ ಮೋಸ ಹೋಗಬೇಡಿ. ಇವು ಒಂದಾನೊಂದು ಕಾಲಕ್ಕೆ ಮಾತ್ರ ಸೂಕ್ತವಾಗಿದ್ದವು. ಇವತ್ತು ಆರ್ಥಿಕ, ಸಾಮಾಜಿಕ ಮತ್ತು ವೈದಕೀಯ ಪರಿಸ್ಥಿತಿಗಳು ಭಿನ್ನವಾಗಿವೆ. ಪ್ರಾಮಾಣಿಕರಾಗಿರಿ, ಆದರೆ ಸತ್ಯಾಂಶವನ್ನು ಒಪ್ಪಿಕೊಳ್ಳಿ.

ಮೊದಲು ಇಂಗ್ಲಿಷ್ ಬರಹವನ್ನು ಓದಿ, ನಂತರ ಆ ಇಂಗ್ಲಿಷ್ ಬರಹದ ಕನ್ನಡ ಭಾವಾನುವಾದವನ್ನು ಓದಿ. ಮೊದಲಿನ ಇಂಗ್ಲಿಷ್ ಬರಹದ ಒಂದು ಸ್ಲೈಡ್, ಇತ್ತೀಚಿನ ಒಂದು ನ್ಯಾಯ-ವೈದ್ಯಕೀಯ ಸಮಾವೇಶದಲ್ಲಿ (ಮೆಡಿಕೊ-ಲೀಗಲ್ ಕಾನ್ಫರೆನ್ಸ್) ನಡೆದ ಒಂದು ಚರ್ಚೆಯಲ್ಲಿ ಕಂಡುಬಂದಿತು. ಈ ಸ್ಲೈಡಿನ ಧೋರಣೆಯನ್ನು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಈ ಸ್ಲೈಡ್, ವಾಸ್ತವ ಪರಿಸ್ಥಿತಿಯನ್ನು, ಇರುವ ಹಾಗೆ ನಮ್ಮ ಮುಂದೆ ಇಟ್ಟಿದೆ.

'ವೈದ್ಯಕೀಯ ವೃತ್ತಿ ಎನ್ನುವುದು ಪವಿತ್ರ ವೃತ್ತಿ, ವೈದ್ಯರು ಭೂಮಿಯ ಮೇಲೆ ನಡೆದಾಡುವ ದೇವರು, ವೈದ್ಯರು ಎಂದರೆ ಮೃತ್ಯುವಿನ ದವಡೆಯಲ್ಲಿರುವ ರೋಗಿಯನ್ನು ಪಾರು ಮಾಡಬಲ್ಲ ಧೀಮಂತರು, ಹೋಗುತ್ತಿರುವ ಜೀವವನ್ನು ತಡೆಹಿಡಿಯಬಲ್ಲ ಸಮರ್ಥರು' ಇತ್ಯಾದಿ ಭಾವನೆಗಳು ಒಂದಾನೊಂದು ಕಾಲದಲ್ಲಿ ಇದ್ದಿರಬಹುದು. ಆದರೆ ಅಂಥ ಭಾವನೆಯು ಇಂದಿನ ಸಮಾಜದಲ್ಲಿ ಇಲ್ಲ.

ಎಲ್ಲ ವೃತ್ತಿಗಳಂತೆ ವೈದ್ಯಕೀಯವೂ ಒಂದು ವೃತ್ತಿ, ಅಷ್ಟೇ. ಎಲ್ಲ ವೃತ್ತಿಪರರು ತೆರಿಗೆಯನ್ನು ಕಟ್ಟುವಂತೆ ನಾವೂ ಕಟ್ಟುತ್ತೇವೆ. ಎಲ್ಲ ವೃತ್ತಿಗಳಿಗೆ ಗ್ರಾಹಕ ಕಾಯಿದೆಯು ಹೇಗೆ ಅನ್ವಯ ಆಗುತ್ತದೆಯೋ, ಹಾಗೆಯೇ ವೈದ್ಯ ವೃತ್ತಿಗೂ ಆಗುತ್ತದೆ. 'ಸಾವಿನೊಡನೆ ಸೆಣಸುವ ವೈದ್ಯನಿಗೆ' ಈ ಸಮಾಜವು ಯಾವುದೇ ರಿಯಾಯತಿಯನ್ನು ನೀಡಿಲ್ಲ. 'ಎಲ್ಲ ವ್ಯಾಪಾರಿಗಳಂತೆ ನಾವೂ ವ್ಯಾಪಾರಿಗಳು' ಎನ್ನುವ ಅರ್ಥದಲ್ಲಿ ಸಮಾಜವು ನಮ್ಮನ್ನು ನಡೆಸಿಕೊಳ್ಳುತ್ತಿದೆ. ಹಾಗಾಗಿ ನಾವು ಇನ್ನು ಮೇಲಾದರೂ ವೃತ್ತಿಪರರಂತೆ ನಡೆದುಕೊಳ್ಳಬೇಕು.

ಈ ಕಟುವಾಸ್ತವದ ಹಿನ್ನೆಲೆಯಲ್ಲಿ, ನಮ್ಮ ಬಳಿ ಚಿಕಿತ್ಸೆಗಾಗಿ ಬರುವ ಪ್ರತಿಯೊಬ್ಬ ರೋಗಿಯೂ 'ನಮ್ಮ ಮೇಲೆ ನಾಳೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಬಲ್ಲ' ಎನ್ನುವ ಕಹಿಸತ್ಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಬಲು ಎಚ್ಚರಿಕೆಯಿಂದ ಚಿಕಿತ್ಸೆಯನ್ನು ಆರಂಭಿಸುವುದು ಸೂಕ್ತವೆ ನಿಸುತ್ತದೆ. ಇದಕ್ಕೆ 'ಆತ್ಮರಕ್ಷಣಾ ವೈದ್ಯಕೀಯ' ಅಥವಾ 'ಡಿಫೆನ್ಸಿವ್ ಪ್ರಾಕ್ಟೀಸ್' ಎಂದು ಹೆಸರು.

ನಮ್ಮ ಸಮಾಜದಲ್ಲಿ ಮಾತ್ರವಲ್ಲ, ಜಗತ್ತಿನ ಯಾವುದೇ ಕಾಲದ, ಯಾವುದೇ ದೇಶದ, ಯಾವುದೇ ಸಮಾಜದಲ್ಲಿ ವೈದ್ಯರಿಗೆ ಅಂಥ ಗೌರವ ಇದ್ದಹಾಗೆ ಕಾಣುವುದಿಲ್ಲ. ವೈದ್ಯರನ್ನು 'ಭೂಮಿಯ ಮೇಲೆ ನಡೆದಾಡುವ ದೇವರು' ಎಂದು ಹೊಗಳಿ ಗೌರೀಶಂಕರಕ್ಕೇರಿಸುವುದು ಅಥವಾ 'ಯಮಧರ್ಮನ ಸಹೋದರ' ಎಂದು ಹಿಯಾಳಿಸುವುದು, ಈ ಎರಡೂ ಅತಿರೇಕಗಳು ವೈದ್ಯರಿಗೆ ಅನಗತ್ಯ. ವೈದ್ಯರನ್ನೂ ಉಪ್ಪು, ಖಾರ, ಹುಳಿ ತಿನ್ನುವ ಎಲ್ಲ ಮನುಷ್ಯರಂತೆ ನಡೆಸಿಕೊಂಡರೆ ಸಾಕಾಗುತ್ತದೆ. ಇದು ಈ ಸ್ಲೈಡಿನ ಸಾಮಾನ್ಯ ಆಶಯವಾಗಿತ್ತು.

- **ಹಲ್ಲೆ ಮತ್ತು ದಂಡ:** ಭಾರತದಲ್ಲಿ ಎರಡು ರೀತಿಯ ಸಮಸ್ಯೆಗಳಿವೆ. ಮೊದಲನೆಯದು ವೈದ್ಯರು ಹಾಗೂ ಆಸ್ಪತ್ರೆಗಳ ಮೇಲೆ ನಡೆಯುವ ಹಲ್ಲೆ. ಇಂಥ ಪ್ರಕರಣಗಳಲ್ಲಿ ನಮ್ಮ ನ್ಯಾಯಾಲಯಗಳು ಆರೋಪಿ/ಅಪರಾಧಿಗಳನ್ನು ವಿಚಾರಿಸಿ ಅವರಿಗೆ ಶಿಕ್ಷೆಯನ್ನು ಕೊಟ್ಟ ಉದಾಹರಣೆಗಳು ಅಥವಾ ದಂಡವನ್ನು ವಿಧಿಸಿ ಆ ಹಣವನ್ನು ವೈದ್ಯರಿಗೆ/ಆಸ್ಪತ್ರೆಗೆ ಕೊಟ್ಟ ಉದಾಹರಣೆಗಳು ಅಪರೂಪ.

ಎರಡನೆಯದು, ಯಾರಾದರೂ ವೈದ್ಯರು ಅಥವಾ ಆಸ್ಪತ್ರೆಗಳ ಮೇಲೆ ವೈದ್ಯಕೀಯ ನಿರ್ಲಕ್ಷ್ಯ ಅಥವಾ ಮತ್ತೊಂದು ಆರೋಪದ ಮೇಲೆ ನ್ಯಾಯಾಲಯಕ್ಕೆ ಹೋದರೆ, ಅಲ್ಲಿ ಆರೋಪವು ಸಾಬೀತಾದರೆ, ಆಗ ರೋಗಿಗೆ/ರೋಗಿಯ ಕಡೆಯವರಿಗೆ ನೀಡುವ ದಂಡ ದೊಡ್ಡ ಪ್ರಮಾಣದಲ್ಲಿರುತ್ತದೆ. ಇದನ್ನು ನೆನೆಸಿಕೊಂಡರೆ, ಬಹುಶಃ ಅನಾದಿ ಕಾಲದಿಂದ ವೈದ್ಯರಿಗೆ ದೊರೆಯುತ್ತಿದ್ದ ದಂಡ/ಶಿಕ್ಷೆಯಲ್ಲಿ ಅಂಥ ದೊಡ್ಡ ಬದಲಾವಣೆಯಾಗಿಲ್ಲ ಎಂದೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಮಾನವ ಇತಿಹಾಸದ ಲಭ್ಯ ಪ್ರಪ್ರಥಮ ದಾಖಲೆಯಾದ 'ಹಮುರಬಿ ಶಾಸನ'ವು ನೆನಪಿಗೆ ಬರುತ್ತಿದೆ. ಹಾಗಾಗಿ ಅದನ್ನು ಒಮ್ಮೆ ಅವಲೋಕಿಸುವುದು ಸೂಕ್ತವಾದೀತು.

- **ಹಮುರಬಿ ಶಾಸನ:** ಇದು ಬ್ಯಾಬಿಲೋನಿಯನ್ ಸಂಸ್ಕೃತಿಗೆ ಸೇರಿದ, ಮನುಕುಲದ ಪ್ರಪ್ರಥಮ ನ್ಯಾಯ-ವೈದ್ಯಕೀಯ ಶಾಸನ. ಇದು ಪ್ರಾಚೀನ ಜಗತ್ತಿನ ಅತ್ಯಂತ ದೀರ್ಘವಾದ, ಕ್ರಮಬದ್ಧವಾದ ಹಾಗೂ ಸಂರಕ್ಷಿತ ಶಾಸನವಾಗಿದೆ. ಇದನ್ನು ಬ್ಯಾಬಿಲೋನಿಯದ ಅಕ್ಕಾಡಿಯನ್ ಭಾಷೆಯ ಕ್ಯೂನಿಫಾರಮ್ ಲಿಪಿಯಲ್ಲಿ ಬರೆಯಲಾಗಿದೆ. ಬ್ಯಾಬಿಲೋನ್ ಸಾಮ್ರಾಜ್ಯವನ್ನು ಆಳಿದ ಮೊದಲ ವಂಶದ ಆರನೆಯ ಅರಸ ಹಮ್ಮುರಬಿ (ಕ್ರಿ.ಪೂ.1810-1750) ಈ ಶಾಸನದ ಕರ್ತೃ. ಕ್ರಿ.ಪೂ.1755-1750ರ ಅವಧಿಯಲ್ಲಿ ಈ ಶಾಸನವು ರೂಪುಗೊಂಡಿರಬಹುದು. ಇದನ್ನು ಬೆಸಾಲ್ಟ್ ಶಿಲಾ ಫಲಕದ (ಬೆಸಾಲ್ಟ್ ಸ್ಟೀಲ್) ಮೇಲೆ ಕೆತ್ತಲಾಗಿದೆ. ಬೆಸಾಲ್ಟ್ ಶಿಲಾಫಲಕವು ಸುಮಾರು 2.25 ಮೀಟರ್ ಎತ್ತರವಿದೆ. ಈ ಶಿಲಾಫಲಕದ ಮೇಲೆ 282 ಸಿವಿಲ್ (ಕೌಟುಂಬಿಕ ಕಾನೂನು, ಆಸ್ತಿ ಕಾನೂನು ಮತ್ತು ವಾಣಿಜ್ಯ ಕಾನೂನು) ಮತ್ತು ಕ್ರಿಮಿನಲ್ ವಿಷಯಗಳಿಗೆ ಸಂಬಂಧಿಸಿದ ಶಾಸನಗಳನ್ನು 4130 ಸಾಲುಗಳಲ್ಲಿ ಕೆತ್ತಲಾಗಿದೆ. ಮೂಲ ಶಾಸನವನ್ನು ಪ್ಯಾರಿಸ್ಸಿನ ಲೂವ್ರ್ ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಇದರ ಹಲವು ಪ್ರತಿಗಳು ಜಗತ್ತಿನ ಹಲವು ಕಡೆ ದೊರೆಯುತ್ತವೆ.
- **ವೈದ್ಯಕೀಯ ಶಾಸನಗಳು:** ವೈದ್ಯಕೀಯಕ್ಕೆ ಸಂಬಂಧಿಸಿದಂತೆ, 215-223ರವರೆಗೆ, ಒಂಬತ್ತು ಶಾಸನಗಳಿವೆ. ಇವನ್ನು ಒಂದೊಂದಾಗಿ ಗಮನಿಸೋಣ.

215. ಒಬ್ಬ ವೈದ್ಯನು ರೋಗಿಯ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ಮಾಡಿ, ಅವನ ಕಣ್ಣನ್ನು ಉಳಿಸಿದರೆ, ಅವನಿಗೆ ಹತ್ತು ಶೆಕೆಲ್ ಹಣ (ಬೆಳ್ಳಿ ನಾಣ್ಯಗಳು) ಸಂದಾಯವಾಗಬೇಕು.
216. ಶಸ್ತ್ರಚಿಕಿತ್ಸೆಯನ್ನು ಪಡೆದ ವ್ಯಕ್ತಿಯು ಹೀನ ಕುಲದವನಾಗಿದ್ದರೆ, ಅವನು ಐದು ಶೆಕೆಲ್ ಹಣವನ್ನು ವೈದ್ಯರಿಗೆ ಸಂದಾಯ ಮಾಡಬೇಕು.
217. ಚಿಕಿತ್ಸೆಯನ್ನು ಪಡೆದವನು ಗುಲಾಮನಾಗಿದ್ದರೆ, ಆ ಗುಲಾಮನ ಯಜಮಾನನು ಎರಡು ಶೆಕೆಲ್ ಹಣವನ್ನು ವೈದ್ಯರಿಗೆ ಸಂದಾಯ ಮಾಡಬೇಕು.
218. ಒಬ್ಬ ವೈದ್ಯನು ಚಿಕಿತ್ಸೆಯನ್ನು ನೀಡುವಾಗ ರೋಗಿಯು ಸತ್ತರೆ ಅಥವಾ ಕಣ್ಣಿನ ದೃಷ್ಟಿಯು ನಾಶವಾದರೆ, ವೈದ್ಯನ ಕೈಗಳನ್ನು ಛೇದಿಸಬೇಕು.
219. ಒಬ್ಬ ವೈದ್ಯನು ಹೀನ ಕುಲದವನ ಗುಲಾಮನಿಗೆ ಶಸ್ತ್ರಚಿಕಿತ್ಸೆಯನ್ನು ನೀಡುವಾಗ, ಆ ಗುಲಾಮನು ಮರಣಿಸಿದರೆ, ವೈದ್ಯನು ಮತ್ತೊಬ್ಬ ಗುಲಾಮನನ್ನು ಬದಲಿಯನ್ನಾಗಿ ಹೀನಕುಲದವನಿಗೆ ನೀಡಬೇಕು.
220. ಒಬ್ಬ ವೈದ್ಯನು ತನ್ನ ಶಸ್ತ್ರದಿಂದ ಒಂದು ಗಂತಿಯನ್ನು (ಟ್ಯೂಮರ್) ಛೇದಿಸುವಾಗ, ಅವನ ಕಣ್ಣನ್ನು ಛೇದಿಸಿದರೆ, ಆಗ ವೈದ್ಯನು ಗುಲಾಮನ ಬೆಲೆಯ ಅರ್ಧವನ್ನು ನೀಡಬೇಕು.
221. ಒಬ್ಬ ವೈದ್ಯನು ರೋಗಿಯ ಮುರಿದ ಮೂಳೆಯನ್ನು ಸರಿಪಡಿಸಿದರೆ ಅಥವಾ ರೋಗಗ್ರಸ್ತ ಮೃದು ಅಂಗವನ್ನು ಗುಣಪಡಿಸಿದರೆ, ಆಗ ರೋಗಿಯು ವೈದ್ಯನಿಗೆ ಐದು ಶೆಕೆಲ್ ಹಣವನ್ನು ನೀಡಬೇಕು.
222. ರೋಗಿಯು ಹೀನ ಕುಲದವನಾಗಿದ್ದರೆ, ಅವನು ವೈದ್ಯನಿಗೆ ಮೂರು ಶೆಕೆಲ್ ಹಣವನ್ನು ನೀಡಬೇಕು.
223. ರೋಗಿಯು ಗುಲಾಮನಾಗಿದ್ದರೆ, ಆ ಗುಲಾಮನ ಯಜಮಾನನು ವೈದ್ಯನಿಗೆ 2 ಶೆಕೆಲ್ ಹಣವನ್ನು ಕೊಡಬೇಕು.

ಪ್ರಾಚೀನ ಮೆಸೊಪೊಟೋಮಿಯನ್ ಸಂಸ್ಕೃತಿಯಲ್ಲಿ ಬಳಕೆಯಲ್ಲಿದ್ದ ನಾಣ್ಯವನ್ನು 'ಶೆಕೆಲ್' ಎಂದು ಕರೆಯುತ್ತಿದ್ದರು. ಚಿನ್ನ ಮತ್ತು ಬೆಳ್ಳಿಯಿಂದ ಮಾಡಿದ ಶೆಕೆಲ್ ನಾಣ್ಯಗಳನ್ನು ಠಂಕಿಸುತ್ತಿದ್ದರು. ಆದರೆ ಸರ್ವೇಸಾಮಾನ್ಯವಾಗಿ ಬೆಳ್ಳಿ ಶೆಕೆಲ್ ಮಾತ್ರ ದಿನನಿತ್ಯದ ವ್ಯವಹಾರದಲ್ಲಿ ಬಳಕೆಯಲ್ಲಿತ್ತು. ಒಂದು ಶೆಕೆಲ್ ಸರಿ ಸುಮಾರು 11 ಗ್ರಾಂ ತೂಗುತ್ತಿತ್ತು. 10 ಶೆಕೆಲ್ ಎಂದರೆ 110 ಗ್ರಾಂ ಬೆಳ್ಳಿಯಾಯಿತು. ಈ ಲೇಖನವನ್ನು ಬರೆಯುತ್ತಿರುವ ದಿನದಂದು (22.06.2025) ಭಾರತದಲ್ಲಿ 110 ಗ್ರಾಂ ಬೆಳ್ಳಿಗೆ ರೂ.12,100 ಬೆಲೆಯಿದೆ. ಇದರಿಂದ ಪ್ರಾಚೀನ ಮೆಸಪೊಟೋಮಿಯನ್ ಸಂಸ್ಕೃತಿಯಲ್ಲಿದ್ದ ವೈದ್ಯರು ಎಷ್ಟು ಹಣವನ್ನು ಸಂಪಾದನೆ ಮಾಡುತ್ತಿದ್ದರು ಎನ್ನುವ ಬಗ್ಗೆ ನಮಗೆ ಒಂದು ಪರಿಕಲ್ಪನೆಯು ದೊರೆಯುತ್ತದೆ.

ಹಮ್ಮುರಬಿಯು ತನ್ನ ಶಾಸನಗಳನ್ನು ರೂಪಿಸುವಾಗ, ಆತನು ಅನೇಕ ಅಂಶಗಳನ್ನು ಪರಿಗಣಿಸಿಲ್ಲ ಎನ್ನುವುದನ್ನು ನಾವು ಮನಗಾಣಬಹುದು.

- ವೈದ್ಯಕೀಯ ವಿಜ್ಞಾನವು ಒಂದು ಅಪರಿಪೂರ್ಣ ವಿಜ್ಞಾನ. ವೈದ್ಯಕೀಯದಲ್ಲಿ 2+2=4 ಆಗಲೇಬೇಕೆಂಬ ನಿಯಮವೇನೂ ಇಲ್ಲ.
- ವೈದ್ಯಕೀಯ ವಿಜ್ಞಾನದಲ್ಲಿ ಇಂದಿಗೂ ಸಂಶೋಧನೆಗಳು ನಡೆಯುತ್ತಿವೆ. ಪ್ರತಿದಿನವೂ ಹೊಸ ಹೊಸ ವಿಚಾರಗಳು ತಿಳಿದು ಬರುತ್ತಿವೆ. ಮನುಷ್ಯನಿಗೆ ದೇಹದ ಬಗ್ಗೆ ವೈದ್ಯರು ತಿಳಿದಿರುವುದಕ್ಕಿಂತ, ತಿಳಿಯಬೇಕಾದದ್ದು ಇನ್ನೂ ತುಂಬಾ ಇದೆ.
- ಪ್ರತಿಯೊಬ್ಬ ಮನುಷ್ಯನ ಶರೀರವು ವಿಶಿಷ್ಟವಾದದ್ದು. ಒಬ್ಬನ ಶರೀರದ ಹಾಗೆ ಮತ್ತೊಬ್ಬನ ಶರೀರವೂ ಇರಲೇಬೇಕೆಂಬ ನಿಯಮವೇನೂ ಇಲ್ಲ. ನ್ಯಾಯಾಧೀಶರು ತೀರ್ಮಾನವನ್ನು ನೀಡುವಾಗ ಈ ವ್ಯಕ್ತಿ ವೈಲಕ್ಷಣತೆಯನ್ನು (ಈಡಿಯೊಸಿಂಕ್ರಸಿ) ಗಮನದಲ್ಲಿ ಇಟ್ಟುಕೊಳ್ಳಬೇಕು.
- ಸಾಕ್ಷ್ಯಾಧಾರಿತ ಚಿಕಿತ್ಸೆಯನ್ನು (ಎವಿಡೆನ್ಸ್ ಬೇಸ್ಡ್ ಟ್ರೀಟ್ಮೆಂಟ್) ನೀಡಿದರೂ, ಕೆಲವು ಸಲ ರೋಗಿಯು ಮರಣಿಸುವುದುಂಟು. ಇದಕ್ಕೆ ವೈಜ್ಞಾನಿಕ ವಿವರಣೆಯನ್ನು ನೀಡಲು ಅಗತ್ಯವಾದ ಜ್ಞಾನವು ಪ್ರಸ್ತುತ ವೈದ್ಯಕೀಯಕ್ಕೆ ಇಲ್ಲ.
- ವೈದ್ಯನೂ ಮನುಷ್ಯನೆ! ಹಾಗಾಗಿ ಎಲ್ಲ ರೀತಿಯ ವೃತ್ತಿಗಳಲ್ಲಿರುವ ಮನುಷ್ಯರು ಹೇಗೆ ಒಂದಲ್ಲ ಒಂದು ಸಲ ತಪ್ಪನ್ನು ಮಾಡಬಹುದೋ, ಹಾಗೆ ವೈದ್ಯರಿಂದಲೂ ತಪ್ಪುಗಳು ಆಗಿರುವ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ.
- ಅನಾರೋಗ್ಯಪೀಡಿತ ವ್ಯಕ್ತಿಯು ಶೀಘ್ರ ಗುಣಮುಖನಾಗಬೇಕಾದರೆ, ಅವನ ಮನಸ್ಸಿನ ಆರೋಗ್ಯವು ಉತ್ತಮವಾಗಿರಬೇಕು. ಕೆಲವು ರೋಗಿಗಳಲ್ಲಾದರೂ ಸರಿ, ಬದುಕುವ ಉತ್ಸಾಹವೇ ಇರುವುದಿಲ್ಲ. ರೋಗಿಯಿಂದ ಇತ್ಯಾತ್ಮಕ ಸಹಕಾರವು ದೊರೆಯದೆ ಆತ ಮರಣಿಸಿದರೆ, ಅದಕ್ಕೂ ವೈದ್ಯರನ್ನೇ ಹೊಣೆ ಮಾಡುವ ಪದ್ಧತಿಯು ಇಂದಿದೆ.

- **ಒಂದು ಪ್ರಕರಣ:** ಭಾರತದಲ್ಲಿ ವೈದ್ಯಕೀಯ ನಿರ್ಲಕ್ಷ್ಯ ಸಂಬಂಧಿತ ಮೆಡಿಕೋ-ಲೀಗಲ್ ಪ್ರಕರಣಗಳಲ್ಲಿ ಅತ್ಯಧಿಕ ಪರಿಹಾರ ಹಣವಾಗಿ, ಬಡ್ಡಿಯೂ ಸೇರಿದಂತೆ, ಸುಮಾರು 11.5 ಕೋಟಿ ರು. ನೀಡಲಾಗಿದೆ. ಈ ಐತಿಹಾಸಿಕ ಪ್ರಕರಣವು ಅನುರಾಧಾ ಸಾಹಾ ಎಂಬುವವರ ಮರಣಕ್ಕೆ ಸಂಬಂಧಿಸಿದ್ದು. ಅವರು ಅಮೆರಿಕದ ವೈದ್ಯ ಡಾ. ಕುನಾಲ್ ಸಾಹಾ ಅವರ ಪತ್ನಿ. ಆತ ತನ್ನ ಮಡದಿಯ ಮರಣಕ್ಕೆ ಕೋಲ್ಕತ್ತಾದ ★ಅಋಖಐ★ ಆಸ್ಪತ್ರೆಯನ್ನು ಗುರಿಯಾಗಿಸಿ, ವೈದ್ಯಕೀಯ ನಿರ್ಲಕ್ಷ್ಯದ ಆರೋಪವನ್ನು ಮಾಡಿದ್ದ.

ಭಾರತದ ಸುಪ್ರೀಂ ಕೋರ್ಟ್ ಈ ಪ್ರಕರಣದಲ್ಲಿ ರಾಷ್ಟ್ರಮಟ್ಟದ ಗ್ರಾಹಕರ ತಕರಾರು ಪರಿಹಾರ ಆಯೋಗ (NCDRC) ನೀಡಿದ್ದ 1.73 ಕೋಟಿ ರುಪಾಯಿಗಳ ಪರಿಹಾರವನ್ನು, ರು.5.96 ಕೋಟಿ+ಬಡ್ಡಿಯಾಗಿ ಹೆಚ್ಚಿಸಿತ್ತು. ಒಟ್ಟು ರು.11.5 ಕೋಟಿ ಪರಿಹಾರವನ್ನು ನೀಡಲು ಸೂಚಿಸಿತ್ತು, ಇದರಲ್ಲಿ ಸುಮಾರು 15 ವರ್ಷಗಳ ಬಡ್ಡಿಯೂ ಸೇರಿದೆ.

- **ಪ್ರಕರಣದ ಪ್ರಮುಖ ವಿವರಗಳು:**
  - ಪ್ರಕರಣ: ಕುನಾಲ್ ಸಾಹಾ ವರ್ಸಸ್ AMRI ಆಸ್ಪತ್ರೆ ಮತ್ತು ಇತರರು.
  - ಮರಣ: ಅನುರಾಧಾ ಸಾಹಾ (ಡಾ. ಕುನಾಲ್ ಸಾಹಾ ಅವರ ಪತ್ನಿ)
  - ಆರೋಪ: ವೈದ್ಯಕೀಯ ನಿರ್ಲಕ್ಷ್ಯದ ಕಾರಣದಿಂದ ಸಾವು
  - ಆಸ್ಪತ್ರೆ: AMRI (Advanced Medicare and Research Institute), ಕೋಲ್ಕತ್ತಾ.
  - ಮೂಲ ಪರಿಹಾರ: ರು.1.73 ಕೋಟಿ (NCDRC ಮೂಲಕ)
  - ಸುಪ್ರೀಂ ಕೋರ್ಟ್ ನೀಡಿದ ಅಂತಿಮ ಪರಿಹಾರ: ಸುಮಾರು ರು.11.5 ಕೋಟಿ (ಬಡ್ಡಿ ಸೇರಿ)
  - ಬಡ್ಡಿ ವಿವರ: ಈ ಪರಿಹಾರದಲ್ಲಿ ಸುಮಾರು 15 ವರ್ಷಗಳ ಬಡ್ಡಿಯು ಸೇರಿದೆ.
- **ಪ್ರಾಮುಖ್ಯ:** ಭಾರತೀಯ ನ್ಯಾಯಾಂಗದ ಇತಿಹಾಸದಲ್ಲಿ ಇದನ್ನು ಒಂದು ಐತಿಹಾಸಿಕ ತೀರ್ಪು ಎಂದು ಪರಿಗಣಿಸಲಾಗಿದೆ. ಇದರಿಂದ ಭವಿಷ್ಯದ ವೈದ್ಯಕೀಯ ನಿರ್ಲಕ್ಷ್ಯ ಪ್ರಕರಣಗಳಿಗೆ ಒಂದು ಮಾರ್ಗದರ್ಶನ ದೊರೆತಂತಾಗಿದೆ. ಇದು ವೈದ್ಯಕೀಯ ವೃತ್ತಿಯಲ್ಲಿ ನೈತಿಕತೆ, ಹೊಣೆ ಮತ್ತು ವೈದ್ಯಕೀಯ ದಾಖಲೆಗಳ ಸ್ಪಷ್ಟತೆಯ ಪ್ರಾಮುಖ್ಯ ಎಷ್ಟು ಮಹತ್ತರವೆಂಬುದನ್ನು ಉಲ್ಲೇಖಿಸುತ್ತದೆ.

ಹಮ್ಮುರಬಿಯು ತಪ್ಪು ಮಾಡಿದ ಶಸ್ತ್ರವೈದ್ಯನ ಕೈಗಳನ್ನು ಕತ್ತರಿಸುತ್ತಿದ್ದ. ಕೈಗಳಿಲ್ಲದ ವೈದ್ಯ (ಶಸ್ತ್ರವೈದ್ಯ) ಹೇಗೆ ತಾನೆ ತನ್ನ ವೃತ್ತಿಯಲ್ಲಿ ಮುಂದುವರೆಯಬಲ್ಲ? ಅವನ ವೈದ್ಯಕೀಯ ಬದುಕೇ ಮುಗಿದಂತೆ. ಅವನು ಬದುಕಿದ್ದೂ ಸತ್ತಂತಾಗಿರುತ್ತಾನೆ. ಈಗಿನ ನ್ಯಾಯಾಲಯಗಳು ಕೆಲವು ಪ್ರಕರಣಗಳಲ್ಲಿ ರೋಗಿಯ ಕಡೆಯವರು ಅಥವಾ ನ್ಯಾಯಾಲಯವು ವಿಧಿಸುವ ದಂಡ/ಪರಿಹಾರವನ್ನು ನೆನೆಸಿಕೊಂಡರೆ, ಹಮ್ಮುರಬಿಯ ಕಾಲಕ್ಕೇ ನಮ್ಮ ನ್ಯಾಯಪದ್ಧತಿಯು ಹಿಮ್ಮರಳಿದೆ ಎಂದೆನಿಸುತ್ತದೆ.

ಈ ಹಿನ್ನೆಲೆಯಲ್ಲಿ ಲೇಖನದ ಆರಂಭದಲ್ಲಿರುವ ಸ್ಲೈಡ್ ಅರ್ಥಪೂರ್ಣವಾಗಿದೆ ಎನ್ನಬಹುದು. ಹಾಗಾಗಿ ನಮ್ಮ ಸಮಾಜವು ಎಲ್ಲ ಜನಸಾಮಾನ್ಯರನ್ನು ಕಾಣುವಂತೆ ವೈದ್ಯರನ್ನೂ ಕಾಣುವುದು ಎನ್ನುವುದನ್ನು ಮನಗಾಣಬೇಕಾಗಿದೆ.

ಯುದ್ಧ ಯಾವಾಗ ಮುಗಿಯುತ್ತದೆ ಎಂಬುದು ದೇವರಿಗೇ ಗೊತ್ತು!



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

(ಭಾಗ-2)

ಮೊದಲ ವಿಶ್ವ ಮಹಾಯುದ್ಧದಲ್ಲಿ ಯಹೂದಿ ಸಂಘಟನೆಗಳು ಬ್ರಿಟಿಷ್ ಮತ್ತು ಫ್ರೆಂಚರ ಮೈತ್ರಿಕೂಟವನ್ನು ಬೆಂಬಲಿಸಿದ್ದವು. ಅದಕ್ಕೆ ಪ್ರತಿಫಲವಾಗಿ 1917ರ ನವೆಂಬರ್ 2ರಂದು ಅವುಗಳಿಗೆ ಬಾಲ್ಫೋರ್ ಘೋಷಣೆಯ ಕೊಡುಗೆ ಲಭಿಸಿತು. 1922ರ ವೇಳೆಗೆ ಅಮೆರಿಕ ಮತ್ತು ಲೀಗ್ ಆಫ್ ನೇಷನ್ಸ್‌ನಿಂದಲೂ ಯಹೂದಿಗಳ ಭರವಸೆಯ ನಾಡಿಗೆ ಬೆಂಬಲ ದೊರೆಯಿತು. ವಿಶ್ವ ಮಹಾಯುದ್ಧ 2ರ ಬಳಿಕ ಇಸ್ರೇಲ್ ಎಂಬ ಕನಸು ಸಾಕಾರಗೊಂಡಿತು. 1947ರ ನವೆಂಬರ್ 29ರಂದು ವಿಶ್ವಸಂಸ್ಥೆಯು ಇಸ್ರೇಲ್‌ನ ಅಸ್ತಿತ್ವವನ್ನು ಅಧಿಕೃತವಾಗಿ ಅಂಗೀಕರಿಸಿತು. ಅದರೊಂದಿಗೆ ಇಸ್ರೇಲ್ ಎಂಬ ದೇಶ ಜಗತ್ತಿನ ಭೂಪಟದಲ್ಲಿ ಅಧಿಕೃತವಾಗಿ ಜನ್ಮ ತಾಳಿತು. ಆದರೆ ಒಬ್ಬ ಮನುಷ್ಯನ ಸುರಕ್ಷತೆಯು ಇನ್ನೊಬ್ಬ ಮನುಷ್ಯನ ಅಪಾಯ ಎಂಬಂಥ ಪರಿಸರದಲ್ಲಿ ಈ ಪುಟ್ಟ ದೇಶಕ್ಕೆ ಭದ್ರತೆಯ ಖಾತ್ರಿ ಯಾವ ರೀತಿಯಲ್ಲೂ ಲಭಿಸುವಂತಿರಲಿಲ್ಲ. ಇವತ್ತಿಗೂ ಮುಂದುವರಿದಿರುವ ಯುದ್ಧಗಳು ಈ ಪ್ರದೇಶದ ಜನರ ರಕ್ತವನ್ನು ಹೀರುತ್ತಲೇ ಇವೆ.

- **ಸೋವಿಯತ್ ಒಕ್ಕೂಟದ ಪತನ**

1917ರಲ್ಲಿ ತ್ಸಾರ್‌ಗಳ ರಷ್ಯಾ ಸೋವಿಯತ್ ಒಕ್ಕೂಟವಾಯಿತು. ಇನ್ನೂ ನಿಕಷಕ್ಕೆ ಒಳಪಡದಿದ್ದ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತದ ಮೂಲಕ ರಷ್ಯನ್ನರಿಗೆ ಹಸಿವಿನಿಂದ ಮುಕ್ತಿ ದೊರಕಿಸಿಕೊಡುವುದಾಗಿ ಲೆನಿನ್ ಮತ್ತು ಸ್ಟಾಲಿನ್ ಭರವಸೆ ನೀಡಿದರು. ಅದಕ್ಕಾಗಿ ಅವರು ಏಷ್ಯಾ ಮತ್ತು ಕಕೇಶಿಯನ್ ಪ್ರದೇಶಗಳನ್ನು ವಸಾಹತುವಾಗಿಸಿಕೊಂಡು ಆಳ್ವಿಕೆ ನಡೆಸಲು ತಮ್ಮ ಸೇನೆಗಳನ್ನು ಕಳುಹಿಸಿದರು. ನಂತರ ಪೂರ್ವ ಯುರೋಪಿನ ಮೇಲೂ ದಂಡೆತ್ತಿಹೋದರು. ಪರಿಣಾಮ, ಬರ್ಲಿನ್‌ನಿಂದ ಆರಂಭಿಸಿ ವ್ಲಾಡಿವೋಸ್ಟೋಕ್ ವರೆಗೆ ಬೃಹತ್ ಸಾಮ್ರಾಜ್ಯ ನಿರ್ಮಾಣವಾಯಿತು. 1945ರಲ್ಲಿ ಅಮೆರಿಕ ಕೂಡ ಕ್ರಿಮಿಯನ್ ನಗರವಾದ ಯಾಲ್ಟಾದಲ್ಲಿ ನಡೆದ ಪ್ರಸಿದ್ಧ ಸಮಾವೇಶದಲ್ಲಿ ರಷ್ಯನ್ ಸಾಮ್ರಾಜ್ಯವನ್ನು ಒಂದು ವಾಸ್ತವವೆಂದು ಸ್ವೀಕರಿಸಿತು. ಆದರೆ ಮಿಲಿಟರಿಯ ನಿಗಾದ ಒಳಗೆ ಲಾವಾದಂತೆ ಆರು ದಶಕಗಳ ಕಾಲ ಕುದಿಯುತ್ತಿದ್ದ ಸಾಮ್ರಾಜ್ಯ ಇನ್ನೂ ಹೆಚ್ಚು ಸಮಯ ಜೀವಂತವಾಗಿರಲು ಸಾಧ್ಯವಾಗಲಿಲ್ಲ. 1980ರ ದಶಕದಲ್ಲಿ ಶಿಥಿಲ ಕಮ್ಯುನಿಸ್ಟ್ ಒಕ್ಕೂಟ ಛಿದ್ರಗೊಂಡಿತು. ನ್ಯಾಟೋ ನೇತೃತ್ವದಲ್ಲಿ ಪಶ್ಚಿಮ ದೇಶಗಳ ಒಕ್ಕೂಟವು ಪೂರ್ವ ಯುರೋಪ್ ಮೂಲಕ 1990ರ ದಶಕದಲ್ಲಿ ಒಳನುಗ್ಗಿದವು.

- **ಪುಟಿನ್ ಬಂದಮೇಲೆ ಸ್ಥಿರತೆ**

2000ನೇ ಇಸ್ವಿಯಲ್ಲಿ ವ್ಲಾಡಿಮಿರ್ ಪುಟಿನ್ ಉಚ್ಛ್ರಾಯಕ್ಕೆ ಬರುವವರೆಗೂ ರಷ್ಯಾದಲ್ಲಿ ಸ್ಥಿರತೆ ಎಂಬುದಿರಲಿಲ್ಲ. ದೇಶದೊಳಗೇ ಒಂದು ಭಾಗವನ್ನು ಸ್ಥಳೀಯ ಶಕ್ತಿಕೇಂದ್ರವಾದ ಚೆಚೆನ್ಯಾ ಬಂಡುಕೋರರ ಕೈಗೆ ರಷ್ಯಾ ನೀಡಿತ್ತು. ನ್ಯಾಟೋವನ್ನು ಕಂಡರೆ ಪುಟಿನ್ ಕುದಿಯುತ್ತಿದ್ದರು. ಅದರ ಜತೆಗಿನ ಸಂಘರ್ಷವನ್ನು ತಪ್ಪಿಸಿಕೊಳ್ಳಲು ಉಕ್ರೇನ್‌ನ ಗಡಿಯಲ್ಲಿ ಒಂದು ರೇಖೆ ಎಳೆದು, ಇದನ್ನು ದಾಟಿ ನ್ಯಾಟೋದವರು ಮುಂದೆ ಬರುವಂತಿಲ್ಲ ಎಂದು ಷರತ್ತು ವಿಧಿಸಿದರು. ಉಕ್ರೇನ್ ದೇಶವು ರಷ್ಯಾ ಪಾಲಿಗೆ ಬಫರ್ ಪ್ರದೇಶವಾಯಿತು. ಹೀಗಾಗಿಯೇ ಪುಟಿನ್ 2014ರಲ್ಲಿ ಕ್ರಿಮಿಯಾವನ್ನು ವಶಪಡಿಸಿಕೊಂಡಾಗಲೂ ಅಮೆರಿಕ ಮತ್ತು ಅದರ ಸ್ನೇಹಿತರು ಮೌನವಾಗಿ ನೋಡುತ್ತಾ ಕುಳಿತಿದ್ದರು.

ಹೀಗಾಗಿ ಪುಟಿನ್‌ಗೊಂದು ಹುಂಬಧೈರ್ಯ ಪ್ರಾಪ್ತವಾಗಿತ್ತು. ತಾನು ಏನು ಮಾಡಿದರೂ ನಡೆಯುತ್ತದೆ ಎಂಬ ಧೈರ್ಯದಲ್ಲೇ ಅವರು 2022ರಲ್ಲಿ ಉಕ್ರೇನ್‌ನೊಳಗೆ ರಷ್ಯನ್ ಭಾಷೆ ಮಾತನಾಡುತ್ತಿದ್ದ ಪ್ರದೇಶಗಳಿಗೆ ಸೇನೆಯನ್ನು ನುಗ್ಗಿಸಿದರು. ಆದರೆ ಅವರ ಊಹೆ ಸುಳ್ಳಾಗಿತ್ತು.

ಮಾಸ್ಕೋದಲ್ಲಿ ಪುಟಿನ್ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡ ಸುಮಾರು ಒಂದು ವರ್ಷದ ನಂತರ ಇತಿಹಾಸ ಅನೂಹ್ಯ ರೀತಿಯಲ್ಲಿ ದೊಡ್ಡದೊಂದು ತಿಪ್ಪರಲಾಗ ಹಾಕಿತ್ತು. ನ್ಯೂಯಾರ್ಕ್ ಮತ್ತು ವಾಷಿಂಗ್ಟನ್ ಮೇಲೆ ಅಲ್‌ಖೈದಾ ಭಯೋತ್ಪಾದಕ ಸಂಘಟನೆ ಬಹಳ ಸಿದ್ಧತೆಯೊಂದಿಗೆ ನಡೆಸಿದ 9/11ರ ದಾಳಿಯ ಬಳಿಕ ಅಮೆರಿಕದ ಆದ್ಯತೆಗಳು ಬದಲಾಗಿದ್ದವು. ಪುಟಿನ್ ಮೇಲೆ ಒತ್ತಡ ಬಿತ್ತು. ಜಾರ್ಜ್ ಡಬ್ಲ್ಯು ಬುಷ್ ಅಫ್ಘಾನಿಸ್ತಾನಕ್ಕೆ ದಂಡಯಾತ್ರೆ ನಡೆಸಿದರು. ಅದಕ್ಕೆ ಜಗತ್ತು ಚಪ್ಪಾಳೆ ಹೊಡೆಯಿತು. ಬಳಿಕ ಇರಾಕ್ ಮೇಲೆ ದಾಳಿ ನಡೆಸಿದರು. ಅದನ್ನು ನೋಡಿ ಜಗತ್ತು ಗೊಂದಲಕ್ಕೆ ಬಿದ್ದಿತು. ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ಪ್ರಭಾವ ವಲಯವು ಅಶಾಂತಿಯ ವಲಯವಾಗಿ ಮಾರ್ಪಟ್ಟಿತು.

- **ಇರಾನ್-ಇರಾಕ್ ಮಧ್ಯೆ ಶಾಂತಿ**

ಇರಾಕ್ ಮೇಲೆ ಅಮೆರಿಕ ನಡೆಸಿದ ಯುದ್ಧದಲ್ಲಿ ಯಾರಾದರೂ ತಕ್ಷಣಕ್ಕೆ ಗೆದ್ದಿದ್ದರೆ ಅದು ಇರಾನ್. ಏಕೆಂದರೆ, ಅದು ಇರಾಕ್‌ನ ಬಹುಸಂಖ್ಯಾತ ಶಿಯಾಗಳನ್ನು ಸುನ್ನಿ ಸಾಮ್ರಾಜ್ಯಶಾಹಿ ಮತ್ತು ಸರ್ವಾಧಿಕಾರಿಗಳಿಂದ ಮುಕ್ತಗೊಳಿಸಿತು. ಅಮೆರಿಕವು ಇರಾಕ್ ಅನ್ನು ತೊರೆದು ಹೋದಾಗ ಅದು ಪ್ರಜಾಪ್ರಭುತ್ವದ ರೂಢಿಗತ ನಿಯಮಗಳನ್ನು ಪಾಲಿಸಲು ಇರಾಕ್‌ನ ಆಡಳಿತವನ್ನು ನಾಗರಿಕ ಸರಕಾರದ ಕೈಗೆ ಒಪ್ಪಿಸಿತು. ಅದರಲ್ಲಿ ಶಿಯಾಗಳೇ ಬಹುಸಂಖ್ಯಾತರಾಗಿದ್ದರು. ಅದು ಇರಾಕನ್ನು ಇರಾನ್‌ನ ಸಹವರ್ತಿಯನ್ನಾಗಿ ಮಾಡುವುದರ ಬದಲು ಆ ಪ್ರದೇಶದಲ್ಲಿನ ಅಶಾಂತಿಗೆ ಮಂಗಳ ಹಾಡಿತು. ಇರಾಕ್‌ನ ಸದ್ದಾಂ ಹುಸೇನ್ ಅನಾಮತ್ತು ಎಂಟು ವರ್ಷಗಳ ಕಾಲ ಯುದ್ಧ ನಡೆಸಿ ಇರಾನ್‌ನಲ್ಲಿ ಅಯೋತೊಲ್ಲಾ ಸಾಮ್ರಾಜ್ಯವನ್ನು ನಾಶಪಡಿಸಿದ್ದ. ಅಮೆರಿಕನ್ನರು ಬಾಗ್ದಾದ್ ತೊರೆದು ಹೋದಮೇಲೆ ಶಿಯಾಗಳ ಜತೆಗೆ ಇರಾನ್ ವ್ಯೂಹಾತ್ಮಕ ಸ್ನೇಹಕೂಟ ರಚಿಸಿಕೊಂಡಿತು. ಅದು ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾಗಳ ದಾಯಾದಿಗಳನ್ನೂ ತಲುಪಿತು. ಸಿರಿಯಾದಲ್ಲಿ ಕೂಡ ಶಿಯಾ ಮುಸ್ಲಿಮರ ಒಂದು ಪಂಗಡವಾಗಿರುವ ಅಲವೈಟ್‌ಗಳ ನಿಯಂತ್ರಣದಲ್ಲಿರುವ ಸರಕಾರವಿತ್ತು. ಹಫೀಜ್ ಮತ್ತು ಬಷರ್ ಅಲ್ ಅಸದ್ ಅದನ್ನು ಆಳುತ್ತಿದ್ದರು.

- **ಸಿರಿಯಾದಲ್ಲಿ ಅಧಿಕಾರ ಬದಲು**

1963ರಿಂದ ಸಿರಿಯಾದಲ್ಲಿ ಬಾತ್ ಪಕ್ಷವೇ ಆಡಳಿತ ನಡೆಸುತ್ತಿತ್ತು. ಅದು ಶ್ರೀಮಂತರ, ಎಡಪಂಥೀಯ ಜಾತ್ಯತೀತ ಶಿಯಾ ಅಲವೈಟ್‌ಗಳ ನಿಯಂತ್ರಣದಲ್ಲಿತ್ತು. ಶಿಯಾ ಅಲವೈಟ್‌ಗಳು ಅಲ್ಪಸಂಖ್ಯಾತರು. ಸಿರಿಯಾದ ಒಟ್ಟು ಜನಸಂಖ್ಯೆಯಲ್ಲಿ ಅವರ ಪ್ರಮಾಣ ಶೇ.15ರಷ್ಟಿತ್ತು. 1970ರಲ್ಲಿ ಹಫೀಜ್ ಅಲ್ ಅಸದ್ ಸಿರಿಯಾದ ಸರ್ವಾಧಿಕಾರಿಯಾದ. ಅವನ ನಂತರ ಮಗ ಬಷರ್ ಅಲ್ ಅಸದ್ ಅಧಿಕಾರಕ್ಕೆ ಬಂದ. 2024ರ ಡಿಸೆಂಬರ್‌ನಲ್ಲಿ, 42 ವರ್ಷದ ಅಹಮದ್ ಹುಸೇನ್ ಅಲ್ ಶರಾ ನೇತೃತ್ವದ ಸೇನೆಯು ಟರ್ಕಿಯ ಬೆಂಬಲದೊಂದಿಗೆ ಬಷರ್ ಅಲ್ ಅಸದ್‌ನನ್ನು ಕೆಳಗಿಳಿಸಿತು. ಹುಸೇನ್ ಅಲ್ ಶರಾ ಸಿರಿಯಾದ ಅಧ್ಯಕ್ಷನಾಗಿ ಡಿಸೆಂಬರ್ 8ರಂದು ಪ್ರಸಿದ್ಧ ಉಮಯ್ಯಾದ್ ಮಸೀದಿಯಲ್ಲಿ ನಿಂತು ಜಗತ್ತನ್ನುದ್ದೇಶಿಸಿ ಭಾಷಣ ಮಾಡಿ, ''ಇನ್ನುಮುಂದೆ ಇರಾನ್‌ನ ಉದ್ದೇಶ ಈಡೇರಿಕೆಗೆ ಸಿರಿಯಾ ಆಟದ ಮೈದಾನವಾಗಲು ನಾನು ಬಿಡುವುದಿಲ್ಲ'' ಎಂದು ಘೋಷಿಸಿದ. ಇಸ್ರೇಲ್ ತಕ್ಷಣ ಸಿರಿಯಾದ ಆಗ್ನೇಯದಲ್ಲಿರುವ ಗೋಲನ್ ಹೈಟ್ಸ್‌ನಿಂದ ಮುಂದೆ ಹೋಗಿ ಹೊಸ ಗಡಿ ಸ್ಥಾಪಿಸಲು ಮುಂದಾಯಿತು.

ಇರಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಗೆ ಡಮಾಸ್ಕಸ್‌ನಲ್ಲಿ ಅಸದ್‌ನ ಪತನದೊಂದಿಗೆ ಶಿಯಾದ ಅರ್ಧಚಂದ್ರದಲ್ಲಿ ಮೂಡಿದ ಬಿರುಕು ಕೂಡ ಬಹಳ ಮುಖ್ಯವಾದ ಕಾರಣಗಳಲ್ಲೊಂದು.

ಕಾಲ ಹೇಗೆ ಲಾಗ ಹಾಕುತ್ತದೆ ನೋಡಿ. 2006ರಿಂದ 2011ರವರೆಗೆ ಯಾರನ್ನು ಅಲ್‌ಖೈದಾ ಉಗ್ರ ಎಂದು ಅಮೆರಿಕದ ಸರಕಾರ ತನ್ನ ಜೈಲಿನಲ್ಲಿರಿಸಿತ್ತೋ ಅವನನ್ನೇ ಈಗ ಬೆಂಬಲಿಸುತ್ತಿದೆ. ಅಸದ್‌ನ ಆಳ್ವಿಕೆಯ ವಿರುದ್ಧ ಹೋರಾಡಲು ಅಹಮದ್ ಅಲ್ ಶರಾ ತನ್ನದೇ ಆದ 'ಅಲ್ ನುಸ್ರಾ ಫ್ರಂಟ್' ಎಂಬ ಸಂಘಟನೆ ಕಟ್ಟಿಕೊಂಡಿದ್ದ. 2016ರಲ್ಲಿ ಅವನು ಅಲ್‌ಖೈದಾದಿಂದ ಬೇರ್ಪಟ್ಟು ನುಸ್ರಾ ಸಂಘಟನೆಯನ್ನು ಹಯಾತ್ ತಹ್ರೀರ್ ಅಲ್ ಶಾಮ್‌ನಲ್ಲಿ ವಿಲೀನಗೊಳಿಸಿದ. ಪಶ್ಚಿಮದ ಕ್ರಿಶ್ಚಿಯನ್ನರ ವಿರುದ್ಧ ಜಿಹಾದ್ ನಡೆಸುವುದಕ್ಕಿಂತ ಡಮಾಸ್ಕಸ್‌ನಲ್ಲಿ ಅಧಿಕಾರ ನಡೆಸುವುದು ಈ ಸೀಮಿತ ಬದುಕಿನಲ್ಲಿ ಒಳ್ಳೆಯ ಆಯ್ಕೆಯೆಂದು ಅವನಿಗೆ ಜ್ಞಾನೋದಯವಾಗಿತ್ತು. ಅಧಿಕಾರಕ್ಕೆ ಬರುತ್ತಿದ್ದಂತೆ ಅವನು ಬದಲಾವಣೆಯನ್ನು ತೋರಿಸಲು ಸಿರಿಯಾದ ಎಲ್ಲಾ ಮಹಿಳೆಯರು ಬುರ್ಖಾ ಧರಿಸಬೇಕು ಎಂದು ಆದೇಶ ನೀಡಿದ. ಪಶ್ಚಿಮದ ಪ್ರದೇಶಗಳಲ್ಲಿ ಅದಕ್ಕೆ ಸಣ್ಣ ಪ್ರಮಾಣದ ವಿರೋಧ ವ್ಯಕ್ತವಾಯಿತು. ಇಸ್ಲಾಂ ಧರ್ಮವನ್ನು ಬುರ್ಖಾದ ಜತೆಗೆ ಯಾವತ್ತೂ ಕನ್‌ಫ್ಯೂಸ್ ಮಾಡಿಕೊಳ್ಳದೆ ಇದ್ದ ಬಷರ್ ಅಲ್ ಅಸದ್ ಈಗ ಪುಟಿನ್‌ನ ಆಶ್ರಯದಲ್ಲಿ ಮಾಸ್ಕೋದಲ್ಲಿದ್ದಾನೆ.

- **ಅರಬ್ ರಾಷ್ಟ್ರಗಳ ನಿರ್ಲಿಪ್ತ ನಡೆ**

ಇಲ್ಲಿಯವರೆಗೆ, ಅರಬ್ ನೆರೆಹೊರೆಯ ಯಾವುದೇ ದೇಶ ಇಸ್ರೇಲ್‌ನ ರಾಡಾರ್‌ನಲ್ಲಿಲ್ಲ. ಹಮಾಸ್‌ನ ನೇತೃತ್ವದಲ್ಲಿರುವ ಪ್ಯಾಲೆಸ್ತೀನಿಯನ್ನರು ಕೂಡ ಅರಬ್ಬರೇ ಆಗಿದ್ದರೂ ಅರಬ್ ರಾಷ್ಟ್ರಗಳು ಈ ಸಂಘರ್ಷವನ್ನು ತಮ್ಮ ಯುದ್ಧವೆಂಬಂತೆ ನೋಡುತ್ತಿಲ್ಲ. ಅವರ ಪಾಲಿಗೆ ಹಮಾಸ್ ಮತ್ತು ಹೆಜ್ಬೊಲ್ಲಾಗಳು ಇರಾನ್‌ನ ಪಾಳಯದಲ್ಲಿದ್ದಾರೆ.

ಈಜಿಪ್ಟ್ ಮತ್ತು ಸೌದಿ ಅರೇಬಿಯಾಕ್ಕೆ ರಿಸ್ಕ್ ತೆಗೆದುಕೊಳ್ಳುವ ಮನಸ್ಸಿಲ್ಲ. ಜೋರ್ಡಾನ್ ಕೂಡ ತನ್ನ ಆಗಸದಲ್ಲಿ ಇರಾನ್‌ನ ಡ್ರೋನ್‌ಗಳು ಹಾರಾಟ ನಡೆಸುವುದನ್ನು ವಿರೋಧಿಸಿದೆ. ಸಿರಿಯಾ ತಟಸ್ಥವಾಗಿದೆ. ಅರಬ್‌ನ ಸಾರ್ವಜನಿಕ ಅಭಿಪ್ರಾಯವನ್ನು ನಿಯಂತ್ರಣದಲ್ಲಿ ಇರಿಸಲಾಗಿದೆ.

- **ಇರಾನ್‌ನ ಧೈರ್ಯ ನೋಡಿ ಅಚ್ಚರಿ**

ಅಮೆರಿಕ ಗೊಂದಲದಲ್ಲಿದ್ದರೂ ಇರಾನ್ ಮೇಲೆ ದಾಳಿ ನಡೆಸುವಷ್ಟು ಆತ್ಮವಿಶ್ವಾಸವನ್ನು ಇಸ್ರೇಲ್ ತೋರಿದೆ. ಇದನ್ನು ಬರೆಯುವ ಹೊತ್ತಿಗೆ ಬೆಂಜಮಿನ್ ನೆತನ್ಯಾಹು ಅವರ ಶೌರ್ಯ ಹುರಿಗಟ್ಟಿತ್ತು. ಸರಿಯಾದ ಲೆಕ್ಕಾಚಾರ ಮತ್ತು ತಪ್ಪು ಲೆಕ್ಕಾಚಾರಗಳ ನಡುವಿನ ಜಾಗಕ್ಕೆ ಆಂತರಿಕ ಸಮೀಕ್ಷೆಯೊಂದು ಪ್ರವೇಶ ಪಡೆದಿತ್ತು. ಇಸ್ರೇಲ್‌ನ ಕ್ಷಿಪಣಿಗಳ ನಿಖರತೆ ಮತ್ತು ಸಾಮರ್ಥ್ಯವನ್ನು ನೋಡಿದರೆ ಯಾರಿಗೂ ಆಶ್ಚರ್ಯವಾಗಬೇಕಿಲ್ಲ. ಆದರೆ ಟೆಲ್ ಅವಿವ್, ಜೆರುಸಲೇಂ, ಹೈಫಾ ಮುಂತಾದ ಒಂದು ಡಜನ್ ಇಸ್ರೇಲಿ ನಗರಗಳಲ್ಲಿ ಆತಂಕ ಮನೆಮಾಡುವಂತೆ ಮಾಡಿದ ಇರಾನ್‌ನ ಸಾಮರ್ಥ್ಯವನ್ನು ಕಂಡು ಎಲ್ಲರೂ ಬೆರಗಾಗಿದ್ದಾರೆ. ಇರಾನಿನ ಡ್ರೋನ್‌ಗಳನ್ನು ತಡೆಯಲು ಅಮೆರಿಕ ಮತ್ತು ಬ್ರಿಟನ್ನಿನ ನೆರವು ಕೇಳುವುದಕ್ಕೆ ನೆತನ್ಯಾಹುಗೆ ಬಹಳ ಕಷ್ಟವಾಗಿರಬಹುದು. ಇಸ್ರೇಲ್‌ಗೆ ಎಲ್ಲಾ ರೀತಿಯ ವಾಯು ದಾಳಿಯಿಂದ ರಕ್ಷಣೆ ನೀಡುತ್ತಿದ್ದ ಜಗತ್ಪ್ರಸಿದ್ಧ ಐರನ್ ಡೋಮ್ ಧ್ವಂಸಗೊಂಡಿದೆ. ಇಸ್ರೇಲಿನ ಸೇನಾಪಡೆಗಳು ''ಯುದ್ಧದಲ್ಲಿ ನೋವಿಗೆ ಬೆಲೆ ತೆರಲೇಬೇಕು'' ಎಂದು ನಾಗರಿಕರಿಗೆ ಎಚ್ಚರಿಕೆ ನೀಡಿವೆ. ಸಂಘರ್ಷ ಹೇಗೆ ಮುಂದುವರಿಯುತ್ತದೆ ಎಂದು ನಾವು ಊಹಿಸಲು ಸಾಧ್ಯವಿಲ್ಲ. ಎಲ್ಲಾ ರೀತಿಯ ಊಹೆಗಳೂ ತಲೆಕೆಳಗಾಗುತ್ತಿವೆ. ಒಂದಂತೂ ನಿಜ. ಭವಿಷ್ಯದಲ್ಲಿ ಬಹಳ ಕಾಲದವರೆಗೆ ಈ ಯುದ್ಧವನ್ನು ಅಧ್ಯಯನ ಮಾಡಲಾಗುತ್ತದೆ.

- **ಯುದ್ಧ ಎಲ್ಲಿಗೆ ಹೋಗಿ ನಿಲ್ಲುತ್ತದೆ?**

ಇರಾನ್ ಈವರೆಗೂ ಯಾವುದೇ ದೇಶದ ಬಳಿ ಮಿಲಿಟರಿ ನೆರವು ಕೇಳಿಲ್ಲ, ಆದರೆ ಅಮೆರಿಕದ ಜತೆಗಿನ ಸಂಘರ್ಷ ತೀವ್ರವಾದರೆ ರಷ್ಯಾ ಮತ್ತು ಚೀನಾದ ಬಳಿ ನೆರವು ಕೇಳಬಹುದು. ಬಹಳ ಆಶ್ಚರ್ಯವೆಂಬಂತೆ ಈ ಬಾರಿ ಚೀನಾ ಸ್ಪಷ್ಟವಾದ ನಿಲುವು ತಾಳಿದೆ. ಇಸ್ರೇಲ್‌ನ ದಾಳಿಯನ್ನು ಅದು ನೇರವಾಗಿ ಖಂಡಿಸಿದೆ. ಬಹುಶಃ ಪಶ್ಚಿಮ ಏಷ್ಯಾ ಮಾತ್ರ ದಿನಪತ್ರಿಕೆಗಳ ಮುಖಪುಟದಿಂದ ಉಕ್ರೇನನ್ನು ಒಳಪುಟಕ್ಕೆ ಕಳುಹಿಸಿರಬಹುದು. ಆದರೆ ಅಲ್ಲಿ ಇನ್ನೂ ಬೆಂಕಿ ಉರಿಯುತ್ತಿದೆ. ಉಕ್ರೇನ್‌ನಿಂದ ಆಡೆನ್ ವರೆಗಿನ ಭೂಗೋಳ ಬಹಳ ಅಪಾಯಕಾರಿ, ಏಕೆಂದರೆ ಅಲ್ಲಿ ಸಿಡಿಯುತ್ತಿರುವ ಸಣ್ಣ ಸಣ್ಣ ಬೆಂಕಿಯ ಕಿಡಿಗಳು ದೊಡ್ಡ ಜ್ವಾಲೆಯೊಡನೆ ಸೇರಿಕೊಳ್ಳಬಹುದು. ಉಕ್ರೇನ್, ಚೆಚೆನ್ಯಾ, ಕಕಾಸಸ್, ಕುರ್ದಿಸ್ತಾನ್, ಇರಾನ್, ಸಿರಿಯಾ, ಲೆಬನಾನ್, ಇಸ್ರೇಲ್, ಜೋರ್ಡನ್ ಹಾಗೂ ಕೆಂಪು ಸಮುದ್ರದಿಂದ ಕೆಳಗೆ ಆಡೆನ್‌ವರೆಗಿನ ಪ್ರದೇಶದಲ್ಲಿ ಯಾವಾಗ ಏನು ಬೇಕಾದರೂ ಆಗಬಹುದು.

ಯುದ್ಧದ ಆರಂಭವನ್ನು ಗುರುತಿಸಲು ನಾವು ಕ್ಯಾಲೆಂಡರ್‌ನಲ್ಲಿ ಮಾರ್ಕ್ ಮಾಡಲು ಸಾಧ್ಯವಿದೆ. ಆದರೆ, ಅದು ಯಾವಾಗ ಮುಗಿಯುತ್ತದೆ ಎಂಬುದು ದೇವರಿಗೇ ಗೊತ್ತು. ಪಾಪ, ಆ ದೇವರಿಗೆ ಈ ಬ್ರಹ್ಮಾಂಡದಲ್ಲಿ ಎಷ್ಟೊಂದು ಕೆಲಸಗಳಿವೆ.

(ಲೇಖಕರು ಹಿರಿಯ ಪತ್ರಕರ್ತರು)

ಅರ್ಧರಾತ್ರಿಯಲ್ಲಿ ಸ್ವತಂತ್ರವಾದ ದೇಶಕ್ಕೆ ಮಧ್ಯರಾತ್ರಿಯಲ್ಲಿ ಬಿತ್ತು ಸಂಕೋಲೆ..
ದನಿಯೆತ್ತದಂತೆ ಗಂಟಲಿಗೆ ಇಕ್ಕಳ, ಆಡಿಸಲಾಗದಂತೆ ಕೈ-ಕಾಲಿಗೆ ಕೋಳ..

ಕಗ್ಗತ್ತಲಲ್ಲಿ ಎರಗಿತು ತುರ್ತುಸ್ಥಿತಿ ಎಂಬ 'ಕರಿಬೆಕ್ಕು'

ತುರ್ತು ಪರಿಸ್ಥಿತಿಯಲ್ಲಿ ಹೇಗಿತ್ತು ಪತ್ರಿಕಾ ಪ್ರಪಂಚ?

ಸಿಂಹಾವಲೋಕನ | ದು.ಗು.ಲಕ್ಷ್ಮಣ

1975ರಲ್ಲಿ ಆಗ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು ತಮ್ಮ ಅಧಿಕಾರದ ಉಳಿವಿಗಾಗಿ ದೇಶದ ಮೇಲೆ ಹೇರಿದ್ದ ತುರ್ತು ಪರಿಸ್ಥಿತಿಗೆ ಈಗ ಬರೋಬ್ಬರಿ 50 ವರ್ಷ. 1975 ಜೂನ್ 12 ಭಾರತದ ರಾಜಕೀಯ ಚರಿತ್ರೆಗೆ ನಿರ್ಣಾಯಕ ತಿರುವು ಕೊಟ್ಟ ದಿನ. ಆ ದಿನ ಅಲಹಾಬಾದ್ ಉಚ್ಚ ನ್ಯಾಯಾಲಯ ಒಂದು ತೀರ್ಪನ್ನು ಪ್ರಕಟಿಸಿತು. ಅದೆಂದರೆ- ''ಇಂದಿರಾ ಗಾಂಧಿ ಚುನಾವಣಾ ಭ್ರಷ್ಟಾಚಾರ ಎಸಗಿರುವುದು ಸಾಬೀತಾಗಿದೆ. ಆದ್ದರಿಂದ ಅವರ ಲೋಕಸಭಾ ಸದಸ್ಯತ್ವ ರದ್ದಾಗಿದೆ ಮತ್ತು ಮುಂದಿನ ಆರು ವರ್ಷಗಳವರೆಗೆ ಅವರು ಯಾವ ಚುನಾವಣೆಯಲ್ಲೂ ಸ್ಪರ್ಧಿಸುವಂತಿಲ್ಲ''.

ಇಂಥದೊಂದು ತೀರ್ಪು ಇಂದಿರಾ ಗಾಂಧಿಯವರನ್ನು ದಿಗ್ಭ್ರಮೆಗೊಳಿಸಿದ್ದು ಸಹಜವೇ ಆಗಿತ್ತು. ವಿರೋಧ ಪಕ್ಷಗಳ ಆಗ್ರಹವನ್ನು ಲೆಕ್ಕಿಸದೆ ಆಕೆ ತನ್ನ ಅಧಿಕಾರದ ಉಳಿವಿಗಾಗಿ ದೇಶದ ಮೇಲೆ 1975 ಜೂನ್ 25ರಂದು ತುರ್ತು ಪರಿಸ್ಥಿತಿಯನ್ನು ಹೇರಿದರು. ಪ್ರಧಾನಿ ಪದವಿಯ ಮೋಹ ಅವರನ್ನು ಯಾವ ಮಟ್ಟಕ್ಕೂ ಇಳಿಸುವ ಸನ್ನಿವೇಶ ಸೃಷ್ಟಿಸಿತ್ತು. ಈ ತುರ್ತು ಪರಿಸ್ಥಿತಿಗೆ ಕಾರಣ - ಜನತೆಯ ಎಲ್ಲ ಬಗೆಯ ಮೂಲಭೂತ ಸ್ವಾತಂತ್ರ್ಯ-ಹಕ್ಕುಗಳ ರದ್ದು, ಪತ್ರಿಕೆಗಳ ಬಾಯಿಗೆ ಸೆನ್ಸಾರ್ ಬೀಗ, ನ್ಯಾಯಾಂಗದ ಕೈಕಾಲುಗಳಿಗೆ ಬೇಡಿ, ಸಂಘ-ಸಂಸ್ಥೆಗಳ ಸ್ವಾತಂತ್ರ್ಯಕ್ಕೆ ಕೊಡಲಿ ಏಟು- ಇದು ತುರ್ತು ಪರಿಸ್ಥಿತಿ ಆದೇಶದ ತಾತ್ಪರ್ಯ. ಭಾರತದ 60 ಕೋಟಿ ಜನರು ಗಾಢನಿದ್ರೆಯಲ್ಲಿದ್ದಾಗ ಅವರ ಮೇಲೆ ನಡೆದ ಆಕಸ್ಮಿಕ ಗುಪ್ತದಾಳಿ ಇದಾಗಿತ್ತು.

1975ರ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮೊದಲ ಆಘಾತ ತಟ್ಟಿದ್ದೇ ಪತ್ರಿಕೆಗಳಿಗೆ. ಪತ್ರಿಕೆಗಳ ಮೇಲೆ ಸೆನ್ಸಾರ್‌ಶಿಪ್ ವಿಧಿಸಿದ ಇಂದಿರಾ ಗಾಂಧಿ ಸರಕಾರದ ಕ್ರಮವು ಪತ್ರಿಕಾ ಸ್ವಾತಂತ್ರ್ಯದ ಸಂಪೂರ್ಣ ಹರಣವಲ್ಲದೆ ಮತ್ತೇನೂ ಆಗಿರಲಿಲ್ಲ. ''ಪ್ರಜಾಪ್ರಭುತ್ವದ ದೃಷ್ಟಿಯಿಂದ ಸರಕಾರ ಉಳಿದು ಪತ್ರಿಕೆಗಳು ಸಾಯುವುದಕ್ಕಿಂತ, ಪತ್ರಿಕೆಗಳು ಉಳಿದು ಸರಕಾರ ಸಾಯುವುದು ಕಡಿಮೆ ಅಪಾಯಕರ'' ಎಂಬುದು ಪ್ರಸಿದ್ಧ ಪತ್ರಕರ್ತ ಥಾಮಸ್ ಜೆಫರ್ಸನ್ ಅವರ ಜನಪ್ರಿಯ ಮಾತು. ಹಾಗೆಂದೇ, ಇಂದಿರಾ ಗಾಂಧಿ ತುರ್ತು ಪರಿಸ್ಥಿತಿಯ ಉದ್ದೇಶಗಳ ಪೂರೈಕೆಗಾಗಿ ಪತ್ರಿಕಾ ಸ್ವಾತಂತ್ರ್ಯವನ್ನು ಹರಣ ತಂದರು.

ಆಗ ವಾರ್ತಾ ಮಂತ್ರಿಯಾಗಿದ್ದ ವಿದ್ಯಾಚರಣ ಶುಕ್ಲ ಅವರು, ನಾಡಿನ ಎಲ್ಲಾ ಪ್ರಮುಖ ಪತ್ರಿಕೆಗಳನ್ನು 1) ಸರಕಾರಕ್ಕೆ ಅನುಕೂಲಕರ 2) ತಟಸ್ಥ ಮತ್ತು 3) ಪ್ರತಿಕೂಲ- ಹೀಗೆ 3 ವಿಭಾಗಗಳಾಗಿ ವಿಂಗಡಿಸಿ ಪ್ರತಿಕೂಲ ಇರುವವರನ್ನೆಲ್ಲ ಬಂಧಿಸಿ ಜೈಲಿಗಟ್ಟಿದರು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನೇ ಹರಣ ಮಾಡಲಾಗಿದ್ದರೂ, ಇಂದಿರಾ ಗಾಂಧಿ ಜಾರಿಗೆ ತಂದ ಪತ್ರಿಕಾ ನಿರ್ಬಂಧ ಸಮರ್ಥಿಸಿಕೊಳ್ಳುವ ಭಟ್ಟಂಗಿ ಪತ್ರಕರ್ತರಿಗೇನೂ ಕೊರತೆ ಇರಲಿಲ್ಲ. ಸೆನ್ಸಾರ್‌ಶಿಪ್ ಜಾರಿಗೆ ಬಂದ ಆರಂಭದಲ್ಲಿ ಪ್ರಮುಖ ಹಿಂದಿ ಪತ್ರಿಕೆಗಳ 47 ಮಂದಿ ಸಂಪಾದಕರ ನಿಯೋಗವೊಂದು ಇಂದಿರಾ ಗಾಂಧಿಯವರನ್ನು ಭೇಟಿ ಮಾಡಿ ತಮ್ಮ ಬೆಂಬಲ ಸೂಚಿಸಿದ್ದು ಇದಕ್ಕೊಂದು ನಿದರ್ಶನ.

ಸುದ್ದಿ ನಿಯಂತ್ರಣಕ್ಕಾಗಿ ಇಂದಿರಾ ಗಾಂಧಿ ಸರಕಾರ ಆಗ ಬಳಸಿದ ಅಸ್ತ್ರಗಳು ಹಲವಾರು. ಸೆನ್ಸಾರ್ ಅಧಿಕಾರಿಗಳ ಮೂಲಕ ಪತ್ರಿಕೆಗಳ ಬಾಯಿಗೆ ಬೀಗ ಹಾಕಿದ್ದರ ಜತೆಗೆ ಸರಕಾರ ಕೈಗೊಂಡ ಇತರ ಕ್ರಮಗಳೆಂದರೆ: ಪತ್ರಿಕೋದ್ಯಮಿಗಳಿಗೂ ಪೊಲೀಸರ ಮೂಲಕ ಕಿರುಕುಳ. ಕ್ಷುದ್ರ ಕಾರಣಗಳಿಗೂ ಮೀಸಾ, ಡಿಐಆರ್‌ಗಳ ಪ್ರಯೋಗ. ಪತ್ರಿಕಾ ವರದಿಗಾರರಿಗಿದ್ದ ಸೌಲಭ್ಯಗಳಿಗೆ ಅರ್ಧಚಂದ್ರ. ಪತ್ರಿಕಾ ಪ್ರಕಟಣೆಗೆ ನೀಡುವ ಪರವಾನಗಿ ರದ್ದು. ಜಾಹೀರಾತುಗಳಿಗೆ ಕತ್ತರಿ. ಸರಕಾರಕ್ಕೆ ಪ್ರತಿಕೂಲರಾದ ಪತ್ರಕರ್ತರನ್ನು ಉದ್ಯೋಗದಿಂದ ಉಚ್ಛಾಟಿಸುವಂತೆ ಮಾಲೀಕರ ಮೇಲೆ ಒತ್ತಡ. ನ್ಯೂಸ್‌ಪ್ರಿಂಟ್ ಹಂಚಿಕೆಯಲ್ಲಿ ವಿಪರೀತ ಪಕ್ಷಪಾತ ಇತ್ಯಾದಿ. ಇಂಥ ಯಾವ ಒತ್ತಡಕ್ಕೂ ಮಣಿಯದೆ ಕೊನೆಯವರೆಗೂ ದಿಟ್ಟತನದಿಂದ ಸರಕಾರದ ವಿರುದ್ಧ ತೊಡೆತಟ್ಟಿ ನಿಂತವರೆಂದರೆ 'ಇಂಡಿಯನ್ ಎಕ್ಸ್‌ಪ್ರೆಸ್'ನ ರಾಮನಾಥ ಗೋಯಂಕ ಮತ್ತು 'ಸ್ಟೇಟ್ಸ್‌ಮನ್' ಪತ್ರಿಕೆಯ ಸಿ.ಆರ್. ಇರಾನಿ. ಅದರಲ್ಲೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಮೇಲೆ ಸರಕಾರದ ದಮನ-ದಬ್ಬಾಳಿಕೆ ಅಷ್ಟಿಷ್ಟಾಗಿರಲಿಲ್ಲ. 150ಕ್ಕೂ ಹೆಚ್ಚು ವಿವಿಧ ರೀತಿಯ ಮೊಕದ್ದಮೆಗಳನ್ನು ಆ ಪತ್ರಿಕೆ ಎದುರಿಸಬೇಕಾಗಿತ್ತು. ಅಂಥ ಭಯಾನಕ ದಿನಗಳಲ್ಲೂ ಸರಕಾರದ ವಿರುದ್ಧ ಉಗ್ರಲೇಖನ, ವ್ಯಂಗ್ಯಚಿತ್ರಗಳ ಪ್ರಕಟಣೆಯ ಮೂಲಕ ಆ ಪತ್ರಿಕೆ ಹೋರಾಡಿದ್ದು ಸ್ಮರಣಾರ್ಹ. ಖ್ಯಾತ ವ್ಯಂಗ್ಯಚಿತ್ರಕಾರ ಅಬು ಅಬ್ರಹಾಂ ಅವರ ವ್ಯಂಗ್ಯಚಿತ್ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಆಗ ಪ್ರಕಟವಾಗಿದ್ದು ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಜತೆಗೆ ಅದು ಇಂದಿರಾರ ಸರ್ವಾಧಿಕಾರವನ್ನು ಅಣಕಿಸುವಂತಿತ್ತು. ಆ ವ್ಯಂಗ್ಯಚಿತ್ರದ ಸಾರಾಂಶವಿಷ್ಟೇ: ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಬಾತ್‌ಟಬ್‌ನಲ್ಲಿ ಕುಳಿತಿದ್ದಾಗಲೂ ಪ್ರಧಾನಿ ಇಂದಿರಾ ಗಾಂಧಿ ಕಳಿಸಿದ ಪತ್ರ ಆದೇಶಗಳಿಗೆ ಸಹಿ ಹಾಕಿ, ನಂತರ If there are any more ordinances, just ask them to wait ಎಂದು ಹೇಳುತ್ತಿರುವುದು. ರಾಷ್ಟ್ರಪತಿಗಳು ಹೇಗೆ ಸಂಪೂರ್ಣ ರಬ್ಬರ್ ಸ್ಟ್ಯಾಂಪ್ ಆಗಿದ್ದರು ಎಂಬ ಸಂದೇಶ ಈ ವ್ಯಂಗ್ಯಚಿತ್ರದಲ್ಲಿ ಅಡಗಿತ್ತು.

ಖ್ಯಾತ ಗಾಯಕರಾಗಿದ್ದ ಕಿಶೋರ್ ಕುಮಾರ್ ಸಿನಿಮಾ ಹಾಡುಗಳಂತೆಯೇ ಹಲವು ದೇಶಭಕ್ತಿ ಗೀತೆಗಳನ್ನು ಹಾಡಿದ್ದಾರೆ. ಆದರೆ ಅಂಥ ಹಾಡುಗಳನ್ನು ಇಂದಿರಾ ಸರಕಾರಕ್ಕೆ ಸಹಿಸಲಾಗಲಿಲ್ಲ. ಆಕಾಶವಾಣಿ, ದೂರದರ್ಶನಗಳಲ್ಲಿ ಪ್ರಸಾರವಾಗುತ್ತಿದ್ದ ಅಂಥ ಹಾಡುಗಳಿಗೆ ನಿಷೇಧ ಹೇರಲಾಯಿತು. ತುರ್ತು ಪರಿಸ್ಥಿತಿಯನ್ನು ಲೇವಡಿ ಮಾಡುವ 'ಕಿಸ್ಸಾ ಕುರ್ಸಿ ಕಾ' ಎಂಬ ಚಲನಚಿತ್ರದ ಮೂಲಪ್ರತಿಯನ್ನು ನಾಶಗೊಳಿಸಲಾಯಿತು.

ಆಂಧಿ, ಆಂದೋಲನ್ ಚಿತ್ರಗಳು ವಿರೂಪಗೊಂಡವು. ವಾಟರ್‌ಗೇಟ್ ಹಗರಣವನ್ನು ಆಧರಿಸಿದ 'ಆಲ್ ದಿ ಪ್ರೆಸಿಡೆಂಟ್ ಮ್ಯಾನ್' ಎಂಬ ಚಿತ್ರದ ಪ್ರದರ್ಶನಕ್ಕೂ ಸರಕಾರದ ನಿರ್ಬಂಧ. ಸಂತಾನಶಕ್ತಿಹರಣ ಚಿಕಿತ್ಸೆಗೆ ಒಪ್ಪದ ದೆಹಲಿಯ ತುರ್ಕ್‌ಮನ್ ಗೇಟ್ ಬಳಿ ಇರುವ ಜೋಪಡಿ ವಾಸಿಗಳ ವಸತಿಗಳನ್ನು ಧ್ವಂಸಗೊಳಿಸಿದ ಸುದ್ದಿ, ರಾಜ್ಯಸಭೆಯಲ್ಲಿ ವಾರಂಟಿಗೆ ಗುರಿಯಾಗಿದ್ದ ಡಾ.ಸುಬ್ರಮಣಿಯನ್ ಸ್ವಾಮಿ ದಿಢೀರನೆ ಪ್ರತ್ಯಕ್ಷರಾಗಿ ನಂತರ ಅಷ್ಟೇ ಶರವೇಗದಲ್ಲಿ ಮಾಯವಾದ ಸುದ್ದಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ನಡೆಯುತ್ತಿದ್ದ ಕಿತ್ತಾಟಗಳು, ಪತ್ರಿಕಾ ಸೆನ್ಸಾರ್‌ಗೆ ಸಂಬಂಧಿಸಿದ ನ್ಯಾಯಾಲಯದ ನಿರ್ಭೀತ ತೀರ್ಪುಗಳು- ಈ ಯಾವುದೂ ಪ್ರಕಟವಾಗದಂತೆ ಕಠಿಣ ಸೆನ್ಸಾರ್ ಹೇರಲಾಗಿತ್ತು. ಸರಕಾರದ ಕೃಪಾಪೋಷಿತ ಸುದ್ದಿಸಂಸ್ಥೆಯು ಸುಳ್ಳು-ಸುದ್ದಿಗಳನ್ನು ಸೃಷ್ಟಿಸಿ ಮೊದಲೇ ತೇಲಿಬಿಡುತ್ತಿತ್ತು. ಅಂಥ ಸುದ್ದಿಗಳನ್ನಷ್ಟೇ ಪತ್ರಿಕೆಗಳು ಪ್ರಕಟ ಮಾಡಬೇಕಿತ್ತು.

ಆದರೆ ಸರಕಾರದ ಸೆನ್ಸಾರ್ ನೀತಿಗೆ ತೀಕ್ಷ್ಣ ಪ್ರತಿರೋಧ ತೋರಿದ್ದು ಹಲವಾರು ಸಣ್ಣ ಪತ್ರಿಕೆಗಳು. ಯಾವುದೇ ಆರ್ಥಿಕ ಏರುಪೇರನ್ನು ಸಹಿಸುವ ಕಿಂಚಿತ್ ತಾಕತ್ ಇಲ್ಲದಿದ್ದರೂ ಸರಕಾರದ ವಿರುದ್ಧ ಅವು ಸೆಟೆದು ನಿಂತಿದ್ದು ಮಾತ್ರ ಸೋಜಿಗವೇ ಸರಿ. ಚೋ.ರಾಮಸ್ವಾಮಿ ಅವರ 'ತುಘಲಕ್' ಪತ್ರಿಕೆಯು ಸೆನ್ಸಾರ್ ನೀತಿಯನ್ನು ವಿರೋಧಿಸಿ ತನ್ನ ಪ್ರಕಟಣೆಯನ್ನೇ ಸ್ಥಗಿತಗೊಳಿಸಿತು. 'ಫ್ರೀಡಂ ಫಸ್ಟ್' ಪತ್ರಿಕೆಯ ಸಂಪಾದಕ ಮಿನೂ ಮಸಾನಿ ಮತ್ತು 'ಭೂಮಿಪುತ್ರ'ದ ಸಂಪಾದಕ ಚುನಿಭಾಯಿ ವೈದ್ಯ ನ್ಯಾಯಾಲಯದ ಮೆಟ್ಟಿಲು ಏರಿ ಜಯ ಪಡೆದರು. ರಾಜಮೋಹನ್ ಗಾಂಧಿ ಸಾರಥ್ಯದ 'ಹಿಮ್ಮತ್' ಪತ್ರಿಕೆಯು ಹೆಸರಿಗೆ ತಕ್ಕಂತೆ ಸರ್ವಾಧಿಕಾರದ ದಬ್ಬಾಳಿಕೆ ನೀತಿಯನ್ನು ಖಂಡಿಸಿ ಬರೆದು ಸಾಕಷ್ಟು ತೊಂದರೆಗಳನ್ನು ಮೈಮೇಲೆ ಎಳೆದುಕೊಂಡಿತು.

ಎ.ಡಿ.ಗೊರವಾಲ ಅವರ ಪುಟ್ಟ ಪತ್ರಿಕೆ 'ಒಪೀನಿಯನ್' ತೋರಿದ ದಿಟ್ಟತನ ಪ್ರಶಂಸಾರ್ಹ. ಒಪೀನಿಯನ್ ಪತ್ರಿಕೆಯನ್ನು ಮುದ್ರಿಸದಂತೆ ಸರಕಾರ ಬೆದರಿಕೆ ಹಾಕಿದಾಗ ಅದಕ್ಕೆ ಬಗ್ಗದ ಗೊರವಾಲಾ cyclostyle ಮಾಡಿಸಿ ಹಲವು ಸಂಚಿಕೆಗಳನ್ನು ಹೊರತಂದರು. ಈ ಪತ್ರಿಕೆಯನ್ನು ಅಂಚೆ ಕಚೇರಿಗಳು ರವಾನಿಸಬಾರದೆಂದು ಸರಕಾರ ಫರ್ಮಾನು ಹೊರಡಿಸಿದಾಗ ಕೊನೆಯ ಸಂಚಿಕೆಯಲ್ಲಿ ಗೊರವಾಲಾ ಬರೆದಿದ್ದು ಹೀಗಿತ್ತು: ''ಇಂದಿರಾ ಆಳ್ವಿಕೆ ಹುಟ್ಟಿದ್ದು ಸುಳ್ಳಿನಲ್ಲಿ,ಬೆಳೆದದ್ದು ಸುಳ್ಳುಗಳಿಂದ. ಒಪೀನಿಯನ್ ಪತ್ರಿಕೆಯ ಓದುಗರು ಬೀದಿಗೆ ಇಳಿಯುವವರಲ್ಲ. ಅವರು ಓದುತ್ತಾರೆ, ಯೋಚಿಸುತ್ತಾರೆ. ತೂಗಿ ನೋಡಿ ನಿರ್ಧಾರಕ್ಕೆ ಬರುತ್ತಾರೆ. ಈ ನಿರ್ಧಾರಗಳೇ ಸರಕಾರಕ್ಕೆ ಗಾಬರಿ ಉಂಟುಮಾಡುತ್ತವೆ. ಇಂಥ ಸುಶಿಕ್ಷಿತ ಓದುಗರನ್ನು ಕಂಡೇ ಸರಕಾರ ಭಯಗೊಂಡಿದೆ''.

ಹಿಂದಿ ಸಾಪ್ತಾಹಿಕ 'ಪಾಂಚಜನ್ಯ', ಇಂಗ್ಲಿಷಿನ 'ಜನತಾ', ಮರಾಠಿಯ 'ಸಾಧನಾ', ಇಂದೋರಿನ ದಿನಪತ್ರಿಕೆ 'ಸ್ವದೇಶ', ಕನ್ನಡ ವಾರಪತ್ರಿಕೆ 'ವಿಕ್ರಮ', ಮಲಯಾಳಂನ 'ಕೇಸರಿ' ಮೊದಲಾದ ಪತ್ರಿಕೆಗಳ ಮುದ್ರಣಾಲಯಗಳನ್ನು ಸರಕಾರ ಮುಟ್ಟುಗೋಲು ಹಾಕಿ ಪತ್ರಿಕೆಗಳ ಸಂಪಾದಕರನ್ನೂ ಬಂಧಿಸಿತು. 'ವಿಕ್ರಮ' ವಾರಪತ್ರಿಕೆಯ ಸಂಪಾದಕರಾಗಿದ್ದ ಬೆ. ಸು.ನಾ.ಮಲ್ಯ 20 ತಿಂಗಳ ಕಾಲ ಮೀಸಾ ಕಾಯ್ದೆಯಡಿ ಬಂಧನಕ್ಕೊಳಗಾಗಿ ಜೈಲಿನಲ್ಲಿ ಕೊಳೆಯಬೇಕಾಯಿತು.

ಆಗ ಭಾರತದಲ್ಲಿದ್ದ ಅತ್ಯಂತ ಲೋಕಪ್ರಿಯ ವ್ಯಂಗ್ಯಚಿತ್ರ ಪತ್ರಿಕೆ 'ಶಂಕರ್ ವೀಕ್ಲಿ'. ಅದು 1975 ಅಕ್ಟೋಬರ್‌ನಲ್ಲಿ ಕಣ್ಮುಚ್ಚಿತು. ಅದು ಕಣ್ಮುಚ್ಚಿದ್ದು ಹಣದ ತೊಂದರೆಯಿಂದಲ್ಲ, ಹಾಸ್ಯವೇ ಸತ್ತುಹೋಗಿದ್ದರಿಂದ. ಕೊನೆಯ ಬೀಳ್ಕೊಡುಗೆ ಸಂಪಾದಕೀಯದಲ್ಲಿ ಪತ್ರಿಕೆಯ ಸ್ಥಾಪಕ ಎಸ್.ಕೆ .ಪಿಳ್ಳೆ ಬರೆದಿದ್ದು ಹೀಗೆ: ''ಜಗತ್ತು ಜಬರ್ದಸ್ತಿನ ನಾಯಕರು, ಕಪಟ-ಮೋಸಗಳು, ಕುಂದುಕೊರತೆಗಳನ್ನು ನೋಡಿ ಓದುಗರು ನಗುವಂತೆ ಮಾಡುವುದೇ ನಮ್ಮ ಉದ್ದೇಶವಾಗಿತ್ತು. ಆದರೆ ಸರ್ವಾಧಿಕಾರದಲ್ಲಿ ಹಾಸ್ಯಕ್ಕೆ ಜಾಗವಿಲ್ಲ. ಏಕೆಂದರೆ ಜನರು ಸರ್ವಾಧಿಕಾರಿಯನ್ನೇ ನೋಡಿ ನಗಬಹುದು. ಹಿಟ್ಲರ್‌ನ ಕಾಲದಲ್ಲಿ ಹಾಸ್ಯವಾಗಲಿ ವ್ಯಂಗ್ಯಚಿತ್ರಗಳಾಗಲಿ ಅಥವಾ ಕುತೂಹಲಜನಕ ಸುದ್ದಿಗಳಾಗಲಿ ಇರಲಿಲ್ಲ''.

ಮಂಗಳೂರಿನ 'ದಿವ್ಯವಾಣಿ' ಪತ್ರಿಕೆಯ ಬಿಸಿರಕ್ತದ ತರುಣ ಸಂಪಾದಕ ರಾಘವೇಂದ್ರ ಎಂ.ನಾಗೋರಿಯವರದು ತುರ್ತು ಪರಿಸ್ಥಿತಿಯಲ್ಲೂ ಕೆಚ್ಚೆದೆಯ ಸಾಹಸ. ನಿರ್ಭಯವಾಗಿ ಸರಕಾರದ ಖಂಡನೆ. ಡಿಐಆರ್ ಅನ್ವಯ ನಾಗೋರಿಗೆ 100 ದಿನಗಳ ಸಜಾ. ಸೆರೆವಾಸ ಮುಗಿಸಿಬಂದ ಬಳಿಕ 'ಪುನಶ್ಚ ಹರಿಃ ಓಂ' ಶೀರ್ಷಿಕೆ ಅಡಿ ಅವರು ಮತ್ತೆ ಉಗ್ರ ಬರವಣಿಗೆ ಪ್ರಾರಂಭಿಸಿದರು. ಪರಿಣಾಮವಾಗಿ ಮತ್ತೆ ಮೀಸಾದಡಿ ಬಂಧನ, ಬೆಳಗಾವಿಯ ಹಿಂಡಲಗಾ ಜೈಲಿಗೆ ರವಾನೆ. ಅಲ್ಲೂ ಆತ ಸುಮ್ಮನಿರಲಿಲ್ಲ. 'ಕ್ರಾಂತಿ' ಎಂಬ ಕೈಬರಹದ ಪತ್ರಿಕೆ ಹೊರಡಿಸಿ ತಮ್ಮ ಮೊನಚು ಲೇಖನಿಗೆ ಕೆಲಸ ಕೊಟ್ಟಿದ್ದರು. ಬಿಡುಗಡೆಯಾದ ಬಳಿಕ 'ದಿವ್ಯವಾಣಿ'ಯನ್ನು ದಿನಪತ್ರಿಕೆಯಾಗಿ ರೂಪಿಸಿದರು. 15 ಸಾವಿರದವರೆಗೆ ಪ್ರಸಾರ ಸಂಖ್ಯೆ ಏರಿತ್ತು. ಆದರೆ ನಾಗೋರಿಯವರ ಖಾರವಾದ ಬರಹಗಳು ಜಿಲ್ಲೆಯ ಆಳರಸ ಪಕ್ಷದ ಪುಢಾರಿಗಳಿಗೆ, ಕಳ್ಳಸಾಗಣೆದಾರರಿಗೆ, ಭ್ರಷ್ಟ ಪೊಲೀಸ್ ಅಧಿಕಾರಿಗಳಿಗೆ ಅಪಥ್ಯ ಎನಿಸಿತು. ಹಿರಿಯ ಪತ್ರಕರ್ತರೊಬ್ಬರು ನಾಗೋರಿಗೆ, ''ನಿನಗೆ ಬದುಕುವ ಆಸೆ ಇಲ್ಲವೇ? ದುಷ್ಟ ಶಕ್ತಿಗಳನ್ನು ಮೈಮೇಲೆ ಏಕೆ ಎಳೆದುಕೊಳ್ತಿಯಾ? ಸಾವಿರ ಬಾರಿ ಯೋಚಿಸಿ ಬರೆ'' ಎಂದು ಬುದ್ಧಿವಾದ ಹೇಳಿದಾಗ ನಾಗೋರಿಯವರ ತಣ್ಣನೆಯ ಪ್ರತಿಕ್ರಿಯೆ: ''ಅವರು ನನ್ನನ್ನು ಏನು ಮಾಡಿಯಾರು? ಕೊಲ್ಲಬಹುದು, ಅಷ್ಟೇ ತಾನೇ? ಹೇಡಿಗಳು ಸಾವಿರ ಬಾರಿ ಸಾಯುತ್ತಾರೆ. ವೀರನಂತೆ ನಾನು ಒಂದೇ ಬಾರಿ ಸಾಯುತ್ತೇನೆ''. ಹಾಗೆಯೇ ಆಯಿತು. 1977ರ ಸೆಪ್ಟೆಂಬರ್ 2ರಂದು ತಮ್ಮ ಕಚೇರಿಯಲ್ಲಿ ಬೆಳಗ್ಗೆ ದೀಪ ಹಚ್ಚಿ ದೇವರಿಗೆ ಕೈ ಮುಗಿಯುತ್ತಿದ್ದಾಗ ಹಂತಕರ ಚೂರಿ ಇರಿತಕ್ಕೆ ನಾಗೋರಿ ಬಲಿಯಾದರು. ನಿರ್ಭೀತ ಪತ್ರಕರ್ತನೊಬ್ಬನ ಸಿಡಿಲಧ್ವನಿ ಉಡುಗಿತು.ಇಂಥ ಬೆರಳೆಣಿಕೆಯ ಪತ್ರಕರ್ತರನ್ನು ಹೊರತುಪಡಿಸಿದರೆ ಬಹುತೇಕ ಖ್ಯಾತನಾಮ ಪತ್ರಕರ್ತರು, ಪ್ರಗತಿಪರರೆಂದು ಬಿಂಬಿಸಿಕೊಳ್ಳುತ್ತಿದ್ದವರು ಸರಕಾರದ 'ಪರಾಕು ಪಂಪು' ಒತ್ತುವುದರಲ್ಲಿ ತಮ್ಮ ಬದುಕಿನ ಸಾರ್ಥಕತೆ ಕಂಡುಕೊಂಡಿದ್ದರು. ಇಂದಿರಾ ಗಾಂಧಿಯವರ ಕೃಪೆಗೆ ಪಾತ್ರರಾಗಲು 'ನಾ ಮುಂದು, ತಾ ಮುಂದು' ಎಂದು ಕ್ಯೂ ಹಚ್ಚಿದ್ದರು. ಅಭಿವ್ಯಕ್ತಿ ಸ್ವಾತಂತ್ರ್ಯಹರಣದ ವಿರುದ್ಧ ದನಿಯೆತ್ತಲಾಗದೆ ನರಸತ್ತವರಂತಾಗಿದ್ದರು.

ಇಂಥವರನ್ನು ಗಮನಿಸಿಯೇ, ತುರ್ತು ಪರಿಸ್ಥಿತಿಯ ಬಳಿಕ ಕೇಂದ್ರ ಸರಕಾರದಲ್ಲಿ ವಾರ್ತಾ ಸಚಿವರಾಗಿದ್ದ ಎಲ್.ಕೆ. ಆಡ್ವಾಣಿಯವರು ಒಮ್ಮೆ ಪತ್ರಿಕಾಗೋಷ್ಠಿಯಲ್ಲಿ ಮಾರ್ಮಿಕವಾಗಿ ಪ್ರಶ್ನಿಸಿದ್ದರು: ''ಇಂದಿರಾ ಗಾಂಧಿ ನಿಮಗೆ ಬಗ್ಗಿ ಎಂದಷ್ಟೇ ಹೇಳಿದ್ದರು. ಆದರೆ ನೀವೇಕೆ ತೆವಳಲು ಶುರುಹಚ್ಚಿದಿರಿ? '' (When Indira Gandhi asked only to bend, why did you crawled?).

ಈ ಪ್ರಶ್ನೆಗೆ ಮಾತ್ರ ಯಾರಿಂದಲೂ ಉತ್ತರವಿರಲಿಲ್ಲ...!

(ಲೇಖಕರು ಹಿರಿಯ ಪತ್ರಕರ್ತರು)

25 06 1975

THE TIMES OF INDIA
STATE OF EMERGENCY DECLARED
Several leaders arrested

INDIAN EXPRESS
Opposition leaders among 676 arrested
Emergency proclaimed
Situation 'by and large peaceful'

INDIAN HERALD
NATIONAL ENGLISH DAILY
Founder & Editor: THAKUR V. HARI PRASAD
SPECIAL SUPPLEMENT
EMERGENCY DECLARED
JP, Morarji, Advani, Asoka Mehta & Vajpayee arrested

ಇದು 1975ರ ಜೂನ್ 25ರಂದು ಘೋಷಿಸಲ್ಪಟ್ಟ 'ತುರ್ತುಪರಿಸ್ಥಿತಿ' ಎಂಬ ಕರಾಳ ಕಾಲಘಟ್ಟದ ಕಥನ. ಭಾರತಕ್ಕೆ ಆಂತರಿಕವಾಗಿ ಮತ್ತು ಬಾಹ್ಯವಾಗಿ ತೊಂದರೆಯಿದೆ ಎಂಬ ಕುಂಟುನೆಪವನ್ನು ಮುಂದುಮಾಡಿ ಅಂದಿನ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ದೇಶದ ಮೇಲೆ ತುರ್ತುಸ್ಥಿತಿಯನ್ನು ಹೇರಿ ಇಂದಿಗೆ ಭರ್ತಿ 50 ವರ್ಷ. ಇದರ ಕುರಿತಾದ ಒಂದಷ್ಟು ಮೆಲುಕು, ಅವಲೋಕನ ಇಲ್ಲಿವೆ.



ತುರ್ತು ಪರಿಸ್ಥಿತಿಯಿಂದ ನಾವು ಕಲಿಯಬೇಕಾದ್ದೇನು?

ಮೆಲುಕು | ವಿನಯ್ ಸಹಸ್ರಬುದ್ಧೆ

ಇಂದು ಜೂನ್ 25. ಬರೋಬ್ಬರಿ 50 ವರ್ಷಗಳ ಹಿಂದೆ ಪ್ರಜಾಪ್ರಭುತ್ವದ ಮೇಲೆ ಆದ 'ಕೊಲೆಗಡುಕ ದಾಳಿ'ಗೆ 50 ವರ್ಷಗಳು ತುಂಬಿರುವುದನ್ನು ಭಾರತವು ಇಂದು ನೆನಪಿಸಿಕೊಳ್ಳಲಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ ವರ್ಷದ ಜುಲೈನಲ್ಲಿ ಈ ಕುರಿತಾದ ಸಚಿವ ಸಂಪುಟದ ನಿರ್ಣಯವನ್ನು ಪ್ರಕಟಿಸುತ್ತಾ, ''ತುರ್ತು ಪರಿಸ್ಥಿತಿಯ ವೇಳೆ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು, ಏನೂ ತಪ್ಪನ್ನೇ ಮಾಡಿರದ ಲಕ್ಷಾಂತರ ಜನರನ್ನು ಹೇಗೆ ಜೈಲಿಗೆ ಅಟ್ಟಿದರು ಹಾಗೂ ಆ ಕಾಲಘಟ್ಟದಲ್ಲಿ ಮಾಧ್ಯಮಗಳ ದನಿಯನ್ನು ಹೇಗೆ ಹತ್ತಿಕ್ಕಲಾಗಿತ್ತು ಎಂಬುದರ ಸ್ಮರಣಾರ್ಥವಾಗಿ ಪ್ರತಿ ವರ್ಷದ ಜೂನ್ 25ರ ದಿನವನ್ನು 'ಸಂವಿಧಾನ ಹತ್ಯಾ ದಿವಸ' ಎಂಬುದಾಗಿ ಆಚರಿಸಲು ಸರಕಾರವು ನಿರ್ಧರಿಸಿದೆ'' ಎಂದು ಹೇಳಿದ್ದು ನಿಮಗೆ ನೆನಪಿರಬಹುದು. ಅಷ್ಟೇ ಅಲ್ಲ, ''1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅಮಾನವೀಯ ಎನ್ನಬಹುದಾದ ನೋವುಗಳನ್ನು ಅನುಭವಿಸಿದ ಜನರ ಅಗಾಧ ಕೊಡುಗೆಗಳನ್ನೂ ಈ ದಿನದಂದು ಸ್ಮರಿಸಲಾಗುತ್ತದೆ'' ಎಂದು ಕೂಡ ಅಮಿತ್ ಶಾ ಅಂದು ಹೇಳಿದ್ದರು.

ಅದು 1977ರ ಮಾರ್ಚ್ 21ರ ದಿನ. ಆ ವರ್ಷದ ಲೋಕಸಭಾ ಚುನಾವಣಾ ಫಲಿತಾಂಶಗಳು ಪ್ರಕಟವಾದ ನಂತರ ಸದರಿ ತುರ್ತು ಪರಿಸ್ಥಿತಿಯನ್ನು ಹಿಂಪಡೆಯಲು ಇಂದಿರಾ ಗಾಂಧಿಯವರು ನಿರ್ಧರಿಸಿದರು. ಆ ಚುನಾವಣೆಯಲ್ಲಿ ಹೊಮ್ಮಿದ ಜನತಾ ಜನಾರ್ದನನ ತೀರ್ಪು ಕಾಂಗ್ರೆಸ್‌ನ ಭವಿಷ್ಯದ ಶವಪೆಟ್ಟಿಗೆಗೆ ಬಿದ್ದ ಕೊನೆಯ ಮೊಳೆಯಾದರೂ, ಇಂದಿರಾ ಅವರು ತಮ್ಮ ನಿರ್ಧಾರದಿಂದ ಹಿಂದೆ ಸರಿಯಲು ಇನ್ನೂ ಅನೇಕ ಅಂಶಗಳು ಪ್ರಮುಖ ಕಾರಣಗಳಾಗಿವೆ, ಈ ಬೆಳವಣಿಗೆಗೆ ಮಹತ್ತರ ಕೊಡುಗೆ ನೀಡಿವೆ ಎಂಬುದನ್ನು ಮರೆಯಲಾಗದು. ಅವುಗಳಲ್ಲಿ ಎದ್ದು ಕಾಣುವಂಥದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ಮತ್ತು 'ಸಂಘ-ಪ್ರೇರಿತ' ಸಂಘಟನೆಗಳು ಪ್ರಾರಂಭಿಸಿದ 'ಸತ್ಯಾಗ್ರಹ' ಚಳವಳಿ.

ನಿಮಗೆ ಇಲ್ಲೊಂದು ಅಂಶವನ್ನು ನೆನಪಿಸಬೇಕು. ಸದರಿ ಸತ್ಯಾಗ್ರಹ ಚಳವಳಿಯನ್ನು ಸಜ್ಜುಗೊಳಿಸುವಲ್ಲಿ ಆರೆಸ್ಸೆಸ್ ವಹಿಸಿದ ಪಾತ್ರವನ್ನು ಅನೇಕರು ಮೆಚ್ಚಿಕೊಂಡರು ಮತ್ತು ಆರೆಸ್ಸೆಸ್‌ನ ಸಿದ್ಧಾಂತಗಳ ಕಟ್ಟಾ ವಿರೋಧಿಗಳೂ ಇವರಲ್ಲಿ ಸೇರಿದ್ದರು. ಖ್ಯಾತ ಸಮಾಜವಾದಿ ನಾಯಕ ಅಚ್ಯುತರಾವ್ ಪಟವರ್ಧನ್ ಅವರು ಆ ಸಂದರ್ಭದಲ್ಲಿ ಹೇಳಿದ್ದ ಮಾತುಗಳು ಇಲ್ಲಿ ಉಲ್ಲೇಖನೀಯ: ''ತುರ್ತು ಪರಿಸ್ಥಿತಿಯ ಹೇರಿಕೆಯನ್ನು ವಿರೋಧಿಸಿದವರಿಗೆ ಸಹಕರಿಸಲು ಮತ್ತು ಮುಕ್ತ ಸಹಯೋಗವನ್ನು ನೀಡಲು ಆರೆಸ್ಸೆಸ್‌ನ ಸ್ವಯಂಸೇವಕರು ಮತ್ತು ಬೇರಾವುದೇ ರಾಜಕೀಯ ಎದುರಾಳಿ ಗುಂಪಿನವರು ಸಿದ್ಧರಿದ್ದಾರೆ; ಸುಸ್ಪಷ್ಟವಾಗಿರುವ ದಮನಕಾರಿ ನೀತಿಯನ್ನು ಹಾಗೂ ಸುಳ್ಳುಗಳನ್ನೇ ನೆಚ್ಚಿರುವ 'ಪೈಶಾಚಿಕ ಆಡಳಿತ'ದ ವಿರುದ್ಧ ಉತ್ಸಾಹಭರಿತರಾಗಿಯೂ ಒಗ್ಗಟ್ಟಿನಿಂದಲೂ ಕೆಲಸ ಮಾಡಲು ಇವರೆಲ್ಲಾ ಸಮರ್ಥರಾಗಿದ್ದಾರೆ ಎಂಬುದನ್ನು ತಿಳಿದು ನನಗೆ ಸಂತಸವಾಗಿದೆ''.

ಪೊಲೀಸರ ದೌರ್ಜನ್ಯ, ನಿರ್ದಯತೆ ಹಾಗೂ ಕ್ರೌರ್ಯದ ನಡುವೆಯೂ ಸದರಿ ಚಳವಳಿಯನ್ನು ಮುನ್ನಡೆಸುವಲ್ಲಿ ಈ ಸತ್ಯಾಗ್ರಹಿಗಳು ತೋರಿದ ಶೌರ್ಯದಿಂದ ಗಾಢವಾಗಿ ಪ್ರಭಾವಿತರಾದ ಸಿಪಿಐ(ಎಂ) ಪಕ್ಷದ ನಾಯಕ ಎ.ಕೆ. ಗೋಪಾಲನ್ ಅವರು, ''ಇಂಥದ್ದೊಂದು ಧೀರೋದಾತ್ತ ಕಾರ್ಯ ಮತ್ತು ತ್ಯಾಗವನ್ನು ಕೈಗೊಳ್ಳುವಂತಾಗುವುದಕ್ಕೆ ಈ ಸತ್ಯಾಗ್ರಹಿಗಳಿಗೆ ಅದಮ್ಯ ಧೈರ್ಯವನ್ನು ನೀಡುವ ಅದ್ಯಾವುದೋ ಒಂದು 'ಉದಾತ್ತ ಆದರ್ಶ'ವು ಅಲ್ಲಿ ಕೆನೆಗಟ್ಟಿರಬೇಕು'' ಎಂದು ಪ್ರಶಂಸಿಸಿದ್ದರು (1979 ಜೂನ್ 9ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ).

ನಿಮಗೆ ಗೊತ್ತಿದೆಯೇ, ಸ್ವತಂತ್ರ ಭಾರತವು ಹಿಂದೆಂದೂ ಕಂಡಿರದಷ್ಟು ಕ್ರೂರ ರೀತಿಯಲ್ಲಿ ನಿರ್ವಹಿಸಲ್ಪಟ್ಟಂಥದ್ದು ತುರ್ತು ಪರಿಸ್ಥಿತಿಯ ವಿದ್ಯಮಾನ. ಇದರ ಇತಿಹಾಸವು ನಮಗೆ ಒಂದಷ್ಟು ಪಾಠಗಳನ್ನೂ ಹೇಳುತ್ತದೆ. ಅವುಗಳ ಪೈಕಿಯ ಮೂರು ಮುಖ್ಯ ಪಾಠಗಳನ್ನು ಇಲ್ಲಿ ಅವಲೋಕಿಸೋಣ. ಮೊದಲನೆಯದಾಗಿ, ವಂಶಾಡಳಿತದ ಒಲವಿರುವ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವಕ್ಕೆ ಗಂಭೀರ ಬೆದರಿಕೆಯನ್ನು ಒಡ್ಡುತ್ತವೆ. ನೆನಪಿಡಿ, ಇಂಥ ಹೆಚ್ಚಿನ ರಾಜಕೀಯ ಪಕ್ಷಗಳು ಭಾರತದ ರಾಜಕೀಯ ಅಖಾಡದಲ್ಲಿ 1970ರ ದಶಕದ ಆಸುಪಾಸಿನಲ್ಲಿ ಕಾಣಿಸಿಕೊಂಡವು. ತಮ್ಮದೇ ಆದ ತತ್ವ-ಸಿದ್ಧಾಂತಗಳನ್ನು ನೆಚ್ಚಿದ್ದ ಮಿಕ್ಕ ಪಕ್ಷಗಳ ಮೇಲಿನ ತಮ್ಮ ಹಿಡಿತವನ್ನು ಇಂಥ ವಂಶಾಡಳಿತಗಳು ಬಿಗಿಗೊಳಿಸಿ, ಅವನ್ನು 'ಕೌಟುಂಬಿಕ ವ್ಯವಹಾರ'ವನ್ನಾಗಿ ಪರಿವರ್ತಿಸಿದ್ದೂ ಈ ದಶಕದಲ್ಲಿಯೇ!

ಇಂದಿರಾ ಗಾಂಧಿಯವರ 'ರಾಜಕೀಯ ಶೈಲಿ'ಯೇ ಇಂಥ ಪಕ್ಷಗಳಿಗೆ ಸ್ಫೂರ್ತಿ ನೀಡಿತು ಎಂದು ನಂಬಲು ಒಂದು ಕಾರಣವಿದೆ. 1960ರ ದಶಕದ ಅಂತ್ಯದ ವೇಳೆಗೆ, ತಮ್ಮದೇ ಪಕ್ಷದಲ್ಲಿ ತಾವು ಬಹುತೇಕ ಏಕಾಂಗಿಯಾಗಿರುವ ಕಹಿವಾಸ್ತವವನ್ನು ಇಂದಿರಾ ಗಾಂಧಿ ಅರಿತುಕೊಂಡರು. ಈ ಬೆಳವಣಿಗೆಯಿಂದ ತೀವ್ರವಾಗಿ ವಿಚಲಿತರಾದ ಅವರು, ಅದಕ್ಕೆ ಕಾರಣವಾದ 'ಅಂತರ'ವನ್ನು ತುಂಬಲು ಸೇತುವೆಯನ್ನು ಮರುನಿರ್ಮಿಸುವ ಬದಲು, ತಮ್ಮದೇ ಆದ ಪಕ್ಷವನ್ನು ಹುಟ್ಟುಹಾಕಲು ನಿರ್ಧರಿಸಿದರು; ಆದರೆ ಈ ಘಟ್ಟದಲ್ಲಿ ಅವರು, ತಮ್ಮ ಕುಟುಂಬದ ನಿಕಟ ಸದಸ್ಯರನ್ನು, ಅದರಲ್ಲೂ ವಿಶೇಷವಾಗಿ ತಮ್ಮ ಕಿರಿಯ ಮಗ ಸಂಜಯ್ ಗಾಂಧಿಯವರನ್ನು ಮಾತ್ರವೇ ಸಂಪೂರ್ಣವಾಗಿ ನೆಚ್ಚಬಹುದು ಎಂಬುದನ್ನು ಅರಿತುಕೊಂಡರು. 1970ರ ದಶಕದ ಮಧ್ಯಭಾಗದಲ್ಲಿ, ವಿರೋಧ ಪಕ್ಷಗಳೆಲ್ಲ ಒಗ್ಗೂಡಿ ಇಂದಿರಾರ ಮೇಲಿನ ತಮ್ಮ ತೀಕ್ಷ್ಣ ವಾಗ್ದಾಳಿಯನ್ನು ತೀವ್ರಗೊಳಿಸಿದ್ದವು, ಮಾಧ್ಯಮಗಳಂತೂ ಅವರನ್ನು ಹಿಗ್ಗಾಮುಗ್ಗಾ ಟೀಕಿಸುತ್ತಿದ್ದವು. ಇಷ್ಟು ಸಾಲದೆಂಬಂತೆ, ಗುಜರಾತ್ ಮತ್ತು ಬಿಹಾರ ರಾಜ್ಯಗಳಲ್ಲಿ ಯುವಜನರು ಶುರುವಿಟ್ಟುಕೊಂಡಿದ್ದ 'ಭ್ರಷ್ಟಾಚಾರ-ವಿರೋಧಿ' ಆಂದೋಲನಗಳು ತಾರಕಕ್ಕೆ ಏರಿದ್ದವು. ಈ ಎಲ್ಲ ಬೆಳವಣಿಗೆಗಳನ್ನು ಕಂಡ ಇಂದಿರಾರನ್ನು ಸಹಜವಾಗಿಯೇ ಅಭದ್ರತೆಯ ಭಾವನೆ ಆವರಿಸಿತು. ಪಕ್ಷವು ಸಂಪೂರ್ಣವಾಗಿ ಇಂದಿರಾರ ನಿಯಂತ್ರಣದಲ್ಲಿದ್ದರೂ, ಉನ್ನತ ಸ್ಥಾನದಲ್ಲಿದ್ದ ಇಂದಿರಾ ಅಕ್ಷರಶಃ ಒಬ್ಬಂಟಿಯಾಗಿಬಿಟ್ಟಿದ್ದರು ಮತ್ತು ಸಾಲದೆಂಬಂತೆ ಪಕ್ಷದ ಸಹವರ್ತಿಗಳ ಬಗ್ಗೆ ಅವರಲ್ಲಿ ಸಣ್ಣಗೆ ಅನುಮಾನ ಹುಟ್ಟಿಕೊಂಡಿತ್ತು. ಈ ಎಲ್ಲ ಕಾರಣಗಳಿಂದ ಅವರು ತಮ್ಮ ಪುತ್ರ ಸಂಜಯರನ್ನು ಮಾತ್ರವೇ 'ವಿಶ್ವಾಸಾರ್ಹ ಬೆಂಬಲಿಗ' ಎಂದು ಪರಿಗಣಿಸುವಂತಾಯಿತು. ಸಂಜಯರ ಮೇಲಿನ ಇಂದಿರಾರ ಅವಲಂಬನೆ ಅದೆಷ್ಟು ಗಟ್ಟಿಯಾಗಿತ್ತೆಂದರೆ, 'ಮಾಧ್ಯಮ ಸಂಸ್ಥೆಗಳಿಗೆ ಇರುವ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಬೇಕು ಮತ್ತು ಹೈಕೋರ್ಟ್ ಕೊಠಡಿಗಳಿಗೆ ಬೀಗಹಾಕಬೇಕು' ಎಂಬುದಾಗಿ 1975 ಜೂನ್ 25ರಂದು ಸಂಜಯ್ ನೀಡಿದ ನಿರ್ದೇಶನಗಳನ್ನು ಇಂದಿರಾ ರದ್ದುಗೊಳಿಸಿದರು ಕೂಡ, ತಮ್ಮ ಮಗನನ್ನು ನೇರವಾಗಿ ಎದುರಿಸಲು ಅವರಿಗೆ ಸಾಧ್ಯವಾಗಲಿಲ್ಲ.

ದಿನಗಳು ಉರುಳುತ್ತಿದ್ದಂತೆ, ದೇಶದ ವಿಭಿನ್ನ ರಾಜಕೀಯ ಪಕ್ಷಗಳಲ್ಲಿ 'ಮಕ್ಕಳು ಉತ್ತರಾಧಿಕಾರಿಗಳಾಗಿ ಮುನ್ನೆಲೆಗೆ ಬರುವಂಥ' ರೂಢಿಯು ಚಾಲ್ತಿಗೆ ಬರುವುದಕ್ಕೆ ಇಂದಿರಾ-ಸಂಜಯ್ ಜೋಡಿಯು ಮಾದರಿಯಾಗಿಬಿಟ್ಟಿತು. ಇದು ತೇಲಿಸಿ ಆಡುತ್ತಿರುವ ಮಾತಲ್ಲ, ತುರ್ತು ಪರಿಸ್ಥಿತಿಯ ನಂತರದ ಕಾಲಘಟ್ಟವನ್ನೊಮ್ಮೆ ನೆನಪಿಸಿಕೊಂಡರೆ ನಿಮಗೇ ಅದರ ಅರಿವಾಗುತ್ತದೆ. ಅಂದರೆ, ತುರ್ತುಸ್ಥಿತಿಯ ಕಾಲಘಟ್ಟದ ತರುವಾಯದಲ್ಲಿ 'ಠಾಕ್ರೆಗಳ', 'ಸ್ಟಾಲಿನ್'ಗಳ', ಅಬ್ದುಲ್ಲಾಗಳ' ವಂಶದ ತರುಣ ಪೀಳಿಗೆಯು ರಾಜಕೀಯದಲ್ಲಿ ಮುನ್ನೆಲೆಗೆ ಬರುವಂತಾಯಿತು. ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳನ್ನಂತೂ ಕೇಳುವುದೇ ಬೇಡ, ಅಲ್ಲಿ 'ಯಾದವ' ಹಣೆಪಟ್ಟಿಯ ಯುವನಾಯಕರು, ತಂತಮ್ಮ ಜನಕರು ಜನ್ಮನೀಡಿದ ರಾಜಕೀಯ ಪಕ್ಷಗಳ ಚುಕ್ಕಾಣಿಯನ್ನು ಹಿಡಿದು ಹಿಡಿತ ಸಾಧಿಸಲು ಮುಂದೆ ಬರುವಂತಾಯಿತು. ಇನ್ನೂ ಸ್ಪಷ್ಟವಾಗಿ-ನೇರವಾಗಿ ಹೇಳುವುದಾದರೆ, ಅನೇಕ ಪುಢಾರಿಗಳು ತಂತಮ್ಮ ರಾಜಕೀಯ ಪಕ್ಷಗಳನ್ನು 'ಕುಟುಂಬದ ಊಳಿಗ ಮಾನ್ಯದ ಉಂಬಳಿ'ಗಳಾಗಿ ರೂಪಾಂತರಿಸುವುದಕ್ಕೆ ಸದರಿ ತುರ್ತು ಪರಿಸ್ಥಿತಿಯ ಬೆಳವಣಿಗೆಯೇ ಅವರಿಗೆ ಧೈರ್ಯ ತುಂಬಿತು. ವಂಶಾಡಳಿತದ ರಾಜಕೀಯ ಪಕ್ಷಗಳಲ್ಲಿ ತತ್ವ-ಸಿದ್ಧಾಂತ ಆಧರಿತ ನೀತಿ-ನಿರೂಪಣೆಯ ಕೊರತೆಯಿರುವುದು ಮಾತ್ರವಲ್ಲದೆ, 'ಜನ್ಮಾಧಾರಿತ ತಾರತಮ್ಯ'ವನ್ನು ಉತ್ತೇಜಿಸುವ ಪರಿಪಾಠವೂ ಅವುಗಳಲ್ಲಿ ಢಾಳಾಗಿರುತ್ತದೆ. ಅಂದರೆ, ನಮ್ಮ ಸಂವಿಧಾನವು ಸಂಪೂರ್ಣವಾಗಿ ಅಥವಾ ಸಾರಾಸಗಟಾಗಿ ತಿರಸ್ಕರಿಸುವ ಪರಿಪಾಠವನ್ನು ವಂಶಾಡಳಿತದ ಪಕ್ಷಗಳು ಬಿಗಿಯಾಗಿ ಅಪ್ಪುತ್ತವೆ. ಇಂಥ ರಾಜಕೀಯ ಪಕ್ಷಗಳು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಯಾವತ್ತಿಗೂ ಹಾನಿಕಾರಕವೇ ಎಂಬುದು ಇಲ್ಲಿ ಹೊಮ್ಮುವ ಮೊದಲ ಪಾಠ.

ಅಷ್ಟಕ್ಕೂ, ಕಾಂಗ್ರೆಸ್‌ನಲ್ಲಿನ ಯಾರೊಬ್ಬರೂ ಇಂದಿರಾ ಗಾಂಧಿಯವರ ಧೋರಣೆಗಳ ವಿರುದ್ಧ ದನಿಯೆತ್ತಲಿಲ್ಲವೇಕೆ, ಅವರನ್ನು ವಿರೋಧಿಸಲು ಮುಂದೆ ಬರಲಿಲ್ಲವೇಕೆ? ಎಂಬ ಪ್ರಶ್ನೆಯಿಲ್ಲಿ ಮೂಡುತ್ತದೆ. ಅದಕ್ಕಿರುವ ಕಾರಣವನ್ನು ವಿಶ್ಲೇಷಿಸುವುದಾದರೆ, 1970ರ ದಶಕದ ಮಧ್ಯಭಾಗದ ವೇಳೆಗೆ, ತನ್ನ ಸಿದ್ಧಾಂತದ ಹೊದಿಕೆಯನ್ನು ಸಂಪೂರ್ಣವಾಗಿ ಝಾಡಿಸಿ ಹೊರಗೆಸೆದಿತ್ತು ಕಾಂಗ್ರೆಸ್ ಪಕ್ಷ! ಪಕ್ಷದ ನಾಯಕತ್ವವನ್ನು ಸಂಪೂರ್ಣವಾಗಿ ಭಟ್ಟಂಗಿಗಳೇ ಸುತ್ತುವರಿದಿದ್ದರು. ಪಕ್ಷದೊಳಗೆ 'ಆಂತರಿಕ ಪ್ರಜಾಪ್ರಭುತ್ವ' ಎಂಬ ಪರಿಕಲ್ಪನೆಯು ಭೂತಕಾಲವನ್ನು ಸೇರಿತ್ತು. ಈ ಎಲ್ಲದರ ಪರಿಣಾಮವಾಗಿ, ಪಕ್ಷದೊಳಗಿನ ಯಾರಿಗೂ ಇಂದಿರಾರನ್ನು ಪ್ರಶ್ನಿಸುವ ಧೈರ್ಯವಿರಲಿಲ್ಲ, ಹೀಗಾಗಿ ತುರ್ತು ಪರಿಸ್ಥಿತಿಯನ್ನು ಹೇರುವ ಇಂದಿರಾರ ನಿರ್ಧಾರವನ್ನು ಅವರು ಪ್ರಶ್ನಿಸಲೂ ಇಲ್ಲ.

ಪ್ರಜಾಪ್ರಭುತ್ವಕ್ಕೆ ಆಗಬೇಕಿರುವ ಸುಧಾರಣೆಗಳಂಥ ವ್ಯಾಪಕ ವಿಷಯದ ಕುರಿತು ಮಾತನಾಡುವುದಾದರೆ, ಈ ಪರಿಪಾಠದಲ್ಲಿ ರಾಜಕೀಯ ಪಕ್ಷಗಳ ಸುಧಾರಣೆಗೆ ಹೆಚ್ಚಿನ ಗಮನವನ್ನು ನೀಡುವ ಅಗತ್ಯವಿದೆ. ಮಹಾರಾಷ್ಟ್ರದಂಥ ಅನೇಕ ರಾಜ್ಯಗಳಲ್ಲಿ, ದತ್ತಿ ಸಂಸ್ಥೆಗಳು ಹಾಗೂ ಸಾರ್ವಜನಿಕ ಟ್ರಸ್ಟ್‌ಗಳಂಥ ವ್ಯವಸ್ಥೆಗಳು, ಇಬ್ಬರು ಅಥವಾ ಹೆಚ್ಚಿನ ರಕ್ತಸಂಬಂಧಿಗಳು ಏಕಕಾಲದಲ್ಲಿ ಅಧಿಕಾರ ವಹಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. 'ವಂಶಾಡಳಿತದ ರಾಜಕೀಯ'ಕ್ಕೆ ಇನ್ನಾದರೂ ಒಂದು ಅಂತ್ಯವನ್ನು ಹಾಡಬೇಕೆಂದರೆ, ರಾಜಕೀಯ ಪಕ್ಷಗಳ ಸ್ಥಾಪನೆಗೆ ಸಂಬಂಧಿಸಿದ ನೀತಿ-ನಿಯಮಗಳಲ್ಲಿ ಇಂಥದೇ ನಿಬಂಧನೆಯನ್ನು ಸೇರ್ಪಡೆ ಮಾಡುವ ಅಗತ್ಯವಿದೆ. ಇದು ತುರ್ತು ಪರಿಸ್ಥಿತಿಯು ನಮಗೆ ತಿಳಿಹೇಳುವ ಎರಡನೇ ಪ್ರಮುಖ ಪಾಠ ಎನ್ನಲಡ್ಡಿಯಿಲ್ಲ.

ಇನ್ನು, ಮೂರನೆಯ ಪಾಠದ ಕಡೆಗೆ ಗಮನ ಹರಿಸೋಣ. ಇದು ತಥಾಕಥಿತ ಚಿಂತಕರು, ಸೃಜನಶೀಲ ಬರಹಗಾರರು ಮತ್ತು ಸಾಹಿತಿಗಳು ಎನಿಸಿಕೊಂಡವರು ತುರ್ತುಪರಿಸ್ಥಿತಿಯ ಕಾಲಘಟ್ಟದಲ್ಲಿ ಅತ್ಯಂತ ಕೊಳಕಾಗಿ ಆಡಿದ 'ಸುರಕ್ಷಿತ ಆಟ'ದ ಕುರಿತಾದದ್ದು ಎನ್ನಿ! ಅಂದರೆ, ಧರ್ಮವೀರ್ ಭಾರತಿ, ಕಮಲೇಶ್ವರ್, ದುರ್ಗಾಬಾಯಿ ಭಾಗವತ್ ಮತ್ತು ವಿಷ್ಣು ಪಾಂಡ್ಯರಂಥ ಚಿಂತಕರು, ಸೃಜನಶೀಲ ಬರಹಗಾರರು ಮತ್ತು ವಿದ್ವಾಂಸರನ್ನು ಹೊರತುಪಡಿಸಿದರೆ ಹೆಚ್ಚಿನ ಬರಹಗಾರರು, ಕವಿಗಳು ಮತ್ತು ನಾಟಕಕಾರರು ಈ ಕಾಲಘಟ್ಟದಲ್ಲಿ ಮೌನಕ್ಕೆ ಶರಣಾದರು. ತನ್ಮೂಲಕ, ಜನರ ನಿರೀಕ್ಷೆಗಳನ್ನು ತಲುಪುವಲ್ಲಿ ವಿಫಲರಾದರು. ಎಲ್ಲಕ್ಕಿಂತ ಖೇದಕರ ಸಂಗತಿಯೆಂದರೆ, ಖ್ಯಾತ ಪತ್ರಕರ್ತ ಖುಷ್ವಂತ್ ಸಿಂಗ್ ಕೂಡ ತುರ್ತು ಪರಿಸ್ಥಿತಿಯನ್ನು ಬಹುರಂಗವಾಗಿ ಅನುಮೋದಿಸಿಬಿಟ್ಟರು ಮತ್ತು ಇನ್ನೂ ಅನೇಕ ಪತ್ರಕರ್ತರಲ್ಲೂ ಇಂಥದೊಂದು ಧೋರಣೆ ಕಂಡುಬಂತು. ಇಂಥ ವರ್ತನೆ ಮತ್ತು ಧೋರಣೆಗಳನ್ನು ಕಂಡೇ ಮಾಜಿ ಉಪಪ್ರಧಾನಿ ಲಾಲ್‌ಕೃಷ್ಣ ಆಡ್ವಾಣಿ ಅವರು, ''ತುರ್ತು ಪರಿಸ್ಥಿತಿಯ ಕಾಲಘಟ್ಟದಲ್ಲಿ ಪತ್ರಕರ್ತರು ಸ್ವಲ್ಪ ಬಾಗಲಿ ಎಂದಷ್ಟೇ ಸರಕಾರವು ಬಯಸಿತ್ತು, ಆದರೆ ಈ ಪತ್ರಕರ್ತರು ತೆವಳಲು ಶುರುಹಚ್ಚಿಕೊಂಡರು'' ಎಂದು ಟೀಕಿಸಿದ್ದುಂಟು. ವರ್ತಮಾನದಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಬ್ಯಾಡ್ಜುಗಳನ್ನು ತಮ್ಮ ತೋಳುಗಳ ಮೇಲೆ ಧರಿಸಿರುವ ಅನೇಕರು, ತುರ್ತು ಪರಿಸ್ಥಿತಿಯ ಸಮಯದಲ್ಲಿ ಬಾಯಿಗೆ ಬೀಗಹಾಕಿಕೊಂಡಿದ್ದರು ಹಾಗೂ ಅಂದು ಹಮ್ಮಿಕೊಳ್ಳಲಾಗಿದ್ದ ಸತ್ಯಾಗ್ರಹದಲ್ಲೂ ಪಾಲ್ಗೊಳ್ಳಲಿಲ್ಲ ಎಂಬುದು ಕಹಿವಾಸ್ತವ!

ನ್ಯಾಯಾಂಗ ಮತ್ತು ಪತ್ರಿಕಾ ರಂಗದಂಥ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ನಿರ್ವಹಿಸುವ ಕೆಲವರು ಒತ್ತಡ ಎದುರಾದಾಗ ರಾಜಿಮಾಡಿಕೊಳ್ಳಲು ಹೇಗೆ ಸಿದ್ಧರಾಗಿರುತ್ತಾರೆ ಎಂಬುದನ್ನು, ಬರೋಬ್ಬರಿ 21 ತಿಂಗಳವರೆಗೆ ಜಾರಿಯಲ್ಲಿದ್ದ ತುರ್ತು ಪರಿಸ್ಥಿತಿಯ ಇತಿಹಾಸವು ಸ್ಪಷ್ಟವಾಗಿ ನೆನಪಿಸುತ್ತದೆ. ಆದ್ದರಿಂದ, ತಮ್ಮಲ್ಲಿ ಏನೇ ಎಷ್ಟೇ ಕೊರತೆಯಿದ್ದರೂ ಪ್ರಜಾಪ್ರಭುತ್ವದ ಮೂಲಭೂತ ಅಂಶಗಳ ನೆರವೇರಿಕೆಗೆ ಕಟಿಬದ್ಧರಾಗಿರುವ ಹಾಗೂ ಅದಕ್ಕಾಗಿ ಹೋರಾಡಲು ಸಿದ್ಧರಾಗಿರುವ ಪ್ರಾಮಾಣಿಕ ಜನರು, ಆದರ್ಶಕ್ಕೆ ಬಾಯಿಮಾತಿನ ಸೇವೆ ಸಲ್ಲಿಸುವವರಿಗಿಂತಲೂ ಮಿಗಿಲಾದ ಪ್ರಜಾಪ್ರಭುತ್ವದ ನಿಜವಾದ ರಕ್ಷಕರಾಗಿರುತ್ತಾರೆ ಎಂಬುದು ನಾವು ಕಲಿಯಬೇಕಾದ ಮೂರನೇ ಪಾಠ.

(ಲೇಖಕರು ಬಿಜೆಪಿಯ ಹಿರಿಯ ನಾಯಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 162

ಸಮಾಚಾರ ಸಣ್ಣದಲ್ಲ

ತಿಮ್ಮಪ್ಪ ದರ್ಶನ ಚೀಟಿ ಇಲ್ಲದವರಿಗೂ 'ಲಡ್ಡು'

ತಿರುಪತಿ: ಆಂಧ್ರಪ್ರದೇಶದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ತಿರುಪತಿ ವೆಂಕಟೇಶ್ವರ ದೇವಾಲಯದ ಆಡಳಿತ ಮಂಡಳಿ(ಟಿಟಿಡಿ) ಹೊಸದಾಗಿ ಲಡ್ಡು ಮಾರಾಟದ ಮಳಿಗೆಗಳನ್ನು ಪರಿಚಯಿಸಿದೆ. ಆ ಮೂಲಕ ಭಕ್ತರು ಡಿಜಿಟಲ್ (ಯುಪಿಐ) ಪಾವತಿ ಮೂಲಕವೂ ಹೆಚ್ಚುವರಿ ಲಡ್ಡು ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಲಡ್ಡು ಖರೀದಿಗಾಗಿ ಉದ್ದದ ಸರತಿ ಸಾಲಿನಲ್ಲಿ ಭಕ್ತರು ದೀರ್ಘ ಸಮಯ ಕಾಯುತ್ತಾ ನಿಲ್ಲುವುದನ್ನು ತಪ್ಪಿಸುವುದೇ ಇದರ ಉದ್ದೇಶವಾಗಿದೆ. ದೇವರ ದರ್ಶನದ ಟಿಕೆಟ್ ಇಲ್ಲದವರೂ ಆಧಾರ್ ಕಾರ್ಡ್ ತೋರಿಸಿ ಇಲ್ಲಿ ತಲಾ ಎರಡು ಲಡ್ಡು ಖರೀದಿಸಬಹುದಾಗಿದೆ.

ದೀದಿ ಬರೆದ ಪುಸ್ತಕ ಶಾಲೆ ಗ್ರಂಥಾಲಯಕ್ಕೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ರಚಿತ ಪುಸ್ತಕಗಳನ್ನು ರಾಜ್ಯದ ಎಲ್ಲಾ ಶಾಲೆಗಳ ಗ್ರಂಥಾಲಯದಲ್ಲಿ ಕಡ್ಡಾಯವಾಗಿ ಇರಿಸಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. 'ಮಾ' ಪುಸ್ತಕದಿಂದ ಕಥಾಂಜಲಿ' ವರೆಗೆ ಎಲ್ಲಾ ಪುಸ್ತಕಗಳು ಸರಕಾರಿ ಶಾಲೆಗಳ ಗ್ರಂಥಾಲಯದಲ್ಲಿ ಸಂಗ್ರಹಿಸುವಂತೆ ಸೂಚನೆ ಬಂದಿದೆ. ಪ್ರತಿಯೊಂದು ಶಾಲೆಯ ಗ್ರಂಥಾಲಯಕ್ಕೂ 515 ಪುಸ್ತಕಗಳ ಖರೀದಿಗೆ ಅವಕಾಶ ನೀಡಲಾಗಿದೆ ಎಂದು ರಾಜ್ಯ ಶಿಕ್ಷಣ ಇಲಾಖೆ ತಿಳಿಸಿದೆ. ಆದರೆ, ಅವುಗಳಲ್ಲಿ 19 ಪುಸ್ತಕಗಳು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರದ್ದೇ ಆಗಿವೆ ಎಂಬುದು ಉಲ್ಲೇಖಾರ್ಹ.



ಜು.24ವರೆಗೂ ಪಾಕ್ ವಿಮಾನಕ್ಕೆ ನಿರ್ಬಂಧ

ದೆಹಲಿ: ಭಾರತದ ವಿಮಾನಗಳು ತನ್ನ ವಾಯು ಪ್ರದೇಶ ಪ್ರವೇಶಿಸುವುದನ್ನು ಮತ್ತೊಂದು ತಿಂಗಳ ಕಾಲ ನಿರ್ಬಂಧಿಸಿರುವ ಪಾಕಿಸ್ತಾನಕ್ಕೆ ಭಾರತ ತಿರುಗೇಟು ನೀಡಿದೆ. ಜುಲೈ 24ರವರೆಗೂ ಪಾಕ್ ವಿಮಾನಗಳು ಭಾರತದ ವಾಯು ಪ್ರದೇಶ ಪ್ರವೇಶಿಸುವುದನ್ನು ನಿರ್ಬಂಧಿಸಿ ನಾಗರಿಕ ವಿಮಾನಯಾನ ಸಚಿವಾಲಯ ಆದೇಶ ಹೊರಡಿಸಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರ ಎರಡೂ ದೇಶಗಳ ನಡುವೆ ಉದ್ವಿಗ್ನತೆ ಉಂಟಾದ ಹಿನ್ನೆಲೆ ಏ.23 ರಿಂದಲೂ ಎರಡೂ ದೇಶಗಳು ಪರಸ್ಪರ ವಾಯು ಪ್ರದೇಶಗಳಲ್ಲಿ ನಿರ್ಬಂಧ ವಿಧಿಸಿವೆ.

ಹಿಂದೂ ಮೆರವಣಿಗೆ ಮೇಲೆ ಮಾಂಸ: ವಿಕೃತಿ

ಪುಣೆ: ಮಹಾರಾಷ್ಟ್ರದ ಪುಣೆಯಲ್ಲಿ ಸಾಗುತ್ತಿದ್ದ ಆಷಾಢಿ ವಾರಿ ಪಲ್ಲಕ್ಕಿ ಮೆರವಣಿಗೆಯಲ್ಲಿದ್ದ ಹಿಂದೂ ಭಕ್ತರ ಮೇಲೆ ಮುಸ್ಲಿಂ ಮಹಿಳೆ ಮಾಂಸ ಹಾಗೂ ಪ್ರಾಣಿಗಳ ಮೂಳೆಗಳನ್ನು ಎಸೆದು ಕಿರುಕುಳ ನೀಡಿದ್ದಾಳೆ. ಪುಣೆಯ ಕ್ಯಾಂಪ್ ಪ್ರದೇಶದ ಸೋಲಾಪುರ ರಸ್ತೆ ನಿವಾಸಿ ನಾಸೀಮ್ ಶೇಖ್(57) ಎಂದು ಗುರುತಿಸಲಾಗಿದೆ. ಈ ಬಗ್ಗೆ ಛತ್ರಪತಿ ಸಂಭಾಜಿನಗರ ನಿವಾಸಿ ಅಕ್ಕಲ್ವಂತ್ ರಾಥೋಡ್ ಅವರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಮಮ್ಮಾದೇವಿ ಚೌಕದ ಬಳಿ ಶೇಖ್ ಎಂಬವರ ಮನೆ ಮುಂದಿನ ರಸ್ತೆಯಲ್ಲಿ ಪಲ್ಲಕ್ಕಿ ಮೆರವಣಿಗೆ ಸಾಗಿದ್ದಾಗ ನಾಸೀಮ್ ಮಾಂಸ-ಮೂಳೆ ಎಸೆದಿದ್ದಾಳೆ. ಪ್ರಶ್ನಿಸಿದ ಭಕ್ತರಿಗೆ 'ಅದೇನು ಮಾಡುತ್ತೀರೋ ಮಾಡಿಕೊಳ್ಳಿ' ಎಂದು ಉಡಾಫೆ ಮಾತನಾಡಿದ್ದಾಳೆ. ಭಕ್ತರಿಗೆ ಮೆರವಣಿಗೆಯಲ್ಲಿ ಮುಂದೆ ಸಾಗಲು ಸೂಚಿಸಿದ ಪೊಲೀಸರು, ಮಹಿಳೆ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದು ರಾಥೋಡ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಿಶನ್‌ಗಂಗಾ, ರಾಟ್ಲೆ ವಿಚಾರಣೆ ವಿರಾಮ?

ದೆಹಲಿ: ಸಿಂಧೂ ಜಲ ಒಪ್ಪಂದಡಿ(ಐಡಬ್ಲ್ಯುಟಿ) ದೇಶದ ಪಶ್ಚಿಮ ದಿಸೆಯಲ್ಲಿನ ನದಿಗಳ ನೀರು ಹಂಚಿಕೆ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿರುವ ಭಾರತ ಸರಕಾರ, ಕಿಶನ್‌ಗಂಗಾ ಮತ್ತು ರಾಟ್ಲೆ ಜಲವಿದ್ಯುತ್ ಯೋಜನೆಗಳ ವಿವಾದಗಳಿಗೆ ಸಂಬಂಧಿಸಿದ ವಿಚಾರಣೆಗೆ ವಿರಾಮ ಕೋರಿ ವಿಶ್ವಬ್ಯಾಂಕ್‌ಗೆ ಔಪಚಾರಿಕ ಮನವಿ ಸಲ್ಲಿಸಿದೆ ಎಂದು ಜಲಸಂಪನ್ಮೂಲ ಸಚಿವಾಲಯದ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ. ವಿಶ್ವಬ್ಯಾಂಕ್‌ನಿಂದ ನೇಮಕಗೊಂಡಿರುವ ತಟಸ್ಥ ದೇಶದ ಜಲತಜ್ಞ ಮೈಕೆಲ್ ಲಿನೊ ಅವರಿಗೆ ಕೇಂದ್ರ ಸರಕಾರ ವಿಚಾರಣೆಗೆ ವಿರಾಮ ಕೋರಿ ಪತ್ರ ಬರೆದಿದೆ. ಆದರೆ, ಭಾರತದ ಪತ್ರಕ್ಕೆ ವಿಶ್ವಬ್ಯಾಂಕ್‌ನಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರ ಭಾರತ ಸರಕಾರ, ಪಾಕಿಸ್ತಾನದ ಜತೆಗೆ 1960ರಲ್ಲಿ ಆಗಿರುವ 'ಸಿಂಧೂ ಜಲ ಒಪ್ಪಂದ'ವನ್ನು ಅಮಾನತಿನಲ್ಲಿರಿಸಿದೆ.

{ **ಜೈರಾಮ್ ರಮೇಶ್** } ಕಾಂಗ್ರೆಸ್ ಮುಖಂಡ

ಇಸ್ರೇಲ್ ಸೇನೆಯಿಂದ ಗಾಜಾದಲ್ಲಿ ನಿರಂತರ ನರಮೇಧ ನಡೆದಿದ್ದರೂ ಪ್ರಧಾನಿ ಮೋದಿ ಮೌನವಾಗಿರುವುದು ಸರಿಯಲ್ಲ. ಇದರಿಂದ ಭಾರತದ ನೈತಿಕ-ರಾಜಕೀಯ ಸ್ಥಾನಮಾನ ವಿಶ್ವ ಮಟ್ಟದಲ್ಲಿ ಕುಗ್ಗಿಹೋಗುತ್ತಿದೆ. ಇರಾನ್-ಇಸ್ರೇಲ್ ಯುದ್ಧ 12 ದಿನಗಳಿಗೆ ಕೊನೆಗೊಂಡಿದೆ. ಆದರೆ, ಗಾಜಾದಲ್ಲಿನ ಇಸ್ರೇಲ್ ದಾಳಿಗೆ ಮಾತ್ರ ಕದನ ವಿರಾಮ ದೂರದ ಮಾತಾಗಿದೆ.

ಸುಸ್ಥಿರ ಅಭಿವೃದ್ಧಿಗುರಿ ಸೂಚ್ಯಂಕ ಬಿಡುಗಡೆ | ಫಿನ್‌ಲೆಂಡ್‌ಗೆ ನಂ.1 ಸ್ಥಾನ, ಸ್ವೀಡನ್‌ಗೆ 2, ಡೆನ್ಮಾರ್ಕ್‌ಗೆ 3ನೇ ರ್‍ಯಾಂಕ್

ಸುಸ್ಥಿರ ಅಭಿವೃದ್ಧಿ: 100 ದೇಶಗಳ ಪಟ್ಟಿಗೆ ಭಾರತ

ದೆಹಲಿ: ಸುಸ್ಥಿರ ಅಭಿವೃದ್ಧಿ ಕಾಣುತ್ತಿರುವ 100 ದೇಶಗಳ ಪಟ್ಟಿಗೆ 'ಭಾರತ' ಇದೇ ಮೊದಲ ಬಾರಿಗೆ ಸೇರಿಕೊಂಡಿದೆ.

ಸ್ವತಂತ್ರ ಭಾರತದ 75 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿಶ್ವಸಂಸ್ಥೆಯ 'ಸಸ್ಟೇನಬಲ್ ಡೆವಲಪ್‌ಮೆಂಟ್ ಗೋಲ್' (ಎಸ್‌ಡಿಜಿ)ನ 100 ದೇಶಗಳ ಪಟ್ಟಿಯಲ್ಲಿ ಭಾರತ 99ನೇ ಸ್ಥಾನದಲ್ಲಿದೆ. ವಿಶ್ವಸಂಸ್ಥೆ ಸಮಗ್ರ ಅಧ್ಯಯನ ನಡೆಸಿ ಸಿದ್ಧಪಡಿಸುವ 2025ನೇ ವರ್ಷದ 'ಎಸ್‌ಡಿಜಿ' ಇಂಡೆಕ್ಸ್ ಮಂಗಳವಾರ ಬಿಡುಗಡೆಯಾಗಿದೆ.

ಕಳೆದ ಕೆಲವು ವರ್ಷಗಳಲ್ಲಿ ನಿರಂತರ ಅಭಿವೃದ್ಧಿ ಸಾಧಿಸಿರುವ ಹಿನ್ನೆಲೆಯಲ್ಲಿ ಭಾರತಕ್ಕೆ ಮೊದಲ ಬಾರಿಗೆ '100 ಎಸ್‌ಡಿಜಿ ಪಟ್ಟಿ'ಗೆ ಸೇರಲು ಸಾಧ್ಯವಾಗಿದೆ. ಈ ಅಂಶವನ್ನು 'ಯುನೈಟೆಡ್ ನೇಷನ್ ಸಸ್ಟೇನಬಲ್ ಡೆವಲಪ್‌ಮೆಂಟ್ ಸಲ್ಯೂಷನ್ಸ್ ನೆಟ್‌ವರ್ಕ್ಸ್‌ನ(ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರ ಜಾಲ) 10ನೇ ವರದಿಯಲ್ಲಿ ಉಲ್ಲೇಖಿಸಲಾಗಿದೆ. ವರದಿಯ ಪ್ರಕಾರ ಭಾರತಕ್ಕೆ ಈ ಬಾರಿ 67 ಅಂಕಗಳು ಲಭಿಸಿವೆ.

ಅಮೆರಿಕ 44, ಚೀನಾ 49ನೇ ರ್‍ಯಾಂಕ್!

ಅಮೆರಿಕ ಈ ಬಾರಿ 75.2ರಷ್ಟು ಅಭಿವೃದ್ಧಿ ಅಂಕಗಳನ್ನು ಗಳಿಸಿದ್ದು, '100 ಎಸ್‌ಡಿಜಿ ಪಟ್ಟಿ'ಯಲ್ಲಿ 44ನೇ ಸ್ಥಾನದಲ್ಲಿದೆ. ನೆರೆಯ ಕಮ್ಯುನಿಸ್ಟ್ ದೇಶ ಚೀನಾ 49ನೇ ರ್‍ಯಾಂಕ್‌ನಲ್ಲಿದೆ. ಚೀನಾ ಈ ಬಾರಿ 67 ಅಭಿವೃದ್ಧಿ ಅಂಕಗಳನ್ನು ಗಳಿಸಿದೆ.

ಸ್ಥಾನ ನಿಗದಿಗೆ ಕಾರಣವಾದ 17 ಪ್ರಮುಖ ಅಂಶಗಳು

- 1 ಶೂನ್ಯ ಬಡತನ
- 2 ಹಸಿದ ಹೊಟ್ಟೆ ಇಲ್ಲದಿರುವಿಕೆ
- 3 ಉತ್ತಮ ಆರೋಗ್ಯ-ಜೀವನಶೈಲಿ
- 4 ಗುಣಮಟ್ಟದ ಶಿಕ್ಷಣ
- 5 ಲಿಂಗ ಸಮಾನತೆ
- 6 ಶುದ್ಧ ನೀರು-ಶೌಚ ವ್ಯವಸ್ಥೆ
- 7 ಅಗ್ಗದ ದರದ ಸ್ವಚ್ಛ ಇಂಧನ
- 8 ಸಭ್ಯ ಕಾರ್ಯ ಮತ್ತು ಆರ್ಥಿಕ ಪ್ರಗತಿ
- 9 ಉದ್ಯಮ, ನಾವಿನ್ಯ ಮತ್ತು ಮೂಲಸೌಕರ್ಯ
- 10 ಅಸಮಾನತೆ ನಿವಾರಣೆ
- 11 ಸುಸ್ಥಿರ ನಗರಗಳು ಮತ್ತು ಸಮುದಾಯ
- 12 ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ
- 13 ಪರಿಸರ ಪ್ರಕ್ರಿಯೆ
- 14 ಜಲಚರಗಳ ಜೀವನ
- 15 ಭೂಮಿಯ ಮೇಲಿನ ಬದುಕು
- 16 ಶಾಂತಿ ಮತ್ತು ನ್ಯಾಯದಾನದ ಬಲಿಷ್ಠ ಸಂಸ್ಥೆಗಳು
- 17 ಗುರಿ ಸಾಧನೆಗೆ ಪಾಲುದಾರಿಕೆ

ಅಚ್ಚರಿ ಎಂದರೆ, ಭಾರತದ ನೆರೆಹೊರೆಯ ದೇಶಗಳಾದ, ಅದರಲ್ಲೂ ಅತಿಚಿಕ್ಕ ದೇಶಗಳೆನಿಸಿದ ಭೂತಾನ್, ನೇಪಾಳ '100 ಎಸ್‌ಡಿಜಿ' ಪಟ್ಟಿಯಲ್ಲಿ ಭಾರತಕ್ಕಿಂತಲೂ ಮೇಲಿನ ಸ್ಥಾನದಲ್ಲಿವೆ. ಭೂತಾನ್ 70.5 ಅಭಿವೃದ್ಧಿ ಅಂಕಗಳೊಂದಿಗೆ 74ನೇ ರ್‍ಯಾಂಕ್ ಮತ್ತು ನೇಪಾಳ ದೇಶ 68.6 ಅಂಕಗಳೊಂದಿಗೆ 85ನೇ ರ್‍ಯಾಂಕ್ ಗಳಿಸಿವೆ.

'ಸಂಘರ್ಷಗಳನ್ನು ಎದುರಿಸುವ ಸಾಮರ್ಥ್ಯ, ಭೌತಿಕ ಬಲ ಮತ್ತು ಮಿತವಾದ ಆರ್ಥಿಕ ಸಾಮರ್ಥ್ಯದಲ್ಲೇ ನಿರಂತರ ಪ್ರಗತಿ ಕಾಣುವ ಅಂಶಗಳು ಸೇರಿದಂತೆ 17 ಗುರಿಗಳಲ್ಲಿನ ಸಾಧನೆ ಆಧರಿಸಿ ಎಸ್‌ಡಿಜಿ ಪಟ್ಟಿ ಸಿದ್ಧಪಡಿಸಲಾಗಿದೆ' ಎಂದು ವಿಶ್ವಸಂಸ್ಥೆಯ 'ಎಸ್‌ಡಿಜಿ ಅಧ್ಯಯನ ತಂಡ'ದ ಮುಂದಾಳು, ಹೆಸರಾಂತ ಅರ್ಥಶಾಸ್ತ್ರಜ್ಞ ಜೆಫ್ರಿ ಸ್ಯಾಚ್ಸ್ ಹೇಳಿದ್ದಾರೆ.

ಭಾರತೀಯರಿಗೆ ಸಮಾಧಾನ!

ಭಾರತದ ಜನತೆಗೆ ಅಲ್ಪ ಸಮಾಧಾನ ತರಬಲ್ಲ ಸಂಗತಿಯೆಂದರೆ, ಶತ್ರುದೇಶ ಪಾಕಿಸ್ತಾನ ವಿಶ್ವಸಂಸ್ಥೆಯ ಈ ಸುಸ್ಥಿರ ಅಭಿವೃದ್ಧಿ ಅಧ್ಯಯನ ರ್‍ಯಾಂಕಿಂಗ್ ಪಟ್ಟಿಯಲ್ಲಿ ಭಾರತಕ್ಕಿಂತಲೂ ಹಿಂದಿನ ಸ್ಥಾನದಲ್ಲಿದೆ ಎಂಬುದಾಗಿದೆ. ಪಾಕಿಸ್ತಾನ 57 ಅಭಿವೃದ್ಧಿ ಅಂಶಗಳೊಂದಿಗೆ '100 ಎಸ್‌ಡಿಜಿ ಪಟ್ಟಿ'ಯಲ್ಲಿ ಭಾರತಕ್ಕಿಂತ ಬಹಳ ದೂರದಲ್ಲದೆ. ಅಂದರೆ, ಪಾಕ್ 140ನೇ ಸ್ಥಾನದಲ್ಲಿದೆ. ಭಾರತದ ತೋಳುಸಂದಿಯ ರಾಷ್ಟ್ರ ಬಾಂಗ್ಲಾದೇಶವೂ 63.9 ಅಭಿವೃದ್ಧಿ ಅಂಕಗಳೊಂದಿಗೆ ಪಟ್ಟಿಯಲ್ಲಿ 114ನೇ ಸ್ಥಾನದಲ್ಲಿದೆ.

ದೇಶ ಗಾತ್ರ ಚಿಕ್ಕದು ಸಾಧನೆ ದೊಡ್ಡದು!

ವಿಸ್ತಾರ, ಜನಸಂಖ್ಯೆ, ಸಂಪತ್ತು ಮೊದಲಾದ ವಿಚಾರಗಳಲ್ಲಿ ಭಾರತದ ಜತೆಗೆ ಹೋಲಿಕೆಗೂ ನಿಲುಕದ ಅತಿಚಿಕ್ಕ ದ್ವೀಪರಾಷ್ಟ್ರಗಳಾಗಿರುವ ಶ್ರೀಲಂಕಾ ಮತ್ತು ಮಾಲ್ಡೀವ್ಸ್ ಸಾಧನೆ ಬಹಳ ದೊಡ್ಡದಿದೆ. ವಿಶ್ವಸಂಸ್ಥೆಯ '100 ಎಸ್‌ಡಿಜಿ ಪಟ್ಟಿ'ಯಲ್ಲಿ ಈ ಎರಡೂ ದ್ವೀಪರಾಷ್ಟ್ರಗಳು ಭಾರತಕ್ಕಿಂತಲೂ ಮೇಲಿನ ಹಂತದಲ್ಲಿವೆ. ಶ್ರೀಲಂಕಾ 53ನೇ ಸ್ಥಾನದಲ್ಲೂ, ಮಾಲ್ಡೀವ್ಸ್ 93ನೇ ಸ್ಥಾನದಲ್ಲೂ ವಿರಾಜಮಾನವಾಗಿವೆ.



ಯೂರೋಪ್ ದೇಶಗಳ ಶ್ರೇಷ್ಠತೆ

ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಯನ್ನು ಸಾಧಿಸಿದ ದೇಶಗಳ 2025ನೇ ಸಾಲಿನ ಪಟ್ಟಿಯಲ್ಲಿ ಯೂರೋಪ್‌ನ ಅದರಲ್ಲೂ 'ನಾರ್ಡಿಕ್' ದೇಶಗಳೇ ಮೊದಲ ಸ್ಥಾನದಲ್ಲಿವೆ. ಪಟ್ಟಿಯಲ್ಲಿನ ಮೊದಲ 20 ದೇಶಗಳಲ್ಲಿ ಯೂರೋಪ್ ಒಕ್ಕೂಟದ, 19 ದೇಶಗಳೇ ಇರುವುದು ಉಲ್ಲೇಖಾರ್ಹ. '100 ಎಸ್‌ಡಿಜಿ ಪಟ್ಟಿ'ಯಲ್ಲಿ ಫಿನ್‌ಲೆಂಡ್‌ಗೆ ಮೊದಲ ರ್‍ಯಾಂಕ್ ಸಿಕ್ಕಿದ್ದರೆ, ಸ್ವೀಡನ್ 2 ಮತ್ತು ಡೆನ್ಮಾರ್ಕ್ 3ನೇ ಸ್ಥಾನದಲ್ಲಿವೆ. ಇದಕ್ಕೆ ಆ ದೇಶಗಳಲ್ಲಿನ ಹವಾಮಾನ ಮತ್ತು ಜೀವವೈವಿಧ್ಯಗಳು ಕಾರಣವಾಗಿವೆ ಎಂಬುದು ಅರ್ಥಶಾಸ್ತ್ರಜ್ಞ ಜೆಫ್ರಿ ಸ್ಯಾಚ್ಸ್ ವಿಶ್ಲೇಷಣೆಯಾಗಿದೆ.

ಸಿಂಗಯ್ಯ ಸಾವಿಗೆ ಜಗನ್ ಹೊಣೆ

ತಿರುಪತಿ: ಆಂಧ್ರಪ್ರದೇಶದ ಗುಂಟೂರ್ ಜಿಲ್ಲೆಯಲ್ಲಿ ರೋಡ್ ಶೋ ನಡೆಸಿದ ಮಾಜಿ ಮುಖ್ಯಮಂತ್ರಿ, ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕ ವೈಎಸ್‌ಆರ್ ಜಗನ್ ರೆಡ್ಡಿ ನಿರ್ಲಕ್ಷ್ಯವೇ ಸಿಂಗಯ್ಯ ದುರ್ಮರಣಕ್ಕೆ ಕಾರಣ ಎಂದು ಜಗನ್ ಸೋದರಿ, ಆಂಧ್ರ ಪ್ರದೇಶ ಕಾಂಗ್ರೆಸ್ ಘಟಕ ಅಧ್ಯಕ್ಷೆ ವೈ.ಎಸ್.ಆರ್.ಶರ್ಮಿಳಾ ರೆಡ್ಡಿ ನೇರ ಆರೋಪ ಮಾಡಿದ್ದಾರೆ.

ಶ್ರೀಕಾಳಹಸ್ತಿಯಲ್ಲಿ ತಿರುಪತಿ ಜಿಲ್ಲಾ ಕಾಂಗ್ರೆಸ್ ಘಟಕದ ಸಭೆಯಲ್ಲಿ ಮಂಗಳವಾರ ಮಾತನಾಡಿದ ಶರ್ಮಿಳಾ, 'ಜೂಜಿನಲ್ಲಿ ಸೋತು ಸಾವಿಗೀಡಾದವರ ಪ್ರತಿಮೆ ನಿರ್ಮಿಸುವುದೇ ತಪ್ಪು. ಅಂತಹುದರಲ್ಲಿ ಆ ವಿಗ್ರಹದ ಲೋಕಾರ್ಪಣೆಗೆಂದು ತೆರಳಿ ಮಾರ್ಗ ಮಧ್ಯೆ ರೋಡ್ ಶೋ ಮಾಡಿ ಜೀವಬಲಿ ಪಡೆದಿರುವ ಜಗನ್ ರೆಡ್ಡಿ ನಡೆ ಅಕ್ಷಮ್ಯ ಎಂದು ವಾಗ್ದಾಳಿ ನಡೆಸಿದ್ದಾರೆ.

ಜಗನ್‌ಗೆ ಮಾನವೀಯತೆ ಇದ್ದಿದ್ದರೆ ಸಿಂಗಯ್ಯ ಮನೆಗೂ ಭೇಟಿ ನೀಡಬೇಕಿತ್ತು. ಆದರೆ, ಮನೆಗೆ ತೆರಳಿಲ್ಲ. ಸಿಂಗಯ್ಯ ಕುಟುಂಬಕ್ಕೆ 5 ಕೋಟಿ ರು. ಪರಿಹಾರ ನೀಡಬೇಕು ಮತ್ತು ಕುಟುಂಬದವರ ಕ್ಷಮೆ ಕೇಳಬೇಕು ಎಂದು ಶರ್ಮಿಳಾ ಆಗ್ರಹಿಸಿದ್ದಾರೆ.

ಜಗನ್ ಮತ್ತು ಅವರ ಪಕ್ಷದ ನಾಯಕರಿಗೆ ಸಾರ್ವಜನಿಕ ಸಭೆ ನಡೆಸಲು ಪೊಲೀಸರು ಅನುಮತಿ ನೀಡಬಾರದು. ಸಿಂಗಯ್ಯ ಚಕ್ರದಡಿ ಸಿಲುಕಿದಾಗ ಕಾರಿನಲ್ಲಿದ್ದ ಎಲ್ಲಾ ಗಣ್ಯರನ್ನೂ ಪೊಲೀಸರು ವಿಚಾರಣೆಗೆ ಕರೆಸಬೇಕು ಎಂದೂ ಒತ್ತಾಯಿಸಿದ್ದಾರೆ.

ಕುಂಭಕರ್ಣ:
ಜಗನ್ ಸಿಎಂ ಆಗಿದ್ದಾಗ 5 ವರ್ಷ ಕುಂಭಕರ್ಣನಂತೆ ಮಲಗಿದ್ದ, ಈಗ ಜನರ ಸಮಸ್ಯೆಗಳನ್ನು ರಾಜ್ಯ ಸರಕಾರಕ್ಕೆ ಎತ್ತಿತೋರುತ್ತಾ ಸಂಚರಿಸುತ್ತಿರುವುದು ವಿಚಿತ್ರವಾಗಿದೆ ಎಂದು ಸೋದರಿ ಶರ್ಮಿಳಾ ಟೀಕಿಸಿದ್ದಾರೆ.

ತುರ್ತು ಪರಿಸ್ಥಿತಿಗೆ 50: ಎಲ್ಲಾ ಕಡತ ರಕ್ಷಣೆಗೆ ಸೂಚನೆ

ದೆಹಲಿ: 1975ರ ಜೂ.26ರಂದು ಅಂದಿನ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರ ಜಾರಿಗೊಳಿಸಿದ ಆಂತರಿಕ ತುರ್ತು ಪರಿಸ್ಥಿತಿಗೆ ಬುಧವಾರಕ್ಕೆ 50 ವರ್ಷವಾಗಿದೆ.



ಇದೇ ಸಂದರ್ಭ, ತುರ್ತು ಪರಿಸ್ಥಿತಿ ಅವಧಿಗೆ ಸಂಬಂಧಿಸಿದ ಎಲ್ಲಾ ಕಾನೂನು ದಾಖಲೆಗಳನ್ನು ಸಂರಕ್ಷಿಸಿ ಇಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ನಿರ್ದೇಶನ ನೀಡಿದ್ದಾರೆ.

ದೆಹಲಿಯಲ್ಲಿರುವ 'ಪ್ರಧಾನಮಂತ್ರಿಗಳ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ'(ಪಿಎಂಎಂಎಲ್) ಸೊಸೈಟಿಯ ಪ್ರಮುಖ ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಧಾನಿ ಮೋದಿ ಅವರು, ದೇಶದ ಎಲ್ಲಾ ವಸ್ತುಸಂಗ್ರಹಾಲಯಗಳ ಸಮಗ್ರ ರಾಷ್ಟ್ರೀಯ ದತ್ತಾಂಶ ಮಾದರಿಯನ್ನು ಅಭಿವೃದ್ಧಿಪಡಿಸಿ ಎಂದು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತುರ್ತು ಪರಿಸ್ಥಿತಿ ಜಾರಿಗೊಂಡ ದಿನಕ್ಕೆ 50 ವರ್ಷಗಳಾಗಿರುವ ಹಿನ್ನೆಲೆ ತುರ್ತು ಪರಿಸ್ಥಿತಿ ಅವಧಿಯಲ್ಲಿ ನಡೆದ ಎಲ್ಲಾ ಕಾನೂನು ಹೋರಾಟ ಕಥನಗಳ ಸಂಕಲನ ಸಿದ್ಧಪಡಿಸಬೇಕಿದೆ ಎಂದೂ ಮೋದಿ ಸೂಚನೆ ನೀಡಿದ್ದಾರೆ.

ಇದರಿಂದ ಮುಂಬರುವ ಪೀಳಿಗೆಗಳ ವಿದ್ಯಾರ್ಥಿಗಳು, ನಾಗರಿಕರು, ವಿಶೇಷವಾಗಿ ಸಂಶೋಧಕರು ಅಧ್ಯಯನ ಮಾಡಲು, ಇತಿಹಾಸವನ್ನು ಮನನ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ.

ಕೇಂದ್ರ ಸರಕಾರದಿಂದ ವಿಶೇಷ ಕಾರ್ಯಕ್ರಮ

ತುರ್ತು ಪರಿಸ್ಥಿತಿ ಜಾರಿಗೊಂಡ ದಿನಕ್ಕೆ ಬುಧವಾರ 50 ವರ್ಷ ತುಂಬಲಿರುವ ಹಿನ್ನೆಲೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ವಿಶೇಷ ಕಾರ್ಯಕ್ರಮ ಆಯೋಜಿಸಿದೆ. ದೇಶದ ವಸ್ತುಸಂಗ್ರಹಾಲಯಗಳ ಕುರಿತು ಹೊಸ ವಿಚಾರ-ದೃಷ್ಟಿಕೋನಗಳನ್ನು ಹೊರತರಲು 35 ವರ್ಷಕ್ಕೂ ಕಡಿಮೆ ವಯಸ್ಸಿನವರನ್ನು ಪ್ರತಿ ರಾಜ್ಯದಿಂದ ಐವರು ಸದಸ್ಯರು ಇರುವಂತೆ ಸಮಿತಿ ರಚಿಸಲೂ ಪ್ರಧಾನಿ ಸೂಚನೆ ನೀಡಿದ್ದಾರೆ.

ಎಚ್‌ಎಎಲ್ ಮುಖ್ಯಸ್ಥರ ಭರವಸೆಯ ನುಡಿ | ಅಮೆರಿಕ ಸಂಸ್ಥೆ ಕಾರಣಕ್ಕೆ ತಯಾರಿಕೆ ವಿಳಂಬ

ಮಾರ್ಚ್‌ಗೆ ಮುನ್ನ ವಾಯುಪಡೆಗೆ 6 ತೇಜಸ್ ಎಲ್‌ಸಿಎ

ದೆಹಲಿ: ಭಾರತೀಯ ವಾಯುಪಡೆಗೆ ಕನಿಷ್ಠ 6 ತೇಜಸ್ ಲಘು ಯುದ್ಧ ವಿಮಾನಗಳನ್ನು ಮುಂಬರುವ ಮಾರ್ಚ್ ವೇಳೆಗೆ ಒದಗಿಸಲಾಗುವುದು ಎಂದು ಹಿಂದೂಸ್ಥಾನ್ ಏರೋನಾಟಿಕ್ಸ್ ಲಿ.(ಎಚ್‌ಎಎಲ್) ಹೇಳಿದೆ.

ಇತ್ತೀಚೆಗಷ್ಟೇ, ಭಾರತೀಯ ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಎ.ಪಿ. ಸಿಂಗ್, 'ಎಚ್‌ಎಎಲ್' ಒಪ್ಪಿಕೊಂಡ ಸಮಯಕ್ಕೆ ಸರಿಯಾಗಿ ಲಘು ಯುದ್ಧ ವಿಮಾನಗಳನ್ನು ಒದಗಿಸುತ್ತಿಲ್ಲ, ವೃಥಾ ವಿಳಂಬ ಮಾಡುತ್ತಿದೆ ಎಂದು ಬಹಿರಂಗವಾಗಿಯೇ ಟೀಕಿಸಿದ್ದರು.

ಭಾರತೀಯ ವಾಯುಪಡೆಗೆ ಪೂರೈಸಲಾಗುವ ಲಘು ಯುದ್ಧ ವಿಮಾನಗಳಿಗೆ ಜೋಡಿಸಲಾಗುವ ಎಂಜಿನ್ ಅಮೆರಿಕದ ಕಂಪನಿಯಿಂದ ಬರಬೇಕಿದೆ. ಆದರೆ, ಅಮೆರಿಕದ ಸಂಸ್ಥೆ 'ಎಫ್ 404' ಎಂಜಿನ್‌ಗಳನ್ನು ನಿಗದಿಯಂತೆ ಪೂರೈಸುತ್ತಿಲ್ಲ. ಹಾಗಾಗಿ ವಾಯುಪಡೆಗೆ ಲಘು ಯುದ್ಧ ವಿಮಾನ ಪೂರೈಕೆಯಲ್ಲಿ ವಿಳಂಬವಾಗುತ್ತಿದೆ ಎಂದು ಎಚ್‌ಎಎಲ್ ಅಧ್ಯಕ್ಷ ಡಿ.ಕೆ.ಸುನೀಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಂದಿನ ಮಾರ್ಚ್‌ಗೆ ಮುನ್ನ ಅಮೆರಿಕದ ಜಿಇ ಏರೋಸ್ಪೇಸ್ ಕಂಪನಿ 12 ಎಂಜಿನ್‌ಗಳನ್ನು ರವಾನಿಸುವ ಸಾಧ್ಯತೆ ಇದೆ. ಹಾಗಾಗಿ ಮಾರ್ಚ್ ವೇಳೆಗೆ ಕನಿಷ್ಠ 6 ತೇಜಸ್ ವಿಮಾನಗಳನ್ನು ವಾಯುಪಡೆಗೆ ಒದಗಿಸಲಾಗುವುದು ಎಂದಿದ್ದಾರೆ.

ಸಮಸ್ಯೆಯಲ್ಲಿ ಜಿಇ ಏರೊಸ್ಪೇಸ್

ಹಿಂದೂಸ್ತಾನ್ ಏರೊನಾಟಿಕ್ಸ್ ಲಿ.ಗೆ ಯುದ್ಧ ವಿಮಾನಗಳ ಎಂಜಿನ್‌ಗಳನ್ನು ಒದಗಿಸುವ ಒಪ್ಪಂದ ಮಾಡಿಕೊಂಡಿರುವ ಅಮೆರಿಕದ ಜಿಇ ಏರೋಸ್ಪೇಸ್ ಕಂಪನಿ ಸದ್ಯ ತಾಂತ್ರಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಹಾಗಾಗಿಯೇ ಕಂಪನಿ 2023ರಿಂದಲೂ ಎಚ್‌ಎಎಲ್‌ಗೆ ಜೆಟ್ ಎಂಜಿನ್‌ಗಳನ್ನು ಒದಗಿಸುತ್ತಿಲ್ಲ. 2 ವರ್ಷದಲ್ಲಿ 1 ಎಂಜಿನ್ ಮಾತ್ರ ಪೂರೈಕೆಯಾಗಿದೆ. ಈಗ ಜಿಇ ಸಮಸ್ಯೆಗಳು ಪರಿಹಾರಗೊಂಡಿವೆ. ಹಾಗಾಗಿ ಮುಂದಿನ ಮಾರ್ಚ್‌ಗೆ ಮುನ್ನ 12 ಜೆಟ್ ಎಂಜಿನ್ 'ಜಿಇ ಏರೋಸ್ಪೇಸ್'ನಿಂದ ಬರುವ ನಿರೀಕ್ಷೆ ಇದೆ. ಜೆಟ್ ಎಂಜಿನ್ ಪೂರೈಕೆ ನಿರಂತರವಾಗಿದ್ದರೆ ವಾರ್ಷಿಕವಾಗಿ 16 ಲಘು ಯುದ್ಧ ವಿಮಾನಗಳನ್ನು ತಯಾರಿಸಬಹುದಾಗಿದೆ ಎಂದು ಎಚ್‌ಎಎಲ್ ಅಧ್ಯಕ್ಷ -ವ್ಯವಸ್ಥಾಪಕ ನಿರ್ದೇಶಕ ಡಿ.ಕೆ.ಸುನೀಲ್ ಹೇಳಿದ್ದಾರೆ.

ರಕ್ಷಣಾ ಸಚಿವಾಲಯ ಎಚ್‌ಎಎಲ್ ಒಪ್ಪಂದ

ಭಾರತೀಯ ವಾಯುಪಡೆಗೆ ಒಟ್ಟು 83 ತೇಜಸ್ ಎಂಕೆ-1ಎ ಜೆಟ್ ಫ್ಲೈಟ್‌ಗಳನ್ನು ಹಿಂದೂಸ್ತಾನ್ ಏರೊನಾಟಿಕ್ಸ್ ಲಿ. ತಯಾರಿಸಿಕೊಡಬೇಕಿದೆ. ಈ ಸಂಬಂಧ ರಕ್ಷಣಾ ಸಚಿವಾಲಯದ ಜತೆಗೆ 2021ರ ಏಪ್ರಿಲ್‌ನಲ್ಲಿಯೇ 48 ಸಾವಿರ ಕೋಟಿ ರು. ಮೊತ್ತದ ಒಪ್ಪಂದಕ್ಕೆ ಎಚ್‌ಎಎಲ್ ಸಹಿ ಹಾಕಿದೆ.

ಇದಲ್ಲದೇ 67 ಸಾವಿರ ಕೋಟಿ ರು. ಬೆಲೆ ಒಟ್ಟು 97 ಎಲ್‌ಸಿಎ ಎಂಕೆ-1ಎ ಯುದ್ಧ ವಿಮಾನಗಳನ್ನು ಖರೀದಿಸುವುದಕ್ಕೂ ರಕ್ಷಣಾ ಸಚಿವಾಲಯ ನಿರ್ಧರಿಸಿದೆ. ಏಕೆಂದರೆ ಈ ಲಘು ಯುದ್ಧ ವಿಮಾನಗಳನ್ನು ಪದೇ ಪದೇ ಪತನಗೊಳ್ಳುವ ಅಪವಾದಕ್ಕೀಡಾಗಿರುವ ರಷ್ಯಾ ನಿರ್ಮಿತ ಮಿಗ್-21 ಯುದ್ಧ ವಿಮಾನಗಳಿಗೆ ಬದಲಿಯಾಗಿ ಬಳಸಿಕೊಳ್ಳುವುದು ರಕ್ಷಣಾ ಸಚಿವಾಲಯದ ಆಲೋಚನೆಯಾಗಿದೆ.

ಜು.1: ರೈಲು ಪ್ರಯಾಣ ಟಿಕೆಟ್ ದರ ತುಸು ಏರಿಕೆ

ದೆಹಲಿ: ಭಾರತೀಯ ರೈಲ್ವೆ ಅತಿ ದೂರದ ಪ್ರಯಾಣದ ಟಿಕೆಟ್ ದರದಲ್ಲಿ ಅಲ್ಪ ಪ್ರಮಾಣದ ಏರಿಕೆ ಮಾಡಲು ನಿರ್ಧರಿಸಿದ್ದು, ಹೊಸ ದರ ಜುಲೈ 1ರಿಂದ ಜಾರಿಗೆ ಬರಲಿದೆ.

ಹವಾನಿಯಂತ್ರಿತ(ಎಸಿ) ಮತ್ತು ಹವಾನಿಯಂತ್ರಣ ಸೌಲಭ್ಯ ಇಲ್ಲದ ಎಕ್ಸ್‌ಪ್ರೆಸ್ ರೈಲುಗಳು ಮತ್ತು 2ನೇ ದರ್ಜೆಯ ಬೋಗಿಗಳ ಟಿಕೆಟ್ ದರದಲ್ಲಿ ಭಾರತೀಯ ರೈಲ್ವೆ ಅಲ್ಪ ಹೆಚ್ಚಳ ಮಾಡಿದೆ.

ಹೊಸ ದರ ಜಾರಿಯಿಂದ ಪ್ರಯಾಣಿಕರ ಮೇಲೆ ಅಷ್ಟೇನೂ ಹೊರೆ ಬೀಳುವುದಿಲ್ಲ. ಏಕೆಂದರೆ ಕಿಮೀಗೆ 1 -2 ಪೈಸೆಗಳಷ್ಟೇ ಏರಿಕೆ ಮಾಡಲಾಗಿದೆ ಎಂದು ಭಾರತೀಯ ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.

ಉಪ ನಗರ ರೈಲುಗಳಲ್ಲಿನ ಸಂಚಾರದ ಟಿಕೆಟ್ ಅಥವಾ ಸೀಸನ್ ಟಿಕೆಟ್(ಮಾಸಿಕ ಪಾಸ್) ಪ್ರಯಾಣ ದರದಲ್ಲಿ ಯಾವುದೇ ಹೆಚ್ಚಳ ಮಾಡಲು ಭಾರತೀಯ ರೈಲ್ವೆ ನಿರ್ಧರಿಸಿಲ್ಲ. ಅಂದರೆ, 500 ಕಿ.ಮೀ. ವರೆಗಿನ ಅಂತರದ ಪ್ರಯಾಣದಲ್ಲಿ ಸಾಮಾನ್ಯ 2ನೇ ದರ್ಜೆ ಬೋಗಿಗಳ ಟಿಕೆಟ್ ದರ ಹೆಚ್ಚಳ ಮಾಡಿಲ್ಲ. ಏನಿದ್ದರೂ, ಸಾಮಾನ್ಯ 2ನೇ ದರ್ಜೆಯ ಬೋಗಿಗಳ ಪ್ರಯಾಣ 500 ಕಿ.ಮೀ. ಮೀರಿದ ಪ್ರಯಾಣಕ್ಕೆ ಅತ್ಯಲ್ಪ ದರದ ಏರಿಕೆ ಮಾಡಲಾಗಿದೆ. ಪ್ರತಿ ಕಿ.ಮೀ.ಗೆ ಅರ್ಧ ಪೈಸೆಯಷ್ಟು(100 ಕಿಮೀಗೆ 50 ಪೈಸೆ) ಹೆಚ್ಚಳವಾಗಲಿದೆ ಎಂದರು.

ಎಸಿ ಬೋಗಿ ಟಿಕೆಟ್ ದರ ಪ್ರತಿ ಕಿ.ಮೀ.ಗೆ 2 ಪೈಸೆ ಹೆಚ್ಚಳವಾಗಲಿದೆ. ಎಸಿ ಇಲ್ಲದ ಮೇಲ್‌ಗಾಡಿ ಮತ್ತು ಎಕ್ಸ್‌ಪ್ರೆಸ್ ರೈಲು ಪ್ರಯಾಣ ದರ ಪ್ರತಿ ಕಿ.ಮೀ.ಗೆ 1 ಪೈಸೆ ಹೆಚ್ಚಳವಾಗಲಿದೆ. ನಿತ್ಯದ ಪ್ರಯಾಣಿಕರು, ಕಡಿಮೆ ದೂರ ಪ್ರಯಾಣಿಸುವವರಿಗೆ ಈಗಿನ ದರ ಏರಿಕೆಯಿಂದ ಯಾವುದೇ ಹೊರೆಯಾಗದು ಎಂದು ವಿವರಿಸಿದರು. ದೇಶಾದ್ಯಂತ ಪ್ರತಿದಿನ 13,000ಕ್ಕೂ ಹೆಚ್ಚು ಎಕ್ಸ್‌ಪ್ರೆಸ್ ರೈಲುಗಳು ಸಂಚರಿಸುತ್ತವೆ.

ಬ್ಲ್ಯಾಕ್‌ಬಾಕ್ಸ್ ಎಎಐಬಿ ಪರಿಶೀಲನೆ: ಸಚಿವ

ಪುಣೆ: ಗುಜರಾತ್‌ನ ಅಹಮದಾಬಾದ್‌ನಲ್ಲಿ ಜೂ.12ರಂದು ಪತನಗೊಂಡು 270 ಜೀವಗಳ ಬಲಿ ಪಡೆದ ಏರ್ ಇಂಡಿಯ ಸಂಸ್ಥೆಯ 'ಎಐ -171 ಬೋಯಿಂಗ್ 878-8 ಡ್ರೀಮ್‌ಲೈನರ್ ವಿಮಾನ'ದ ಬ್ಲ್ಯಾಕ್ ಬಾಕ್ಸ್ ಜೂ.13 ರಂದು ಪತ್ತೆಯಾಗಿದ್ದು, ಅದನ್ನು 'ವಿಮಾನ ಅಪಘಾತ ತನಿಖಾ ಬ್ಯೂರೊ' (ಎಎಐಬಿ) ಪರಿಶೀಲಿಸುತ್ತಿದೆ. ಹೆಚ್ಚಿನ ತನಿಖೆಗಾಗಿ ಅದನ್ನು ವಿದೇಶಕ್ಕೆ ಕಳುಹಿಸಬೇಕಾದ ಅಗತ್ಯವಿಲ್ಲ ಎಂದು ನಾಗರಿಕ ವಿಮಾನಯಾನ ಸಚಿವ ಕೆ ರಾಮಮೋಹನ್ ನಾಯ್ಡು ಮಂಗಳವಾರ ಹೇಳಿದರು.ಹಾರಾಟದ ಸಮಯದಲ್ಲಿ ವಿಮಾನದಲ್ಲಿನ ಚಟುವಟಿಕೆಗಳ ಬಗ್ಗೆ ಮಾಹಿತಿ ದಾಖಲಿಸುವ ಸಾಧನವೇ ಬ್ಲ್ಯಾಕ್ ಬಾಕ್ಸ್. ವಿಮಾನ ಅಪಘಾತಗಳ ಸಂದರ್ಭ ತನಿಖೆಗೆ ಬ್ಲ್ಯಾಕ್‌ಬಾಕ್ಸ್‌ನಿಂದ ದೊಡ್ಡ ಮಟ್ಟದ ಸಹಾಯವಾಗುತ್ತದೆ. ಅಹಮದಾಬಾದ್ ವಿಮಾನ ಅಪಘಾತದ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ತನಿಖೆ ಸುಗಮವಾಗಿ ಸಾಗಿದೆ ಎಂದರು.ಬ್ಲ್ಯಾಕ್ ಬಾಕ್ಸ್ ಡಿಕೋಡ್ ಮಾಡಿದರೆ ವಿಮಾನ ಅಪಘಾತಕ್ಕೆ ಕೆಲವೇ ಕ್ಷಣಗಳ ಮೊದಲು ಏನೇನಾಯಿತು ಎಂಬ ಬಗ್ಗೆ ಒಳನೋಟ ಸಿಗುತ್ತದೆ' ಎಂದು ನಾಯ್ಡು ಈ ಮೊದಲು ಹೇಳಿದ್ದರು.

ಮಧ್ಯಪ್ರಾಚ್ಯಕ್ಕೆ ಹೆಚ್ಚಿನ ವಿಮಾನ: ಏರಿಂಡಿಯ

ದೆಹಲಿ: ಇಸ್ರೇಲ್-ಇರಾನ್ ನಡುವಿನ ಯುದ್ಧದ ಕಾರಣ ಮಧ್ಯ ಪ್ರಾಚ್ಯದ ಹಲವೆಡೆ ಪ್ರಯಾಣಿಕ ವಿಮಾನಗಳಿಗೆ ವಾಯುಪ್ರದೇಶ ಬಂದ ಆಗಿದ್ದರಿಂದ ಆ ದಿಸೆಯಲ್ಲಿ ವಿಮಾನ ಸಂಚಾರ ಸ್ಥಗಿತಗೊಂಡಿತ್ತು. ಸದ್ಯ ಮಧ್ಯಪ್ರಾಚ್ಯದ ಕೆಲವೆಡೆ ವಾಯುಪ್ರದೇಶ ಕ್ರಮೇಣ ಮರಳಿ ತೆರೆದುಕೊಳ್ಳುತ್ತಿರುವುದರಿಂದ ಈ ಭಾಗಕ್ಕೆ ವಿಮಾನಗಳ ಹಾರಾಟವನ್ನು ಹಂತಹಂತವಾಗಿ ಪುನಾರಂಭಿಸುವುದಾಗಿ ಏರ್ ಇಂಡಿಯ ವಿಮಾನಯಾನ ಸಂಸ್ಥೆ ಮಂಗಳವಾರ ಪ್ರಕಟಿಸಿದೆ. ಈ ಮೊದಲು ಇಸ್ರೇಲ್-ಇರಾನ್ ನಡುವೆ ಯುದ್ಧ ನಡೆ ಯುತ್ತಿರುವ ಕಾರಣ ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮ ವಾರ ರಾತ್ರಿಯಿಂದ ವಿಮಾನಗಳ ಹಾರಾಟದ ಮೇಲೆ ತೀವ್ರ ಪರಿಣಾಮವಾಗಿದೆ. ಒಂದೇ ದಿನದಲ್ಲಿ 48 ವಿಮಾನಗಳ ಸಂಚಾರ ರದ್ದಾಗಿದೆ. ದೆಹಲಿ ಯಿಂದ ಹೊರಡಬೇಕಿದ್ದ ಏರ್ ಇಂಡಿಯ, ಇಂಡಿಗೊ ಮತ್ತಿತರ ವಿಮಾನಯಾನ ಸಂಸ್ಥೆಗಳ 20 ವಿಮಾನಗಳು ಹಾಗೂ ಬೇರೆಡೆಯಿಂದ ಬರಬೇಕಾ ಗಿದ್ದ 28 ವಿಮಾನಗಳ ಸಂಚಾರ ರದ್ದಾಗಿದೆ. ಪರಿ ಣಾಮ ಎರಡೂ ಕಂಪನಿಗಳು ನಷ್ಟ ಅನುಭವಿಸುವಂ ತಾಗಿದೆ. ಕತಾರ್ ಮತ್ತು ಗಲ್ಫ್ ದೇಶಗಳ ಕೆಲವೆಡೆ ವಾಯುಪ್ರದೇಶವನ್ನು ಇರಾನ್-ಇಸ್ರೇಲ್ ಯುದ್ಧದ ಕಾರಣ ಮುಚ್ಚಿದ್ದರಿಂದ ಸೋಮವಾರ ಕೂಡಾ ಭಾರತದ ಹಲವು ವಿಮಾನ ನಿಲ್ದಾಣಗಳಿಂದ ಹೊರಡುವ, ಬೇರೆಡೆಯಿಂದ ಬರುವ ವಿಮಾನಗಳಿಗೆ ಅಡ್ಡಿಯಾಗಿದೆ. ಅಹಮದಾ ಬಾದ್, ತಿರುವನಂತಪುರಂ ಮತ್ತು ಮಂಗಳೂರು ವಿಮಾನ ನಿಲ್ದಾಣ ಪಟ್ಟಿಯಲ್ಲಿವೆ.

ಓಮನ್ ಮೊದಲ ಬಾರಿಗೆ ಆದಾಯ ತೆರಿಗೆ ಚಿಂತನೆ

ಮಸ್ಕತ್: ಪೆಟ್ರೋಲಿಯಂ ಉತ್ಪನ್ನಗಳಿಂದ ಸಮೃದ್ಧವಾಗಿರುವ, ಸಿರಿವಂತ ಅರಬ್ ದೇಶಗಳು ನಾಗರಿಕರ ಮೇಲೆ ಈವರೆಗೂ ಆದಾಯ ತೆರಿಗೆ ವಿಧಿಸುವ ಗೋಜಿಗೇ ಹೋಗಿರಲಿಲ್ಲ. ಕೊಲ್ಲಿಯಲ್ಲಿನ ದೇಶಗಳಲ್ಲಿ ಇದೇ ಮೊದಲ ಬಾರಿ ಆದಾಯ ತೆರಿಗೆ ವಿಧಿಸುವ ಚಿಂತನೆ ಕೇಳಿಬಂದಿದೆ. ತೈಲ ಸಮೃದ್ಧ ರಾಷ್ಟ್ರಗಳಾದ ಕೊಲ್ಲಿ ದೇಶಗಳು ಹಲವು ಉಚಿತ ಯೋಜನೆಗಳನ್ನು ಪ್ರಕಟಿಸುತ್ತಿದ್ದುವೇ ಹೊರತು ಆದಾಯ ತೆರಿಗೆ ವಿಧಿಸುತ್ತಿರಲಿಲ್ಲ. ಆದರೆ, ಮೊದಲ ಬಾರಿಗೆ ಓಮನ್ ರಾಷ್ಟ್ರ ತನ್ನ ಪ್ರಜೆಗಳಿಗೆ ಆದಾಯ ತೆರಿಗೆ ವಿಧಿಸಲು ಮುಂದಾಗಿದೆ. ಈ ರೀತಿ ತೆರಿಗೆ ವಿಧಿಸಿದ ಮೊದಲ ಗಲ್ಫ್ ರಾಷ್ಟ್ರ ಎನಿಸಿಕೊಳ್ಳಲಿದೆ. ಓಮನ್ ಸರಕಾರದ ಆದಾಯದಲ್ಲಿ ಶೇ.70ರಷ್ಟು ಪಾಲು ತೈಲೋತ್ಪನ್ನಗಳಿಂದಲೇ ಬರುತ್ತದೆ. ಈ ಅವಲಂಬನೆ ಕಡಿಮೆ ಮಾಡಲು ಮತ್ತು ದೀರ್ಘಾವಧಿಗೆ ಸರಕಾರಕ್ಕೆ ಆದಾಯ ಬರುವುದನ್ನು ಹೆಚ್ಚಿಸಲು ಓಮನ್ 2028ನೇ ಸಾಲಿನಿಂದ ಆದಾಯ ತೆರಿಗೆ ವಿಧಿಸಲು ನಿರ್ಧರಿಸಿದೆ. ವಾರ್ಷಿಕ 42,000 ರಿಯಾಲ್(94 ಲಕ್ಷ ರು.) ಮೀರಿದ ವರಮಾನ ಇರುವವರಿಗೆ ಆದಾಯ ತೆರಿಗೆ ವಿಧಿಸಲಾಗುತ್ತದೆ ಎನ್ನಲಾಗಿದೆ. ಆದಾಯ ತೆರಿಗೆಯನ್ನು ಶೇ.5ರ ದರದಲ್ಲಿ ವಿಧಿಸಲಾಗುತ್ತದೆ ಎಂಬ ಒಮಾನ್ ಸುದ್ದಿಸಂಸ್ಥೆಯೊಂದರ ಮಾಹಿತಿ ಆಧರಿಸಿ ಬ್ಲೂಮ್‌ಬರ್ಗ್ ಮಾಧ್ಯಮ ಸಂಸ್ಥೆ ಮಂಗಳವಾರ ವರದಿ ಪ್ರಕಟಿಸಿದೆ. ಅತ್ಯಂತ ಹೆಚ್ಚು ಆದಾಯ ಗಳಿಸುವ ನಾಗರಿಕರಲ್ಲಿ ಶೇ.1ರಷ್ಟು ಜನರಿಗೆ ಮಾತ್ರವೇ ಆದಾಯ ತೆರಿಗೆಯ ಹೊರೆಯ ಪರಿಣಾಮ ಬೀರುತ್ತದೆ ಎನ್ನಲಾಗಿದೆ.

ವೀಸಾ ಬೇಕಿದ್ದರೆ ಎಫ್‌ಬಿ ಪ್ರೊಫೈಲ್ ಅನ್‌ಲಾಕ್

ವಾಷಿಂಗ್ಟನ್: ಅಮೆರಿಕದ ಎಫ್ ಎಂ ಜೆ ವೀಸಾ ಬೇಕಿದ್ದರೆ ಅರ್ಜಿದಾರರು ತಮ್ಮ ಸಾಮಾಜಿಕ ಮಾಧ್ಯಮಗಳ ಖಾತೆಗಳಲ್ಲಿನ ವೈಯಕ್ತಿಕ ವಿವರ ವಿಭಾಗವನ್ನು ಸಾರ್ವಜನಿಕ ವೀಕ್ಷಣೆಗೆ ಮುಕ್ತವಾಗಿ ತೆರೆದಿಡಬೇಕು ಎಂದು 'ಶ್ವೇತಭವನ'ದ ಪ್ರಕಟಣೆ ತಿಳಿಸಿದೆ. ಆ ಮೂಲಕ ವೀಸಾ ಅರ್ಜಿಗಳ ಸ್ಕ್ರೀನಿಂಗ್(ಪರಿಶೀಲನೆ) ವಿಧಾನಗಳನ್ನು ಮತ್ತಷ್ಟು ಕಠಿಣಗೊಳಿಸಿದೆ. ಈ ನಿಯಮ ತಕ್ಷಣದಿಂದಲೇ ಜಾರಿಗೆ ಬಂದಿದೆ. ವೀಸಾಗೆ ಅರ್ಜಿ ಸಲ್ಲಿಸಿರುವವರು ತಕ್ಷಣವೇ ತಮ್ಮ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸಾಪ್, 'ಎಕ್ಸ್' ಮೊದಲಾದ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿನ ಪ್ರೊಫೈಲ್ ವಿಭಾಗವನ್ನು 'ಅನ್‌ಲಾಕ್' ಮಾಡಿ ಸಾರ್ವಜನಿಕ ವೀಕ್ಷಣೆಗೆ ಮುಕ್ತವಾಗಿಡಬೇಕು ಎಂದು ಅಮೆರಿಕ ಸರಕಾರ ಘೋಷಿಸಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ದೆಹಲಿಯಲ್ಲಿನ ಅಮೆರಿಕ ರಾಯಭಾರ ಕಚೇರಿಯ ಅಧಿಕೃತ ಸಾಮಾಜಿಕ ಜಾಲತಾಣ ಹ್ಯಾಂಡಲ್ 'ಪ್ರತಿ ವೀಸಾ ತೀರ್ಪು ರಾಷ್ಟ್ರೀಯ ಭದ್ರತಾ ನಿರ್ಧಾರವಾಗಿದೆ'. ವೀಸಾಗೆ ಅರ್ಜಿ ಸಲ್ಲಿಸಿದವರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಮುಕ್ತಗೊಳಿಸದೇ ಇದ್ದರೆ ಅವರ ವೀಸಾ ಅರ್ಜಿ ತಿರಸ್ಕೃತಗೊಳ್ಳುತ್ತದೆ ಎಂದು ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ರೋಟರಿ ಕ್ಲಬ್‌ನ ಅಧ್ಯಕ್ಷ ನವೀನ್‌ಚಂದ್ರ ಶೆಟ್ಟಿ ಆಯ್ಕೆ

ಉಡುಪಿ: ರೋಟರಿ ಕ್ಲಬ್ ಕಾರ್ಕಳ ಇದರ ನೂತನ ಅಧ್ಯಕ್ಷರಾಗಿ ಉದ್ಯಮಿ, ಶೀತಲ್ ಗಾರ್ಡನ್ ಫ್ಯಾಮಿಲಿ ರೆಸ್ಟೋರೆಂಟ್‌ನ ಆಡಳಿತ ನಿರ್ದೇಶಕ ನವೀನ್‌ಚಂದ್ರ ಶೆಟ್ಟಿ ಹಾಗೂ ಕಾರ್ಯದರ್ಶಿಯಾಗಿ ಉದ್ಯಮಿ ಚೇತನ್ ನಾಯಕ್ ಅವರು ಆಯ್ಕೆಯಾಗಿದ್ದಾರೆ. ಜು. 2ರಂದು ಪದಪ್ರದಾನ ನೂತನ ಪದಾಧಿಕಾರಿಗಳ ಪದಪ್ರದಾನ ಸಮಾರಂಭ ಹೊಟೇಲ್ ಪ್ರಕಾಶ್‌ನ ಉತ್ಸವ ಸಭಾಂಗಣದಲ್ಲಿ ಜು. 2ರ ಬುಧವಾರ ಸಮಯ 6:30ಕ್ಕೆ ನಡೆಯಲಿದೆ. ರೋಟರಿ ಡಿಸ್ಟ್ರಿಕ್ಟ್ ಅಡ್ವೈಸರ್ ಅಭಿನಂದನ್ ಎ. ಶೆಟ್ಟಿ ಪದಪ್ರದಾನ ಅಧಿಕಾರಿಯಾಗಿ ಭಾಗವಹಿಸಲಿರುವರು. ರೋಟರಿ ಅಸಿಸ್ಟೆಂಟ್ ಗವರ್ನರ್ ವಿಘ್ನೇಶ್ ಶೆಣೈ ಬಿ., ಅನಿಲ್, ಝೋನಲ್ ಲೆಫ್ಟಿನೆಂಟ್ ಜಾನ್ ಆರ್. ಡಿ' ಸಿಲ್ವಾ, ಸುರೇಶ್ ನಾಯಕ್ ಅತಿಥಿಗಳಾಗಿ ಭಾಗವಹಿಸಲಿರುವರು ಎಂದು ರೋಟರಿ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯ ಪ್ರಶಸ್ತಿಗೆ ವಾಮದೇವಪ್ಪ ಆಯ್ಕೆ

ದಾವಣಗೆರೆ: ಬೆಂಗಳೂರಿನ ಕನ್ನಡ ಜಾನಪದ ಪರಿಷತ್ತು ಕೊಡಮಾಡುವ ಮಧುರಚೆನ್ನ ರಾಜ್ಯ ಪ್ರಶಸ್ತಿ ಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಗೂ ಕನ್ನಡ ಪರಿಚಾರಕ ಬಿ.ವಾಮದೇವಪ್ಪ ಆಯ್ಕೆಯಾಗಿದ್ದಾರೆ. ಕನ್ನಡ ಜಾನಪದ ಪರಿಷತ್ತಿನ ವತಿಯಿಂದ ಜೂ.25ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಡಾ. ಸಿ.ಸೋಮಶೇಖರ್ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆಯಲಿರುವ ಪ್ರಥಮ ರಾಜ್ಯ ಜಾನಪದ ಸಮ್ಮೇಳನದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ ಎಂದು ಸಮ್ಮೇಳನದ ಆಯೋಜಕರು ತಿಳಿಸಿದ್ದಾರೆ. ಕನ್ನಡ ನಾಡು-ನುಡಿ, ಸಾಹಿತ್ಯ, ಜಾನಪದ ಕಲೆಯ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಶ್ರಮಿಸಿದ ನಾಡಿನ ವಿವಿಧ ಜಿಲ್ಲೆಗಳ ಸಾಧಕರನ್ನು ಗುರುತಿಸಿ ಮಧುರಚೆನ್ನ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

ಸಾಧಕರು ನಮ್ಮ ಬದುಕಿಗೆ ಪ್ರೇರಣೆ

ಹೊಸದುರ್ಗ: ಸಾಧಕರು ನಮ್ಮ ಬದುಕಿಗೆ ಪ್ರೇರಣೆಯಾಗಬೇಕು. ಜನನ, ಮರಣ ಮಧ್ಯೆ ಜೀವನ ನಮ್ಮ ಕೈಯಲ್ಲಿರುತ್ತದೆ. ಸದ್ಬಳಕೆ ಮಾಡಿಕೊಂಡು ಸದ್ಗುಣ ಸಂಪನ್ನರಾಗಿ ಶ್ರೇಷ್ಠ ಮಾನವರಾಗಬೇಕು ಎಂದು ಶ್ರೀ ಶಾಂತವೀರ ಸ್ವಾಮೀಜಿ ಸಲಹೆ ನೀಡಿದರು. ತಾಲೂಕಿನ ಕಾರೇಹಳ್ಳಿ ಗ್ರಾಮದಲ್ಲಿ ನಡೆದ ವೆಂಕಟೇಶಮೂರ್ತಿಯವರ ವೈಕುಂಠ ಸಮಾರಾಧನೆಯ ಧಾರ್ಮಿಕ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, ಸಾಧಕರು ಸಾಧನೆಯ ಮೂಲಕ ಸಾವನ್ನು ಸಹ ಗೆಲ್ಲಲು ಸಾಧ್ಯ. ಸಾವಿಗೂ ಮುನ್ನವೇ ಉತ್ತಮ ಸಾಧನೆ ತೋರಿಸಬೇಕು. ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣ ಮಾಡುವ ಸದಾವಕಾಶವನ್ನು ಭಗವಂತ ನಮಗೆ ಕರುಣಿಸಿದ್ದಾನೆ. ದುಶ್ಚಟ, ದುರಭ್ಯಾಸದಿಂದ ದೂರವಿದ್ದು ಬದುಕಿನ ಸಾರ್ಥಕತೆ ಕಂಡುಕೊಳ್ಳಬೇಕು. ಸಜ್ಜನರ ಸಹವಾಸದಿಂದ ಸರಿದಾರಿಯಲ್ಲಿ ಸಾಗಲು ಸಾಧ್ಯ ಎಂದು ಸಲಹೆ ನೀಡಿದರು. ಭಗಿರಥ ಗುರುಪೀಠದ ಜಗದ್ಗುರು ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ ಮಾತನಾಡಿ, ವೆಂಕಟೇಶಮೂರ್ತಿಯವರು ನೂರಾರು ಶಿಕ್ಷಕರನ್ನು ತಯಾರು ಮಾಡುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಸೇವೆ ಸಲ್ಲಿಸಿದ್ದಾರೆ. ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಮಾತನಾಡಿದರು. ಶಿಕ್ಷಣ ಇಲಾಖೆ ನಿವೃತ್ತ ಅಧಿಕಾರಿ ಮಗೋದಿ ಮಂಜುನಾಥ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕೆ.ಅನಂತ್, ವೆಂಕಟೇಶಮೂರ್ತಿಯವರ ಕುಟುಂಬ ವರ್ಗದವರು, ಗ್ರಾಮದ ಮುಖಂಡರು ಹಾಜರಿದ್ದರು.

ವಿರಾಮ
ಪ್ರತಿ ಭಾನುವಾರ

ಅಂತಾರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಗಿಟ್ಟಿಸಲು ಉತ್ತಮ ಅವಕಾಶ : ಡಾ. ಮೋಹನ್ ಆಳ್ವ

ಆಳ್ವಾಸ್ ಪ್ರಗತಿ ಉದ್ಯೋಗ ಮೇಳ ಆಗಸ್ಟ್ 1ರಂದು

ಮಂಗಳೂರು: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಆಯೋಜಿಸಲ್ಪಡುತ್ತಿರುವ ಹದಿನೈದನೇ ಆವೃತ್ತಿಯ ಬೃಹತ್ ಉದ್ಯೋಗ ಮೇಳ ಆಗಸ್ಟ್ 1 ಹಾಗೂ 2 ರಂದು ಮೂಡಬಿದ್ರೆಯ ವಿದ್ಯಾಗಿರಿಯ ಕಾಲೇಜು ಆವರಣದಲ್ಲಿ ನಡೆಯಲಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2007ರಲ್ಲಿ ಪ್ರಾರಂಭವಾದ ಆಳ್ವಾಸ್ ಪ್ರಗತಿ- ಉದ್ಯೋಗ ಮೇಳವು ವೃತ್ತಿ ಆಕಾಂಕ್ಷಿಗಳಿಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಗಿಟ್ಟಿಸುವಲ್ಲಿ ಶ್ರೇಷ್ಠ ವೇದಿಕೆಯಾಗಿ ಜನಮಾನಸದಲ್ಲಿ ಹೆಸರುವಾಸಿಯಾಗಿದೆ ಎಂದರು.

ಸಂಸ್ಥೆಯು ಈವರೆಗೆ ದೇಶದ ವಿವಿಧ ಭಾಗಗಳಲ್ಲಿ 21 ಬೃಹತ್ ಉದ್ಯೋಗ ಮೇಳಗಳನ್ನು ಬಹಳ ವ್ಯವಸ್ಥಿತವಾಗಿ ನಡೆಸಿದೆ. ಪ್ರತೀ ಉದ್ಯೋಗ ಮೇಳದಲ್ಲಿ ಸರಾಸರಿ 200ರಷ್ಟು ಪ್ರತಿಷ್ಠಿತ ಕಂಪೆನಿಗಳು ಪಾಲ್ಗೊಂಡು. ಇಲ್ಲಿವರೆಗೆ ಒಟ್ಟು 36,151 ಉದ್ಯೋಗಗಳನ್ನು ನೀಡಿದೆ. 61,517 ಅಭ್ಯರ್ಥಿಗಳು ವಿವಿಧ ಕಂಪೆನಿಗಳ ಶಾರ್ಟ್‌ಲಿಸ್ಟ್‌ನಲ್ಲಿ ಸೇರ್ಪಡೆಗೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಮಾತನಾಡಿದರು.

ಈ ಬಾರಿ ಬ್ಯಾಂಕಿಂಗ್ ಮತ್ತು ಹಣಕಾಸು, ಐಟಿ, ಐಟಿಎಸ್, ಮ್ಯಾನುಫ್ಯಾಕ್ಚರಿಂಗ್, ಹೆಲ್ತ್ ಕೇರ್ ಮತ್ತು ಫಾರ್ಮಾ, ಮಾರಾಟ ಮತ್ತು ಚಿಲ್ಲರೆ ವ್ಯಾಪಾರ, ಆಟೋಮೊಬೈಲ್, ಹಾಸ್ಪಿಟಾಲಿಟಿ, ಟೆಲಿಕಾಂ, ಮಾಧ್ಯಮ, ಶಿಕ್ಷಣ ಮತ್ತು ಎನ್‌ಜಿಒಗಳನ್ನು ಪ್ರತಿನಿಧಿಸುವ ಉನ್ನತ ಕಂಪೆನಿಗಳು ಆಳ್ವಾಸ್ ಪ್ರಗತಿಯಲ್ಲಿ ನೇಮಕಾತಿ ನಡೆಸಲಿವೆ. ಈ ಕಂಪೆನಿಗಳು ಪದವಿ ಮತ್ತು ಸ್ನಾತಕೋತ್ತರ ಪದವೀಧರರು, ವೈದ್ಯಕೀಯ ಮತ್ತು ಪ್ಯಾರಾ ಮೆಡಿಕಲ್,

ಎಂಎನ್‌ಸಿ ಉದ್ಯೋಗಾವಕಾಶಗಳ ಮಹಾಪೂರ

ಆಳ್ವಾಸ್ ಪ್ರಗತಿಗೆ ಈವರೆಗೆ 80 ಕಂಪೆನಿಗಳು ನೋಂದಾಯಿಸಿಕೊಂಡಿದ್ದು ಮತ್ತು ಹೆಚ್ಚುವರಿಯಾಗಿ ಈಗಾಗಲೇ 130 ಕಂಪೆನಿಗಳು ಪಾಲ್ಗೊಳ್ಳುವ ಮೌಖಿಕ ಭರವಸೆ ನೀಡಿವೆ. ಒಟ್ಟು 300 ಕಂಪೆನಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಇಂಜಿನಿಯರಿಂಗ್, ಕಲಾ, ವಾಣಿಜ್ಯ, ಹಾಗೂ ಮ್ಯಾನೇಜ್‌ಮೆಂಟ್, ಬೇಸಿಕ್ ಸೈನ್ಸ್, ನರ್ಸಿಂಗ್, ಐಟಿಐ, ಡಿಪ್ಲೋಮಾ ಪಿಯುಸಿ, ಎಸ್ಸೆಸ್ಸೆಲ್ಸಿ ಹಾಗೂ ಇತರ ಅರ್ಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಿವೆ ಎಂದು ವಿವರಿಸಿದರು.

ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳುವ ಕಂಪೆನಿಗಳ ವಿವರ ಹಾಗೂ ನವೀಕೃತ www.alvaspragati.com ಪ್ರಕಟಿಸಲಾಗಿದೆ. ಆಳ್ವಾಸ್ ಪ್ರಗತಿಯಲ್ಲಿ ಭಾಗವಹಿಸುವ ಎಲ್ಲಾ ಅಭ್ಯರ್ಥಿಗಳು ಈ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಉಚಿತ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳ ಬಹುದಾಗಿದೆ. ಅಲ್ಲದೆ ಆಳ್ವಾಸ್ ಸಂಸ್ಥೆಯ ಪರಿಣತ ತಂಡದಿಂದ ಆಳ್ವಾಸ್ ಪ್ರಗತಿಯಲ್ಲಿ ಉದ್ಯೋಗ ನೀಡುವ ಕಂಪೆನಿಗಳ ಮಾಹಿತಿ, ಸಂದರ್ಶನ ಕೌಶಲ್ಯಗಳ ತರಬೇತಿಯನ್ನು ವಿವಿಧ ಭಾಗಗಳಲ್ಲಿ ನೀಡಲಾಗುತ್ತದೆ ಎಂದು ಹೇಳಿದರು.

ಹೊರ ಜಿಲ್ಲೆಗಳಿಂದ ಬರುವ ಉದ್ಯೋಗಾಕಾಂಕ್ಷಿಗಳಿಗೆ ಜುಲೈ 31ರಿಂದ ವಸತಿ ವ್ಯವಸ್ಥೆ ಕಲ್ಪಿಸಲಾಗು ವುದು ಐಟಿಐ ಅಭ್ಯರ್ಥಿಗಳಿಗೆ ಬಸ್ ಸೌಕರ್ಯ ಕಲ್ಪಿಸಲಾಗುವುದು, ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ನಂಬ್ರ 9741440490, 9611750531, 7975223865 ಅನ್ನು ನೊಂದಾವಣೆ ಹಾಗೂ ಉದ್ಯೋಗ ನೀಡಲಿರುವ ಕಂಪೆನಿಗಳ ಮಾಹಿತಿಗೆ www.alvaspragati.com ಅಥವಾ 9731953123, ಅಭ್ಯರ್ಥಿಗಳು ಉದ್ಯೋಗ ಮೇಳದಂದು ಬೆಳಗ್ಗೆ 8 ಗಂಟೆಗೆ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ಹಾಜರಿರಬೇಕು. ಡಾ. ಎಂ. ಮೋಹನ್ ಆಳ್ವ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ ಆಳ್ವ, ತರಬೇತಿ ಹಾಗೂ ನೇಮಕಾತಿ ವಿಭಾಗದ ಮುಖ್ಯಸ್ಥೆ ರಂಜಿತಾ, ಆಳ್ವಾಸ್ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರಸಾದ ಶೆಟ್ಟಿ ಉಪಸ್ಥಿತರಿದ್ದರು.

ಗಿಡಗಳ ಸಂರಕ್ಷಣೆಗೆ ಸಾಮೂಹಿಕ ಜಾಗೃತಿ ಅಗತ್ಯ

ಮಂಗಳೂರು: ಗಿಡಗಳ ಸಂರಕ್ಷಣೆಯ ಬಗ್ಗೆ ಸಾಮೂಹಿಕ ಜಾಗೃತಿ ಅಗತ್ಯ ವಿದೆ ಎಂದು ಮಂಗಳೂರು ವಲಯ ಅರಣ್ಯ ಅಧಿಕಾರಿ ರಾಜೇಶ್ ತಿಳಿಸಿದ್ದಾರೆ.

ಅವರು ವನಮಹೋತ್ಸವ ಮತ್ತು ದಕ್ಷಿಣ ಕನ್ನಡ ಕಾರ್ಯ ನಿರತ ಪತ್ರಕರ್ತರ ಸಂಘದ ಸುವರ್ಣ ಸಂಭ್ರಮಾಚರಣೆಯ ಅಂಗವಾಗಿ ಅರಣ್ಯ ಇಲಾಖೆ , ದ.ಕ ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಸುರತ್ಕಲ್ ಕೋಡಿಕೆರೆ (ಎಸ್ ಟಿ ಪಿ)ಯಲ್ಲಿ 50 ಗಿಡಗಳನ್ನು ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಾಗತಿಕ ತಾಪಮಾನ ಏರಿಕೆ, ಹವಾಮಾನದ ವೈಪರೀತ್ಯಗಳು ಸೇರಿದಂತೆ ಪರಿಸರದಲ್ಲಿನ ಸವಾಲುಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಗಳಲ್ಲಿ ಹಾಗೂ ಸಮಾಜದಲ್ಲಿ ಸಾಮಾಜಿಕ ವಾಗಿ ಜಾಗೃತಿ ಮೂಡಿಸಬೇಕಾಗಿದೆ. ಈಗಾಗಲೇ ಸುಮಾರು 9000 ಗಿಡಗಳನ್ನು ಅರಣ್ಯ ಇಲಾಖೆ ಯವತಿಯಿಂದ ನೆಡಲಾಗಿದೆ. ಈ ನಿಟ್ಟಿನಲ್ಲಿ ಸಾಮೂಹಿಕ ಸಹಭಾಗಿತ್ವದ ಅಗತ್ಯವಿದೆ ಎಂದು ರಾಜೇಶ್ ತಿಳಿಸಿದ್ದಾರೆ.

ಅರಣ್ಯ ಇಲಾಖೆಯ ಮೂಲಕ ಒದಗಿಸಲಾದ ಗಿಡಗಳನ್ನು ನೆಡುವ ಮೂಲಕ ಯೋಜನೆಗೆ ಚಾಲನೆ ನೀಡಿದರು. ಸಮಾರಂಭದಲ್ಲಿ ಸುರತ್ಕಲ್ ಅರಣ್ಯವಲಯದ ಉಪ ಅರಣ್ಯಾಧಿಕಾರಿ ಶ್ರವಣ್ ಕುಮಾರ್, ಸುರತ್ಕಲ್ ಬೀಟ್ ಅರಣ್ಯ ಅಧಿಕಾರಿ ಗಂಗಾಧರ್, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ ಬಿ ಹರೀಶ್ ರೈ, ಕರ್ನಾಟಕ ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ಕಾರ್ಯ ಕಾರಿ ಸಮಿತಿ ಸದಸ್ಯರಾದ ಜಗನ್ನಾಥ ಶೆಟ್ಟಿ ಬಾಳ, ದಕ್ಷಿಣ ಕನ್ನಡ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ್ ನಾಯಕ್ ಇಂದಾಜೆ, ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ, ಕೋಶಾಧಿಕಾರಿ ಪುಷ್ಪರಾಜ್ ಬಿ.ಎನ್, ಉಪಾಧ್ಯಕ್ಷ ಭಾಸ್ಕರ ರೈ ಕಟ್ಟಾ, ಪ್ರೆಸ್ ಕ್ಲಬ್ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ, ಕಾರ್ಯಕಾರಿ ಸಮಿತಿ ಸದಸ್ಯ ರಾಜೇಶ್ ದಡ್ಡಂಗಡಿ, ಕೋಡಿಕೆರೆ ಎಸ್ ಟಿ ಪಿ ಗುತ್ತಿಗೆದಾರ ಶಾಂತರಾಜು ಉಪಸ್ಥಿತರಿದ್ದರು.

ದ.ಕ ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಸುರತ್ಕಲ್ ಕೋಡಿಕೆರೆ (ಎಸ್ ಟಿ ಪಿ)ಯಲ್ಲಿ 50 ಗಿಡಗಳನ್ನು ನೆಡುವ ಕಾರ್ಯಕ್ರಮ ನಡೆಯಿತು.

ಮಂಗಳೂರು ನಗರದಲ್ಲಿ 25ಸಾವಿರ ಗಿಡಗಳನ್ನು ಸಾರ್ವಜನಿಕರಿಗೆ ವಿತರಿಸಲಾಗಿದೆ ಮತ್ತು ಈ ಗಿಡಗಳನ್ನು ನೆಟ್ಟು ಸಂರಕ್ಷಣೆಯ ನಿಗಾವಹಿಸುವ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.

- ರಾಜೇಶ್, ವಲಯ ಅರಣ್ಯ ಅಧಿಕಾರಿ

ಪಾಲಿಕೆ ಕಚೇರಿಯ ಕಡತ ವಿಲೇವಾರಿ ನ್ಯೂನತೆ

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆಗೆ ಶನಿವಾರ ದಾಳಿ ನಡೆಸಿದ ಸಂದರ್ಭ ಪಾಲಿಕೆಯ ಕಂದಾಯ ವಿಭಾಗ, ಆರೋಗ್ಯ ವಿಭಾಗ, ಎಂಜಿನೀಯರ್ ವಿಭಾಗ, ಲೆಕ್ಕಪತ್ರ ವಿಭಾಗ, ನಗರ ಯೋಜನಾ ವಿಭಾಗ, ಆಯುಕ್ತರ ಕಚೇರಿಯ ಕಡತ ವಿಲೇವಾರಿಯಲ್ಲಿ ಹಲವಾರು ನ್ಯೂನ್ಯತೆಗಳು ಕಂಡು ಬಂದಿದೆ ಎಂದು ಮಂಗಳೂರು ಲೋಕಾಯುಕ್ತ ಪೊಲೀಸ್ ಪ್ರಕಟನೆ ತಿಳಿಸಿದೆ.

ಕಂದಾಯ ಮತ್ತು ನಗರ ಯೋಜನಾ ವಿಭಾಗದ ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ಮಾಹಿತಿ ಇದೆ. ಬ್ರೋಕರ್ ಒಬ್ಬರ ಬಳಿ 5 ಲಕ್ಷ ರು. ಹಣ ಪತ್ತೆಯಾಗಿದೆ. ಮಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಅಧಿಕಾರಿಯೊಬ್ಬರು ನಿವೃತ್ತರಾಗಿ 15 ವರ್ಷ ಕಳೆದರು ಕೂಡ ಈವರೆಗೆ ಅದೇ ಹುದ್ದೆಯಲ್ಲಿ ಮುಂದುವರೆದಿದ್ದಾರೆ. ಆರೋಗ್ಯ ವಿಭಾಗದಲ್ಲಿ ಹಲವಾರು ಉದ್ದಿಮೆ ಪರವಾನಿಗೆಯ ಕಡತಗಳು ಎಂಸಿಸಿ ಟ್ರೇಡ್ ಲೈಸನ್ಸ್ ವೆಬ್‌ಸೈಟ್‌ನಲ್ಲಿ ಬಾಕಿ ಇರುವುದು ಕಂಡುಬಂದಿದೆ. ವ್ಯಾಪಾರ ಪರವಾನಿಗೆಗಳನ್ನು ನವೀಕರಿಸಿಲ್ಲ, ಅದಕ್ಕೆ ಅನುಗುಣವಾದ ಶುಲ್ಕವನ್ನು ಸಂಗ್ರಹಿಸಿರುವುದಿಲ್ಲ. ಎಂಜಿನೀಯರ್ ವಿಭಾಗದ ಹಳೆಯ ಕಡತಗಳನ್ನು ಬಾಕಿ ಇರಿಸಿರುವುದು ಕಂಡು ಬಂದಿದೆ. ಲೆಕ್ಕಪತ್ರ ವಿಭಾಗದಲ್ಲಿ ಕಾಲಮಿತಿಯೊಳಗೆ ಬಿಲ್‌ಗಳನ್ನು ವಿಲೇವಾರಿಗೊಳಿಸದೆ ಬಾಕಿ ಇರಿಸುವುದು ಕಂಡುಬಂದಿದೆ ಎಂದು ತಿಳಿಸಿದೆ.



ನಗರ ಯೋಜನಾ ವಿಭಾಗದಲ್ಲಿ ಕಟ್ಟಡ ಪರವಾನಿಗೆ ನೀಡುವ ಸಮಯ ಯಾವುದೇ ನಿಬಂಧನೆಗಳನ್ನು ಪಾಲಿಸದೆ ಪರವಾನಿಗೆಯನ್ನು ನೀಡುತ್ತಿರುತ್ತಾರೆ. ಬಿಲ್ಡಿಂಗ್ ಬೈಲಾ ನಿಯಮಗಳನ್ನು ಉಲ್ಲಂಘಿಸಿದ ಕಟ್ಟಡಗಳಿಗೆ ಡೆಮೋಲೀಷನ್ ಆರ್ಡರ್ ಹೊರಡಿಸಿದ್ದರೂ ಟೌನ್ ಪ್ಲಾನಿಂಗ್ ವಿಭಾಗದ ಎಂಜಿನೀಯರ್ ಮತ್ತು ಆಯುಕ್ತರು ಬಿಲ್ಡಿಂಗ್ ಬೈಲಾ ನಿಯಮಗಳನ್ನು ಉಲ್ಲಂಘಿಸಿದ ಕಟ್ಟಡಗಳಿಗೆ ಕಾನೂನುಬಾಹಿರವಾಗಿ ಅನುಮತಿ ನೀಡಿರುವುದಾಗಿ ಮಾಹಿತಿ ಇದೆ.

ನಗರದ ಒಳಚರಂಡಿ ಮೇಲುಸ್ತುವಾರಿ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಒಳಚರಂಡಿ ವಿಭಾಗದ ಅಧಿಕಾರಿಗಳು ನಗರದ ರಾಜ ಕಾಲುವೆ, ತೋಡುಗಳಿಗೆ ಕಟ್ಟಡಗಳಿಂದ ನೀರು ಅನಧಿಕೃತವಾಗಿ ಹರಿಯಲು ಅವಕಾಶ ಮಾಡಿಕೊಟ್ಟಿದ್ದಾರೆ. ಅದರ ಉಲ್ಲಂಘನೆಯ ಕುರಿತು ಯಾವುದೇ ಕ್ರಮ ಕೈಗೊಳ್ಳದೆ ಮಳೆಗಾಲದಲ್ಲಿ ಹಲವಾರು ಪ್ರದೇಶಗಳಲ್ಲ ಚರಂಡಿಯ ನೀರು ಜನವಸತಿ ಪ್ರದೇಶಗಳಿಗೆ ಹರಿದು ಹೋಗಿ ಅನಾರೋಗ್ಯಕರವಾದ ವಾತಾವರಣ ಸೃಷ್ಟಿಸಿದ್ದಾರೆ.

ಕಟ್ಟಡ ನಿರ್ಮಾಣದ ವೇಳೆ ಯುಜಿಡಿಗೆ ಸಂಬಂಧಿಸಿದ ಷರತ್ತುಗಳನ್ನು ಪಾಲನೆ ಮಾಡಲು ಒತ್ತಾಯಿಸದೆ ನಿರ್ಲಕ್ಷತನ ತೋರಿದ ಪರಿಣಾಮ ನದಿಗಳ ಹಾಗೂ ತೋಡುಗಳ ಮಾಲಿನ್ಯತೆ ಹೆಚ್ಚಲು ಕಾರಣವಾಗಿದೆ. ಇವೆಲ್ಲದರ ಬಗ್ಗೆ ಸಮಗ್ರ ವರದಿಯನ್ನು ಲೋಕಾಯುಕ್ತ ಕೇಂದ್ರ ಕಚೇರಿಗೆ ಸಲ್ಲಿಸಲಾಗುವುದು ಎಂದು ಲೋಕಾಯುಕ್ತ ಪೊಲೀಸ್ ಪ್ರಭಾರ ಅಧೀಕ್ಷಕ ಕುಮಾರಚಂದ್ರ ತಿಳಿಸಿದ್ದಾರೆ.

ಪಡೀಲ್ ಅಮೃತ ಕಾಲೇಜ್ ಸಹಯೋಗದಲ್ಲಿ ತುಳು ನಾಟಕ ಕಾರ್ಯಾಗಾರ: ತಮ್ಮ ಲಕ್ಷ್ಮಣ ಉದ್ಘಾಟನೆ

ಸ್ಟೂಡೆಂಟ್ಸ್‌ಗೆ ನಾಟಕದ ಅಭಿರುಚಿ ಬೆಳೆಸಿ



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ಪಡೀಲ್ ಅಮೃತ ಕಾಲೇಜ್ ಸಹಯೋಗದಲ್ಲಿ ಆಯೋಜಿಸಲಾದ ತುಳು ನಾಟಕ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು.

ಮಂಗಳೂರು: ತುಳು ನಾಟಕ ಪರಂಪರೆಯಲ್ಲಿ ಶಿಕ್ಷಕರ ಹಾಗೂ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ತರವಾಗಿತ್ತು ಎಂದು ಹಿರಿಯ ನಿರ್ದೇಶಕ ತಮ್ಮ ಲಕ್ಷ್ಮಣ ಅವರು ಹೇಳಿದರು.

ಅವರು ಮಂಗಳವಾರದಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ಪಡೀಲ್ ಅಮೃತ ಕಾಲೇಜ್ ಸಹಯೋಗದಲ್ಲಿ ಆಯೋಜಿಸಲಾದ ತುಳು ನಾಟಕ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಶತಮಾನಗಳ ಹಿಂದೆಯೇ ಪಂಜೆ ಮಂಗೇಶರಾಯರ ಕಾರಣದಿಂದಾಗಿ ಶಾಲೆಗಳಲ್ಲಿ ನಾಟಕ ಆರಂಭವಾಗಿತ್ತು ಎಂಬ ವಿಚಾರವನ್ನು ತಮ್ಮ ಲಕ್ಷಣ ಅವರು ಈ ಸಂದರ್ಭದಲ್ಲಿ ನೆನಪಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಹಿರಿಯ ರಂಗನಟ ಪ್ರಭಾಕರ ಕಾಪಿಕಾಡ್ ಮಾತನಾಡಿ, ನಾಟಕದ ಮೂಲಕ ಸ್ನೇಹ, ಪ್ರೀತಿ, ಸಾಮರಸ್ಯವನ್ನು ಮೂಡಿಸಬೇಕು ಎಂದು ಹೇಳಿದರು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಿದ್ದರು. ಅಮೃತ ಕಾಲೇಜ್ ಪ್ರಿನ್ಸಿಪಾಲ್ ಡಾ.ಚಂದ್ರಹಾಸ ಕಣ್ವತೀರ್ಥ ಶುಭಕೋರಿ ಮಾತನಾಡಿದರು.

ವಿದ್ಯಾರ್ಥಿಗಳು ತುಳು ನಾಟಕದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು ಹಾಗೂ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಬೇಕು, ಶಾಲೆಯಿಂದಲೇ ತುಳು ನಾಟಕಗಳ ಬೆಳವಣಿಗೆ ಆರಂಭಗೊಂಡಿತು ಹಾಗೂ ವೃತ್ತಿಪರವಾಗಿ ಬೆಳವಣಿಗೆ ಹೊಂದಿದೆ. ಅದನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಯುವ ಪೀಳಿಗೆ ಮೇಲಿದೆ.

- ತಮ್ಮ ಲಕ್ಷ್ಮಣ, ನಿರ್ದೇಶಕ

ಹತ್ತು ದಿನಗಳ ನಾಟಕ ಕಾರ್ಯಗಾರದ ಮೂಲಕ ಹೊಸ ತುಳು ನಾಟಕವನ್ನು ಪ್ರಸ್ತುತಪಡಿಸಲಾಗುವುದು ಎಂದು ಶಿಬಿರದ ನಿರ್ದೇಶಕ ಜಗನ್ ಪವರ್ ಬೇಕಲ್ ಅವರು ತಿಳಿಸಿದರು. ಅಕಾಡೆಮಿ ಸದಸ್ಯೆ ಅಕ್ಷಯ ಆರ್. ಶೆಟ್ಟಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಪೆಟ್ ಶಾಪ್ ನೋಂದಣಿ ಕಡ್ಡಾಯ: ಜಿಲ್ಲಾಧಿಕಾರಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಪ್ರಾಣಿ ದಯಾ ಸಂಘದ ಸಭೆ ಮಂಗಳವಾರ ಜಿಲ್ಲಾಧಿಕಾರಿ ದರ್ಶನ್ ಎಚ್ ವಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆಯಿತು.

ಜಿಲ್ಲಾಧಿಕಾರಿಗಳು ಮಾತನಾಡಿ, ಪ್ರಾಣಿ ಹಿಂಸೆ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುದ್ದು ಪ್ರಾಣಿಗಳ ಮಾರಾಟ ಮಳಿಗೆ ಕಡ್ಡಾಯವಾಗಿ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವಿಕೆ ಸೊಸೈಟಿ ಯಲ್ಲಿ ಕಡ್ಡಾಯವಾಗಿ ನೋಂದಾವಣೆ ಮಾಡಿಕೊಳ್ಳಬೇಕು. ಎಸ್.ಪಿ.ಸಿ.ಎ ನೋಂದಣಿ ಪಡೆಯದೆ ಕಾರ್ಯ ನಿರ್ವಹಿಸುತ್ತಿರುವ ಪೆಟ್ ಶಾಪ್‌ಗಳ ಮಾಲೀಕರಿಗೆ ಕಾಲಮಿತಿ ನಿಗದಿಪಡಿಸಿ, ನಿಗದಿತ ಕಾಲಮಿತಿಯೊಳಗೆ ನೋಂದಣಿ ಪಡೆಯದ ಮಾಲೀಕರ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಅವರು ಅಧಿಕಾರಿಗಳಿಗೆ ಸೂಚಿಸಿದರು. ಪ್ರಾಣಿಗಳ ರಕ್ಷಣೆ ಒಂದು ಮಹತ್ವದ ಕಾರ್ಯವಾಗಿದ್ದು, ಜಿಲ್ಲೆಯಲ್ಲಿ ಪ್ರಾಣಿಗಳ ಮೇಲಾಗುವ ದೌರ್ಜನ್ಯವನ್ನು ತಡೆಗಟ್ಟಿ ಅವುಗಳನ್ನು ರಕ್ಷಿಸಬೇಕು. ಪ್ರಾಣಿಗಳ ಮೇಲೆ ಕ್ರೌರ್ಯ ನಡೆಸುವುದು ಕಂಡು ಬಂದರೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.

ಜಿಲ್ಲೆಯ ವ್ಯಾಪ್ತಿಯಲ್ಲಿರುವ ನಿರಾಶ್ರಿತ ಪ್ರಾಣಿಗಳಿಗೆ ಅಗತ್ಯ ಶುಶ್ರೂಷೆ ಕೊಡುವ ನಿಟ್ಟಿನಲ್ಲಿ ಮಂಗಳೂರು ತಾಲೂಕಿನ ಬೊಂಡಂತಿಲ ಗ್ರಾಮದಲ್ಲಿ ಪ್ರಾಣಿ ಮಿತ್ರ ಆಸ್ಪತ್ರೆ ತೆರೆಯುವ ಯೋಜನೆ ಅನುಷ್ಠಾನದ ಕುರಿತು ಹಾಗೂ ರಸ್ತೆ ಅಪಘಾತಗಳಲ್ಲಿ ಇತರೆ ಕಾರಣಗಳಿಂದ ಸತ್ತ ಪ್ರಾಣಿಗಳನ್ನು ಯಾರೂ ಸಹ ಮುಟ್ಟುವುದಿಲ್ಲ. ಸಭೆಯಲ್ಲಿ ಜಿಲ್ಲಾ ಎಸ್ ಪಿ ಡಾ.ಅರುಣ್ ಕೆ, ಎಸಿಪಿ ಗೀತಾ ಕುಲಕರ್ಣಿ, ಮಹಾನಗರಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಸಮಿತಿಯ ಸದಸ್ಯೆ ಸುಮ ಆರ್ ನಾಯಕ್ ಉಪಸ್ಥಿತರಿದ್ದರು.

ಪಶು ವೈದ್ಯರ ನೇಮಕಕ್ಕೆ ಕ್ರಮ ವಹಿಸಿ

ಚಿತ್ರದುರ್ಗ: ಜಿಲ್ಲೆಯಲ್ಲಿ ಖಾಲಿ ಇರುವ ಪಶು ವೈದ್ಯರ ನೇಮಕಕ್ಕೆ ಅಗತ್ಯ ಕ್ರಮವಹಿಸಬೇಕು. ಪಶು ವೈದ್ಯಾಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದಂತೆ ಸರಕಾರಕ್ಕೆ ಪ್ರಸ್ತಾವ ಸಲ್ಲಿಸಿ ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಎನ್.ಆರ್. ಮಹೇಶ್ವರಪ್ಪ ಪಶು ಇಲಾಖೆ ಉಪನಿರ್ದೇಶಕರಿಗೆ ಸೂಚನೆ ನೀಡಿದರು. ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ರೈತರು ಜಾನುವಾರುಗಳ ಮೇಲೆ ಸಾಕಷ್ಟು ಅವಲಂಬಿತರಾಗಿದ್ದಾರೆ. ಪಶು ವೈದ್ಯರ ಕೊರತೆಯಿಂದಾಗಿ ಜಾನುವಾರುಗಳು ವಿವಿಧ ರೋಗಗಳಿಗೆ ತುತ್ತಾಗಿ ಸಾವಿಗೀಡಾಗುತ್ತಿವೆ. ಈ ನಿಟ್ಟನಲ್ಲಿ ಜಿಲ್ಲೆಯಲ್ಲಿ ಖಾಲಿ ಇರುವ ಪಶು ವೈದ್ಯರ ನೇಮಕಕ್ಕೆ ಸಂಬಂಧಿಸಿದಂತೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಪ್ರಸ್ತಾವ ಸಲ್ಲಿಸಿ ಎಂದು ಹೇಳಿದರು. ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ಕಾಣಿಸಿಕೊಳ್ಳುವ ಕೀಟಬಾಧೆ, ರೋಗಗಳ ನಿರ್ವಹಣೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ರೈತರಿಗೆ ತರಬೇತಿ ಶಿಬಿರಗಳನ್ನು ಆಯೋಜಿಸುವ ಮೂಲಕ ರೋಗ ನಿರ್ವಹಣೆ ಕುರಿತು ರೈತರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು. ಜಿಲ್ಲಾ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿ ಹಾಗೂ ಜಂಟಿ ಕೃಷಿ ನಿರ್ದೇಶಕ ಬಿ.ಮಂಜುನಾಥ್ ಮಾತನಾಡಿ, ಜಿಲ್ಲೆಯಲ್ಲಿ ಶೇ.93ರಷ್ಟು ರೈತರು ಬೋರ್‌ವೆಲ್ ಆಧಾರಿತ ಕೃಷಿಯನ್ನು ಅವಲಂಬಿಸಿದ್ದು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳ ಸಲಹೆ-ಸೂಚನೆಗಳು ರೈತರಿಗೆ ಅಗತ್ಯವಾಗಿದೆ ಎಂದು ಹೇಳಿದರು.

ಕುಡಿಯುವ ನೀರಿನಲ್ಲಿ ರಾಜಕೀಯ ಬೇಡ

ಚಿತ್ರದುರ್ಗ: ಜಿಲ್ಲೆಯ ನೀರಾವರಿ ಹಾಗೂ ಕುಡಿವ ನೀರಿನ ಯೋಜನೆ ಜಾರಿ ವಿಚಾರದಲ್ಲಿ ನೆರೆಯ ದಾವಣಗರೆ ಜಿಲ್ಲೆ ಸದಾ ಒಂದಿಲ್ಲೊಂದು ಕ್ಯಾತೆ ತೆಗೆಯುತ್ತಿದೆ.ಈ ವಿಚಾರದಲ್ಲಿ ರಾಜಕೀಯ ಮಾಡುವುದು ಬೇಡವೆಂದು ಜಿಲ್ಲಾ ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಸಲಹೆ ಮಾಡಿದೆ. ಇಲ್ಲಿನ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಕಾರ್ಯಾಧ್ಯಕ್ಷ ಬಿ.ಎ.ಲಿಂಗಾರೆಡ್ಡಿ, ಜಿಲ್ಲೆಯ ಹೊಸದುರ್ಗ,ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ, ಅಜ್ಜಂಪುರ ಪ್ರದೇಶದ ಸುಮಾರು 518 ಗ್ರಾಮಗಳಿಗೆ ಕುಡಿವ ನೀರು ಪೂರೈಕೆ ಮಾಡಲು 830 ಕೋಟಿ ರು ವೆಚ್ಚದ ಯೋಜನೆ ರೂಪಿಸಲಾಗಿದೆ. ಯೋಜನೆಯಡಿ ಹೊಸದುರ್ಗ ಪಟ್ಟಣ ಸೇರಿದಂತೆ ತಾಲೂಕಿನ 346 ಹಳ್ಳಿಗಳಿಗೆ ಕುಡಿವ ನೀರು ಪೂರೈಕೆ ಮಾಡುವ ಉದ್ದೇಶ ಹೊಂದಲಾಗಿದೆ. ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು ನೀರು ಪೂರೈಕೆಗೆ ಟ್ರಯಲ್ ಮಾಡುವಾಗ ದಾವಣಗೆರೆ ಜಿಲ್ಲೆ ರೈತರು ಆಕ್ಷೇಪ ವ್ಯಕ್ತಪಡಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು., ಹೋರಾಟಗಾರರ ಸಭೆ ಕರೆಲಾಗಿದೆ. ಸಭೆಯಲ್ಲಿ ಮುಂದಿನ ಹೋರಾಟ ಕುರಿತು ನಿರ್ಣಯಕೈಗೊಳ್ಳಲಾಗುವುದೆಂದು ಹೇಳಿದರು.

ಸರ್ವೋದಯ ಕರ್ನಾಟಕದ ಮುಖಂಡ ಜೆ.ಯಾದವರೆಡ್ಡಿ, ರೈತ ಸಂಘದ ರಾಜ್ಯ ಉಪಾಧ್ಯಕ್ಷರುಗಳಾದ ಕೆ.ಪಿ.ಭೂತಯ್ಯ, ಕೆ.ಸಿ.ಹೊರಕೇರಪ್ಪ, ರೈತ ಸಂಘದ ಜಿಲ್ಲಾಧ್ಯಕ್ಷ ಹಂಪಯ್ಯನಮಾಳಿಗೆ ಧನಂಜಯ, ಬಸ್ತಿಹಳ್ಳಿ ಸುರೇಶ್ ಬಾಬು, ಚಿಕ್ಕಪ್ಪನಹಳ್ಳಿ ರುದ್ರಸ್ವಾಮಿ, ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ. ಆರ್.ದಯಾನಂದ, ಸಂಚಾಲಕ ಚಿಕ್ಕಪ್ಪನಹಳ್ಳಿ ಷಣ್ಮುಖ ಇದ್ದರು.

ಕೇಂದ್ರ ಸರಕಾರದ ಕ್ರಮಕ್ಕೆ ಖಂಡನೆ

ಶಿವಮೊಗ್ಗ: ಅಚ್ಚೆದಿನ್ ಆಯೇಗಾ ಎಂದು ಹೇಳಿಕೊಂಡೇ ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಹಿಡಿದ ಬಿಜೆಪಿ ಆರಂಭದಿಂದಲೂ ಜನಸಾಮಾನ್ಯರ ಮೇಲೆ ಗದಾ ಪ್ರಹಾರ ಮಾಡುತ್ತಲೇ ಬಂದಿದ್ದು, ಇದೀಗ ರೈತರ ಬೆಳೆಗಳಿಗೆ ವಿತರಿಸುವ ರಾಸಾಯನಿಕ ರಸಗೊಬ್ಬರಗಳ ಬೆಲೆಯನ್ನು ಹೆಚ್ಚಳ ಮಾಡಿದ್ದು, ಇದನ್ನು ಯುವ ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ. ಕೇಂದ್ರ ಬಿಜೆಪಿ ಸರಕಾರ ಒಂದೆಡೆ ರೈತರಿಗೆ ಕಿಸಾನ್ ಸಮ್ಮಾನ್ ಎಂದು ವರ್ಷಕ್ಕೆ 4 ಸಾವಿರ ರೂ.ಗಳನ್ನು ನೀಡಿ, ಹಿಂಬಾಗಿಲಿನಿಂದ ಗೊಬ್ಬರ, ಔಷಧಿ, ಬಿತ್ತನೆ ಬೀಜಗಳ ಬೆಲೆ ಏರಿಕೆ ಮಾಡುವ ಮೂಲಕ ಅದಕ್ಕಿಂತ ದುಪ್ಪಟ್ಟು ಹಣವನ್ನು ರೈತರಿಂದ ವಸೂಲು ಮಾಡುತ್ತಿದೆ. ಮಳೆಯ ಅನಿಶ್ಚಿತತೆ, ಅತಿವೃಷ್ಟಿ, ಅನಾವೃಷ್ಟಿಗಳಿಂದಾಗಿ ರೈತರು ಸಂಕಷ್ಟದಲ್ಲಿದ್ದಾರೆ, ಬೆಳೆಹಾನಿ ಮುಂತಾದ ಕಾರಣಗಳಿಗೆ ರೈತರ ಆತ್ಮಹತ್ಯೆಗಳೂ ನಡೆಯುತ್ತಿವೆ. ಇದರ ಮಧ್ಯೆ ಕೇಂದ್ರದ ಬಿಜೆಪಿ ಸರ್ಕಾರ ಏಕಾಏಕಿ ಅವೈಜ್ಞಾನಿಕವಾಗಿ ರಸಗೊಬ್ಬರಗಳ ಬೆಲೆ ಏರಿಕೆ ಮಾಡಿದರೆ, ಮೊದಲೇ ಸಂಕಷ್ಟದಲ್ಲಿರುವ ರೈತರು ಮತ್ತಷ್ಟು ಸಂಕಷ್ಟಕ್ಕೊಳಗಾಗಲಿದ್ದಾರೆ.

ಯುವ ಕಾರ್ಯಕರ್ತರ ಕೈಯಲ್ಲಿ ಕಾಂಗ್ರೆಸ್ ಭವಿಷ್ಯ

ಶಿವಮೊಗ್ಗ: ಯುವ ಕಾಂಗ್ರೆಸ್ ಕಾರ್ಯಕರ್ತರ ಕೈಯಲ್ಲಿ ಕಾಂಗ್ರೆಸ್ ಪಕ್ಷದ ಭವಿಷ್ಯವಿದೆ ಎಂದು ಭಾರತೀಯ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಗಮ್ ಭಂಡಾರಿ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಹಮ್ಮಿಕೊಂಡಿದ್ದ ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಾಂಗ್ರೆಸ್ ರಾಷ್ಟ್ರೀಯ ಮುಖಂಡ ರಾಹುಲ್ ಗಾಂಧಿಯವರ ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜನತೆಗೆ ನೀಡಿದ ಭರವಸೆ ಮತ್ತು ಪ್ರನಾಳಿಕೆಯಲ್ಲಿ ನೀಡಿದ ಆಶ್ವಾಸನೆಯ ಮೂಲಕ ಕಾಂಗ್ರೆಸ್ ನಿಚ್ಚಳ ಗೆಲುವನ್ನು ಸಾಧಿಸಲು ಸಹಕಾರಿಯಾದರೂ ಯುವ ಕಾಂಗ್ರೆಸ್ ಕಾರ್ಯಕರ್ತರ ಯೋಗದಾನವೂ ಅಷ್ಟೇ ಇದೆ ಎಂದ ಅವರು, ಬಡವರ ಕಲ್ಯಾಣಕ್ಕಾಗಿ ಯುವ ಕಾಂಗ್ರೆಸ್ ಕಾರ್ಯಕರ್ತರು ಸನ್ನದ್ಧರಾಗಬೇಕೆಂದು ಕರೆ ನೀಡಿದರು.


ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಹಮ್ಮಿಕೊಂಡಿದ್ದ ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯನ್ನು ಗಣ್ಯರು ಉದ್ಘಾಟಿಸಿದರು.

ಸ್ವಪ್ರಯತ್ನ ಇಲ್ಲದಿದ್ದರೆ ಉನ್ನತ ಸ್ಥಾನಕ್ಕೇರುವುದು ಕಷ್ಟಸಾಧ್ಯ. ಯುವ ಕಾಂಗ್ರೆಸ್ ಕಾರ್ಯಕರ್ತರಾಗಿ ಕೆಲಸ ಮಾಡಿದವರು ಅನೇಕರು ಉನ್ನತ ಸ್ಥಾನಕ್ಕೇರಿದ್ದಾರೆ. ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಎಂಎಲ್‌ಎ., ಎಂಎಲ್‌ಸಿ, ಮಂತ್ರಿ ಆಗುವುದು ಬಹಳ ಸುಲಭ. ಆದರೆ ನೇತಾರನಾಗುವುದು ಕಷ್ಟದ ಕೆಲಸ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಬಲ್ಕೀಶ್‌ಬಾನು, ಮಂಜುನಾಥ್ ಭಂಡಾರಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎನ್. ರಮೇಶ್, ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಹೆಚ್. ಎಸ್. ಮಂಜುನಾಥ ಗೌಡ, ರಾಜ್ಯ ಉಪಾಧ್ಯಕ್ಷ ದಿವ್ಯಾ, ಪ್ರಮುಖರಾದ ವಿಜಯಕುಮಾರ್(ದನಿ), ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗಿರೀಶ್, ಮಧುಸೂದನ, ಶಿವಣ್ಣ, ಹರ್ಷಿತ್ ಗೌಡ, ಅಕ್ಷಯ್ ಪಾಟೀಲ್, ಅಭಿಷೇಕ, ಜಿಲ್ಲಾ ಉಪಾಧ್ಯಕ್ಷ ಗಿರೀಶ್, ಚೇತನ್‌ಗೌಡ, ವಿಜಯಲಕ್ಷ್ಮೀ ಪಾಟೀಲ್ ಮೊದಲಾದವರಿದ್ದರು.

ಮುಂದಿನ ದಿನಗಳಲ್ಲಿ ಬೆಳೆಯಲು ಅವಕಾಶ ಇರುವ ವೇದಿಕೆ ಯುವ ಕಾಂಗ್ರೆಸ್ ಆಗಿದೆ. ದಿವಂಗತ ಪ್ರಧಾನಿ ರಾಜೀವ್‌ಗಾಂಧಿಯವರು ಪ್ರಜಾ ಪ್ರಭುತ್ವವನ್ನು ಮತ್ತಷ್ಟು ಬಲಪಡಿಸಲು 18 ವರ್ಷಕ್ಕೆ ಮತದಾನ ಮಾಡುವ ಅಧಿಕಾರವನ್ನು ನೀಡಿದರು. ನಿಮ್ಮ ನಿಮ್ಮ ವಾರ್ಡ್‌ಗಳಲ್ಲಿ ನಿಷ್ಠೆಯಿಂದ ಪಕ್ಷಕ್ಕಾಗಿ ದುಡಿಯುವುದರ ಮೂಲಕ ನಿಮ್ಮ ಅಸ್ತಿತ್ವವನ್ನು ಬೆಳೆಸಿಕೊಳ್ಳಬೇಕು.

-ಆರ್. ಪ್ರಸನ್ನಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

ಕರಿಯಪ್ಪ ಹೆಗ್ಗಡದಿನ್ನಿ

ಗ್ಯಾಸ್ ಗೀಸರ್ ಜೀವಕೆ ತಂದೀತು ಆಪತ್ತು!?

ಮಧ್ಯಪ್ರದೇಶದ ಭೋಪಾಲ್ ಅನಿಲ ದುರಂತ ಕೈಗಾರಿಕಾ ಇತಿಹಾಸದಲ್ಲಿ ಮರೆಯಲಾಗದ ದುರ್ಘಟನೆ. ಭೋಪಾಲ್ ಹೊರವಲಯದ ಕೀಟ ನಾಶಕ ಕಾರ್ಖಾನೆಯ ಬಾಯ್ಲರ್‌ಗಳಿಂದ ವಿಷಕಾರಿ ಅನಿಲ ಮಿಥೈಲ್ ಐಸೋಸೈನೆಡ್ ಸೋರಿಕೆಯಾಗಿ 25 ಸಾವಿರಕ್ಕೂ ಹೆಚ್ಚು ಜನ ಮೃತಪಟ್ಟು, 5 ಲಕ್ಷಕ್ಕೂ ಹೆಚ್ಚು ಮಂದಿ ಅಂಗವಿಕಲರಾಗಿದ್ದು ಕರಾಳ ಇತಿಹಾಸ. ಬಿಸಿ ನೀರಿಗಾಗಿ ಗ್ಯಾಸ್ ಗೀಸರ್ ಬಳುಸುತೀರಾ? ನಮ್ಮ ಮನೆಯನ್ನು ವಿಷಕಾರಿ ಅನಿಲಗಳು ಹೊಕ್ಕಿರುತ್ತವೆ ಅವಘಡಕ್ಕೂ ಮುನ್ನ ತುಸು ಜೋಪಾನ.

ಎಲೆಕ್ಟ್ರಿಕ್ ಗೀಸರ್-ಗ್ಯಾಸ್ ಗೀಸರ್ ವ್ಯತ್ಯಾಸ

ಲಕ್ಷಣ	ಎಲೆಕ್ಟ್ರಿಕ್ ಗೀಸರ್	ಗ್ಯಾಸ್ ಗೀಸರ್
ಉತ್ಪನ್ನದ ಖರ್ಚು	ದುಬಾರಿ	ಅಗ್ಗ
ಭದ್ರತೆ	ತುಂಬಾ ಸುರಕ್ಷಿತ	ಹೆಚ್ಚು ಸುರಕ್ಷಿತವಲ್ಲ
ಇಂಧನ	ವಿದ್ಯುತ್	ಎಲ್‌ಪಿಜಿ (ಗ್ಯಾಸು)
ಮಾಲಿನ್ಯ	ಪರಿಸರಸ್ನೇಹಿ	ಮಾಲಿನ್ಯ ಕಾರಕ

★ಸರಿಯಾದ ಕ್ರಮದಲ್ಲಿ ಅಳವಡಿಕೆ ಹಾಗೂ ಸರಿಯಾಗಿ ನಿರ್ವಹಣೆ ಮಾಡದಿದ್ದರೇ ಗ್ಯಾಸ್ ಗೀಸರ್‌ನಿಂದ ಕಾರ್ಬನ್ ಮೋನಾಕ್ಸೈಡ್, ಟಾಕ್ಸಿಕ್ ಆಸಿಡ್ ಸೋರಿಕೆ ಆಗುತ್ತದೆ. ಇವು ಮನುಷ್ಯನ ಜೀವಕ್ಕೆ ಹಾನಿಕಾರಕ.

ಭಾವಿ ದಂಪತಿ ಬಾಳಲ್ಲಿ ವಿಧಿಯಾಟ

ಅವರಿಬ್ಬರೂ ಕೈ ತುಂಬ ಸಂಬಳ ಬರುವ ಉನ್ನತ ದರ್ಜೆಯ ಹುದ್ದೆಯಲ್ಲಿದ್ದರು. ಒಂದೇ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರಿಗೂ ಪ್ರೇಮಾಂಕುರ. ಬೆಂಗಳೂರಿನ ವಿಲ್ಲಾದಲ್ಲಿ ಇಬ್ಬರು ಸಹ ಜೀವನ ನಡೆಸುತ್ತಿದ್ದರು. ಮದುವೆಗೆ 2 ಕುಟುಂಬಗಳ ಮುದ್ರೆ ಬಿದ್ದಿತ್ತು. ನಿಶ್ಚಿತಾರ್ಥ ಕೂಡ ಮಾಡಿ ಕೊಂಡು ಮದುವೆ ದಿನಗಣನೆಯಲ್ಲಿದ್ದ ಜೋಡಿ ಹಕ್ಕಿಗಳಿಗೆ ಗ್ಯಾಸ್ ಗೀಸರ್ ಮುಳ್ಳಾಯ್ತು. ಆಫೀಸ್‌ನಲ್ಲಿ ದುಡಿದು ದಣಿದು ಬಂದಿದ್ದ ಜೋಡಿ ಬಿಸಿ ನೀರಿನಲ್ಲಿ ಒಟ್ಟಿಗೆ ಸ್ನಾನ ಮಾಡುತ್ತಿದ್ದರು. ಆ ವೇಳೆ ಗ್ಯಾಸ್ ಗೀಸರ್‌ನಿಂದ ವಿಷ ಅನಿಲ ಕಾರ್ಬನ್ ಮೊನಾಕ್ಸೈಡ್ ಸೋರಿಕೆಯಾಗಿ ಸ್ಥಳದಲ್ಲೇ ಉಸಿರುಗಟ್ಟಿ ಇಬ್ಬರು ಸಾವನ್ನಪ್ಪಿದ್ರು. ಗುಂಡ್ಲುಪೇಟೆ ತಾಲೂಕಿನ ಚಂದ್ರಶೇಖರ್ (30), ಗೋಕಾಕ ತಾಲೂಕಿನ ಸುಧಾರಾಣಿ (22) ಮೃತರು. ಗ್ಯಾಸ್ ಗೀಸರ್ ದುರಂತದಲ್ಲಿ ಸಾವನ್ನಪ್ಪಿದವರ ಪಟ್ಟಿ ದೊಡ್ಡದಿದೆ. ಇದು ಒಂದು ಉದಾಹರಣೆ ಅಷ್ಟೆ. ಗ್ಯಾಸ್ ಹಾಗೂ ಎಲೆಕ್ಟ್ರಿಕ್ ಗೀಸರ್‌ಗಳಲ್ಲಿ ಯಾವುದು ಹೆಚ್ಚು ಸುರಕ್ಷಿತ ಎನ್ನುವುದೇ ಲೇಖನದ ಉದ್ದೇಶ.

ಗ್ಯಾಸ್ ಗೀಜರ್ ಎಷ್ಟು ಸುರಕ್ಷಿತ?

ಬಿಸಿ ನೀರ ಸ್ನಾನಕ್ಕೆ ಈಗ ಹಂಡೆ ನೀರು ಕಾಯಿಸಬೇಕಿಲ್ಲ. ನಲ್ಲಿ ತಿರುಗಿಸಿದ ಕ್ಷಣವೇ ಬಿಸಿ ನೀರು ಬರುವ ಅತ್ಯಾಧುನಿಕ ವ್ಯವಸ್ಥೆಗಳಿವೆ. ಸೋಲಾರ್, ಎಲೆಕ್ಟ್ರಿಕ್ ಗೀಜರ್, ಗ್ಯಾಸ್ ಗೀಜರ್ ಮತ್ತು ಸೌರ ಒಲೆಗಳ ಮೂಲಕ ಈಗ ಬಿಸಿ ನೀರು ಸೌಕರ್ಯ ತುಂಬಾ ಸುಲಭವಾಗಿದೆ. ಆದರೆ ಗ್ಯಾಸ್ ಗೀಜರ್ ಮತ್ತು ಎಲೆಕ್ಟ್ರಿಕ್ ಬಳಕೆ ವೇಳೆ ಎಚ್ಚರಿಕೆ ಅಗತ್ಯ. ಅದರಲ್ಲೂ ಗ್ಯಾಸ್ ಗೀಸರ್ ಬಳಕೆ ವೇಳೆ ಅತ್ಯಂತ ಹೆಚ್ಚಿನ ಎಚ್ಚರಿಕೆ ಅತ್ಯಗತ್ಯ. ಗ್ಯಾಸ್ ಗೀಜರ್‌ನಿಂಗ ಹೊರಟ ಕಾರ್ಬನ್ ಮೋನಾಕ್ಸೈಡ್ ಸೇವಿಸಿ ಮೃತಪಟ್ಟ ಘಟನೆಗಳು ಆಗಾಗ ವರದಿಯಾಗುತ್ತಲೇ ಇವೆ. ಇತ್ತೀಚಿನ ಸಂಶೋಧನಾ ವರದಿಗಳನ್ನು ಗಮನಿಸಿದರೆ ನಿತ್ಯವೂ ಗ್ಯಾಸ್ ಗೀಜರ್ ಮೂಲಕ ಸ್ನಾನ ಮಾಡಿದವರಿಗೆ ದೀರ್ಘಾವಧಿಯಲ್ಲಿ ಅನೇಕ ಆರೋಗ್ಯ ಸಮಸ್ಯೆಗಳು ಬರುವ ಸಾಧ್ಯತೆ ಇದೆ.

ಗ್ಯಾಸ್ ಗೀಜರ್ ಅಪಾಯಗಳು

ವಿಷಕಾರಿ ಕಾರ್ಬನ್ ಮೊನಾಕ್ಸೈಡ್ ಹೊರ ಸೂಸುವಿಕೆ ಗ್ಯಾಸ್ ಗೀಸರ್‌ಗಳ ಅತ್ಯಂತ ಗಂಭೀರ ಅಪಾಯ. ಎಲ್‌ಪಿಜಿ ಸಂಪೂರ್ಣವಾಗಿ ಉರಿಯದಿದ್ದಾಗ ಕಾರ್ಬನ್ ಮೊನಾಕ್ಸೈಡ್ ಉತ್ಪತ್ತಿಯಾಗುತ್ತದೆ. ಇದು ಬಣ್ಣರಹಿತ, ವಾಸನಾರಹಿತ ಮತ್ತು ರುಚಿರಹಿತ

ಇನ್‌ಸ್ಟಂಟ್ ಎಲೆಕ್ಟ್ರಿಕ್ ಗೀಸರ್.

ಅನಿಲವಾಗಿದ್ದು, ಇದನ್ನು ಪತ್ತೆಹಚ್ಚುವುದು ಕಷ್ಟ. ಕಳಪೆ ಗಾಳಿ ವ್ಯವಸ್ಥೆ ಇರುವ ಸ್ಥಳಗಳಲ್ಲಿ (ವಿಶೇಷವಾಗಿ ಸ್ನಾನ ಗೃಹಗಳಲ್ಲಿ) ಇದು ಸಂಗ್ರಹಗೊಂಡು, ಉಸಿರಾಡಿದರೆ ದೇಹದಲ್ಲಿ ಆಮ್ಲಜನಕದ ಕೊರತೆಗೆ ಕಾರಣವಾಗುತ್ತದೆ. ತಲೆನೋವು, ತಲೆತಿರುಗುವಿಕೆ, ವಾಕರಿಕೆ, ವಾಂತಿ,

ಪರೀಕ್ಷಾ ವಿಧಾನ

ರಕ್ತ ಪರೀಕ್ಷೆ, ಇಸಿಜಿ, ಇಇಜಿ, ಎಂಆರ್‌ಐ, ಸಿಟಿ ಸ್ಕ್ಯಾನಿಂಗ್ ಮೂಲಕ ಕಾರ್ಬನ್ ಮೋನಾಕ್ಸೈಡ್ ಸೇವನೆ ಪತ್ತೆ ಹಚ್ಚಲಾಗುತ್ತದೆ.

ದೌರ್ಬಲ್ಯ, ಗೊಂದಲ ಮತ್ತು ಪ್ರಜ್ಞೆ ಕಳೆದುಕೊಳ್ಳುವುದು ಇದರ ಲಕ್ಷಣಗಳು. ಇದು ತೀವ್ರತರವಾದರೆ ಮೆದುಳಿಗೆ ಹಾನಿ, ಹೃದಯಕ್ಕೆ ಹಾನಿಯಾಗಿ ಸಾವಿಗೂ ಕಾರಣವಾಗಬಹುದು.

ಸೋರಿಕೆ ಮತ್ತು ಸ್ಫೋಟ: ಗ್ಯಾಸ್ ಗೀಸರ್ ಪೈಪ್‌ಗಳು ಅಥವಾ ಕನೆಕ್ಷನ್‌ಗಳಲ್ಲಿ ಸೋರಿಕೆಯಾಗಬಹುದು. ಗ್ಯಾಸ್ ಸೋರಿಕೆಯಾದಾಗ, ಆ ಪ್ರದೇಶದಲ್ಲಿ ಗ್ಯಾಸ್ ಸಂಗ್ರಹವಾಗಿ ಸಣ್ಣ ಸ್ಪಾರ್ಕ್‌ನಿಂದಲೂ ಸ್ಫೋಟಕ್ಕೆ ಕಾರಣವಾಗಬಹುದು. ಇದು ಬೆಂಕಿ ಮತ್ತು ಗಂಭೀರ ಹಾನಿಯನ್ನುಂಟುಮಾಡಬಹುದು..

ಸೋರಿಕೆ ಮತ್ತು ಸ್ಫೋಟ

ಗ್ಯಾಸ್ ಗೀಸರ್ ಪೈಪ್‌ಗಳು ಅಥವಾ ಕನೆಕ್ಷನ್‌ಗಳಲ್ಲಿ ಸೋರಿಕೆಯಾಗಬಹುದು. ಗ್ಯಾಸ್ ಸೋರಿಕೆಯಾದಾಗ, ಆ ಪ್ರದೇಶದಲ್ಲಿ ಗ್ಯಾಸ್ ಸಂಗ್ರಹವಾಗಿ ಸಣ್ಣ ಸ್ಪಾರ್ಕ್ ನಿಂದಲೂ ಸ್ಫೋಟಕ್ಕೆ ಕಾರಣವಾಗಬಹುದು. ಇದು ಬೆಂಕಿ ಮತ್ತು ಗಂಭೀರ ಹಾನಿಯನ್ನುಂಟು ಮಾಡಬಹುದು.

ಚಿಕಿತ್ಸಾ ವಿಧಾನ

ಕಾರ್ಬನ್ ಮೋನಾಕ್ಸೈಡ್ ಸೇವನೆ ಮಾಡಿದ ವ್ಯಕ್ತಿಗಳಿಗೆ ಹಾಕ್ಸಿಜನ್ ತೆರಪಿ ಮೂಲಕ ಚಿಕಿತ್ಸೆ ನೀಡಲಾಗುತ್ತದೆ.

ಆಮ್ಲಜನಕದ ಕೊರತೆ

(ಅಸ್ಫಿಕ್ಸಿಯೇಷನ್): ಸಮರ್ಪಕ ಗಾಳಿ ವ್ಯವಸ್ಥೆ ಇಲ್ಲದ ಸ್ನಾನಗೃಹಗಳಲ್ಲಿ ಗ್ಯಾಸ್ ಗೀಸರ್ ಕಾರ್ಯನಿರ್ವಹಿಸಿದಾಗ, ಅದು ಸುತ್ತಮುತ್ತಲಿನ ಆಮ್ಲಜನಕವನ್ನು ಬಳಸುತ್ತದೆ. ಇದು ಆಮ್ಲಜನಕದ ಕೊರತೆಗೆ ಕಾರಣವಾಗಿ ಉಸಿರುಗಟ್ಟುವಿಕೆಗೆ ಕಾರಣವಾಗಬಹುದು.

ಬೆಂಕಿ: ಗ್ಯಾಸ್ ಸೋರಿಕೆಯಾದಾಗ ಅಥವಾ ಗೀಸರ್‌ನ ದಹನ ಪ್ರಕ್ರಿಯೆ ನಿಯಂತ್ರಣ ತಪ್ಪಿದಾಗ ಬೆಂಕಿ ಹತ್ತಿಕೊಳ್ಳುವ ಸಾಧ್ಯತೆ ಇರುತ್ತದೆ.

ಗ್ಯಾಸ್ ಗೀಸರ್ ಸಿಂಡ್ರೋಮ್

ಇತ್ತೀಚಿನ ಸಂಶೋಧನೆಯ ಪ್ರಕಾರ ಯಾರು ದೀರ್ಘಾವಧಿಗೆ ಗ್ಯಾಸ್ ಸಿಲಿಂಡರ್ ಕನೆಕ್ಟ್ ಮಾಡಿದ ಗೀಸರ್ ನಿಂದ ನೀರು ಕಾಯಿಸಿ ಸ್ನಾನ ಮಾಡುತ್ತಾರೋ ಅವರಿಗೆ ಕೇವಲ ಜ್ಞಾನ ತಪ್ಪುವುದು ಮಾತ್ರವಲ್ಲ, ಜೊತೆಗೆ ಪಾರ್ಶ್ವವಾಯು, ಎಪಿಲೆಪ್ಸಿ, ಹೃದಯಸ್ಥಂಭನ , ಮರೆವಿನ ಕಾಯಿಲೆಯ ರೋಗಲಕ್ಷಣಗಳು ಕಾಣಿಸಿಕೊಳ್ಳುವ ಸಾಧ್ಯತೆ ಇದೆಯಂತೆ. ದೀರ್ಘಾವಧಿಯಲ್ಲಿ ಕಾರ್ಬನ್ ಮಾನಾಕ್ಸೈಡ್ ಪಾಯಿಸನ್ ರೂಪದಲ್ಲಿ ದೇಹವನ್ನು ಸೇರಿಕೊಂಡು ಈ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ ಎಂದು ತಜ್ಞರು ಹೇಳುತ್ತಾರೆ. ಇದಕ್ಕೆ ಗ್ಯಾಸ್ ಗೀಸರ್ ಸಿಂಡ್ರೋಮ್ ಎಂದು ಕರೆಯಲಾಗಿದೆ. ಸ್ನಾನಗೃಹದಲ್ಲಿ ದೀರ್ಘಕಾಲ ಕಳೆಯುವ ವ್ಯಕ್ತಿಗಳಲ್ಲಿ ಗ್ಯಾಸ್ ಗೀಸರ್ ಸಿಂಡ್ರೋಮ್ ಕಂಡುಬರುತ್ತದೆ. ಸ್ನಾನಗೃಹದಲ್ಲಿ ಅಳವಡಿಸಲಾದ ಗ್ಯಾಸ್ ಗೀಸರ್‌ಗಳಿಂದ ಹೊರಸೂಸಿದ ಕಾರ್ಬನ್ ಮೋನಾಕ್ಸೈಡ್ ವಿಷದಿಂದ ಉಂಟಾಗುತ್ತದೆ. ಗ್ಯಾಸ್ ಗೀಸರ್ ಸಿಂಡ್ರೋಮ್‌ನಿಂದ ಬಳಲುತ್ತಿರುವ ಹೆಚ್ಚಿನ ರೋಗಿಗಳು 20-40 ವರ್ಷ ವಯಸ್ಸಿನವರಾಗಿದ್ದು, ಆಸ್ಪತ್ರೆಗೆ ಸೇರಿಸುವ ಮೊದಲು 30 ನಿಮಿಷಗಳಿಂದ 45 ನಿಮಿಷಗಳಿಗಿಂತ ಹೆಚ್ಚು ಕಾಲ ಸ್ನಾನ ಮಾಡಿದ್ದಾರೆ ಎಂದು ದಾಖಲಿಸಲಾಗಿದೆ. ಗಾಳಿ ಇಲ್ಲದ ಸ್ನಾನಗೃಹಗಳಲ್ಲಿ ದೀರ್ಘಕಾಲ ನಿಧಾನವಾಗಿ ಸ್ನಾನ ಮಾಡುವಾಗ ಕಾರ್ಬನ್ ಮಾನಾಕ್ಸೈಡ್ ಮತ್ತು ನೈಟ್ರೋಜನ್ ಡೈಆಕ್ಸೈಡ್‌ಗೆ ದೀರ್ಘಕಾಲದವರೆಗೆ ಒಡ್ಡಿಕೊಳ್ಳುವುದರಿಂದ ಈ ರೋಗಿಗಳು ಮೇಲೆ ಪರಿಣಾಮ ಬೀರಿರುವುದು ಕಂಡು ಬಂದಿದೆ.

ಸೋಲಾರ್ ವಾಟರ್ ಹೀಟರ್.

ಕಾರ್ಬನ್ ಮೊನಾಕ್ಸೈಡ್ ಡಿಟೆಕ್ಟರ್

ಸೋರಿಕೆಯನ್ನು ಪತ್ತೆಹಚ್ಚಲು ಅತ್ಯಂತ ಪರಿಣಾಮಕಾರಿ ಮತ್ತು ವಿಶ್ವಾಸಾರ್ಹ ಮಾರ್ಗ. ಈ ಸಾಧನಗಳು ಗಾಳಿಯಲ್ಲಿ ಇಂಗಾಲದ ಆಮ್ಲದ ಮಟ್ಟವನ್ನು ನಿರಂತರವಾಗಿ ಅಳೆಯುತ್ತವೆ. ಈ ಮಟ್ಟವು ಅಪಾಯಕಾರಿ ಮಿತಿಯನ್ನು ತಲುಪಿದಾಗ, ಅದು ಜೋರಾದ ಅಲಾರಾಂ ಅನ್ನು ಹೊರಸೂಸುತ್ತದೆ, ನಿಮಗೆ ಎಚ್ಚರಿಕೆ ನೀಡುತ್ತದೆ. ಗ್ಯಾಸ್ ಗೀಸರ್ ಇರುವ ಕೋಣೆಯಲ್ಲಿ, ವಿಶೇಷವಾಗಿ ಸ್ನಾನಗೃಹದಲ್ಲಿ ಇದನ್ನು ಅಳವಡಿಸಬೇಕು. ಡಿಟೆಕ್ಟರ್ ಅನ್ನು ನೇರವಾಗಿ ಗೀಸರ್ ಮೇಲೆ ಅಥವಾ ಅದರ ಹತ್ತಿರ, ಆದರೆ ತೇವಾಂಶದಿಂದ ದೂರವಿರುವಂತೆ ಅಳವಡಿಸಬೇಕು. ನೆಲದಿಂದ ಸುಮಾರು ಎದೆಯ ಎತ್ತರದಲ್ಲಿ (ಉಸಿರಾಟದ ಮಟ್ಟದಲ್ಲಿ) ಅಥವಾ ಸೀಲಿಂಗ್‌ನಲ್ಲಿ ಅಳವಡಿಸುವುದು ಸೂಕ್ತ. ಮಾರುಕಟ್ಟೆಯಲ್ಲಿ ಬ್ಯಾಟರಿ ಚಾಲಿತ, ವಿದ್ಯುತ್ ಚಾಲಿತ (ಪ್ಲಗ್-ಇನ್), ಮತ್ತು ಕೆಲವು ಡಿಜಿಟಲ್ ಡಿಸ್ಪ್ಲೇ ಸಹಿತ ವಿವಿಧ ರೀತಿಯ ಕಾರ್ಬನ್ ಮೋನಾಕ್ಸೈಡ್ ಡಿಟೆಕ್ಟರ್‌ಗಳು ಲಭ್ಯವಿವೆ.

ಕಾರ್ಬನ್ ಮೋನಾಕ್ಸೈಡ್ ಸೋರಿಕೆ ಲಕ್ಷಣಗಳು

- ಕಾರ್ಬನ್ ಮೋನಾಕ್ಸೈಡ್ ಸೇವನೆಯಿಂದ ವಾಂತಿ
- ಆಕ್ಸಿಜನ್ ಕೊರತೆಯಿಂದ ಉಸಿರುಗಟ್ಟುತ್ತದೆ
- ತೀವ್ರ ಮೈ-ಕೈ ತಲೆನೋವು ಕಾಣಿಸಿಕೊಳ್ಳುತ್ತದೆ
- ತಲೆ ಸುತ್ತು, ಮೂರ್ಛೆ ಬಂದು ನೆಲಕ್ಕೆ ಬೀಳುತ್ತಾರೆ

ಗ್ಯಾಸ್ ಗೀಸರ್ ಮುನ್ನೆಚ್ಚರಿಕೆ ಕ್ರಮಗಳು

ಇನ್‌ಸ್ಟಂಟ್ ಗ್ಯಾಸ್ ಗೀಸರ್.

- ಗ್ಯಾಸ್ ಗೀಸರನ್ನು ಬಾತ್‌ರೂಮ್‌ನಲ್ಲಿ ಅಳವಡಿಕೆಗೆ ಮುನ್ನ ಬಳಕೆಯ ವಿಧಾನವನ್ನು ಮನೆಯ ಎಲ್ಲ ಸದಸ್ಯರು ತಿಳಿದಿರುವುದು ಅತ್ಯಗತ್ಯ.
- ಗಾಳಿಯಾಡದ, ಕಿಟಕಿಗಳು ಇಲ್ಲದ ಕೊಠಡಿಯಲ್ಲಿ ಗ್ಯಾಸ್ ಗೀಜರ್ ಅಳವಡಿಸಬಾರದು.
- ಆಗಾಗ ತಪ್ಪದೇ ಗ್ಯಾಸ್ ಗೀಸರ್‌ಗಳನ್ನು ಪರಿಶೀಲಿಸಬೇಕು. ನಿರಂತರವಾಗಿ ಚಾಲ್ತಿಯಲ್ಲಿ ಇಡಬಾರದರು.
- ಗ್ಯಾಸ್ ಗೀಸರ್ ಅಳವಡಿಸಿದ ಕೊಠಡಿಯಲ್ಲಿ ಮೇಣದ ಬತ್ತಿಯನ್ನು ಉರಿಸಬೇಕು. ಹಚ್ಚಿದ ಕೂಡಲೇ ಮೇಣದ ಬತ್ತಿ ಹಾರಿಹೋದರೆ ಕಾರ್ಬನ್ ಮೋನಾಕ್ಸೈಡ್ ಸೋರಿಕೆ ಆಗಿದೆ ಎಂದರ್ಥ.
- ನುರಿತ ಎಲೆಕ್ಟ್ರಿಷಿಯನ್‌ಗಳಿಂದ ಗ್ಯಾಸ್ ಗೀಸರ್ ಅಳವಡಿಕೆ ಮಾಡಿಸಬೇಕು
- ಮನೆ ಹೊರಗಿನಿಂದ ಪೈಪ್ ಮೂಲದ ಎಲ್‌ಪಿಜಿ, ಗ್ಯಾಸ್ ಗೀಸರ್ ಸಂಪರ್ಕ ತೆಗೆದುಕೊಳ್ಳಬೇಕು.

▸▸ ಪ್ರವಾಸಿಗರಿಗೆ, ನಿತ್ಯ ಓಡಾಡುವವರಿಗೆ ಅನುಕೂಲ ▸▸ ರಾಜ್ಯದಲ್ಲೇ ಸಿಗಂಧೂರು ನಂತರ ದೊಡ್ಡ ಬೋಟ್

ಹಂಪಿಯ ತುಂಗಭದ್ರೆಗೆ ಬರಲಿದೆ ದೊಡ್ಡ ಗಾತ್ರದ ಹೊಸ ಬೋಟ್!

ಜಿಲ್ಲಾ ನೋಟ

ಅನಂತ ಪದ್ಮನಾಭ ರಾವ್, ಬಳ್ಳಾರಿ

ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣಗಳಾದ ಹಂಪಿಯಿಂದ ತುಂಗಭದ್ರಾ ನದಿ ಮೂಲಕ ಆನೆಗೊಂದಿ, ಅಂಜನಾದ್ರಿ, ತಲುಪಲು ಪ್ರವಾಸಿಗರು ಇನ್ನು ಮುಂದೆ ಪರದಾಡಬೇಕಿಲ್ಲ. ಶೀಘ್ರದಲ್ಲೇ ದೊಡ್ಡ ಬೋಟ್ (ಲಾಂಚ್) ಬಂದಿಳಿಯಲಿದೆ..!

ಹೌದು. ಹಂಪಿಗೆ ಹಾಗೂ ಆನೆಗೊಂದಿ, ಸುತ್ತಮುತ್ತಲಿನ ಪ್ರವಾಸಿ ತಾಣಗಳಿಗೆ ಬರುವ ಪ್ರವಾಸಿಗರಲ್ಲಿ ಅನೇಕರು ಆನೆಗೊಂದಿಗೆ ಭೇಟಿ ನೀಡಲು ಸಂಪರ್ಕದ ಅನಾನುಕೂಲದ ಕಾರಣಕ್ಕೆ ಹಂಪಿ ಪ್ರವಾಸ ಮೊಟಕುಗೊಳಿಸುತ್ತಿದ್ದರು.

ಅನಾನುಕೂಲಕ್ಕೆ ಬ್ರೇಕ್

ಇದೀಗ ಈ ಅನಾನುಕೂಲಕ್ಕೆ ಬ್ರೇಕ್ ಬೀಳಲಿದೆ. ಇನ್ನು ಕೆಲವೇ ದಿನಗಳಲ್ಲಿ ಯಂತ್ರಚಾಲಿತ ದೊಡ್ಡ ಬೋಟ್ ನೀರಿಗಿಳಿಯಲಿದೆ. ಅದರಲ್ಲಿ ಕುಳಿತು ಆರಾಮವಾಗಿ ಆನೆಗೊಂದಿಗೆ ಪ್ರಯಾಣಿಸಬಹುದು. ಈ ಬೋಟ್‌ನಲ್ಲಿ ಸರಿ ಸುಮಾರು 35 ರಿಂದ 40 ಜನ ಪ್ರಯಾಣಿಸಬಹುದು ಎಂಬುದು ವಿಶೇಷ.

ಗುಡ್‌ಬೈ ಟು ಮಿನಿ ಬೋಟ್

ಹಂಪಿಯ ತಳವಾರಘಟ್ಟದಿಂದ ನದಿಯಲ್ಲಿ ಬೋಟ್ ಮೂಲಕ ಹೋಗುವ ಪ್ರವಾಸಿಗರಿಗೆ ಸದ್ಯ ಸಣ್ಣ ಬೋಟ್ ವ್ಯವಸ್ಥೆಯಿದೆ. ಇದರಲ್ಲಿ 10 ರಿಂದ 15 ಜನರನ್ನ, ನಾಲ್ಕು ಬೈಕುಗಳನ್ನ ಸಾಗಿಸುವ ಸಾಮರ್ಥ್ಯವಿದೆ. ಆದರೆ, ಇದರ ಪ್ರಯಾಣ ಅವಧಿ ಹೆಚ್ಚಾಗುವ ಕಾರಣ ಮತ್ತೊಂದು ದೊಡ್ಡ ಗಾತ್ರದ ಹೊಸ ಬೋಟ್ ತರಿಸಲಾಗಿದೆ. ಇಷ್ಟರಲ್ಲಿ ಈ ಬೋಟ್ ಕಾರ್ಯಾರಂಭ ಮಾಡಲಿದೆ.

ಮಹಾರಾಷ್ಟ್ರದ ಸುಸಜ್ಜಿತ ಬೋಟ್

ಮಹಾರಾಷ್ಟ್ರದಿಂದ ತರಿಸಿರುವ ಈ ದೊಡ್ಡ ಬೋಟ್‌ನಲ್ಲಿ ಬೈಕ್, ಆಟೊ, ಕಾರ್‌ಗಳನ್ನು ಕೂಡ ಒಂದು ದಡದಿಂದ ಮತ್ತೊಂದು ದಡದ ಕಡೆಗೆ ಸಾಗಿಸಬಹುದಾಗಿದೆ. ಕೇವಲ ಎರಡು ನಿಮಿಷಗಳಲ್ಲೇ? ನದಿ ದಾಟಬಹುದು. ಸರಕಾರದ ಮಟ್ಟದಲ್ಲಿ ನಾನಾ ಇಲಾಖೆಗಳ ಅನುಮತಿ ಪಡೆಯುವುದು ಸೇರಿ ನಾನಾ ಪ್ರಕ್ರಿಯೆಗಳು ಮುಗಿದ ಬಳಿಕ ಪ್ರಾಯೋಗಿಕ ಪರೀಕ್ಷೆ ಬಳಿಕ ದೊಡ್ಡ ಬೋಟ್ ಸೇವೆಗೆ ಹಸಿರು ನಿಶಾನೆ ದೊರೆಯಲಿದೆ.

ಗ್ರಾಮ ಪಂಚಾಯಿತಿಯಿಂದ ಟೆಂಡರ್ ಪಡೆದು ಟಿಕೆಟ್ ದರ ನಿಗದಿಪಡಿಸಲಾಗುತ್ತದೆ. ನಿರ್ವಹಣೆ ವೆಚ್ಚ ಹೆಚ್ಚಾಗುವ ಕಾರಣ ಟಿಕೆಟ್ ದರ ಈ ಮೊದಲಿ ಗಿಂತಲೂ ಸ್ವಲ್ಪ ಮಟ್ಟಿಗೆ ಹೆಚ್ಚಾಗಬಹುದು.

ಪ್ರವಾಸಿಗರಿಗೆ ಸುಲಭ ದಾರಿ

ಹಂಪಿ ಮತ್ತು ಅಂಜನಾದ್ರಿಗೆ ಬರುವ ಪ್ರವಾಸಿಗರಿಗೆ ಎರಡು ಕಡೆ ಭೇಟಿ ನೀಡಲು ಈ ಬೋಟ್ ಸಹಕಾರಿಯಾಗಲಿದೆ. ದೊಡ್ಡ ಗಾತ್ರ ಬೋಟ್ ಸೇವೆ ಆರಂಭವಾದ ಬಳಿಕ ನಿತ್ಯ ಓಡಾಡುವ ಮತ್ತು ಪ್ರವಾಸಿಗರಿಗೆ ಅನುಕೂಲ ಆಗಲಿದೆ. ಅಲ್ಲದೇ ಇದರಿಂದ ಸಮಯ ಮತ್ತು ಹಂಪಿ ಮತ್ತು ಆನೆಗೊಂದಿ ಭಾಗದ ಅಂಜನಾದ್ರಿ, ಪಂಪಾ ಸರೋವರ, ದುರ್ಗಾಬೆಟ್ಟ, ನವ ಬೃಂದಾವನ ಇತರ ಸ್ಥಳಗಳಿಗೂ ಶೀಘ್ರ ತೆರಳಬಹುದು. ಆನೆಗೊಂದಿ ಮತ್ತು ಬುಕ್ಕಸಾಗರದ ಸ್ಥಳೀಯ ಆಡಳಿತವೂ ಅಗತ್ಯ ಫ್ಲಾಟ್ ಫಾರಂ ವ್ಯವಸ್ಥೆ ಮಾಡಿದರೇ ಇನ್ನೂ ಹೆಚ್ಚು ಸಹಕಾರಿಯಾಗಲಿದೆ. ಇದರಿಂದ ಪ್ರವಾಸಿಗರು ಈ ಭಾಗದ ಪ್ರಕೃತಿ ಸೌಂದರ್ಯ ಸವಿಯಬಹುದು. ರಾಜ್ಯದಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ ಶರಾವತಿ ನದಿ ಡ್ಯಾಂ ಹಿನ್ನೀರಿನ ಬಳಿ ಇರುವ ಸುಕ್ಷೇತ್ರ ಸಿಗಂಧೂರಿನ ಲಾಂಚ್ ನಂತರ ಈಗ ತುಂಗಭದ್ರೆ ದಡದ ಹಂಪಿಗೆ ಬರಲಿರುವ ಬೋಟ್ ಅತ್ಯಂತ ದೊಡ್ಡದಾಗಿರಲಿದೆ ಎನ್ನುತ್ತಾರೆ ಬೋಟ್ ಮಾಲೀಕರಾದ ಗೋಪಾಲಕೃಷ್ಣ.

ಸುತ್ತುವ ಸಮಯ ಉಳಿತಾಯ

ಹಂಪಿ ವಿಜಯವಿಠಲ ದೇಗುಲ ಸೇರಿದಂತೆ ಈ ಭಾಗದ ಸ್ಥಳಗಳನ್ನು ವೀಕ್ಷಿಸಿದ ಬಳಿಕ ಆನೆಗೊಂದಿ ಭಾಗದ ಪ್ರವಾಸಿ ತಾಣಗಳಿಗೆ ತೆರಳಲು ಸಮಯ ಹೆಚ್ಚು ಬೇಕಾಗಲಿದೆ. ಏಕೆಂದರೆ ಸರಿಸುಮಾರು 18 ಕಿಮೀ ಸುತ್ತಿ ಆನೆಗೊಂದಿ ಪ್ರವಾಸಿ ತಾಣಗಳಿಗೆ ಹೋಗುವ ಅನಿವಾರ್ಯತೆ ಇದೆ. ಇಂತಹ ದೊಡ್ಡ ಬೋಟ್ ಬಂದರೆ ಪ್ರವಾಸಿಗರಿಗೆ ಹೆಚ್ಚು ಸಹಕಾರಿಯಾಗಲಿದೆ. ಶೀಘ್ರ ಆರಂಭವಾಗುವ ಸುದ್ದಿ ತಿಳಿದು ಸಂತಸವಾಗಿದೆ. ಮತ್ತೊಮ್ಮೆ ಹಂಪಿಗೆ ಬರುವ ಹೊತ್ತಿಗೆ ಈ ದೊಡ್ಡ ಬೋಟಿನಲ್ಲಿ (ಲಾಂಚ್) ಪ್ರಯಾಣಿಸಿ ಈ ಭಾಗದ ಸೊಬಗನ್ನು ಸವೆಯುವ ಬಯಕೆ ಇದೆ ಎಂದು ಖುಷಿ ವ್ಯಕ್ತಪಡಿಸುತ್ತಾರೆ ಹಂಪಿಯ ಪ್ರವಾಸಿಗರಾದ ವಿದ್ಯಾಶ್ರೀ.

▸▸ ಕಡಿದಾದ ರಸ್ತೆ, 14 ತಿರುವು ▸▸ ಪ್ರತಿ ಮಳೆಗಾಲಕ್ಕೂ ಅವಘಡಗಳು ▸▸ ಘಾಟಿಯಲ್ಲಿ ಧರೆ ಕುಸಿತದ ಭೀತಿ

ಅವಘಡಗಳ ದಾಟಿ ಆಗುಂಬೆ ಘಾಟಿ ಜೀವ ವೈವಿಧ್ಯಗಳಿಗೆ ಇಲ್ಲ ಸರಿ ಸಾಟಿ

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಪ್ರತಿ ಮಳೆಗಾಲದಲ್ಲೂ ಆಗುಂಬೆ ಘಾಟಿಯಲ್ಲಿ ಒಂದಿಲ್ಲ ಒಂದು ಅವಘಡ ಸಂಭವಿಸುತ್ತಲೇ ಇರುತ್ತದೆ. ಅದಕ್ಕೊಂದು ಪರಿಹಾರ ಕಲ್ಪಿಸಬೇಕು ಎಂಬುದು ಘಾಟಿಯಲ್ಲಿ ಹಾದು ಹೋಗುವ ಎಲ್ಲರ ಮಾತು. ಆದರೆ, ಅದು ಸಾಧ್ಯವೇ ಎಂಬ ಪ್ರಶ್ನೆ ಬಹುತೇಕರನ್ನು ಕಾಡಿರಲೂಬಹುದು.

ಮಲೆನಾಡಿನಲ್ಲಿ ಮಳೆ ಬಂತೆಂದರೆ ಆಗುಂಬೆ ಘಾಟಿ ಇಳಿದು ಹೋಗುವುದು ಜೀವ ಕೈಯಲ್ಲಿ ಹಿಡಿದ ಅನುಭವವೇ ಸರಿ. ಅದನ್ನು ಸರಿಪಡಿಸಬೇಕು ಎಂಬ ಕಾರಣದಿಂದಲೋ ಏನೋ ಕೇಂದ್ರ ಸರಕಾರ ಆಗುಂಬೆ ಘಾಟಿ ಕೊರೆದು ಸುರಂಗ ಮಾರ್ಗ ನಿರ್ಮಿಸುವ ಲೆಕ್ಕಾಚಾರದಲ್ಲಿದೆ.

14 ತಿರುವುಗಳ ಘಾಟಿ

ಆಗುಂಬೆ ಘಾಟಿ ಒಂದು ಕಡಿದಾದ ರಸ್ತೆಯಾಗಿದ್ದು, ಹದಿನಾಲ್ಕು ತಿರುವುಗಳನ್ನು ಹೊಂದಿದೆ ಮತ್ತು ಇದು ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳ ನಡುವೆ ಇದೆ. ಇದು ಅಪರೂಪದ ಸಸ್ಯ ಮತ್ತು ವನ್ಯಜೀವಿಗಳಿಗೆ ಹೆಸರುವಾಸಿಯಾಗಿದೆ. ಪ್ರತಿ ಮಳೆಗಾಲದಲ್ಲಿ ಆಗುಂಬೆ ಘಾಟಿಯಲ್ಲಿ ಧರೆ ಕುಸಿಯುತ್ತಲೇ ಇದೆ. ಇಲ್ಲಿ ರಸ್ತೆ ವಿಸ್ತರಣೆಯೂ ಸಾಧ್ಯವಿಲ್ಲ. ಹಾಗೊಮ್ಮೆ ವಿಸ್ತರಣೆಗೆ ಮುಂದಾದರೆ ಗುಡ್ಡ ಇನ್ನಷ್ಟು ಕುಸಿದು ಘಟ್ಟದ ಕೆಳಗಿನ ಸಂಪರ್ಕ ಸುದೀರ್ಘ ಕಾಲದವರೆಗೆ ಕಡಿತಗೊಳ್ಳುವ ಆತಂಕವೂ ಇದೆ.

ಯೋಜನೆಯೇ ಬೇಡ

ಆಗುಂಬೆ ಘಾಟಿಯು ಭೌಗೋಳಿಕ ವಿನ್ಯಾಸವೂ ಭಿನ್ನವಾಗಿದೆ. ಪ್ರಪಾತದಂತಿರುವ ಈ ಘಾಟಿಯಲ್ಲಿ ಸುರಂಗ ಮಾರ್ಗಗಳನ್ನು ನಿರ್ಮಿಸುವ ಯೋಜನೆಯೇ ಸರಿಯಾಗಿದೆಯಾದರೂ, ಅದು ಕಾರ್ಯಸಾಧುವಲ್ಲ ಎಂಬುದು ಪರಿಸರ ತಜ್ಞರು ಹಾಗೂ ಭೌಗೋಳಿಕ ವಿಜ್ಞಾನಿಗಳ ಹೇಳಿಕೆ. ಹಾಗಾದರೆ ಆಗುಂಬೆ ಘಾಟಿಯ ಸಮಸ್ಯೆಗೆ ಪರಿಹಾರ ಏನು ಎಂಬುದರ ಬಗ್ಗೆ ಯಾರೂ ಮಾತನಾಡಲು ಸಿದ್ಧರಿಲ್ಲ.

ಸುರಂಗ ಎಲ್ಲಿಂದ ಎಲ್ಲಿಗೆ?

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕು ಮೇಗರವಳ್ಳಿಗೆ ಸಂಪರ್ಕಿಸುವ 12 ಕಿ.ಮೀ. ದೂರಕ್ಕೆ 3,500 ಕೋಟಿ ರೂ. ವೆಚ್ಚ ನಿರೀಕ್ಷಿಸಲಾಗಿದೆ. ಮಲ್ಪೆ-ತೀರ್ಥಹಳ್ಳಿ ಎನ್‌ಎಚ್ 169ಎ ಚತುಷ್ಪಥ ಯೋಜನೆ ಅಡಿ ಸುರಂಗ ನಿರ್ಮಾಣ ಯೋಜನೆ ಸೇರಿದ್ದು, ದ್ವಿಪಥ ರಸ್ತೆ ಬದಲು ಟನಲ್ ನಿರ್ಮಿಸುವ ಸಾಧ್ಯತೆ ಇದೆ. ಈಗಾಗಲೇ ಇದಕ್ಕಾಗಿ ಸರಕಾರ ವಿಸ್ತೃತ ಯೋಜನೆ (ಡಿಪಿಆರ್)ತಯಾರಿ ಮಾಡಲು 2 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಆದರೆ, ವಿಜ್ಞಾನಿಗಳ ಪ್ರಕಾರ ಪಶ್ಚಿಮ ಘಟ್ಟದ ಮೇಲೆ ವಿವಿಧ ಯೋಜನೆಗಳ ಹೆಸರಿನಲ್ಲಿ ಸಾಕಷ್ಟು ದೌರ್ಜನ್ಯ ಎಸಗಲಾಗಿದೆ. ಅದರ ಪರಿಣಾಮವನ್ನೂ ಮಲೆನಾಡು ಎದುರಿಸುತ್ತಿದೆ.

ಅವೈಜ್ಞಾನಿಕ ಯೋಜನೆ

ಹೀಗಿರುವಾಗ, ಮಾನ್ಸೂನ್ ತಡೆಯುವ ಪರ್ವತ ಶ್ರೇಣಿಯಂತಿರುವ ಆಗುಂಬೆ ವಿನಾಶಕ್ಕೆ ಕೈಹಾಕಿದಂತೆ ಆಗುತ್ತದೆ. ಈಗಾಗಲೇ ಪಶ್ಚಿಮಘಟ್ಟದಲ್ಲಿ ಹಲವು ಕಾಂಕ್ರಿಟ್ ಚಟುವಟಿಕೆಗಳು ನಡೆದ ಸಾಕಷ್ಟು ಪರಿಸರ ಹಾನಿಯಾಗಿದೆ. ಕೇಂದ್ರ ಸರಕಾರ ಖುದ್ದು ಇಂತಹ ಅವೈಜ್ಞಾನಿಕ ಯೋಜನೆಗೆ ಮುಂದಾದರೆ ದೊಡ್ಡ ಹೋರಾಟ ನಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ.

ಯಾಕೆ ವಿರೋಧ

ಆಗುಂಬೆ ಘಾಟಿ ಪರಿಸರ ಸೂಕ್ಷ್ಮ ಪ್ರದೇಶವಾಗಿದ್ದು, ಇದು ಸಿಂಗಳಿಕ, ದಾಸಮಂಗಟ್ಟೆ, ಕಾಳಿಂಗ ಸರ್ಪ ಸೇರಿದಂತೆ ಕೋಟ್ಯಂತರ ಜೀವವೈವಿಧ್ಯಗಳ ಆವಾಸ. ಯೋಜನೆಯಿಂದ ಅವಕ್ಕೆ ಧಕ್ಕೆ. ಮಾನ್ಸೂನ್ ಮಾರುತಗಳನ್ನು ತಡೆದು ಮಳೆ ಸುರಿ ಸುವ ಆಗುಂಬೆ ಘಾಟಿಗೆ ಧಕ್ಕೆಯಾದರೆ, ವರ್ಷಧಾರೆ ಮೇಲೆ ನೇರ ಪರಿಣಾಮ. ಹಿಂದೆ, ಆಗುಂಬೆ ಮತ್ತು ಸೋಮೇಶ್ವರದ ನಡುವೆ ಬಾಡಿಗೆ ಕಾರು ಉದ್ಯಮ ಇತ್ತು. ಕಾಡುಗಳಿಂದ ಮರದ ದಿಮ್ಮಿಗಳನ್ನು ಸಾಗಿಸಲು ಈ ಘಾಟಿ ಬಳಸಲಾಗುತ್ತಿತ್ತು.

ಪರಿಸಾರಕ್ಕೆ ಅಪಾರ ಹಾನಿ

ಈಗ ಸುರಂಗ ಮಾರ್ಗ ನಿರ್ಮಾಣ ಮಾಡಲು ದೊಡ್ಡ ಯಂತ್ರಗಳನ್ನು ಬಳಸಿದರೆ ಇಡೀ ಗುಡ್ಡವೇ ಕುಸಿದು ಬೀಳುವ ಅನುಮಾನಗಳು ಇವೆ. ಇಂತಹ ಹಲವು ಪ್ರಕರಣಗಳು ಉತ್ತರ ಭಾರತದಲ್ಲಿ ನಡೆದಿದೆ. ಈ ಹಿಂದೆ ಶಿರಾಡಿಗೆ ಸುರಂಗ ಮಾಡಲು ಹೊರಟು ಅದು ಕಾರ್ಯಸಾಧುವಲ್ಲ ಎಂಬ ಕಾರಣಕ್ಕೆ ಕೈ ಬಿಡಲಾಗಿತ್ತು. ಈಗ ಅದನ್ನೆ ಮಾಡುವುದು ಒಳ್ಳೆಯದಲ್ಲ. ಸುರಂಗ ಮಾಡಿದರೆ ತುಂಗಾ ನದಿಯ ಮೂಲಕ್ಕೆ ಹೊಡೆತ ಬೀಳಲಿದೆ. ಮಳೆ ಕಡಿಮೆಯಾದರೆ ಅದರಿಂದ ಸಾಕಷ್ಟು ಸಮಸ್ಯೆಯಾಗುತ್ತದೆ. ಇದು ಕೇವಲ ಪರಿಸರ ದೃಷ್ಟಿಯಿಂದ ಅಲ್ಲದಿದ್ದರೂ ಭೌಗೋಳಿಕವಾಗಿ ನಾವು ಇರುವ ವ್ಯವಸ್ಥೆಯಲ್ಲಿಯೇ ಬದುಕಬೇಕು ಎಂಬುದು ವಿಜ್ಞಾನಿಗಳ ವಾದ.



ಉತ್ತರಾಖಂಡ ನಿದರ್ಶನ

ಉತ್ತರಾಖಂಡ ರಾಜ್ಯದಲ್ಲಿ ಸುರಂಗ ಕೊರೆದು ಸಾಕಷ್ಟು ಸಾವು ನೋವುಗಳು ಸಂಭವಿಸಿದ್ದವು. ಆಗುಂಬೆಯಲ್ಲೇ ಹಲವು ಸಲ ಗುಡ್ಡ ಕುಸಿತವಾಗಿದೆ. ಇಷ್ಟೆಲ್ಲ ಅಪಾಯಗಳಿದ್ದರೂ ಸುರಂಗ ಮಾರ್ಗದ ಹಿಂದಿರುವ ಸರಕಾರದ ಮೂಲ ಉದ್ದೇಶವೇನು? ಇದರ ಬಗ್ಗೆ ವಿಜ್ಞಾನಿಗಳು ವರದಿ ನೀಡಿದ್ದಾರೆಯೇ? ಅಂತಹ ವರದಿಗಳು ಇದ್ದರೆ ಸರಕಾರ ಸಾರ್ವಜನಿಕ ವಾಗಿ ಹೇಳಲಿ ಎಂದು ಪರಿಸರ ಪ್ರಿಯರು ಒತ್ತಾಯ ಮಾಡುತ್ತಿದ್ದಾರೆ.

ಚಿತ್ತವಿಹಾರ

ಮುಕ್ತವಾಗಿರಲಿ ಮನಸ್ಸು

● ಮಹದೇವ ಬಸರಕೋಡ

ನಾವು ಮಾಡುವುದೆಲ್ಲವೂ ಶ್ರೇಷ್ಠ, ನಮ್ಮ ನಂಬಿಕೆಗಳೇ ಅಂತಿಮ, ನನಗೆ ಎಲ್ಲವೂ ತಿಳಿದಿದೆ, ಮತ್ತೊಬ್ಬರಿಂದ ಬರುವ ವಿಚಾರಗಳು, ಯೋಚನೆಗಳೆಲ್ಲವೂ ನನ್ನ ಯೋಚನೆಗಳಿಗಿಂತ ಕನಿಷ್ಠ ಎಂಬ ನಿಲುವು ತಾಳಿ ಅವುಗಳನ್ನು ಸ್ವೀಕರಿಸುವಲ್ಲಿ ಉದಾಸೀನತೆ ತೋರುತ್ತೇವೆ ಇಲ್ಲವೆ ಉದ್ದೇಶಪೂರ್ವಕವಾಗಿ ತಡೆಯುವುದುಂಟು. ನಮ್ಮ ಬಗೆಗೆ, ನಮ್ಮ ನಂಬಿಕೆಗಳ ಕುರಿತು ಹೆಚ್ಚು ಮಾತನಾಡುತ್ತೇವೆ. ಮನಸ್ಸನ್ನು ಮುಕ್ತವಾಗಿ [illegible] ನಮಗರಿವಿಲ್ಲದಂತೆ ನಮ್ಮ ಸುತ್ತಲೂ ನಾವೇ ಒಂದು ಅಗೋಚರ ಬೇಲಿಯನ್ನು ನಿರ್ಮಿಸಿಕೊಂಡು ಬಿಡುತ್ತೇವೆ. ಸಾಮರಸ್ಯಕ್ಕೆ ಕಳೆದುಕೊಳ್ಳುತ್ತೇವೆ. ಇಂತಹ ನಮ್ಮ ಹುಚ್ಚು ನಂಬಿಕೆಗಳು ನಮ್ಮನ್ನು ಮತ್ತೆ ಮತ್ತೆ ಸಂಕಷ್ಟಕ್ಕೆ ತಳ್ಳುತ್ತಲೇ ಇರುತ್ತವೆ.

ಕುರಿಕಾಯುವಾತನೊಬ್ಬ ಕುರಿಗಳೊಂದಿಗೆ ಒಂದು ಹೊಲದಲ್ಲಿ ಬೀಡುಬಿಟ್ಟಿದ್ದ. ಹಗಲು ಹೊತ್ತಿನಲ್ಲಿ ಕುರಿಗಳನ್ನು ಮೇಯಿಸಿಕೊಂಡು ಬಂದು ರಾತ್ರಿ ಹೊಲದಲ್ಲಿ ನಿರ್ಮಿಸಿದ ದೊಡ್ಡಿಯೊಂದರಲ್ಲಿ ಅವುಗಳನ್ನು ಬಿಡುತ್ತಿದ್ದ. ಅವನು ನಿರ್ಮಿಸಿದ ದೊಡ್ಡಿಯ ಸಮೀಪದಲ್ಲಿ ದೊಡ್ಡ ಬಿಲವೊಂದಿತ್ತು. ಒಂದು ಬಾರಿ ಒಂದು ಕುರಿಯು ಬಿಲವನ್ನು ಕಂಡು ಅದರಲ್ಲಿ ನುಸುಳಿತು. ಬಹಳ ಹೊತ್ತಿನವರೆಗೂ ಕುರಿಯು ಬಿಲದಲ್ಲಿ ಸುತ್ತಾಡಿದರೂ ಅದಕ್ಕೆ ಬಿಲದಿಂದ ಹೊರಬರುವ ಹಾದಿಯು ಸಿಗಲೇ ಇಲ್ಲ. ಅಷ್ಟರಲ್ಲಿಯೇ ಬಿಲದಲ್ಲಿ ತೋಳವೊಂದು ಹಿಂಬಾಲಿಸುವುದನ್ನು ಗಮನಿಸಿತು. ಭಯದಿಂದ ಓಡತೊಡಗಿತು. ಎಷ್ಟೇ ಓಡಿದರೂ ಅದಕ್ಕೆ ಹೊರಬರುವ ಹಾದಿಯು ತಿಳಿಯಲೇ ಇಲ್ಲ. ಮತ್ತೆ ಮತ್ತೆ ತನ್ನ ಪ್ರಾಣ ರಕ್ಷಣೆಗೆ ಕಿರುಚುತ್ತ ಓಡಾಡತೊಡಗಿತು.

ಇದರ ಧ್ವನಿಯನ್ನು ಕೇಳಿದ ಕುರುಬ ಬಿಲದೊಳಗೆ ಹೋಗಿ ಅದನ್ನು ಕಾಪಾಡಿ ಅತ್ಯಂತ ಪ್ರೀತಿಯಿಂದ ತನ್ನ ದೊಡ್ಡಿಗೆ ತಂದನು. ದೊಡ್ಡಿಗೆ ಕುರಿಯನ್ನು ಕರೆದೊಯ್ಯುವವರೆಗೂ ತೋಳವು ಕುರಿಯನ್ನು ಹಿಂಬಾಲಿಸುತ್ತಿರುವುದನ್ನು ಕುರುಬ ಗಮನಿಸಿದ. ತೋಳವನ್ನು ಹೊಡೆಯಲು ಕುರುಬ ಪ್ರಯತ್ನಿಸಿದಾಗ ಅದು ಅವನ ಕೈಗೆ ಸಿಗದೇ ಬಿಲದಲ್ಲಿ ಮರೆಯಾಗಿ ಬಿಟ್ಟಿತು. ಕುರುಬ ಬೇರೆ ದಾರಿ ಕಾಣದೇ ತನ್ನ ಕುರಿಯನ್ನು ತೋಳದಿಂದ ರಕ್ಷಿಸಿ ದೊಡ್ಡಿಯೊಳಗೆ ಕುರಿಗಳೊಂದಿಗೆ ಬಿಟ್ಟು ತನ್ನ ಕಾರ್ಯದಲ್ಲಿ ನಿರತನಾದ. ಸ್ವಲ್ಪ ಸಮಯದ ನಂತರ ಅವನ ಸ್ನೇಹಿತನೊಬ್ಬ ಅಲ್ಲಿಗೆ ಆಗಮಿಸಿದ. ಆತನೊಂದಿಗೆ ನಡೆದ ಘಟನೆಯನ್ನು ಹಂಚಿಕೊಂಡ. ಆಗ ಅವನ ಸ್ನೇಹಿತ ಬಿಲವನ್ನು ದೊಡ್ಡದೊಂದು ಬಂಡೆಯಿಂದ ಮುಚ್ಚಿಬಿಡಲು ಹೇಳಿ [illegible] ಕುರಿಯನ್ನು ರಕ್ಷಿಸಿದ ಉಮೇದಿನಲ್ಲಿದ್ದ ಕುರುಬ ಮಾತ್ರ ಅವನ ಸ್ನೇಹಿತನ ಮಾತನ್ನು [illegible]

[illegible] ಇಲ್ಲ, ನಾವು ನಮ್ಮ ಮನಸ್ಸನ್ನು ಒಂದಷ್ಟು ಮುಕ್ತವಾಗಿ ಇಟ್ಟುಕೊಳ್ಳುವ ಮೂಲಕ ಇಂತಹ ಸಮಸ್ಯೆಗಳಿಂದ ಹೊರಬರಬಹುದು. ಇತರರಲ್ಲಿಯೂ ವಿಶೇಷ ಗುಣ, ವಿಚಾರಗಳು, ಅನುಭವ, ಜ್ಞಾನ ಇರುತ್ತವೆ ಎಂಬುದನ್ನು ಅರಿತುಕೊಂಡು ಅವುಗಳಲ್ಲಿ ಸ್ವಲ್ಪದನ್ನು ನಮ್ಮದಾಗಿಸಿಕೊಳ್ಳಬೇಕು. ಅವರ ಅನುಭವಗಳನ್ನು ನಮ್ಮ ಪ್ರಗತಿಗೆ ಮೆಟ್ಟಿಲಾಗಿಸಿಕೊಳ್ಳಬೇಕು. ಎಲ್ಲರನ್ನೂ, ಎಲ್ಲವನ್ನೂ ಕೀಳಾಗಿ ಪರಿಗಣಿಸುವ ಪ್ರವೃತ್ತಿಯಿಂದ ಹೊರಬಂದು ಪ್ರತಿಯೊಬ್ಬರ ವಿಚಾರಗಳಿಗೂ ನಮ್ಮ ಮನಸ್ಸನ್ನು ಮುಕ್ತವಾಗಿರಿಸಿಕೊಳ್ಳುವುದು, ಅವರ ವಿಚಾರಗಳನ್ನು ಸ್ವಾಗತಿಸುವುದು ಬದುಕಿನ ಬಹುದೊಡ್ಡ ಜಾಣತನದ ಲಕ್ಷಣವಾಗಿದೆ. ಇಂಥದೊಂದು ವಿವೇಚನಾಯುಕ್ತ ನಡುವಳಿಕೆಗಳು ಗೆಲುವನ್ನು ತಂದುಕೊಡಬಲ್ಲವು. ನಮ್ಮ ಬದುಕಿನ ಸಂತಸಗಳನ್ನು ಹೆಚ್ಚಿಸಬಲ್ಲವು.

ಹನಿ ಮಳೆ

ಹಗರಣ

ಸೃಷ್ಟಿಸಿದೆ ಕೋಲಾಹಲ
ಮನೆ ಖರ್ಚಿಗೆ ಬಿಡುಗಡೆ
ಹಣದಲ್ಲಿ ಭಾರಿ ಹಗರಣ
ತರಕಾರಿ ಹಣ್ಣು ಹಾಲಿನ
ಹಣದಲ್ಲಿ ಸೀರೆಯನ್ನು
ಕೊಂಡಿದ್ದೇ ಪ್ರಮುಖ ಕಾರಣ!

● ಮಹಾಂತೇಶ ಮಾಗನೂರ

ಮಗಳನ್ನು ಕಳಿಸಿ ಖಾಲಿಯಾದ ಮನ!

● ಕೆ. ಜನಾರ್ದನ ತುಂಗ

ಮದುವೆಯ ಕಾರ್ಯ ಮುಗಿದ ನಂತರ, ಮಗಳನ್ನು ಕಳಿಸಿಕೊಡುವುದು ಅನಿವಾರ್ಯ. ಸಾಕಿ ಬೆಳೆಸಿದ ಮಗಳನ್ನು ಕಳುಹಿಸಿಟ್ಟೊಟ್ಟ ನಂತರ, ತಂದೆಯೊಬ್ಬರು ಅನುಭವಿಸಿದ ದುಗುಡ ಅದಾವ ಬಗೆಯದು!

ಮಗಳ ಮದುವೆಯಾಯಿತು. ಮದುವೆಯ ದಿನ ಸಂಜೆ ಅವಳನ್ನು ಗಂಡನ ಮನೆಗೆ ಕಳಿಸಿಬರಲು ಮನೆಯವರೆಲ್ಲ ಹೊರಟುಹೋದರು. ನಾನೊಬ್ಬನೇ ಕಾರು ಹತ್ತಿಕೊಂಡು ಮನೆಗೆ ಬಂದೆ. ಒಳಗೆ ಕಾಲಿಡುತ್ತಲೇ ಏನೋ ಖಾಲಿಯಾಗಿದೆ ಎನ್ನಿಸುತ್ತಿತ್ತು. ಕಾರಿನಲ್ಲಿ ತುಂಬಿಸಿಕೊಂಡು ಬಂದಿದ್ದ ಸಾಮಾನುಗಳನ್ನು ಮನೆಯೊಳಗೆ ಜೋಡಿಸಿಟ್ಟು ಮನೆಯವರು ಬರುವುದಕ್ಕಾಗಿ ಕಾಯುತ್ತಿದ್ದೆ. ಎಲ್ಲರೂ ಬಂದರು. ಎಲ್ಲರಿಗೂ ದಣಿವಾಗಿತ್ತು; ಊಟ ಮಾಡಿ ಮಲಗಿಬಿಟ್ಟರು. ನಾನೂ ಮಲಗಲು ಸಿದ್ಧನಾದೆ. ಆದರೆ ಮಗಳಿನ್ನೂ ಬಂದಿಲ್ಲವಲ್ಲ ಎಂದು ನನ್ನ ಒಳಮನಸ್ಸು ಹೇಳುತ್ತಿತ್ತು. ಕಣ್ಣೆವೆ ಮುಚ್ಚಲು ಸಾಧ್ಯವಾಗಲೇ ಇಲ್ಲ. ಹಜಾರದ ಸೋಫಾದ ಮೇಲೆ ಕುಳಿತು ಮಗಳು ಬಂದಾಳು ಎಂಬ ಭ್ರಮೆಯಲ್ಲಿ ಕಾಯುತ್ತ ಕುಳಿತೆ.

ಮನಸ್ಸಿನೊಳಗೆ ಏನೋ ಬೇಗುದಿ. ಎದುರಿಗೆ ನೂರಾರು ಪುಸ್ತಕಗಳಿದ್ದರೂ ಒಂದು ಸಾಲು ಕೂಡ ಓದಲು ಸಾಧ್ಯವಾಗಲಿಲ್ಲ. ಅದುವರೆಗೆ ತಿಳಿದುಕೊಂಡಿದ್ದ ನನ್ನ ಅಧ್ಯಾತ್ಮದ ಜ್ಞಾನ ಎಲ್ಲವೂ ಗಾಳಿಗೆ ತೂರಿಹೋಗಿತ್ತು. ನಾನು ದೃಢಚಿತ್ತ ಎಂಬ ಅಹಂಕಾರದ ಗುಳ್ಳೆಗೆ ಸೂಜಿಮೊನೆ ಚುಚ್ಚಿತ್ತು. ಹಾಗೂ ಹೀಗೂ ಬೆಳಗಿನ ಜಾವ ನಾಲ್ಕೂವರೆ ಆಯಿತು. ಅಲಾರಂ ಇಟ್ಟದ್ದು ಐದೂವರೆಗೆ. ನಿದ್ದೆಯೇ ಬಾರದಿದ್ದವನಿಗೆ ಅಲಾರಂ ಹಂಗೇಕೆ? ಎದ್ದು ಹೋಗಿ ಹಾಲನ್ನಾದರೂ ತರೋಣ ಎಂದು ಹಲ್ಲುಜ್ಜಲು ಸಿಂಕ್ ಎದುರು ಹೋದರೆ ಅಲ್ಲಿ ಮಗಳ ಟೂತ್‌ಬ್ರಶ್ ಇಲ್ಲದ್ದು ಗಮನಕ್ಕೆ ಬಂತು.

ಚಪ್ಪರ ಕಂಡಾಗ ನೋವು

ಮನಸ್ಸು ಭಾರವಾಯಿತು. ಬಚ್ಚಲುಮನೆಯಲ್ಲೇ ಹಲ್ಲು ಜ್ಜೋಣ ಎಂದು ಹೋದರೆ ಅಲ್ಲಿ ಮಗಳ ಸಾಬೂನು, ಶಾಂಪೂ ಯಾವುದೂ ಇರಲಿಲ್ಲ. ಮನಸ್ಸು ಪಾತಾಳ ಹಿಡಿಯಿತು. ಸ್ವಲ್ಪ ಓಡಾಡಿದರೆ ಮನಸ್ಸು ಹಗುರಾಗಬಹುದು ಎಂದು ರಸ್ತೆಗಿಳಿದರೆ ಮಗಳ ಹೆಜ್ಜೆಯ ಗುರುತು ಈ ರಸ್ತೆಯ ಅಂಗುಲಂಗುಲದಲ್ಲಿಯೂ ಉಳಿದುಕೊಂಡಿದೆ ಎಂಬ ಭಾವ. ವಾಕಿಂಗ್ ಹೋಗಲಾರದೆ ಹಾಲು ತೆಗೆದುಕೊಂಡು ಮನೆಗೆ ಮರಳಿದರೆ ಮನೆಯ ಎದುರು ಹಾಕಿದ್ದ ಚಪ್ಪರ. ಅದನ್ನು ಬಿಚ್ಚಿ ನಾಶ ಮಾಡಬೇಕೆನ್ನಿಸಿತು. ಆದರೆ, ನಾಲ್ಕು ದಿನ ಚಪ್ಪರ ಅಳಿಯ ಬಾರದಂತೆ. ನಾನು ಇದನ್ನೆಲ್ಲ ನಂಬದಿರುವವನಾದರೂ ಅದೇಕೋ ಇನ್ನೊಂದು ದಿನ ಕಾಯೋಣ ಎನ್ನಿಸಿತು.

ಮನೆಯ ಗೇಟಿನೊಳಗೆ ಪ್ರವೇಶ ಮಾಡಿ ಚಪ್ಪಲಿ ಕಳಚುವಾಗ ಮಗಳ ಚಪ್ಪಲಿಯೂ ಇಲ್ಲದ್ದು ಗಮನಕ್ಕೆ ಬಂದಿತು. ಅವಳಿಗೆ ವಿಧವಿಧ ವಿನ್ಯಾಸದ ಚಪ್ಪಲಿ ಖರೀದಿಸುವ ಹವ್ಯಾಸ. ಚಪ್ಪಲಿಗಾಗಿಯೇ ಒಂದು 'ಕಬರ್ಡ್' ಖರೀದಿಸಿದ್ದಳು. ಇಂದು ಒಂದು ಚಪ್ಪಲಿಯೂ ಇಲ್ಲ. ಮನೆಯ ಒಳಗೆ ಹೋಗುವ ಮನಸ್ಸಾಗಲಿಲ್ಲ. ಅಲ್ಲಿಯೇ ರಸ್ತೆ ನೋಡುತ್ತ ನಿಂತೆ.

ಹಿಂದಿನಿಂದ ಯಾವುದೋ ಚಿಕ್ಕ ಹುಡುಗಿ ಕಿಲಕಿಲ ನಗುತ್ತಿದ್ದ ಶಬ್ದ ಕೇಳಿಸಿತು. ತಿರುಗಿ ನೋಡಿದರೆ ಯಾರೂ ಇರಲಿಲ್ಲ. ಪೋರ್ಟಿಕೋದಲ್ಲಿ ನೇತಾಡುತ್ತಿದ್ದ ಉಯ್ಯಾಲೆಯ ಮೇಲೆ ಅವಳು ಮಗುವಾಗಿದ್ದಾಗ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತೂಗುತ್ತಿದ್ದೆ. ಅವಳ ಅಣ್ಣ ಸ್ವಲ್ಪ ದೂರದಿಂದ 'ಅಣ್ಣ ಪಿಟ್ಟಾ' ಎಂದು ಓಡಿಬಂದು ಅವಳ ಕಾಲೆಳೆಯುತ್ತಿದ್ದ. ಹಾಗೆ ಪ್ರತಿಬಾರಿಯೂ ಮುಟ್ಟಿದಾಗ ಆಕೆ ಕೇಕೆ ಹಾಕಿ ನಗುತ್ತಿದ್ದಳು. ಮಗಳೂ ಇಲ್ಲ, ಮಗನೂ ಇಲ್ಲ, ಉಯ್ಯಾಲೆಯೂ ಇಲ್ಲ ಎಂದು ಅರಿವಾಗಿ ಮನಸ್ಸು ಪಿಚ್ಚೆನಿಸಿತು.

ಈ ಖಿನ್ನತೆಯಿಂದ ಹೊರಬರಲು ಧ್ಯಾನವನ್ನಾದರೂ ಮಾಡೋಣ ಎಂದು ಮೊದಲನೇ ಮಹಡಿ ಹತ್ತಿದೆ. ಕಾಲು ಅನಿಯಂತ್ರಿತವಾಗಿ ಮಗಳ ಕೋಣೆಯತ್ತ ಹೋಯಿತು. ಕೋಣೆಯ ಬಾಗಿಲು ಹಾರು ಹೊಡೆದಿತ್ತು. ತಡರಾತ್ರಿಯವರೆಗೂ ಕೆಲಸ ಮಾಡುತ್ತಲೋ, ಅಧ್ಯಯನ ಮಾಡುತ್ತಲೋ ನಂತರ ಮಲಗುತ್ತಿದ್ದ ಆಕೆ ಸಾಮಾನ್ಯವಾಗಿ ಏಳುವುದು ತಡವಾಗುತ್ತಿತ್ತು. ಅವಳ ಈ ಅಭ್ಯಾಸ ನನಗೆ ಇಷ್ಟವಾಗುತ್ತಿರಲಿಲ್ಲ. ಆದರೆ ಇಂದು ಆಕೆ ಇಲ್ಲಿಯೇ ಇನ್ನೂ ಮಲಗಿದ್ದರೆ ಒಳ್ಳೆಯದಿತ್ತು ಎನ್ನಿಸಿತು.

ಕೋಣೆಯೊಳಗೆ ಬಂದರೆ ಕಪಾಟಿನಲ್ಲಿ ತುಂಬಿಸಿಟ್ಟಿದ್ದ ಪುಸ್ತಕಗಳನ್ನು ಬಿಟ್ಟರೆ ಮಗಳ ಯಾವ ವಸ್ತುವೂ ಕಾಣಿಸಲಿಲ್ಲ. ಆಕೆಯ ಬಟ್ಟೆಬರೆ, ಶೃಂಗಾರ ಸಾಧನಗಳು, ಲ್ಯಾಪ್‌ಟಾಪ್, ಇತರ ಯಾವ ಸಾಮಗ್ರಿಗಳೂ ಇರಲಿಲ್ಲ. ಇಡೀ ಮನೆಯೇ ಶೂನ್ಯವಾಗಿತ್ತು.

ಜಿನುಗಿದ ಕಣ್ಣೀರು

ಎಂದಿನಂತೆ ಮಹಡಿಯ ಹಜಾರದಲ್ಲಿ ಸುದರ್ಶನ ಕ್ರಿಯೆ ಮಾಡಲು ತೊಡಗಿದೆ. ಕ್ರಿಯೆಯ ಕೊನೆಯ ಹಂತಕ್ಕೆ ಬಂದಾಗ ಎದೆಯಲ್ಲಿ ಹೆಪ್ಪುಗಟ್ಟಿದ್ದ ಭಾವನೆಗಳೆಲ್ಲ ಉಮ್ಮಳಿಸಿಬಂದು ಕಣ್ಣಿನಿಂದ ನೀರು ಧಾರೆಧಾರೆಯಾಗಿ ಸುರಿಯಲು ತೊಡಗಿತು. ನನಗೆ ಹತ್ತು ವರ್ಷವಾಗಿದ್ದಾಗ ನಾನು ಅಮ್ಮನನ್ನು ಕಳೆದುಕೊಂಡೆ, ನಂತರ ಬಹುಬೇಗ ಅಪ್ಪಯ್ಯನೂ ದೂರವಾದರು. ಆಗ ಅಳದಿದ್ದ ನನ್ನ ಕಣ್ಣಿನಿಂದ ಈ ವಯಸ್ಸಿನಲ್ಲಿ ನೀರು ಜಿನುಗುತ್ತಿದ್ದು ಅರಿವಾಗಿ ನಾಚಿಕೆಯಾಯಿತು. ಆದರೆ ಯಾವುದೂ ನನ್ನ ನಿಯಂತ್ರಣದಲ್ಲಿರಲಿಲ್ಲ.

ಮಗಳ ಅಗಲಿಕೆ ನಮಗೇನೂ ಹೊಸದಲ್ಲ. ದೂರದ ಮಣಿಪಾಲದಲ್ಲಿ ಎರಡು ವರ್ಷ ಎಂ.ಎ. ಓದುತ್ತಿದ್ದಾಗ, ನಂತರ ಉತ್ತರಾಖಂಡದ ಪಿತೋರ್‌ಗಢದಲ್ಲಿ ಒಂದು ವರ್ಷ ಆಕೆ ನಮ್ಮಿಂದ ದೂರವೇ ಉಳಿದಿದ್ದಳು. ಆದರೆ, ಈಗ ಇಲ್ಲೇ ಗಾಂಧಿಬಜಾರಿನಲ್ಲಿಯೇ ಮನೆಮಾಡಿದ್ದರೂ ಆಕೆ ಶಾಶ್ವತವಾಗಿ ನಮ್ಮಿಂದ ದೂರವಾಗಿದ್ದಾಳೆ ಎಂಬ ಭಾವನೆ. ಈ ಮನೆಯ ಕಿಟಕಿ, ಬಾಗಿಲು, ಮೇಜು, ನೆಲ, ಮೆಟ್ಟಿಲು, ಕುರ್ಚಿ, ಮಂಚ, ಟಿವಿ. ಎಲ್ಲವೂ ಆಕೆಯನ್ನು ನೆನೆಸಿಕೊಳ್ಳುತ್ತ ಮೌನವಾಗಿ ರೋದಿಸುತ್ತಿವೆಯೇನೋ ಎಂಬಂತಿತ್ತು.

ಕಿತ್ತು ಹಾಕಿದೆ ಆ ಚಪ್ಪರವನ್ನು!

ಗೊತ್ತಿಲ್ಲ, ಮಗಳು ಮನೆಯಲ್ಲಿಲ್ಲದ ಮೊದಲ ದಿನ ದುಗುಡವನ್ನು ಬಸಿರಲ್ಲಿ ಹೊತ್ತ ಮೌನ ಮುಕ್ಕುರಿದು ಬರುತ್ತಿತ್ತು ಎಂದರೆ ಹೋಲಿಕೆ ಸರಿಯಿಲ್ಲ ಎಂದು ನಿಮಗೆ ಅನ್ನಿಸಬಹುದು. ಆದರೆ ಇದಕ್ಕಿಂತ ಬೇರೆ ಹೋಲಿಕೆ ಕೊಡಲು ನನ್ನಿಂದ ಸಾಧ್ಯವಿಲ್ಲ. ಇನ್ನೊಂದು ದಿನವೂ ಕಳೆಯಿತು. ಯಥಾಪ್ರಕಾರ ನಿದ್ರೆಯಿಲ್ಲ. ಬೆಳಗಾಗುತ್ತಲೇ ಮೊದಲು ಮಾಡಿದ ಕೆಲಸ, ಮನೆಯ ಎದುರಿಗಿದ್ದ ಚಪ್ಪರವನ್ನು ತೆಗೆದು ಹಾಕಿದೆ. ಅದನ್ನು ತೆಗೆಯುವಾಗ ಮನಸ್ಸಿನ ಯಾವುದೋ ಮೂಲೆಯಲ್ಲಿ ಪ್ರತೀಕಾರದ ರೊಚ್ಚು ಉದಿಸಿತ್ತು ಎಂದು ಕಾಣುತ್ತದೆ. ಅಷ್ಟಕ್ಕೂ ಈ ಚಪ್ಪರವೇ ಮಗಳ ವಿದಾಯಕ್ಕೆ ನಾಂದಿ ಹಾಡಿದ್ದಲ್ಲವೇ? ಮಗಳ ವಿದಾಯದ ಸಂದರ್ಭದಲ್ಲಿ ನಿಮಗೂ ಹೀಗನ್ನಿಸಿತ್ತೇ?

ಹಸಿರು ಹಕ್ಕಿಗಳ ಹಸಿರಾದ ಪ್ರೀತಿ

● ಹೊಸ್ಮನೆ ಮುತ್ತು

ಬೆಳಿಗ್ಗೆ ಕಿಟಕಿಯಿಂದ ಹೊರ ನೋಡುತ್ತಿದ್ದಾಗ, ಪ್ರೀತಿ, ವಿಶ್ವಾಸ ಮತ್ತು ಪರಸ್ಪರ ಕಾಳಜಿಯ ಅದ್ಭುತ ಸಂಕೇತವೊಂದು ಕಣ್ಣಿಗೆ ಬಿತ್ತು. ಎರಡು ಪುಟ್ಟ ಹಸಿರು ಗಿಳಿಗಳು ಕಿಟಕಿಯ ಅಂಚಿನಲ್ಲಿ ಕುಳಿತಿದ್ದವು. ಒಂದು ಗಿಳಿ ಇನ್ನೊಂದರ ಮೇಲೆ ಆರಾಮವಾಗಿ ಒರಗಿ, ತನ್ನ ಮುಖವನ್ನು ಅದರ ತಲೆಯ ಮೇಲೆ ಇಟ್ಟುಕೊಂಡಿತ್ತು. ಮತ್ತೊಂದು ಗಿಳಿ ಆ ಪ್ರೀತಿಯ ಆಲಿಂಗನವನ್ನು ಸ್ವೀಕರಿಸುತ್ತಾ, ಕಣ್ಣುಮುಚ್ಚಿ ಸಂಪೂರ್ಣವಾಗಿ ಅದರ ಆಸರೆಯಲ್ಲಿ ವಿಶ್ರಮಿಸುತ್ತಿರುವಂತೆ ಭಾಸವಾಗುತ್ತಿತ್ತು.

ಎಷ್ಟೋ ಹೊತ್ತು ಅವು ಆ ಭಂಗಿಯಲ್ಲೇ ಇದ್ದವು; ಆ ಆಲಿಂಗನದಲ್ಲಿ ಅವುಗಳ ನಡುವಿನ ಆಳವಾದ ಬಾಂಧವ್ಯ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಆ ಪುಟ್ಟ ಜೀವಗಳ ನಿಷ್ಕಲ್ಮಷ ಪ್ರೀತಿ ಎಷ್ಟೊಂದು ಪವಿತ್ರ! ಬಾಹ್ಯ ಪ್ರಪಂಚದ ಯಾವುದೇ ಅರಿವಿಲ್ಲದೆ, ತಮ್ಮದೇ ಆದ ಪುಟ್ಟ ಪ್ರಪಂಚದಲ್ಲಿ ಕಳೆದುಹೋಗಿದ್ದವು. ಅವುಗಳ ಚಲನವಲನಗಳು, ಆ ಅಪ್ಪಿಕೊಳ್ಳುವಿಕೆಯ ಭಂಗಿ, ಎಲ್ಲವೂ ಕೇವಲ ದೈಹಿಕವಲ್ಲದ, ಭಾವನಾತ್ಮಕ ಬಂಧವೊಂದನ್ನು ಸಾರುತ್ತಿದ್ದವು.

ನಗರದ ಗದ್ದಲದ ಯಾಂತ್ರಿಕ ಜೀವನದಲ್ಲಿ ನಾವು ಕಳೆದುಹೋಗಿರುವಾಗ, ಇಂತಹ ಪುಟ್ಟ ದೃಶ್ಯಗಳು ಮನಸ್ಸಿಗೆ ನೆಮ್ಮದಿ ಮತ್ತು ಸಂತೋಷವನ್ನು ತರುತ್ತವೆ. ಪ್ರಕೃತಿಯ ಸೌಂದರ್ಯ ಮತ್ತು ನಿಷ್ಕಲ್ಮಷವಾದ ಪ್ರೀತಿ ಇಂತಹ ಸಣ್ಣ-ಪುಟ್ಟ ಘಟನೆಗಳಲ್ಲೇ ಅಡಗಿರುತ್ತವೆ. ಮೌನ ಆಲಿಂಗನದ ಮೂಲಕ, ಪ್ರೀತಿ ಮತ್ತು ಸಹಬಾಳ್ವೆಯ ಮಹತ್ವವನ್ನು ಅವು ಸಾರಿ ಹೇಳಿದವು. ಕೆಲ ಸಮಯದ ಬಳಿಕ, ಯಾವುದೇ ಸದ್ದು ಮಾಡದೆ, ಆ ಹಸಿರು ಹಕ್ಕಿಗಳು ಹಾರಿಹೋದವು.

ಪ್ರಕೃತಿಯಲ್ಲಿನ ಸಣ್ಣ ಸಣ್ಣ ಜೀವಗಳೂ ಕೂಡ ಪ್ರೀತಿ, ವಾತ್ಸಲ್ಯ, ಮತ್ತು ಬಾಂಧವ್ಯವನ್ನು ಹೇಗೆ ವ್ಯಕ್ತಪಡಿಸುತ್ತವೆ ಎಂಬುದಕ್ಕೆ ಇದೊಂದು ನಿದರ್ಶನ. ಈ ಪುಟ್ಟ ಗಿಳಿಗಳು ಪ್ರೀತಿಯ ಮಹತ್ವ ಮತ್ತು ಜೀವನದ ಸಣ್ಣ ಸಣ್ಣ ಸಂತೋಷಗಳನ್ನು ಆಸ್ವಾದಿಸುವ ಕಲೆಯನ್ನು ನನಗೆ ಪುನಃ ನೆನಪಿಸಿದವು.

ಪುಸ್ತಕಲೋಕ



ನೆಹರು ಜೀವನಚರಿತ್ರೆ

ನಮ್ಮ ದೇಶದಲ್ಲಿ 1975-77ರ ಅವಧಿಯಲ್ಲಿ ತುರ್ತುಪರಿಸ್ಥಿತಿ ಇದ್ದಾಗ, ಹಲವು ಪುಸ್ತಕಗಳನ್ನು ನಿಷೇಧಿಸಲಾಗಿದ್ದು, ಅವುಗಳಲ್ಲಿ, ಮೈಕೆಲ್ ಎಡ್ವರ್ಡ್ಸ್ ಎಂಬಾತ ರಚಿಸಿದ, ನೆಹರು, ಎ ಪೊಲಿಟಿಕಲ್ ಬಯಾಗ್ರಫಿ ಎಂಬ ಪುಸ್ತಕವೂ ಒಂದು. ಬಿಡುಗಡೆಯಾದಾಗ ಸಾಕಷ್ಟು ಕುತೂಹಲ ಕೆರಳಿಸಿದ್ದ ಈ ಪುಸ್ತಕದಲ್ಲಿ, ಕೆಲವು ತಪ್ಪು ಮಾಹಿತಿಗಳು ನುಸುಳಿವೆ ಎಂಬ ಕಾರಣವೊಡ್ಡಿ ಈ ಪುಸ್ತಕವನ್ನು ನಿಷೇಧಿಸಲಾಯಿತು.

ಕೊಲ್ಲಿಯಲಿ ಕೊಳ್ಳಿ

ಕೊಲ್ಲಿ ರಾಷ್ಟ್ರಕೆ ಕೊಳ್ಳಿಯಿಟ್ಟ ದೊಡ್ಡಣ್ಣ!
ತಿರುಗೇಟಿಗೆ ನಾಚಿಕೆ ಆಗಿಲ್ಲವೇ ಅಣ್ಣ?
ಶಾಂತಿದೂತ ನೀನಾದರೇ ಬಹಳ ಚೆನ್ನ,
ಇಲ್ಲದೇ ಹೋದರೆ ನಿನಗೂ ಕಾದಿದೆ ಗುನ್ನ!

● ಮಹೇಶ್ ಹೊಸಮನಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಹುರುಪು, ಹುಮ್ಮಸ್ಸು (3)
5. ಒತ್ತು ಇಲ್ಲದ ತಾತನಿಂದ ಹೆಬ್ಬಾವು ಆರಂಭ(4)
6. ಭೂಮಿಯ ಕೆಳಗಿರುವ ಲೋಕ (4)
11. ಕುದುರೆಯ ಮುಖವೆಂಬ ನಾಟಕ (5)
13. ನಿರಂತರ ಎಂದರ್ಥ (4)
16. ಕಡಿಯುವಾಗ ಹಾಕಿದ ಲಗಾಮು (4)
17. ಜೋಡಿಗೆ ಮತ್ತೊಂದು ಹೆಸರು (3)

ಮೇಲಿಂದ ಕೆಳಕ್ಕೆ

1. ಸೋಲು (4)
2. ಹೊಟ್ಟೆಯ ಬೆಲೆ ಎಷ್ಟು? (3)
3. ಪಡಸಾಲೆಯಿದೆ ಹರನ ನಡುವೆ (3)
4. ದೇವತೆಗಳು ಕುಡಿದು ಅಮರರಾದರು (3)
7. ಸಲಕರಣೆ (3)
8. ಮನಸ್ಸಿನ ಓಘ (3)
9. ಇದೊಂದು ಬಗೆಯ ಧಾನ್ಯ (3)
10. ಭಯಪಡು ಎನ್ನುವುದು ತಲೆಕೆಳಗಾಗಿದೆ (3)
11. ಸಮೀಪ (3)
12. ಸೈನಿಕರ ದಿನನಿತ್ಯದ ಶಿಕ್ಷಣ (4)
14. ಮಾರಾಟ (3)
15. ಮಗ (3)
16. ಎರಡು ಕಡೆಯಿಂದ ಚಿನ್ನ (3)

ಸರಿಯುತ್ತರಗಳು

ಮೇಲಿಂದ ಕೆಳಕ್ಕೆ: 1. ಪರಾಜಯ 2. ಉದರ 3. ಹಜಾರ 4. ಅಮೃತ 7. ಸಾಧನ 8. ಲಹರಿ 9. ನವಣೆ 10. ಕುಳುಅ 11. ಹತ್ತಿರ 12. ಕವಾಯಿತು 14. ವಿಕ್ರಯ 15. ತನಯ 16. ಕನಕ

ಎಡದಿಂದ ಬಲಕ್ಕೆ: 2. ಉತ್ಸಾಹ 5. ಅಜಗರ 6. ರಸಾತಲ 11. ಹಯವದನ 13. ಅವಿರತ 16. ಕಡಿವಾಣ 17. ಯಮಕ

ಪಾರಿವಾಳಕ್ಕಾಗಿ ಜೀವವನ್ನೇ ಒತ್ತೆಯಿಟ್ಟ ಮೇಘರಥ

ಶಾಂತಿನಾಥ ಹಿಂದಿನ ಅವತಾರದಲ್ಲಿ ಮಹಾವಿದೇಹ ಪ್ರದೇಶದ ಪುಂಡರೀಕಗಿರಿ ಪಟ್ಟಣದ ರಾಜ ಧನರಥನ ಮಗ ಮೇಘರಥನಾಗಿ ಜನಿಸಿದ್ದನು . ರಾಜ ಧನರಥನು ತನ್ನ ಮಗನಿಗೆ ಸಿಂಹಾಸನವನ್ನು ಕೊಟ್ಟು ತಪಸ್ವಿಯಾದನು. ಮೇಘರಥನು ಧರ್ಮಪರಿಪಾಲಕನಷ್ಟೇ ಅಲ್ಲ ಬಹಳ ಕರುಣಾಮಯಿ. ಪ್ರಜೆಗಳಿಗಾಗಿ ಮಿಡಿಯುವ ಮನಸ್ಸು ಅವನದು.

ಒಂದು ದಿನ ಭಯದಿಂದ ನಡುಗುತ್ತಿದ್ದ ಪಾರಿವಾಳದೊಂದು ಅವನ ಮಡಿಲಲ್ಲಿ ಬಿದ್ದು ಮಾನವ ಧ್ವನಿಯಲ್ಲಿ, ಓ ರಾಜ, ನನ್ನನ್ನು ರಕ್ಷಿಸು! ನನಗೆ ಆಶ್ರಯ ನೀಡು; ನನ್ನನ್ನು ನಿನ್ನ ರಕ್ಷಣೆಯಲ್ಲಿ ತೆಗೆದುಕೊ! ಎಂದು ಅಂಗಲಾಚಿತು. ರಾಜ ಅದರ ತಲೆಸವರಿ ಅಭಯವನಿತ್ತನು.

ಆ ಪಾರಿವಾಳವನ್ನು ಹಿಂಬಾಲಿಸಿ ಬಂದ ಗಿಡುಗವೊಂದು ಮಾನವ ಭಾಷೆಯಲ್ಲಿ, ಓ ರಾಜ! ಈ ಪಾರಿವಾಳ ನನ್ನ ಆಹಾರ, ಅದನ್ನು ಬಿಟ್ಟುಬಿಡು ಎಂದು ಗುಡುಗಿತು. ರಾಜನು ಸಮಾಧಾನದಿಂದ ಇದು ನನ್ನಲ್ಲಿ ಆಶ್ರಯ ಪಡೆದಿದೆ, ಆದ್ದರಿಂದ ನಾನು ಅದನ್ನು ರಕ್ಷಿಸುವ ಕರ್ತವ್ಯವನ್ನು ಸ್ವೀಕರಿಸಿದ್ದೇನೆ. ನೀನು ಬಯಸುವ ಯಾವುದೇ ರೀತಿಯ ಆಹಾರವನ್ನು ನಾನು ನಿನಗೆ ನೀಡುತ್ತೇನೆ; ಮತ್ತೊಂದು ಪಕ್ಷಿಯನ್ನು ಕೊಂದು ತಿನ್ನುವುದು ಅನ್ಯಾಯವಲ್ಲವೇ? ಎಂದನು.

ಅದನ್ನು ಕೇಳಿ ನಕ್ಕ ಗಿಡುಗ, ಭಗವಂತ ನನ್ನನ್ನು ಮಾಡಿರುವುದೇ ಹೀಗೆ. ಇದು ಪ್ರಕೃತಿ ನಿಯಮ. ನೀನು ಅದಕ್ಕೆ ವಿರುದ್ಧವಾಗಿ ವರ್ತಿಸುವ ಹಾಗಿಲ್ಲ. ನನ್ನ ಆಹಾರ ನೀನು ಕಸಿದುಕೊಳ್ಳಲಾಗದು ಎಂದಿತು. ನಾನು ಆಹಾರವಿಲ್ಲದೆ ಸತ್ತರೆ ಆ ಪಾಪ ನಿನ್ನನ್ನು ಸುತ್ತಿಕೊಳ್ಳುವುದು ಎಂದಿತು.

ಗಿಡುಗ ಮಣಿಯದಿದ್ದಾಗ, ಮೇಘರಥ ಕೊನೆಗೆ, ಓ ಗಿಡುಗ! ನಾನು ಇರುವವರೆಗೂ, ನೀನು ಸಾಯಲು ಬಿಡುವುದಿಲ್ಲ. ಈ ಪುಟ್ಟ ಪಾರಿವಾಳದ ತೂಕಕ್ಕೆ ಸಮನಾದ ಮಾಂಸವನ್ನು ನನ್ನ ದೇಹದಿಂದ ಕತ್ತರಿಸಿ ನಿನಗೆ ಕೊಡುತ್ತೇನೆ. ನೀನು ತಿನ್ನುವ ನಿನ್ನ ಬಯಕೆಯನ್ನು ಪೂರೈಸಬಹುದು. ಆದರೆ ಯಾವುದೇ ಸಂದರ್ಭದಲ್ಲೂ ನನ್ನ ಆಶ್ರಯ ಪಡೆದಿರುವ ಪಕ್ಷಿಯನ್ನು ಕೊಲ್ಲಲು ನಾನು ನಿನಗೆ ಬಿಡುವುದಿಲ್ಲ ಎಂದನು. ಈ ಪ್ರಸ್ತಾಪಕ್ಕೆ ಗಿಡುಗ ಒಪ್ಪಿಕೊಂಡಿತು ಮತ್ತು ರಾಜನು ಪಾರಿವಾಳವನ್ನು ಒಂದು ತಕ್ಕಡಿಯಲ್ಲಿ ಇರಿಸಿ, ಇನ್ನೊಂದರಲ್ಲಿ ತನ್ನ ದೇಹದಿಂದ ಕತ್ತರಿಸಿದ ಮಾಂಸದ ತುಂಡುಗಳನ್ನು ಹಾಕಲು ಪ್ರಾರಂಭಿಸಿದನು. ಎಲ್ಲರೂ ದುಃಖದಿಂದ ಕಣ್ಣೀರು ಹಾಕಲಾರಂಭಿಸಿದರು.

ಎಷ್ಟು ಮಾಂಸ ಹಾಕಿದರು ಪಾರಿವಾಳದ ಸಮಕ್ಕೆ ತೂಗಲೇ ಇಲ್ಲ. ಆಸ್ಥಾನದಲ್ಲಿದ್ದ ಎಲ್ಲರೂ ಕೇವಲ ಪಾರಿವಾಳಕ್ಕಾಗಿ ಅಮೂಲ್ಯವಾದ ಜೀವವನ್ನು ತ್ಯಾಗ ಮಾಡಬೇಡ ಎಂದು ಅವರು ರಾಜನನ್ನು ಕೇಳಿ ಕೊಂಡರು ಆದರೆ ರಾಜ ನಿರಾಕರಿಸಿದನು. ಗಿಡುಗವನ್ನು ಸಹ ಕ್ಷಮಿಸುವಂತೆ ಕೇಳಲಾಯಿತು ಆದರೆ ಅದು ಕೂಡ ನಿರಾಕರಿಸಿತು.

ಕೊನೆಗೆ, ಮಾಂಸದ ತುಂಡುಗಳು ಸಾಕಾಗದಿದ್ದಾಗ, ರಾಜನು ತನ್ನ ಆಸನದಿಂದ ಎದ್ದು ತಕ್ಕಡಿಯಲ್ಲಿ ಕುಳಿತನು. ರಾಜನು ಪ್ರದರ್ಶಿಸಿದ ಈ ಉಚ್ಚ ಕರುಣೆ ಮತ್ತು ಶೌರ್ಯಕ್ಕೆ ಅಲ್ಲಿದ್ದ ಎಲ್ಲರೂ ಮೂಕವಿಸ್ಮಿತರಾದರು. ಇದ್ದಕ್ಕಿದ್ದಂತೆ, ದೈವಿಕ ಬೆಳಕಿನ ಮಿಂಚು ಕಾಣಿಸಿಕೊಂಡಿತು , ದೈವಿಕ ಕಳೆಯುಳ್ಳ ದೇವತೆ ಒಬ್ಬ ಪ್ರತ್ಯಕ್ಷನಾದನು. ಪಾರಿವಾಳ ಮತ್ತು ಗಿಡುಗ ಕಣ್ಮರೆಯಾದವು. ದೇವತೆ ರಾಜನನ್ನು ಉದ್ದೇಶಿಸಿ, ಮಹಾರಾಜ! ದೇವತೆಗಳ ರಾಜನು ತನ್ನ ಸಭೆಯಲ್ಲಿ ನಿಮ್ಮ ಕರುಣೆ ಮತ್ತು ಧೈರ್ಯವನ್ನು ಹೊಗಳುತ್ತಿದ್ದನು. ನಾನು ನಿಮ್ಮನ್ನು ತಡೆದುಕೊಳ್ಳಲು ಸಾಧ್ಯವಾಗಲಿಲ್ಲ ನಿನ್ನನ್ನು ಪರೀಕ್ಷಿಸಲು ಬಂದೆ. ಇದೆಲ್ಲವೂ ನನ್ನ ಸೃಷ್ಟಿ ಎಂದನು. ನೋಡುತ್ತಿದ್ದಂತೆಯೇ ರಾಜ ಮೊದಲಿನಂತಾದ. ಶೌರ್ಯ ಮತ್ತು ಕರುಣೆಯ ಬಗ್ಗೆ ಮಾತು ಬಂದಾಗಲೆಲ್ಲಾ, ರಾಜ ಮೇಘರಥನ ಹೆಸರನ್ನು ಗೌರವದಿಂದ ತೆಗೆದುಕೊಳ್ಳಲಾಗುತ್ತದೆ. ರಾಜ ಮೇಘರಥನ ಅಸಾಮಾನ್ಯ ಕರುಣೆ ಮತ್ತು ದೃಢಸಂಕಲ್ಪವು ದೇವತೆಗಳೂ ಅವನಿಗೆ ಭಕ್ತಿಯಿಂದ ನಮಸ್ಕರಿಸುವಂತೆ ಮಾಡಿತು.

ನಾವು ನಂಬಿದ ತತ್ವಕ್ಕಾಗಿ ಕೆಲವೊಮ್ಮೆ ದೊಡ್ಡ ತ್ಯಾಗವನ್ನೇ ಮಾಡಬೇಕಾಗುತ್ತದೆ. ನಮ್ಮ ಮಾತು ಮತ್ತು ಕೃತಿಗಳು ಬೇರೆಯಾದಾಗ, ಅಲ್ಲಿ ಗೌರವ ಇರುವುದಿಲ್ಲ. ಎಂದು ನಾವು ಮಾತನಾಡುವಂತೆಯೇ ನಡೆದುಕೊಳ್ಳುತ್ತೇವೋ ಅಂದು ಎಲ್ಲರ ಕಣ್ಣಿನಲ್ಲೂ ದೊಡ್ಡವರಾಗುತ್ತೇವೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸಹಾಯ ಮಾಡಿದಾಗ ಬದುಕಿಗೆ ಅರ್ಥ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು - ಮಂಕುತಿಮ್ಮ॥

ನೀನು ಏನಾಗದಿದ್ದರೂ ತೃಣವಾಗಿ ಹುಲ್ಲಾಗು, ಮನೆಯಲ್ಲಿ ಮಲ್ಲಿಗೆಯಂತೆ ಸುವಾಸನೆ ತರುವಂತವನಾಗು, ಸಮಯ ಎಂಬುವ ವಿಧಿಯು ನಿನ್ನ ಮೇಲೆ ಕಷ್ಟಗಳೆಂಬ ಮಳೆಯನ್ನು ಸುರಿಸುವಾಗ ಕಲ್ಲಿನಂತೆ ಎದೆಯನ್ನು ಗಟ್ಟಿಯಾಗಿಸಿಕೋ. ಈ ಸಮಾಜದ ದೀನರು, ದುರ್ಬಲರು, ದಲಿತರಿಗೆ ಬೆಲ್ಲ ಸಕ್ಕರೆಯಂತಾಗಿ ಎಂದಿಗೂ ಸಹಾಯ ಮಾಡುತ್ತಲೇ ಇರು, ಕೊನೆಗೆ ಎಲ್ಲರಲ್ಲಿಯೂ ನಾನು ಒಬ್ಬ, ನಾನೇನು ಅತೀತನಲ್ಲ ಎಂಬ ಭಾವ ತಳೆದು ಎಲ್ಲರೊಳಗೊಂದಾಗಿ ನಿನ್ನ ಬದುಕನ್ನು ಸಾಗಿಸಿ ಸಾರ್ಥಕ್ಯಗೊಳಿಸಿಕೋ ಎಂದು ಇಲ್ಲಿ ಹೇಳಿದ್ದಾರೆ.

ಜೀವನದಲ್ಲಿ ನಾವು ಹೇಗಿರಬೇಕು? ಏನಾಗಿರಬೇಕೆಂದು ಈ ಪದ್ಯ ಹೇಳುತ್ತದೆ. ಏನಾಗದಿದ್ದರೂ ಪರವಾಗಿಲ್ಲ ಮೊದಲು ಮಾನವನಾಗು ಎಂಬ ಸೂಕ್ತಿ ಈ ಪದ್ಯದಲ್ಲಿದೆ. ಈ ಜಗತ್ತು ಎಂಬ ಸಾಗರದಲ್ಲಿ ನಮ್ಮಯ ಬದುಕು ಎಂಬ ಯಾನವು ಸಾಗುತ್ತಲೇ ಇರುತ್ತದೆ. ಹುಟ್ಟು ಸಾವುಗಳ ನಡುವೆ ನಾವು ನಮ್ಮ ಜೀವನವನ್ನು ಹೇಗೆ ಕಟ್ಟಿಕೊಳ್ಳಬೇಕು? ಜೀವಿತಾವಧಿಯಲ್ಲಿ ಮಾನವೀಯತೆ, ಮನುಷ್ಯತ್ವಗಳನ್ನು ಹೇಗೆ ಪರಿಪಾಲಿಸಲೂ ಬೇಕು ಎಂಬುದನ್ನು ಈ ಪದ್ಯದಲ್ಲಿ ತಿಳಿಸಿದ್ದಾರೆ.

ನೀನು ಹುಲ್ಲಾದರೆ (ತೃಣ) ಯಾವುದೋ ಒಂದು ಜಿಂಕೆಯೋ, ಹಸುವೋ, ಕಾಡು ಪ್ರಾಣಿಯೋ ಅದನ್ನು ಸೇವಿಸಿ ಹಸಿವನ್ನು ಹಿಂಗಿಸಿಕೊಳ್ಳುತ್ತದೆ. ಆ ಪ್ರಾಣಿಯ ಹಸಿವನ್ನು ಹಿಂಗಿಸಿದ ಪಾರಮಾರ್ಥಿಕತೆ ಆ ಹುಲ್ಲಿಗೆ ಸಿಗುತ್ತದೆ. ಇದರಿಂದ ಹುಲ್ಲಿನ ಜೀವನವೂ ಪಾವನವಾಗಿ ಹಸಿವನ್ನು ನೀಗಿಸಿದ ಪುಣ್ಯ ಪ್ರಾಪ್ತಿಯಾಗುತ್ತದೆ, ಮನೆಯ ಯಾವುದೋ ಒಂದು ಮೂಲೆಯಲ್ಲಿಟ್ಟಿದ್ದ ಮಲ್ಲಿಗೆಯಿಂದ ಬರುವ ಸುವಾಸನೆಯು ಇಡೀ ಮನೆಯನ್ನು ಆವರಿಸಿಕೊಂಡು ಇಡೀ ಮನೆಯೇ ಸುವಾಸನೆ ಭರಿತವಾಗುವಂತೆ, ನೀನು ಮನೆಯೊಳಗಿದ್ದರೆ ನಿನ್ನಿಂದ ಸುವಾಸನೆ ಬರುವಂತಾಗುವಂತೆ ಜೀವನ ನಡೆಸು. ಅಂತೆಯೇ ಈ ಸಮಯ, ವ್ಯವಸ್ಥೆ ಎನ್ನುವ ವಿಧಿಯು ನಿನ್ನ ಮೇಲೆ ಕಷ್ಟಗಳ ಮಳೆಯನ್ನು ತರುವಾಗ ನೀನು ಗೋರ್ಕಲ್ಲ ಬಂಡೆಯಂತಾಗಿಬಿಡು. ಕಷ್ಟ ಬಂದಾಗ, ಎದೆಯನ್ನು ಉಕ್ಕನ್ನಾಗಿಸಕೊಂಡು ಮತಿಯನ್ನೇ ಗದೆಯನ್ನಾಗಿಸಿಕೊಂಡು ಎದುರಿಸು. ನೀನು ನಿನ್ನ ಜೀವನದಲ್ಲಿ ಪರೋಪಕಾರಂ ಇದಂ ಶರೀರಂ ಎಂಬ ಧೃಢತೆಯ ಧ್ಯೇಯೋಕ್ತಿಯನ್ನು ಪರಿಪಾಲಿಸಿಕೊಂಡು ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ ಅಂದರೆ ಈ ಸಮಾಜದಲ್ಲಿ ದೀನರು, ದುರ್ಬಲರು, ದಲಿತರು, ಅಶಕ್ತರುಗಳಿಗೆ ಸಹಾಯ ಮಾಡುತ್ತಾ, ಅವರ ಏಳಿಗೆಗೆ ಸಹಕಾರಿಯಾಗಿ ಅಶಕ್ತರಿಗೆ ಶಕ್ತಿಯಾಗಿ, ದುರ್ಬಲರಿಗೆ ಅಭಯದಾಯಿಯಾಗಿ, ಧ್ವನಿ ಇಲ್ಲದವರಿಗೆ ನಾಲಿಗೆಯಾಗಿ ಸರ್ವರಿಗೂ ಒಳಿತನ್ನು ಬಯಸುತ್ತಾ ನೀನು ಈ ಜಗತ್ತಿನಲ್ಲಿ ನೀನೇನು ಸರ್ವ ಶ್ರೇಷ್ಠನಲ್ಲ ಎಂಬ ಭಾವ ತಳೆದು, ನಾನೇನು ಅತೀತನಲ್ಲ ಎಂಬ ನಿಗರ್ವಿಯಾಗಿ, ಎಲ್ಲರೊಳಗೊಂದಾಗಿದ್ದುಕೊಂಡು ನಿನ್ನ ಈ ಜೀವನದ ಯಾತ್ರೆಯನ್ನು ಕೈಗೊಂಡರೆ ಮಾತ್ರವೇ ಆ ಬದುಕಿಗೊಂದು ಅರ್ಥ, ಬೆಲೆ ಇರುತ್ತದೆ ಎಂದು ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಬೆನ್ ಡಕೆಟ್-ಝ್ಯಾಕ್ ಕ್ರಾವ್ಲಿ ದಾಖಲೆಯ ಜತೆಯಾಟ | 5 ಶತಕ ದಾಖಲಿಸಿದರೂ ಭಾರತಕ್ಕೆ ಸೋಲು

ಮೊದಲ ಟೆಸ್ಟ್ ಸೋತ ಗಿಲ್ ಪಡೆ

ಲೀಡ್ಸ್: ಆರಂಭಿಕ ಆಟಗಾರರಾದ ಬೆನ್ ಡಕೆಟ್-ಝ್ಯಾಕ್ ಕ್ರಾವ್ಲಿ ದಾಖಲೆಯ ಜತೆಯಾಟದ ನೆರವಿನಿಂದ ಇಂಗ್ಲೆಂಡ್ ತಂಡವು ಭಾರತದ ವಿರುದ್ಧ ಇಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ 5 ವಿಕೆಟ್‌ಗಳ ಜಯ ಗಳಿಸಿದೆ. 371 ರನ್ ಗೆಲುವಿನ ಗುರಿಯನ್ನು ಬೆಂಬತ್ತಿದ ಆಂಗ್ಲರ ಪಡೆಯು, 5 ವಿಕೆಟ್ ನಷ್ಟಕ್ಕೆ 373 ರನ್ ಗಳಿಸಿ ಗೆಲುವಿನ ಗುರಿಯನ್ನು ತಲುಪಿತು.

ಯಾವುದೇ ವಿಕೆಟ್ ನಷ್ಟವಿಲ್ಲದೆ 21 ರನ್‌ನಿಂದ ಮಂಗಳವಾರ ಬೆಳಿಗ್ಗೆ ತನ್ನ ದ್ವಿತೀಯ ಇನ್ನಿಂಗ್ಸ್ ಆಟವನ್ನು ಮುಂದುವರಿಸಿದ ಇಂಗ್ಲೆಂಡ್ ತಂಡದ ಆರಂಭಿಕ ಆಟಗಾರರಾದ ಬೆನ್ ಡಕೆಟ್-ಝ್ಯಾಕ್ ಕ್ರಾವ್ಲಿ ಜೋಡಿಯು ಮೊದಲ ವಿಕೆಟ್‌ಗೆ ದಾಖಲೆಯ ಜತೆಯಾಟವನ್ನು ಪ್ರದರ್ಶಿಸಿತು.

ಟೀಮ್ ಇಂಡಿಯಾದ ಎಲ್ಲಾ ಬೌಲರ್‌ಗಳ ವಿರುದ್ಧ ಅತ್ಯುತ್ತಮ ಪ್ರದರ್ಶನ ತೋರ್ಪಡಿಸಿ, ಮೊದಲ ವಿಕೆಟ್‌ಗೆ 188 ರನ್‌ಗಳನ್ನು ಕಲೆ ಹಾಕಿತು. ಝ್ಯಾಕ್ ಕ್ರಾವ್ಲಿ 126 ಬಾಲ್‌ಗಳನ್ನು ಎದುರಿಸಿ 65 ರನ್ ಗಳಿಸಿ ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ಕೆ.ಎಲ್ ರಾಹುಲ್‌ಗೆ ಕ್ಯಾಚ್ ನೀಡಿ ಔಟ್ ಆದರು. ಆದರೆ ಆ ಬಳಿಕ ಕ್ರೀಸ್‌ಗೆ ಬಂದ ಒಲಿ ಪೋಪ್-ಬೆನ್ ಡಕೆಟ್ ಜೋಡಿ ಹೆಚ್ಚು ರನ್ ಗಳಿಸುವಲ್ಲಿ ವಿಫಲವಾಯಿತು. ಒಲಿ ಪೋಪ್ 8 ಬಾಲ್ ಎದುರಿಸಿ 8 ರನ್ ಕಲೆ ಹಾಕಿ ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು.

ಆ ಬಳಿಕ ಬೆನ್ ಡಕೆಟ್-ಜಿಯೋ ರೂಟ್ ನಡುವೆ ಉತ್ತಮ ಜತೆಯಾಟ ಮುಂದುವರಿಯಿತು. ತಂಡದ ಮೊತ್ತ 253 ರನ್ ತಲುಪಿದಾಗ 170 ಬಾಲ್‌ಗಳನ್ನು ಎದುರಿಸಿ 149 ರನ್ ಗಳಿಸಿದ ಬೆನ್ ಡಕೆಟ್, ಶಾರ್ದೂಲ್ ಠಾಕೂರ್ ಬೌಲಿಂಗ್‌ನಲ್ಲಿ ನಿತೇಶ್ ರೆಡ್ಡಿಗೆ ಕ್ಯಾಚ್ ನೀಡಿ ಔಟ್ ಆದರು.

ಆ ನಂತರ ಕ್ರೀಸ್‌ಗೆ ಬಂದ ಹ್ಯಾರಿ ಬ್ರೂಕ್ ಯಾವುದೇ ರನ್ ಗಳಿಸದೆ, ಠಾಕೂರ್ ಬೌಲಿಂಗ್‌ನಲ್ಲಿ ಪಂತ್‌ಗೆ ಕ್ಯಾಚ್ ನೀಡಿ ಕ್ರೀಸ್‌ನಿಂದ ನಿರ್ಗಮಿಸಿದರು. ಆ ಮೂಲಕ ಶಾರ್ದೂಲ್ ಠಾಕೂರ್ ತನ್ನ ಬೌಲಿಂಗ್‌ನಲ್ಲಿ ಸತತ 2 ವಿಕೆಟ್ ಗಳಿಸುವಲ್ಲಿ ಯಶಸ್ವಿಯಾದರು. ಆ ನಂತರ ಜಿಯೋ ರೂಟ್-ಬೆನ್ ಸ್ಟೋಕ್ ಮಧ್ಯೆ ಉತ್ತಮ ಜತೆಯಾಟ ಸಾಗಿತು. 51 ಬಾಲ್‌ಗಳನ್ನು ಎದುರಿಸಿದ ಬೆನ್ ಸ್ಟೋಕ್ 33 ರನ್ ಗಳಿಸಿ ಜಡೇಜಾ ಬೌಲಿಂಗ್‌ನಲ್ಲಿ ಗಿಲ್‌ಗೆ ಕ್ಯಾಚ್ ನೀಡುವ ಮೂಲಕ ಔಟ್ ಆದರು.

ಆ ಬಳಿಕ ಜಿಯೋ ರೂಟ್ ಮತ್ತು ಜಿಮ್ಮಿ ಸ್ಮಿತ್ ನಡುವೆ 6ನೇ ವಿಕೆಟ್ ಉತ್ತಮ ಜತೆಯಾಟ ಸಾಗಿತು. ಆ ಜೋಡಿಯು ಇಂಗ್ಲೆಂಡನ್ನು ಗೆಲುವಿನ ದಡಕ್ಕೆ ತಲುಪಿಸಿದರು. ಜಿಯೋ ರೂಟ್ 53 ರನ್ ಹಾಗೂ ಜಿಮ್ಮಿ ಸ್ಮಿತ್ 44 ರನ್ ಗಳಿಸಿ ಅಜೇಯರಾಗುಳಿದರು.

72 ವರ್ಷಗಳ ಹಳೆಯ ದಾಖಲೆ ಮುರಿದ ಝ್ಯಾಕ್ ಕ್ರಾವ್ಲಿ-ಬೆನ್ ಡಕೆಟ್ ಜೋಡಿ

ಇಂಗ್ಲೆಂಡ್ ತಂಡದ ಅರಂಭಿಕ ಬ್ಯಾಟ್ಸ್‌ಮನ್‌ಗಳಾದ ಝ್ಯಾಕ್ ಕ್ರಾವ್ಲಿ ಹಾಗೂ ಬೆನ್ ಡಕೆಟ್ ಮಂಗಳವಾರದಂದು ದೊಡ್ಡ ಮೊತ್ತದ ಜತೆಯಾಟವನ್ನು ಆಡುವ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ ಬರೆದಿದ್ದಾರೆ. ಈ ಜೋಡಿಯು ಪಂದ್ಯದ ನಾಲ್ಕನೇ ಇನ್ನಿಂಗ್ಸ್‌ನಲ್ಲಿ 188 ರನ್‌ಗಳ ಜತೆಯಾಟವನ್ನು ಆಡುವ ಮೂಲಕ 72 ವರ್ಷಗಳ ಹಳೆಯ ದಾಖಲೆಯನ್ನು ಮುರಿದಿದೆ. ಭಾರತದ ವಿರುದ್ಧ ಟೆಸ್ಟ್ ಪಂದ್ಯವೊಂದರ ನಾಲ್ಕನೇ ಇನಿಂಗ್ಸ್‌ನಲ್ಲಿ ಆರಂಭಿಕ ವಿಕೆಟ್‌ಗೆ 150 ಅಥವಾ ಅದಕ್ಕಿಂತ ಹೆಚ್ಚಿನ ರನ್‌ಗಳನ್ನು ಕಲೆ ಹಾಕಿದ ವಿಶ್ವದ ಮೊದಲ ಜೋಡಿ ಎಂಬ ದಾಖಲೆಗೆ ಬೆನ್ ಡಕೆಟ್ ಹಾಗೂ ಝ್ಯಾಕ್ ಕ್ರಾವ್ಲಿ ಜೋಡಿ ಭಾಜನವಾಗಿದೆ, ಆ ಮೂಲಕ ವೆಸ್ಟ್ ಇಂಡೀಸ್‌ನ ಅಲನ್ ರೇ ಮತ್ತು ಜೆಫ್ರಿ ಸ್ಟಾಲಿಮೋರ್ ಅವರ 72 ವರ್ಷಗಳ ಹಳೆಯ ದಾಖಲೆಯನ್ನು ಇಂಗ್ಲೆಂಡ್ ಜೋಡಿ ಮುರಿದಿದೆ. 1953ರಲ್ಲಿ ಟ್ರಿನಿಡಾಡ್‌ನ ಪೋರ್ಟ್ ಆಫ್ ಸ್ಪೇನ್‌ನಲ್ಲಿ ಭಾರತದ ವಿರುದ್ಧ ಈ ಜೋಡಿ ನಾಲ್ಕನೇ ಇನಿಂಗ್ಸ್‌ನಲ್ಲಿ 142 ರನ್‌ಗಳನ್ನು ಕಲೆ ಹಾಕಿತ್ತು.

ಭಾರತದ ವಿರುದ್ಧದ ಟೆಸ್ಟ್ ಪಂದ್ಯ 4ನೇ ಇನಿಂಗ್ಸ್ ಆರಂಭಿಕ ಜತೆಯಾಟ

- ಬೆನ್ ಡಕೆಟ್-ಝ್ಯಾಕ್ ಕ್ರಾವ್ಲಿ (ಇಂಗ್ಲೆಂಡ್): 188 ರನ್
- ಅಲನ್ ರೇ- ಜೆಫ್ರಿ ಸ್ಟಾಲಿಮೋರ್ (ವೆಸ್ಟ್ ಇಂಡೀಸ್): 142 ರನ್
- ಗ್ಯಾರಿ ಸ್ಟೀಡ್-ಮ್ಯಾಟ್ ಹಾರ್ನಿ (ನ್ಯೂಜಿಲೆಂಡ್): 131 ರನ್
- ಬ್ರಿಯಾನ್ ಬೊಲುಸ್-ಮೈಕ್ ಸ್ಮಿತ್ (ಇಂಗ್ಲೆಂಡ್): 125 ರನ್
- ನಜ್ಮುಲ್ ಶಾಂಟೊ-ಝುಕೀರ್ ಹುಸೇನ್ (ಬಾಂಗ್ಲಾದೇಶ): 124 ರನ್

ಭಾರತ-ಎ ಮತ್ತು ಆಸ್ಟ್ರೇಲಿಯಾ-ಎ ಸರಣಿ ಪಂದ್ಯಗಳು

ಮಹಿಳಾ ಕ್ರಿಕೆಟ್ ಸರಣಿ ವೇಳಾಪಟ್ಟಿ ಪ್ರಕಟ

ಸಿಡ್ನಿ: ಆಗಸ್ಟ್‌ನಲ್ಲಿ ಕ್ವೀನ್ಸ್‌ಲ್ಯಾಂಡ್‌ನಲ್ಲಿ ನಡೆಯಲಿರುವ ಭಾರತ-ಎ ಮತ್ತು ಆಸ್ಟ್ರೇಲಿಯಾ ಎ ನಡುವಿನ ಮುಂಬರುವ ಮಹಿಳಾ ಸರಣಿಯ ವೇಳಾಪಟ್ಟಿಯನ್ನು ಕ್ರಿಕೆಟ್ ಆಸ್ಟ್ರೇಲಿಯಾ ಮಂಗಳವಾರ ಪ್ರಕಟಿಸಿದೆ. ಬಹು ಸ್ವರೂಪದ ಸರಣಿಯು ಆಗಸ್ಟ್ 7, 9 ಮತ್ತು 10 ರಂದು ಮೂರು ಪಂದ್ಯಗಳ ಟಿ20 ಸರಣಿಯೊಂದಿಗೆ ಪ್ರಾರಂಭವಾಗಲಿದೆ.

ಟಿ20 ಪಂದ್ಯಗಳ ನಂತರ ಆಗಸ್ಟ್ 13, 15 ಮತ್ತು 17ರಂದು ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಆ ಬಳಿಕ ನಾಲ್ಕು ದಿನಗಳ ಟೆಸ್ಟ್ ಪಂದ್ಯ ನಡೆಯಲಿದೆ.

ಹರ್‌ಪ್ರೀತ್ ಕೌರ್ ಭಾರತ-ಎ ತಂಡವನ್ನು ಈ ಎಲ್ಲಾ ಪಂದ್ಯಗಳಲ್ಲಿ ಮುನ್ನಡೆಸಲಿದ್ದಾರೆ. ಮುಂಬರುವ ಐಸಿಸಿ ಮಹಿಳಾ ವಿಶ್ವಕಪ್‌ಗೆ ತಯಾರಿ ನಡೆಸಲು ಆಸ್ಟ್ರೇಲಿಯಾದ ಅಲಿಸಾ ಹೀಲಿ ಮತ್ತು ಉಪ-ನಾಯಕಿ ತಹ್ಲಿಯಾ ಮೆಕ್‌ಗ್ರಾತ್ ಈ ಸರಣಿಯಲ್ಲಿ ಆಡಲಿದ್ದಾರೆ. ಮಹಿಳಾ ಏಕದಿನ ವಿಶ್ವಕಪ್ ಟೂರ್ನಿ ಸೆಪ್ಟೆಂಬರ್ 30ರಿಂದ ಆರಂಭಗೊಳ್ಳಲಿದೆ. ಉದ್ಘಾಟನಾ ಪಂದ್ಯದಲ್ಲಿ ಭಾರತ ಮತ್ತು ಶ್ರೀಲಂಕಾ ಮುಖಾಮುಖಿಯಾಗಲಿದೆ.

ಟಿ20 ಕ್ರಿಕೆಟ್ ಸರಣಿ

- ಆಗಸ್ಟ್ 7: ಮೊದಲ ಟಿ20 (ಗ್ರೇಟ್ ಬ್ಯಾರಿಯರ್ ರೀಫ್ ಅರೆನಾ)
- ಆಗಸ್ಟ್ 9: ಎರಡನೇ ಟಿ20 (ಗ್ರೇಟ್ ಬ್ಯಾರಿಯರ್ ರೀಫ್ ಅರೆನಾ)
- ಆಗಸ್ಟ್ 10: ಮೂರನೇ ಟಿ20 (ಗ್ರೇಟ್ ಬ್ಯಾರಿಯರ್ ರೀಫ್ ಅರೆನಾ)

ಏಕದಿನ ಸರಣಿ

- ಆಗಸ್ಟ್ 13: ಮೊದಲ ಏಕದಿನ (ಬ್ರಿಸ್ಬೇನ್)
- ಆಗಸ್ಟ್ 15: ಎರಡನೇ ಏಕದಿನ (ಬ್ರಿಸ್ಬೇನ್)
- ಆಗಸ್ಟ್ 17: ಮೂರನೇ ಏಕದಿನ (ಬ್ರಿಸ್ಬೇನ್)

ಟೆಸ್ಟ್ ಪಂದ್ಯ

- ಆಗಸ್ಟ್ 21-24: ನಾಲ್ಕು ದಿನಗಳ ಪಂದ್ಯ (ಬ್ರಿಸ್ಬೇನ್)

ಚೆಸ್: ಆದ್ವಿಕ್‌ಗೆ ಬೆಳ್ಳಿ ಪದಕ

ಗುರುಗ್ರಾಮ (ಹರಿಯಾಣ): ಇಲ್ಲಿ ಶನಿವಾರ ಕೊನೆಗೊಂಡ 9 ವರ್ಷದೊಳಗಿನವರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಶಿಪ್‌ನ ಓಪನ್ ವಿಭಾಗದಲ್ಲಿ ಕರ್ನಾಟಕದ ಮಾಸ್ಟರ್ ಆದ್ವಿಕ್ ಅಭಿನವ್ ಕೃಷ್ಣ ರನ್ನರ್ ಅಪ್ ಪಡೆದು, ಬೆಳ್ಳಿ ಪದಕ ಗಳಿಸಿದ್ದಾರೆ. ಮುಕ್ತ ವಿಭಾಗದಲ್ಲಿ ಒಟ್ಟು 11ಕ್ಕೆ 9.5 ಉತ್ತಮಾಂಕಗಳನ್ನು ಕಲೆ ಹಾಕಿದ ಆದ್ವಿಕ್, ಇಟಲಿಯಲ್ಲಿ ನಡೆಯಲಿರುವ ವಿಶ್ವ ಕೆಡೆಟ್ ಅಂಡರ್-10 ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಅರ್ಹತೆ ಪಡೆದಿದ್ದಾರೆ.

ಬೆಂಗಳೂರಿನ ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್ ಶಾಲೆಯಲ್ಲಿ 4ನೇ ತರಗತಿ ಓದುತ್ತಿರುವ ಆದ್ವಿಕ್, ಹೆಚ್. ಆರ್. ರಾಧಿಕಾ ರಾವ್ ಮತ್ತು ಅಭಿನವ ಕೃಷ್ಣ ಅವರ ಪುತ್ರ. ಜಿಲ್ಲಾ ಮಟ್ಟ, ರಾಜ್ಯಮಟ್ಟ ಹೀಗೆ ಅನೇಕ ಪ್ರಮುಖ ಚೆಸ್ ಸ್ಪರ್ಧೆಗಳಲ್ಲಿ ಜಯ ಗಳಿಸಿರುವ ಮಾಸ್ಟರ್ ಆದ್ವಿಕ್, ಈಗಾಗಲೇ ದೆಹಲಿ, ಕೊಲ್ಕತ್ತಾ, ಅಮೃತಸರ, ಪೂನಾ, ಹೈದರಾಬಾದ್, ಚೆನ್ನೈ, ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆದ ವಿವಿಧ ಚೆಸ್ ಸ್ಪರ್ಧೆಗಳಲ್ಲಿ ಜಯ ಗಳಿಸಿ ಹಲವಾರು ಪದಕಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಮಾಸ್ಟರ್ ಆದ್ವಿಕನ ಚೆಸ್ ತರಬೇತುದಾರರಾದ ಖ್ಯಾತ ಚೆಸ್ ಕೋಚ್, ಜಯರಾಮ ರಾಮಣ್ಣ ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿ, 'ಆದ್ವಿಕ್ ಪ್ರಾಮಾಣಿಕವಾಗಿ ಪ್ರಯತ್ನಿಸುವ, ಬಹು ಬದ್ಧತೆಯ ಪ್ರತಿಭಾವಂತ ಬಾಲಕ. ಈಗಾಗಲೇ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಅನೇಕ ಚೆಸ್ ಸ್ಪರ್ಧೆಗಳಲ್ಲಿ ಮೊದಲ ಸ್ಥಾನ ಗಳಿಸಿರುವುದರಿಂದ, ಆತನಿಗೆ ಅಂತಾರಾಷ್ಟ್ರೀಯ ಮಟ್ಟದ ಚೆಸ್ ಕ್ರೀಡಾಕೂಟಗಳಲ್ಲಿ ಉತ್ತಮ ಭವಿಷ್ಯವಿದೆ' ಎಂದಿದ್ದಾರೆ.

ದಾಖಲೆ ಬರೆದ ಕೈರೊನ್ ಪೊಲಾರ್ಡ್

ಡಲ್ಲಾಸ್: ಟಿ20 ಕ್ರಿಕೆಟ್‌ನಲ್ಲಿ 700 ಪಂದ್ಯಗಳನ್ನಾಡಿದ ಮೊದಲ ಆಟಗಾರ ಎಂಬ ದಾಖಲೆಗೆ ವೆಸ್ಟ್ ಇಂಡೀಸ್ ತಂಡದ ಮಾಜಿ ಆಲ್‌ರೌಂಡರ್ ಕೈರೊನ್ ಪೊಲಾರ್ಡ್ ಪಾತ್ರರಾಗಿದ್ದಾರೆ.

ಜೂನ್ 23ರಂದು ಸೋಮವಾರ ನಡೆದಿದ್ದ 2025ರ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯ ಸ್ಯಾನ್ ಫ್ರಾನ್ಸಿಸ್ಕೋ ಯುನಿಕಾರ್ನ್ಸ್ ತಂಡದ ವಿರುದ್ಧ ಮುಂಬೈ ನ್ಯೂಯಾರ್ಕ್ ತಂಡದ ಆಟಗಾರನಾಗಿ ಕಣಕ್ಕಿಳಿದು ಪೊಲಾರ್ಡ್ ಈ ನೂತನ ಮೈಲುಗಲ್ಲು ಸ್ಥಾಪಿಸಿದ್ದಾರೆ. ಪಂದ್ಯದಲ್ಲಿ ಮುಂಬೈ ನ್ಯೂಯಾರ್ಕ್ ತಂಡ 47 ರನ್‌ಗಳಿಂದ ಸೋಲು ಅನುಭವಿಸಿತು.



ಐಪಿಎಲ್ ಸೇರಿದಂತೆ ವಿಶ್ವದ ಬಹುತೇಕ ಫ್ರಾಂಚೈಸಿ ಲೀಗ್‌ಗಳಲ್ಲಿ ಆಡಿರುವ ವೆಸ್ಟ್ ಇಂಡೀಸ್ ಆಟಗಾರ, ಈ ಪಂದ್ಯಕ್ಕೂ ಮುನ್ನ ಆಡಿದ 699 ಟಿ20 ಪಂದ್ಯಗಳಿಂದ 31.34ರ ಸರಾಸರಿಯಲ್ಲಿ 13,634 ರನ್ ಗಳಿಸಿದ್ದು, 326 ವಿಕೆಟ್‌ಗಳನ್ನೂ ಪಡೆದಿದ್ದಾರೆ.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಸ್ಯಾನ್ ಫ್ರಾನ್ಸಿಸ್ಕೋ ಯುನಿಕಾರ್ನ್ಸ್ ತಂಡದ ನಾಯಕ ಮ್ಯಾಥ್ಯೂ ಶಾರ್ಟ್ ಹಾಗೂ ಜೇಕ್ ಮೆಗರ್ಕ್ ಅವರ ವಿಕೆಟ್‌ಗಳನ್ನು ಪೊಲಾರ್ಡ್ ಪಡೆದಿದ್ದಾರೆ, ನಂತರ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನ ಪ್ರದರ್ಶಿಸಿ 16 ಎಸೆತಗಳಲ್ಲಿ 3 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ ಅಜೇಯ 34 ರನ್ ಗಳಿಸಿ ಮಿಂಚಿದ್ದಾರೆ.

ವಿಕೆಟ್ ಕೀಪರ್ ರಿಷಭ್ ಪಂತ್‌ಗೆ ವಾಗ್ದಂಡನೆ

ಲೀಡ್ಸ್: ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಮೂರನೇ ದಿನದಾಟದ ವೇಳೆ ಅಂಪೈರ್ ನಿರ್ಧಾರದ ವಿರುದ್ಧ ಅಸಮಾಧಾನ ಹೊರಹಾಕಿದ್ದ ಟೀಮ್ ಇಂಡಿಯಾದ ವಿಕೆಟ್ ಕೀಪರ್ ರಿಷಭ್ ಪಂತ್‌ಗೆ ವಾಗ್ದಂಡನೆ ವಿಧಿಸಲಾಗಿದೆ ಎಂದು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ತಿಳಿಸಿದೆ.

ಇಂಗ್ಲೆಂಡ್ ಬ್ಯಾಟಿಂಗ್ ವೇಳೆ ಚೆಂಡನ್ನು ಬದಲಿಸಲು ಪಂತ್ ಬಯಸಿದ್ದರು, ಆದರೆ ಚೆಂಡನ್ನು ಪರಿಶೀಲಿಸಿದ ಅಂಪೈರ್ ಮನವಿಯನ್ನು ನಿರಾಕರಿಸಿದ್ದರು. ಅದರಿಂದ ಆಕ್ರೋಶಗೊಂಡ ಪಂತ್ ಚೆಂಡನ್ನು ಬಲವಾಗಿ ನೆಲಕ್ಕೆ ಎಸೆದಿದ್ದರು.

ಪಂದ್ಯದ ವೇಳೆ ಪಂತ್ ಅವರು ಐಸಿಸಿ ನೀತಿಸಂಹಿತೆಯ ವಿಧಿ 2.8 ಉಲ್ಲಂಘಿಸಿರುವುದು ದೃಢಪಟ್ಟಿದೆ. ಆ ವಿಧಿಯು ಅಂತಾರಾಷ್ಟ್ರೀಯ ಪಂದ್ಯವೊಂದರ ವೇಳೆ ಅಂಪೈರ್ ನಿರ್ಧಾರದ ವಿರುದ್ಧ ಆಟಗಾರರು ಮತ್ತು ನೆರವು ಸಿಬ್ಬಂದಿಯ ವರ್ತನೆಗೆ ಸಂಬಂಧಿಸಿದ್ದಾಗಿದೆ. ಹಾಗಾಗಿ ಪಂತ್ ಅವರಿಗೆ ವಾಗ್ದಂಡನೆ ವಿಧಿಸಲಾಗಿದ್ದು, ಅವರ ಶಿಸ್ತು ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರಿಸಲಾಗಿದೆ. ಅವರು ತಪ್ಪು ಒಪ್ಪಿಕೊಂಡಿದ್ದಾರೆ, ಮ್ಯಾಚ್ ರೆಫ್ರಿ, ರಿಚಿ ರಿಚರ್ಡ್ಸನ್ ಅವರು ವಿಧಿಸಿದ ನಿರ್ಬಂಧವನ್ನು ಪಂತ್ ಸ್ವೀಕರಿಸಿದ್ದಾರೆ ಎಂದು ಐಸಿಸಿ ಹೇಳಿಕೆ ತಿಳಿಸಿದೆ.

ಐಸಿಸಿ ನಿಯಮಗಳ ಪ್ರಕಾರ, ಲೆವೆಲ್-1 ಉಲ್ಲಂಘನೆಗೆ ಕನಿಷ್ಠ ಅಧಿಕೃತ ವಾಗ್ದಂಡನೆ ಮತ್ತು ಆಟಗಾರನ ಪಂದ್ಯ ಶುಲ್ಕದಿಂದ ಗರಿಷ್ಠ ಶೇ.50ರಷ್ಟು ದಂಡ ಮತ್ತು ಒಂದು ಅಥವಾ ಎರಡು ಡಿಮೆರಿಟ್ ಅಂಕಗಳನ್ನು ನೀಡಲಾಗುತ್ತದೆ.

ಒಬ್ಬ ಆಟಗಾರ 24 ತಿಂಗಳ ಅವಧಿಯಲ್ಲಿ ನಾಲ್ಕು ಅಥವಾ ಹೆಚ್ಚಿನ ಡಿಮೆರಿಟ್ಸ್ ಪಾಯಿಂಟ್ಸ್ ಪಡೆದರೆ ಅವು ಅಮಾನತು ಪಾಯಿಂಟ್ಸ್ ಆಗಿ ಆಟಗಾರನ ಮೇಲೆ ನಿರ್ಬಂಧ ಹೇರಲು ಅವಕಾಶವಾಗುತ್ತದೆ. ಎರಡು ಅಮಾನತು ಪಾಯಿಂಟ್ಸ್ ಪಡೆದರೆ ಆ ಆಟಗಾರ ಒಂದು ಟೆಸ್ಟ್ ಅಥವಾ ಎರಡು ಏಕದಿನ ಪಂದ್ಯಗಳಿಗೆ ನಿಷೇಧಕ್ಕೆ ಒಳಗಾಗುತ್ತಾನೆ.

ವಿಟಾಕೀಸ್

ಈ ವಾರ ತೆರೆಗೆ ತಿಮ್ಮನ ಮೊಟ್ಟೆಗಳು

ರಕ್ಷಿತ್ ತೀರ್ಥಹಳ್ಳಿ ಕಥೆ ಬರೆದು ನಿರ್ದೇಶನ ಮಾಡಿರುವ ತಿಮ್ಮನ ಮೊಟ್ಟೆಗಳು ಚಿತ್ರ ಈ ವಾರ ತೆರೆಗೆ ಬರಲಿದೆ. ಶ್ರೀಕೃಷ್ಣ ಪ್ರೊಡಕ್ಸನ್ಸ್ ಬ್ಯಾನರ್‌ನಲ್ಲಿ ಆದರ್ಶ್ ಅಯ್ಯಂಗಾರ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಕ್ಷಿತ್ ತೀರ್ಥಹಳ್ಳಿ ಬರೆದಿರುವ ಕಾಡಿನ ನೆಂಟರು ಕಥಾ ಸಂಕಲನದಿಂದ ಆಯ್ದ ಒಂದು ಕಥೆ ತಿಮ್ಮನ ಮೊಟ್ಟೆಗಳು ಸಿನಿಮಾವಾಗಿದೆ.

ಇತ್ತೀಚೆಗೆ ಅಮೇರಿಕಾದ ಡಾಲಸ್ ನಲ್ಲಿ ಈ ಚಿತ್ರದ ಪ್ರಿಮೀಯರ್ ಶೋ ನಡೆದಿದ್ದು, ಅಲ್ಲಿನ ಜನರು ತಿಮ್ಮನ ಮೊಟ್ಟೆಗಳು ಚಿತ್ರ ನೋಡಿ ಮೆಚ್ಚಿದ್ದಾರೆ. ಇಲ್ಲೂ ಕೂಡ ನಮ್ಮ ಚಿತ್ರ ಯಶಸ್ವಿಯಾಗಲಿದೆ ಎಂಬ ಭರವಸೆ ಚಿತ್ರತಂಡದು. ಈಗಾಗಲೇ ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲೂ ತಿಮ್ಮನ ಮೊಟ್ಟೆಗಳು ಪ್ರದರ್ಶನಗೊಂಡು ಪ್ರಶಂಸೆಯ ಜತೆಗೆ ಪ್ರಶಸ್ತಿಯನ್ನು ಗಳಿಸಿದೆ.

ಕಾಳಿಂಗ ಸರ್ಪಗಳ ರಕ್ಷಣೆ ಕುರಿತಂತೆ ಚಿತ್ರದ ಕಥೆ ಸಾಗಲಿದ್ದು, ಪ್ರಕೃತಿ ಮತ್ತು ಮನುಷ್ಯನ ನಡುವಿನ ಸೂಕ್ಷ್ಮ ಸಂವೇದನೆಗಳನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಕೇಶವ್ ಗುತ್ತಳಿಕೆ, ಸುಚೇಂದ್ರ ಪ್ರಸಾದ್, ಆಶಿಕಾ ಸೋಮಶೇಖರ್, ಶೃಂಗೇರಿ ರಾಮಣ್ಣ, ಪ್ರಗತಿ ಪ್ರಭು, ರಘು ರಾಮನಕೊಪ್ಪ, ಮಾಸ್ಟರ್ ಹರ್ಷ, ವಿನಯ್ ಕಣಿವೆ, ಪೃಥ್ವಿರಾಜ್ ಕೊಪ್ಪ, ಪ್ರಾಣೇಶ್ ಕೂಳೆಗದ್ದೆ ಮುಂತಾದವರು ತಾರಾಗಣದಲ್ಲಿದ್ದಾರೆ. ಪ್ರವೀಣ್ ಎಸ್ ಅವರ ಛಾಯಾಗ್ರಹಣ, ಕೆಂಪರಾಜು ಸಂಕಲನ ಹಾಗೂ ಹೇಮಂತ್ ಜೋಯಿಷ್ ಅವರ ಸಂಗೀತ ನಿರ್ದೇಶನ ತಿಮ್ಮನ ಮೊಟ್ಟೆಗಳು ಚಿತ್ರಕ್ಕಿದೆ.

ಅಂದೊಂದಿತ್ತು ಕಾಲದಲ್ಲಿ ವಿನಯ್

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಚಂದನವನದ ಬೇಡಿಕೆಯ ನಟರಾಗಿದ್ದು ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಸಿದ್ದಾರ್ಥನಾಗಿ ಚಂದನವನಕ್ಕೆ ಎಂಟ್ರಿಕೊಟ್ಟ ವಿನಯ್, ರನ್ ಆಂಟನಿಯಾಗಿ ಆ್ಯಕ್ಷನ್‌ನಲ್ಲಿಯೂ ಮಿಂಚಿದರು. ಒಂದು ಸರಳ ಪ್ರೇಮಕಥೆ ಹೇಳಿ ರಂಜಿಸಿ, ಪೆಪೆಯಾಗಿ ರಗಡ್ ಅವತಾರದಲ್ಲಿ ಅಬ್ಬರಿಸಿದರು. ಈಗ ಮತ್ತಷ್ಟು ವಿಭಿನ್ನ ಸಿನಿಮಾಗಳಲ್ಲಿ ನಟಿಸಿದ್ದು ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಅದರಲ್ಲಿ ಅಂದೊಂದಿತ್ತು ಕಾಲ ಚಿತ್ರವೂ ಒಂದು. ಸಿನಿಮಾದ ಶೀರ್ಷಿಕೆಯಂತೆಯೇ ಸಿನಿಮಾವೂ ಕೂಡ ವಿಭಿನ್ನ ಕಥೆಯನ್ನು ಒಳಗೊಂಡಿದ್ದು, ಎಪ್ಪತ್ತು ಎಂಬತ್ತರ ದಶಕದ ಕಾಲಘಟ್ಟದಲ್ಲಿ ಸಾಗಲಿದೆ. ಇಲ್ಲಿ ಸಿನಿಮಾ ಪ್ರೀತಿಯ ಜತೆಗೆ ನಾಯಕ ತಾನು ಬಾಲ್ಯದಲ್ಲಿಕಂಡ ಕನಸನ್ನು ನನಸು ಮಾಡಿಕೊಳ್ಳಲು ಹೊರಟಾಗ ಎದುರಾಗುವ ಸವಾಲುಗಳನ್ನು ಸೆಂಟಿಮೆಂಟ್ ಮೂಲಕ ಕಟ್ಟಿಕೊಡಲಾಗಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ. ಅದರ ಜತೆಗೆ ನವಿರಾದ ಪ್ರೇಮಕಥೆಯೂ ಸಿನಿಮಾದಲ್ಲಿ ಬೆರೆತಿದೆ. ವಿನಯ್ ಈ ಹಿಂದಿನ ಎಲ್ಲಾ ಸಿನಿಮಾಗಳಿಗಂತ ವಿಭಿನ್ನ ಲುಕ್‌ನಲ್ಲಿ ಮಿಂಚಿದ್ದು, ಡಬಲ್ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಅದಿತಿ ಪ್ರಭುದೇವ ಹಾಗೂ ನಿಶಾ ರವಿಕೃಷ್ಣನ್ ಇಬ್ಬರು ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಭುವನ್ ಮೂವೀಸ್‌ನಲ್ಲಿ ಭುವನ್ ಸುರೇಶ್ ಚಿತ್ರ ನಿರ್ಮಾಣ ಮಾಡುತ್ತಿದ್ದು, ಕೀರ್ತಿ ಕೃಷ್ಣಪ್ಪ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಈಗಾಗಲೇ ಚಿತ್ರೀಕರಣ ಮುಗಿಸಿರುವ ಅಂದೊಂದಿತ್ತು ಕಾಲ ಚಿತ್ರತಂಡ ಹಾಡಿನ ಮೂಲಕವೇ ಸಖತ್ ಸದ್ದು ಮಾಡುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಮುಂಗಾರು ಮಳೆಯಲಿ... ಗಾನ ಸಂಗೀತ ಪ್ರಿಯರನ್ನು ಸೆಳೆದಿದ್ದು ಲಕ್ಷಾಂತರ ವೀಕ್ಷಣೆ ಕಂಡಿದೆ. ಈಗ ಅರೆರೆ.. ಯಾರೋ ಇವಳು.. ಎಂಬ ಪ್ರೇಮಗೀತೆ ಬಿಡುಗಡೆಗೆ ಸಿದ್ಧವಾಗಿದೆ. ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ ಮುಂತಾದವರು ಚಿತ್ರದ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ವಿ.ರಾಘವೇಂದ್ರ ಸಂಗೀತ ಸಂಯೋಜಿಸಿರುವ ಹಾಡುಗಳು ಕೇಳಲು ಮಧುರವಾಗಿವೆ. ಅಂದೊಂದಿತ್ತು ಕಾಲ ಶೀಘ್ರದಲ್ಲಿಯೇ ತೆರೆಗೂ ಬರಲಿದೆ. ಈ ಚಿತ್ರದ ಜತೆಗೆ ವಿನಯ್ ರಾಜ್‌ಕುಮಾರ್ ಗ್ರಾಮಾಯಣ ಚಿತ್ರದಲ್ಲಿಯೂ ನಟಿಸುತ್ತಿದ್ದಾರೆ.

ಸ್ಟಾರ್ಟಪ್ ಉದ್ಯಮಿ ಸಿನಿಮಾ ಕ್ಷೇತ್ರಕ್ಕೆ

ವಾಣಿಜ್ಯೋದ್ಯಮದಲ್ಲಿ ಹಲವಾರು ಯಶಸ್ವಿ ಯೋಜನೆಗಳನ್ನು ರೂಪಿಸಿರುವಂತಹ ಅನಿಲ್ ಶೆಟ್ಟಿ ಈಗ ಚಿತ್ರೋದ್ಯಮದಲ್ಲೂ ತಮ್ಮ ಛಾಪನ್ನು ಮೂಡಿಸಲು ಮುಂದಾಗಿದ್ದಾರೆ. ಸ್ಟಾರ್ಟಪ್ ಉದ್ಯಮಿ ಆಗಿರುವುದರ ಜೊತೆಗೆ ರಾಜಕಾರಣದಲ್ಲಿ ಸಹ ಸಕ್ರಿಯರಾಗಿರುವ ಅನಿಲ್ ಬೆಂಗಳೂರು ನಗರದ ಯುವ ನಾಯಕರುಗಳ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ. ಇದೀಗ ತಮ್ಮ ಹುಟ್ಟುಹಬ್ಬದ ವಿಶೇಷ ಸಂದರ್ಭದಲ್ಲಿ ಅನಿಲ್ ಅವರು ಚಿತ್ರರಂಗಕ್ಕೆ ಸೇರುವ ತಮ್ಮ ಬಹಳ ದಿನಗಳ ಕನಸನ್ನು ನನಸು ಮಾಡಲು ಮುಂದಾಗಿದ್ದಾರೆ.

ತಮ್ಮ ಮೊದಲ ಚಿತ್ರದಲ್ಲೇ ಅನಿಲ್ ನಟನಾಗಿ ಮಾತ್ರವಲ್ಲದೆ, ಬರಹಗಾರರಾಗಿಯೂ ಸಹ ಗುರುತಿಸಿಕೊಳ್ಳುತ್ತಿರುವುದು ವಿಶೇಷ. ಚಲನಚಿತ್ರಗಳಲ್ಲಿ ಬಹು ಕಾಲದಿಂದ ಆಸಕ್ತಿ ಹೊಂದಿದ್ದ ಇವರಿಗೆ, ಕನ್ನಡ ಚಿತ್ರರಂಗದ ಹೆಸರಾಂತ ವ್ಯಕ್ತಿಯೊಬ್ಬರು ನಟನೆಯತ್ತ ಗಮನ ಹರಿಸುವಂತೆ ವರ್ಷಗಳ ಹಿಂದೆಯೇ ಪ್ರೇರೇಪಿಸಿದ್ದರು. ಈವರೆಗೂ ವ್ಯವಹಾರ, ರಾಜಕಾರಣ ಹಾಗೂ ಸಮಾಜಸೇವೆಗೆ ತಮ್ಮ ಸಮಯವನ್ನು ಮೀಸಲಿಟ್ಟಿದ್ದ ಅನಿಲ್, ಇದೀಗ ಚಿತ್ರರಂಗದ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಲು ನಿರ್ಧರಿಸಿದ್ದಾರೆ.

ಸಿನಿಮಾ ಕ್ಷೇತ್ರದ ಜೊತೆಗೆ, ಅನಿಲ್ ಶೆಟ್ಟಿ ವೈವಿಧ್ಯಮಯ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದಾರೆ. ಕ್ರಿಕೆಟಿಗ ಕೆ.ಎಲ್. ರಾಹುಲ್ ಮತ್ತು ಬಾಲಿವುಡ್ ನಟ ಸುನೀಲ್ ಶೆಟ್ಟಿ ಅವರೊಂದಿಗೆ ಡ್ರಿಪ್ ಪ್ರಾಜೆಕ್ಟ್ ಮತ್ತು ಮೆಟಮನ್ ಎನ್ನುವ ಎರಡು ಫ್ಯಾಷನ್ ಬ್ರಾಂಡ್‌ಗಳನ್ನು ಸ್ಥಾಪಿಸುವುದರಿಂದ ಹಿಡಿದು, ಬೇರೆ ಅನೇಕ ಸ್ಟಾರ್ಟ್‌ಅಪ್ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದಾರೆ.

ಅನಿಲ್ ಚಿತ್ರದ ಶೀರ್ಷಿಕೆ ಮತ್ತು ತಂಡದ ವಿವರಗಳು ಇನ್ನೂ ಬಹಿರಂಗವಾಗಿಲ್ಲದಿದ್ದರೂ, ಚಲನಚಿತ್ರರಂಗದ ಟಾಪ್ ಟ್ಯಾಲೆಂಟ್‌ಗಳ ಜೊತೆಗೆ ಕೆಲಸ ಮಾಡಲು ಮಾತುಕತೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸೆಟ್ಟೇರಲು ಸಿದ್ಧವಾದ ಲವ್ ಮಾಕ್ಟೇಲ್ 3

ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್ ಅಭಿನಯದ ಲವ್ ಮಾಕ್ಟೇಲ್ ಭರ್ಜರಿ ಯಶಸ್ಸು ಕಂಡಿತು, ಆ ಯಶಸ್ಸಿನ ಖುಷಿಯಲ್ಲಿ ಲವ್ ಮಾಕ್ಟೇಲ್ 2 ಕೂಡ ತೆರೆಗೆ ಬಂತು. ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಂಡಿತು. ಈಗ ಅದೇ ಸೀಕ್ವೆಲ್ ಆಧರಿಸಿ ಮುಂದಿನ ಭಾಗ ಕೂಡ ಮೂಡಿಬರುತ್ತಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಲವ್ ಮಾಕ್ಟೇಲ್ 3 ಈ ಹಿಂದೆಯೇ ಸೆಟ್ಟೇರಬೇಕಿತ್ತು. ಆದರೆ ಡಾರ್ಲಿಂಗ್ ಕೃಷ್ಣ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದ ಕಾರಣ ಈ ಚಿತ್ರದಲ್ಲಿ ತೊಡಗಿಸಿಕೊಳ್ಳಲಾಗಲಿಲ್ಲ. ಈಗ ಈ ಸಿನಿಮಾದ ಸ್ಟೋರಿ ಕಂಪ್ಲೀಟ್ ಆಗಿದ್ದು ಸಿನಿಮಾದ ಕೆಲಸಗಳು ಭರದಿಂದ ಸಾಗಿವೆ. ಡಾರ್ಲಿಂಗ್ ಕೃಷ್ಣ ಅವರೇ ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಲಿದ್ದಾರೆ. ಈ ಹಿಂದಿನ ಚಿತ್ರದಲ್ಲಿ ಮಿಲನಾ ನಾಗರಾಜ್, ಅಮೃತಾ ಅಯ್ಯಂಗಾರ್, ರಚನಾ ಇಂದರ್ ನಟಿಸಿದ್ದರು. ಈ ಸಿನಿಮಾದಲ್ಲಿಯೂ ಅವರ ಪಾತ್ರ ಮುಂದುವರಿಯಲಿದೆಯೆ ಎಂಬ ಕ್ಯೂರಿಯಾಸಿಟಿ ಕೂಡ ಇದೆ. ಇನ್ನೂ ವಿಶೇಷ ಎಂದರೆ ಈ ಚಿತ್ರದಲ್ಲಿ ಪುಟ್ಟ ಬಾಲಕಿಯ ಪಾತ್ರವಿದ್ದು, ಆ ಪಾತ್ರಕ್ಕೆ ಆಡಿಷನ್ ಕರೆಯಲಾಗಿದೆ. ಐದರಿಂದ ಎಂಟು ವರ್ಷದ ಮಗುವಿಗಾಗಿ ಚಿತ್ರತಂಡ ಹುಡುಕಾಟ ನಡೆಸಿದೆ. ಹಾಗಾಗಿ ಮುಂದಿನ ಭಾಗ ಮತ್ತಷ್ಟು ವಿಶೇಷವಾಗಿರಲಿದೆ ಎಂಬುದು ಇದರಿಂದ ತಿಳಿಯುತ್ತದೆ.

ಗಂಗೂಲಿ ಬಯೋಪಿಕ್‌ನಲ್ಲಿ ರಾಜ್‌ಕುಮಾರ್ ರಾವ್

ಬಾಲಿವುಡ್‌ನಲ್ಲಿ ಹಲವು ಬಯೋಪಿಕ್ ಸಿನಿಮಾಗಳು ತೆರೆಗೆ ಬಂದಿವೆ. ಎಂ.ಎಸ್.ಧೋನಿ, ಸಚಿನ್ ತೆಂಡೂಲ್ಕರ್ ಹೀಗೆ ಕ್ರೀಡಾ ಸಾಧಕರ ಜೀವನ ಚರಿತೆ ತೆರೆಯಲ್ಲಿ ಪ್ರೇಕ್ಷಕರ ಮನಸೂರೆಗೊಂಡಿದೆ. ಈಗ ಮಾಜಿ ಕ್ರಿಕೆಟರ್ ಸೌರವ್ ಗಂಗೂಲಿ ಅವರ ಯಶೋಗಾಥೆ ಬೆಳ್ಳಿತೆರೆಗೆ ಬರಲಿದೆ. ಈಗಾಗಲೇ ಸ್ಕ್ರಿಪ್ಟ್ ಕಾರ್ಯದಲ್ಲಿ ಚಿತ್ರತಂಡ ಬ್ಯುಸಿಯಾಗಿದೆ. ಇನ್ನು ಗಂಗೂಲಿ ಅವರ ಪಾತ್ರದಲ್ಲಿ ಯಾರು ನಟಿಸಬಹುದು ಎಂಬ ಕುತೂಹಲವಿತ್ತು, ಅದಕ್ಕೂ ಈಗ ಉತ್ತರ ಸಿಕ್ಕಿದೆ. ರಾಜಕುಮಾರ್ ರಾವ್, ಸೌರವ್ ಗಂಗೂಲಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ರಾಜ್‌ಕುಮಾರ್ ರಾವ್ ಅವರು ತಮ್ಮ ಪಾತ್ರದಲ್ಲಿ ನಟಿಸುತ್ತಿರುವುದಕ್ಕೆ ಗಂಗೂಲಿ ಸಂತಸ ವ್ಯಕ್ತಪಡಿಸಿದ್ದಾರೆ. ಸದ್ಯ ಚಿತ್ರದ ಪ್ರೀ ಪ್ರೊಡಕ್ಷನ್ ಕಾರ್ಯಗಳು ಭರದಿಂದ ನಡೆಯುತ್ತಿದ್ದು, ಮುಂದಿನ ವರ್ಷದ ಜನವರಿಯಲ್ಲಿ ಚಿತ್ರದ ಚಿತ್ರಿಕರಣ ಆರಂಭವಾಗಲಿದೆ. ಗಂಗೂಲಿ ಭಾರತ ತಂಡಕ್ಕೆ ಪಾದಾರ್ಪಣೆ ಮಾಡಿದಾಗಿನಿಂದ ಹಿಡಿದು ಟೀಂ ಇಂಡಿಯಾ ನಾಯಕನಾಗಿ ತೋರಿದ ಸಾಧನೆ, ಬಿಸಿಸಿಐ ಅಧ್ಯಕ್ಷನಾಗುವವರೆಗೂ ಚಿತ್ರದ ಕಥೆ ಸಾಗಲಿದೆ. ಸಿನಿಮಾದಲ್ಲಿ ಹಲವು ಪಾತ್ರಗಳಿರಲಿದ್ದು ಚಿತ್ರ ಅದ್ದೂರಿಯಾಗಿ ನಿರ್ಮಾಣವಾಗಲಿದೆ. ಮುಂದಿನ ವರ್ಷದಲ್ಲಿ ಸಿನಿಮಾ ತೆರೆಗೂ ಬರಲಿದೆ.